ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು
ಬುಧವಾರ, 4 ಮಾರ್ಚ್ 2026
ಸಂಪುಟ 47, ಸಂಚಿಕೆ 335 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ದುಬೈ ಕನ್ನಡಿಗರಿಗೆ ಧೈರ್ಯ ತುಂಬಿದ ವಿಜಯೇಂದ್ರ | ೦೫
ರಾಜ್ಯದ ವಿವಿಧೆಡೆ ಬಾಂಬ್ ಬೆದರಿಕೆ | ೦೫
ಗ್ರಹಣ ವೇಳೆ ಕಂಡ ಕೆಂಪು ಚಂದಿರ | ೦೪

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪೂರ್ವೆ

ದಿನದ ಮಾತು

ಶತ್ರು, ಮಿತ್ರ ಎಂಬುವವರೆಲ್ಲ ಸಂದರ್ಭಕ್ಕನುಗುಣವಾಗಿ ಇರುತ್ತಾರೆಯೇ ಹೊರತು ಶಾಶ್ವತವಾಗಲ್ಲ.
▲ ಪಂಚತಂತ್ರ

ಜಗವೆಲ್ಲ ಹೊತ್ತಿ ಉರಿಯುತ್ತಿರಲು ನಾವು ತಣ್ಣಗಿದ್ದೇವೆ

ಖಾರಾ ಬಾತ್
◆ ವಿನಾಯಕ ಭಟ್ಟ ಮೂರೂರು
◆ ಪುಟ ೬

ಕಿರುಸುದ್ದಿ

ರಾಜ್ಯಸಭಾ ಚುನಾವಣೆ: ನಿತಿನ್ ಸೇರಿ 9 ಅಭ್ಯರ್ಥಿಗಳ ಬಿಜೆಪಿ ಪಟ್ಟಿ ಬಿಡುಗಡೆ



◆ **ಹೊಸದಿಲ್ಲಿ:** ಮುಂಬರುವ ರಾಜ್ಯಸಭಾ ಚುನಾವಣೆಗೆ ಬಿಹಾರದಿಂದ ಪಕ್ಷದ ಅಭ್ಯರ್ಥಿಯಾಗಿ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಅವರನ್ನು ಮಂಗಳವಾರ ನಾಮನಿರ್ದೇಶನ ಮಾಡಲಾಗಿದೆ. ಆಡಳಿತಾರೂಢ ಭಾರತೀಯ ಜನತಾ ಪಕ್ಷ (ಬಿಜೆಪಿ) ರಾಜ್ಯಸಭಾ ಚುನಾವಣೆಗೆ ಒಂಬತ್ತು ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ.
◆ ಪುಟ ೨

ಟ್ರಾಫಿಕ್ ಕ್ಯಾಮೆರಾಗಳನ್ನೇ ಹ್ಯಾಕ್ ಮಾಡಿದ್ದ ಮೊಸಾದ್
◆ ಪುಟ ೨

ಮಾತುಕತೆಯೊಂದೇ ಉದ್ವಿಗ್ನತೆ ಕಡಿಮೆ ಮಾಡುವ ಹಾದಿ
◆ ಪುಟ ೨

ಮಧ್ಯಪ್ರಾಚ್ಯ ಚಿತ್ರಣವೇ ಬದಲು
◆ ಪುಟ ೨

ಪಹಲ್ಗಾಮ್ ಉಗ್ರರ ಕ್ಯಾಮರಾ ಎನ್ಐಎ ವಶಕ್ಕೆ
◆ ಪುಟ ೨

3 ಕೋಟಿ ಯೂಟ್ಯೂಬ್ ಸಬ್ಸ್ಕ್ರೈಬರ್ಸ್: ಪ್ರಧಾನಿ ಮೋದಿ ದಾಖಲೆ
◆ ಪುಟ ೨

ಸಿಬಿಎಸ್ಇ ಪರೀಕ್ಷೆ ಮುಂದೂಡಿಕೆ
◆ ಪುಟ ೨

ಆಲಮಟ್ಟಿ ಎತ್ತರಕ್ಕೆ ಆಂಧ್ರ ಅಡ್ಡಗಾಲು: ಡಿಕೆಶಿ
◆ ಪುಟ ೪

ರಾಜ್ಯಾದ್ಯಂತ ಮಾ.6ಕ್ಕೆ ಗುತ್ತಿಗೆದಾರರ ಮುಷ್ಕರ
◆ ಪುಟ ೫

ಖಮೇನಿ ಸಾವಿನಿಂದ ಹೆಚ್ಚಿದ ಯುದ್ಧಾಕ್ರೋಶ | ದಕ್ಷಿಣ ಲೆಬನಾನ್‌ನಲ್ಲಿ ಮುನ್ನುಗ್ಗಿದ ಇಸ್ರೇಲ್ | ರಿಯಾದ್‌ನ ಅಮೆರಿಕ ದೂತಾವಾಸ ಮೇಲೆ 2 ಡ್ರೋನ್‌ಗಳಿಂದ ಇರಾನ್ ದಾಳಿ | ಇರಾನ್‌ನಲ್ಲಿ 797ಕ್ಕೇರಿದ ಸಾವಿನ ಸಂಖ್ಯೆ

ಮಧ್ಯಪ್ರಾಚ್ಯದಲ್ಲಿ ಯುದ್ಧಗ್ರಹಣ!

◆ **ಟೆಹ್ರಾನ್:** ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಶನಿವಾರ ಆರಂಭವಾದ ಸಂಘರ್ಷವು ಈಗ ಪ್ರಾದೇಶಿಕ ಯುದ್ಧವಾಗಿ ವಿಸ್ತರಣೆಗೊಂಡಿದ್ದು, 72 ಗಂಟೆಗಳೊಳಗೆ ಸುಮಾರು 12 ರಾಷ್ಟ್ರಗಳನ್ನು ಯುದ್ಧ ವ್ಯಾಪಿಸಿದೆ. ಮಂಗಳವಾರ ಮಧ್ಯ ಇಸ್ರೇಲ್‌ನ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದ್ದು, ಇರಾನ್ ಮೇಲೆ ವೈಮಾನಿಕ ದಾಳಿ ಹೆಚ್ಚಿಸಿದ್ದಾಗಿ ಇಸ್ರೇಲ್ ಹೇಳಿದೆ.



ಕೇತುಗ್ರಸ್ತ ಚಂದ್ರಗ್ರಹಣದಂದು ಚಂದ್ರನ ಮೇಲೆ ಭೂಮಿಯ ನೆರಳು ಬಿದ್ದಂತೆ ಮಧ್ಯಪ್ರಾಚ್ಯದ ಮೇಲೆ ಖಮೇನಿ ಸಾವಿನ ಛಾಯೆ ಯುದ್ಧಗ್ರಹಣವಾಗಿಸಿದೆ.

ದುಬೈ ಈಗ ಸುರಕ್ಷಿತವಲ್ಲ: ಒಂದು ಕಾಲದಲ್ಲಿ ಹೊಳೆಯುವ ಆಗಸದೆತ್ತರದ ಕಟ್ಟಡಗಳು ಮತ್ತು ಐಶ್ವರ್ಯಮಯ ಜೀವನಶೈಲಿಗೆ ಪ್ರಸಿದ್ಧವಾಗಿದ್ದ ದುಬೈ, ಅಬುಧಾಬಿ, ರಿಯಾದ್, ದೋಹಾ ಮತ್ತು ಮನಾಮಾ ನಗರಗಳಲ್ಲಿ ಈಗ ಕ್ಷಿಪಣಿಗಳ ಸದ್ದು ಕೇಳಿಬರುತ್ತಿರುವುದು ಅಕ್ಷರಶಃ ಅಲ್ಲಿನ ಆಘಾತಕ್ಕೀಡುಮಾಡಿದೆ. ಸೇಫ್ ಹೆವನ್ ಎಂಬ ಬಿರುದು ಪಡೆದುಕೊಂಡಿದ್ದ ದುಬೈ ಈಗ ಸುರಕ್ಷಿತ ನಗರವಾಗಿ ಉಳಿದಿಲ್ಲ.

ಬುರ್ಜ್ ಖಲೀಫಾ ಪಾರು: ಇರಾನಿನ ಕ್ಷಿಪಣಿಯೊಂದು ವಿಶ್ವದ ಅತಿ ಎತ್ತರದ ಕಟ್ಟಡ ಬುರ್ಜ್ ಖಲೀಫಾ ಬದಿಯಲ್ಲಿ ಹಾದುಹೋಗಿದ್ದು ವರದಿಯಾಗಿದೆ. ಅದು ಬದಿಯಲ್ಲಿ ಹಾದುಹೋಗಿದ್ದರಿಂದ ಕ್ಷಿಪಣಿ ಹೊಡೆತದಿಂದ ಬುರ್ಜ್ ಖಲೀಫಾ ಸ್ವಲ್ಪದರಲ್ಲೇ ಪಾರಾಗಿದೆ.

12 ರಾಷ್ಟ್ರಗಳಿಗೆ ಕದನ ವಿಸ್ತರಣೆ: ಅಮೆರಿಕ ಆರಂಭಿಸಿದ ಈ ಯುದ್ಧ 12 ರಾಷ್ಟ್ರಗಳ ಮೇಲೆ ನೇರ ಪರಿಣಾಮ ಬೀರಿದೆ. ಇಸ್ರೇಲ್, ಇರಾನ್, ಬಹ್ರೈನ್, ಸೌದಿ ಅರೇಬಿಯಾ, ಇರಾಕ್, ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ), ಕತಾರ್, ಕುವೈತ್, ಜೋರ್ಡಾನ್, ಒಮನ್, ಯೆಮನ್ ಮತ್ತು ಲೆಬನಾನ್. ಒಂದು ಕಾಲದಲ್ಲಿ ಒಗ್ಗಟ್ಟಿನ ಮಂತ್ರ ಜಪಿಸುತ್ತಲೇ ಪರಸ್ಪರ ಕತ್ತಿ ಮಸೆಯುತ್ತಿದ್ದ ಇಸ್ಲಾಮಿಕ್ ರಾಷ್ಟ್ರಗಳ ನಡುವಿನ ವೈಮನಸ್ಸು, ಭಿನ್ನಾಭಿಪ್ರಾಯಗಳು ಈಗ ಹೆಚ್ಚಾಗಿವೆ.

ತುಂಬಾ ತಡವಾಗಿದೆ: ಟ್ರಂಪ್
◆ ಪುಟ ೨

- ಇರಾನ್ ಸರ್ವೋಚ್ಚ ನಾಯಕನ ಆಯ್ಕೆ ಸಮಿತಿ ಕಟ್ಟಡದ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ
- ಸೌದಿ ಅರೇಬಿಯಾ, ಕುವೈತ್‌ನಲ್ಲಿ ರಾಯಭಾರ ಕಚೇರಿ ಮುಚ್ಚಿದ ಅಮೆರಿಕ
- ಯುದ್ಧಪೀಡಿತ ಇರಾನ್‌ನ ಗೆರಾಶ್‌ನಲ್ಲಿ 4.3 ತೀವ್ರತೆ ಭೂಕಂಪನ

ಇರಾನ್ ಶಸ್ತ್ರಾಗಾರ ಮೇಲೆ ದಾಳಿ

ಇರಾನ್‌ನೆಲ್ಲೆಡೆ ಇರುವ ಶಸ್ತ್ರಾಸ್ತ್ರ ಉತ್ಪಾದನಾ ಘಟಕಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿರುವುದು ಮಂಗಳವಾರ ರಾತ್ರಿ ವರದಿಯಾಗಿದೆ.

ಎರಡು ವಿಮಾನ ನಿಲ್ದಾಣಗಳ ನಾಶ: ಇರಾನ್‌ನಲ್ಲಿ ದೇಶೀಯ ವಿಮಾನಗಳ ಹಾರಾಟ ನಿರ್ವಹಿಸುವ ಮೆಹ್ರಾಬಾದ್ ವಿಮಾನ ನಿಲ್ದಾಣದ ಮೇಲೆ ಇಸ್ರೇಲ್ ನಡೆಸಿದೆ. ದಕ್ಷಿಣದ ಬಂದರು ನಗರ ಬುಶೇರ್‌ನಲ್ಲಿರುವ ವಿಮಾನ ನಿಲ್ದಾಣದ ಮೇಲೂ ಇಸ್ರೇಲ್ ದಾಳಿ ನಡೆಸಿದ್ದು, ಕ್ಷಿಪಣಿ ದಾಳಿಗೆ ವಿಮಾನವೊಂದು ಧ್ವಂಸವಾಗಿದ್ದು ವರದಿಯಾಗಿದೆ.



ಜಾಗತಿಕ ಇಂಧನ ಪೂರೈಕೆಯಲ್ಲಿ ಆತಂಕ

◆ **ದುಬೈ:** ವಿಶ್ವದ ಅತ್ಯಂತ ನಿರ್ಣಾಯಕ ಸಮುದ್ರ ಮಾರ್ಗಗಳಲ್ಲಿ ಒಂದಾದ ಹಾರ್ಮುಜ್ ಜಲಸಂಧಿ ಅಕ್ಷರಶಃ ಮುಚ್ಚಲ್ಪಟ್ಟಿರುವುದರಿಂದ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಯಾಗಿದೆ. ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ತೀವ್ರಗೊಳ್ಳುತ್ತಿದ್ದಂತೆ, ಈ ಮಾರ್ಗದಲ್ಲಿ ಹಡಗು ಸಂಚಾರ ಶೇ.80 ರಷ್ಟು ಕುಸಿದಿದೆ. ಇದು ಕಚ್ಚಾ ತೈಲ ಬೆಲೆಯಲ್ಲಿ ಭಾರೀ ಏರಿಕೆಗೆ ಕಾರಣವಾಗಿದೆ. ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಸೋಮವಾರ ಈ ಜಲಸಂಧಿಯನ್ನು ಬಂದ್ ಎಂದು ಘೋಷಿಸಿದ್ದು, ಅನುಮತಿಯಿಲ್ಲದೆ ಹಾದುಹೋಗುವ ಹಡಗುಗಳ ಮೇಲೆ ದಾಳಿ ನಡೆಸಲಾಗುವುದು ಎಂದು ಎಚ್ಚರಿಸಿದೆ. ಈಗಾಗಲೇ ಕನಿಷ್ಠ ಐದು ತೈಲ ಟ್ಯಾಂಕರ್‌ಗಳು ಹಾನಿಗೊಳಗಾಗಿದ್ದು, ಇಬ್ಬರು ಸಿಬ್ಬಂದಿ ಮೃತಪಟ್ಟಿದ್ದಾರೆ. ಅಂತಾರಾಷ್ಟ್ರೀಯ ಎಚ್ಚರಿಕೆಯ ಹಿನ್ನೆಲೆಯಲ್ಲಿ ಸುಮಾರು 150 ಹಡಗುಗಳು ಜಲಸಂಧಿಯ ಸುತ್ತ ಸಿಲುಕಿಕೊಂಡಿವೆ.

ಹಾರ್ಮುಜ್ ಜಲಸಂಧಿ ಬಂದ್

ಮಾರುಕಟ್ಟೆ ಮೇಲೆ ಆರ್ಥಿಕ ಹೊಡೆತ: ಶುಕ್ರವಾರ ಪ್ರತಿ ಬ್ಯಾರೆಲ್‌ಗೆ 73 ಡಾಲರ್ ಇದ್ದ ತೈಲ ಬೆಲೆ, ಸೋಮವಾರದ ವೇಳೆಗೆ 79.40 ಡಾಲರ್‌ಗೆ ಏರಿಕೆಯಾಗಿದೆ. ಇರಾನ್ ಮತ್ತು ಚೀನಾ ಧ್ವಜ ಹೊಂದಿರುವ ಕೆಲವು ಹಡಗುಗಳು ಮಾತ್ರ ಸಂಚರಿಸುತ್ತಿದ್ದರೂ, ಪ್ರಮುಖ ವಿಮಾ ಕಂಪನಿಗಳು ಮತ್ತು ತೈಲ ಸಂಸ್ಥೆಗಳು ಈ ಮಾರ್ಗದಿಂದ ವಿಮುಖವಾಗಿವೆ ವಿಮಾ ಕಂತುಗಳು ಆರು ವರ್ಷಗಳ ಗರಿಷ್ಠ ಮಟ್ಟಕ್ಕೆ ತಲುಪಿವೆ.
➡ ಪುಟ ೪

ಭಾರತದಲ್ಲಿದೆ ತೈಲ ಸಂಗ್ರಹ

◆ **ಹೊಸದಿಲ್ಲಿ:** ಅಮೆರಿಕ –ಇಸ್ರೇಲ್ ಮತ್ತು ಇರಾನ್ ಸೇರಿದಂತೆ 12 ದೇಶಗಳಿಗೆ ವ್ಯಾಪಿಸಿರುವ ಸಂಘರ್ಷದ ನಡುವೆಯೂ ಈಗ ಭಾರತವು ಆಂತರಿಕ ಬೇಡಿಕೆಗಳನ್ನು ಪೂರೈಸುವಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಚ್ಚಾ ತೈಲ, ಪೆಟ್ರೋಲ್, ಡೀಸೆಲ್ ಮತ್ತಿತರ ಇಂಧನ ಉತ್ಪನ್ನಗಳ ಸಂಗ್ರಹ ಹೊಂದಿರುವುದಾಗಿ ಉನ್ನತ ಸರಕಾರಿ ಮೂಲಗಳು ತಿಳಿಸಿವೆ. ಇದು ಪಶ್ಚಿಮ ಏಷ್ಯಾದಲ್ಲಿನ ಸೇನಾ ಸಂಘರ್ಷದಿಂದ ಎದುರಾಗಲಿರುವ ಯಾವುದೇ ಅಲ್ಪಾವಧಿಯ ಪೂರೈಕೆ ಅಡಚಣೆಗಳಿಂದ ದೇಶವನ್ನು ರಕ್ಷಿಸುತ್ತದೆ. ಭಾರತದ ಕಚ್ಚಾ ತೈಲ ಮತ್ತು ಎಲ್‌ಪಿಜಿ ಆಮದಿನ ಅರ್ಧ ಭಾಗ ಹಾರ್ಮುಜ್ ಜಲಸಂಧಿಯ ಮೂಲಕ ಬರುವಂಥದ್ದಾಗಿದೆ. ಇದೀಗ ಅಮೆರಿಕ, ಇಸ್ರೇಲ್‌ಗಳು ಇರಾನಿ ಸರಕಾರ, ಸೇನೆ, ಪರಮಾಣು ಸೌಲಭ್ಯಗಳ ವಿರುದ್ಧ ನಡೆಸಿರುವ ಸೇನಾ ಕಾರ್ಯಾಚರಣೆಗಳಿಗೆ ಎದುರಾಗಿ ಇರಾನ್ ಇಂಧನ ಪೂರೈಕೆಗೆ ತಡೆ ಒಡ್ಡುವ ಬೆದರಿಕೆ ಒಡ್ಡಿದ್ದು, ಇದರಿಂದಾಗಿ ತೈಲ ಉತ್ಪನ್ನಗಳ ಪೂರೈಕೆಗೆ ಆತಂಕ ಉಂಟಾಗಿದೆ. ಕೇಂದ್ರ ಸರಕಾರವು ಪರಿಸ್ಥಿತಿ ಮೇಲೆ ದೈನಂದಿನ ಮತ್ತು ಗಂಟೆಗಳ ನೆಲೆಯಲ್ಲಿ ಸತತ ನಿಗಾ ಇಟ್ಟಿದ್ದು, ಸದ್ಯದ ಸನ್ನಿವೇಶದಲ್ಲಿ ದೇಶ ವಾರ ಅಥವಾ 10 ದಿನಗಳಿಗೆ ಸಾಕಾಗುವಷ್ಟು ತೈಲ ಸಂಗ್ರಹ ಹೊಂದಿದ್ದು, ಬಿಕ್ಕಟ್ಟನ್ನು ನಿಭಾಯಿಸುವ ವಿಶ್ವಾಸ ಹೊಂದಿದೆ ಎಂದು ತೈಲ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
➡ ಪುಟ ೪



ಗಲ್ಫ್‌ನ ಯುಎಸ್ ನೆಲೆ ಮೇಲೆ ದಾಳಿ

◆ **ರಿಯಾದ್:** ಗಲ್ಫ್ ರಾಷ್ಟ್ರಗಳಾದ್ಯಂತ, ಮಂಗಳವಾರ, ಅಮೆರಿಕದ ರಾಜತಾಂತ್ರಿಕ ಮತ್ತು ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿಕೊಂಡು ಸರಣಿ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳು ನಡೆದಿವೆ. ಸೌದಿ ಅರೇಬಿಯಾದ ರಾಜಧಾನಿ ರಿಯಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿಯ ಮೇಲೆ ಎರಡು ಡ್ರೋನ್‌ಗಳು ಅಪ್ಪಳಿಸಿದ್ದು, ಅಲ್ಪ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದೆ. ಈ ಘಟನೆಯಲ್ಲಿ ಸಣ್ಣಪುಟ್ಟ ವಸ್ತು ಹಾನಿಯಾಗಿದೆಯಾದರೂ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಇದೇ ವೇಳೆ, ಒಮಾನ್‌ನ ದುಕ್ಮ್ ಬಂದರಿನಲ್ಲಿರುವ ಇಂಧನ ಟ್ಯಾಂಕ್ ಮೇಲೆ ಡ್ರೋನ್ ದಾಳಿ ನಡೆದಿದೆ. ಇತ್ತ ಬಹ್ರೇನ್‌ನಲ್ಲಿರುವ ಶೇಖ್ ಇಸಾ ಅಮೆರಿಕನ್ ವಾಯುನೆಲೆಯ ಮೇಲೆ ಇರಾನ್‌ನ ಐಆರ್‌ಜಿಸಿ ಬೃಹತ್ ಪ್ರಮಾಣದ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿರುವುದಾಗಿ ಹೇಳಿಕೊಂಡಿದೆ.
➡ ಪುಟ ೪

ಡಿಸಿಎಂ ಡಿಕೆಶಿ ನನ್ನ ನಡುವೆ ಹುಳಿ ಹಿಂಡುವ ಯತ್ನ ಬೇಡ

ನಮ್ಮದು ಹಾಲು ಜೇನು ಬಂಧ: ಸಿಎಂ

◆ **ಬೆಂಗಳೂರು:** ನಿರುದ್ಯೋಗಿಯಾಗಿರುವ ವಿರೋಧ ಪಕ್ಷದ ನಾಯಕರು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ನನ್ನ ನಡುವಿನ ಸಂಬಂಧಕ್ಕೆ ಹುಳಿ ಹಿಂಡಲು ಪ್ರಯತ್ನಿಸುತ್ತಲೇ ಇದ್ದಾರೆ.



ಇದರಿಂದ ಅವರೊಳಗೆ ತುಂಬಿಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು ನಮ್ಮ ಹಾಲು ಜೇನಿನಂತಹ ಸಂಬಂಧದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ ಎನ್ನುವುದು ಇಬ್ಬರಿಗೂ ತಿಳಿದಿರಲಿ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಮತ್ತು ವಿಪಕ್ಷ ನಾಯಕ ಅಶೋಕ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಫೋನ್ ಕದ್ದಾಲಿಕೆ ಕುರಿತು ಆರೋಪ ಮಾಡಿದ್ದ ಇಬ್ಬರು ನಾಯಕರ ವಿರುದ್ಧ ಗುಡುಗಿರುವ ಮುಖ್ಯಮಂತ್ರಿಗಳು, ಇವರ ಆರೋಪ 'ತಾನು ಕಳ್ಳ ಪರರ ನಂಬ' ಎಂಬ ಗಾದೆಯಂತಿದೆ. ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆ.
➡ ಪುಟ ೪

ಹೈಕಮಾಂಡ್ ಆದೇಶಕ್ಕೆ ತಲೆಬಾಗುವವರು

ನಮ್ಮ ಶಾಸಕರಲ್ಲಿ ಯಾರೂ ಸಹ ನನ್ನ ಇಲ್ಲವೇ ಡಿ.ಕೆ. ಶಿವಕುಮಾರ್ ಬೆಂಬಲಿಗರಲ್ಲ, ಎಲ್ಲರೂ ಕಾಂಗ್ರೆಸ್ ಪಕ್ಷದ ಬೆಂಬಲಿಗರು. ಪಕ್ಷದ ಶಿಸ್ತಿನ ಚೌಕಟ್ಟಿನೊಳಗೆ ವೈಯಕ್ತಿಕವಾಗಿ ಅಭಿಪ್ರಾಯ ವ್ಯಕ್ತಪಡಿಸುವ, ಜತೆಯಲ್ಲಿ ಊಟ-ತಿಂಡಿ ಮಾಡುವ ಎಲ್ಲ ಸ್ವಾತಂತ್ರ್ಯಗಳೂ ಅವರಿಗೆ ಇದೆ. ಆದರೆ ಯಾವ ಶಾಸಕರು ಏನನ್ನೇ ಹೇಳಿದರೂ ಅಂತಿಮ ವಾಗಿ ಅವರನ್ನೂ ಸೇರಿದಂತೆ ನಾನು, ಶಿವಕುಮಾರ್ ನಮ್ಮ ಪಕ್ಷದ ಹೈಕಮಾಂಡ್ ಆದೇಶಕ್ಕೆ ತಲೆಬಾಗುವವರು. ಇದನ್ನು ನಾವಿಬ್ಬರೂ ನೂರು ಬಾರಿ ಹೇಳಿದ್ದೇವೆ. ಇದೇ ಅಂತಿಮ ಸತ್ಯ ಎಂದು ಸಿಎಂ ಸ್ಪಷ್ಟಪಡಿಸಿದ್ದಾರೆ.

ದಲಿತಪರ ಸಂಘಟನೆಗಳಿಂದ ನಿರ್ಧಾರ | ಪ್ರತಿಭಟನೆ ಎಚ್ಚರಿಕೆ

ಹಣ ದುರ್ಬಳಕೆಯಾದರೆ ಹೋರಾಟ

◆ **ಬೆಂಗಳೂರು:** ದಲಿತರ ಕಲ್ಯಾಣಕ್ಕಾಗಿರುವ ಎಸ್‌ಇಪಿ, ಟಿಎಸ್‌ಪಿ ಹಣವನ್ನು ಬಜೆಟ್‌ನಲ್ಲಿ ಬೇರೆ ಯೋಜನೆಗಳಿಗೆ ಬಳಸಿದರೆ ಸರ್ಕಾರದ ವಿರುದ್ಧ ಪ್ರತಿಭಟನೆಗೆ ದಲಿತ ಪರ ಸಂಘಟನೆಗಳು ನಿರ್ಧರಿಸಿವೆ.

ಎಸ್‌ಇಪಿ, ಟಿಎಸ್‌ಪಿ ಹಣವನ್ನು ಬೇರೆ ಯೋಜನೆಗಳಿಗೆ ಬಳಸುವುದನ್ನು ತಡೆಯುವ ಸಂಬಂಧ ಮಂಗಳವಾರ ಶಾಸಕರ ಭವನದಲ್ಲಿ ಪರಿಶಿಷ್ಟ ಜಾತಿ ಪಂಗಡಗಳ ಹಿತರಕ್ಷಣಾ ವೇದಿಕೆ ಹಮ್ಮಿಕೊಂಡಿದ್ದ ದುಂಡು ಮೇಜಿನ ಸಭೆಯಲ್ಲಿ ಈಗಿನಿಂದಲೇ ಸರ್ಕಾರವನ್ನು ಎಚ್ಚರಿಸಲು ಹೋರಾಟ ರೂಪಿಸಬೇಕೆಂಬ ಅಭಿಪ್ರಾಯ ವ್ಯಕ್ತವಾಯಿತು. ಬಜೆಟ್ ಮೊದಲಿಗೆ ಎಸ್‌ಇಪಿ, ಟಿಎಸ್‌ಪಿ ಹಣಕ್ಕೆ ಕೈ ಹಾಕುವುದಿಲ್ಲ, ಕಳೆದ 3 ವರ್ಷದಿಂದ ದುರ್ಬಳಕೆಯಾಗಿರುವ 39 ಸಾವಿರ ಕೋಟಿ ರೂ. ದಲಿತರಿಗೆ ವಾಪಸ್ ಕೊಡಬೇಕು. ಎಲ್ಲಾ ಎಸ್ಸಿ, ಎಸ್ಟಿ ನಿಗಮಗಳಿಗೆ ತಲಾ ₹1000 ಕೋಟಿ ಕನಿಷ್ಠ ಅನುದಾನ ಘೋಷಿಸಬೇಕು.
➡ ಪುಟ ೪



> ಈ ಬಾರಿ ಬಜೆಟ್‌ನಲ್ಲಿ ಎಸ್‌ಇಪಿ, ಟಿಎಸ್‌ಪಿ ಹಣಕ್ಕೆ ಕೈ ಹಾಕಿಲ್ಲ ಎಂದು ಘೋಷಿಸಿ ಮುಖ್ಯಮಂತ್ರಿಗಳು ಬಜೆಟ್ ಓದಬೇಕು. ಒಂದು ವೇಳೆ ಬಜೆಟ್‌ನಲ್ಲಿ ಎಸ್‌ಇಪಿ, ಟಿಎಸ್‌ಪಿ ಹಣ ಬೇರೆ ಯೋಜನೆಗಳಿಗೆ ವರ್ಗಾವಣೆಯಾದರೆ, ಅದು ದಲಿತ ವಿರೋಧಿ ಬಜೆಟ್ ಆಗಿರುತ್ತದೆ.
> ■ ಎನ್. ಮಹೇಶ್, ಮಾಜಿ ಸಚಿವ

₹11.50 ಕೋಟಿ ಮೌಲ್ಯದ ಡ್ರಗ್ಸ್ ವಶ, ಇಬ್ಬರ ಬಂಧನ

◆ **ಬೆಂಗಳೂರು:** ನಗರದ ಸಿಸಿಬಿ ಮಾದಕದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿ, ಸುಮಾರು 11.50 ಕೋಟಿ ರೂ. ಮೌಲ್ಯದ ನಿಷೇಧಿತ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಈ ಸಂಬಂಧ ಹೊರ ರಾಜ್ಯದ ಕೇರಳ ಮೂಲದ ಅಶ್ವಿನ್ (27), ಮುಬೀನಾ (25) ಎಂಬ ಆರೋಪಿಗಳನ್ನು ಬಂಧಿಸಿದ್ದಾರೆ. ಈ ಇಬ್ಬರು ಆರೋಪಿಗಳು ಕಳೆದ 1 ವರ್ಷದಿಂದ ಬಾಗಲೂರಿನಲ್ಲಿ ಖಾಸಗಿ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದರು. ಥೈಲ್ಯಾಂಡ್‌ನಲ್ಲಿ ನೆಲೆಸಿರುವ ಕೇರಳ ಮೂಲದ ವ್ಯಕ್ತಿಯ ನಿರ್ದೇಶನದಂತೆ ಮಾದಕವಸ್ತುಗಳನ್ನು ನಗರದಲ್ಲಿರುವ ಗ್ರಾಹಕರಿಗೆ ತಲುಪಿಸಿ ಅಕ್ರಮ ಹಣ ಸಂಪಾದನೆ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.
➡ ಪುಟ ೪

ಸಿಸಿಬಿಯಿಂದ ಭರ್ಜರಿ ಕಾರ್ಯಾಚರಣೆ



ಕಾಶಿ ವಿಶ್ವನಾಥ ಧಾಮ್ ಪುನರುತ್ಥಾನ | ದಿನನಿತ್ಯ ಭಕ್ತರ ಆಗಮನದಲ್ಲಿ ಅಗ್ರಸ್ಥಾನ

ಆಧ್ಯಾತ್ಮಿಕ ಪುನರುಜ್ಜೀವನದ ಹೊಸ ಅಧ್ಯಾಯ

▸ ಸೋಮಶೇಖರ ಸಿ.ಜೆ.

◆ **ವಾರಾಣಸಿ:** ಭಾರತದ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿರುವ ಕಾಶಿ ವಿಶ್ವನಾಥ ಧಾಮವು ಭವ್ಯ ಪುನರ್ ನಿರ್ಮಾಣದ ಮೂಲಕ ಹೊಸ ರೂಪದಲ್ಲಿ ಉದ್ಭವಿಸಿದೆ. 900 ಕೋಟಿ ರೂಪಾಯಿ ವೆಚ್ಚದಲ್ಲಿ (400 ಕೋಟಿ ನಿರ್ಮಾಣ, 500 ಕೋಟಿ ಭೂಸ್ವಾಧೀನ) ಜಾರಿಗೊಂಡ ಕಾರಿಡಾರ್ ಯೋಜನೆಯಿಂದ ದೇವಾಲಯ ವಿಸ್ತೀರ್ಣವನ್ನು 3 ಸಾವಿರ ಚದರ ಅಡಿಯಿಂದ 5 ಲಕ್ಷ ಚದರ ಅಡಿಗೆ ವಿಸ್ತರಿಸಲಾಗಿದೆ.

ಕಾಶಿ ವಿಶ್ವನಾಥ ದೇಗುಲ ಧಾಮದ ಸಿಇಒ ವಿಶ್ವಭೂಷಣ ಮಿಶ್ರ ಅವರು ಕರ್ನಾಟಕದಿಂದ ಆಗಮಿಸಿದ್ದ ಮಾಧ್ಯಮ ತಂಡಕ್ಕೆ ವಿವರಿಸುತ್ತಾ, "ಕಾಶಿ ಕೇವಲ ಪೂಜಾಸ್ಥಳವಲ್ಲ; ಇದು ಆರ್ಥಿಕ, ಸಾಂಸ್ಕೃತಿಕ ಹಾಗೂ ಕಲಾ ವಿನಿಮಯದ ಕೇಂದ್ರ" ಎಂದು ಹೇಳಿದರು. ಹಾಗೆಯೇ ಕಾಶಿ ವಿಶ್ವನಾಥ ಕಾರಿಡಾರ್‌ನ ಮಹತ್ವದ ಬಗ್ಗೆ ಹೇಳಿದ ಅವರು, ಇದು ಕೇವಲ ವಾಸ್ತುಶಿಲ್ಪ ಮಾತ್ರವಲ್ಲ, ಪವಿತ್ರ ಪೂಜಾ ಸ್ಥಳವಾಗಿದ್ದು, ಇತರ ಮತಗಳ ಪೂಜಾಸ್ಥಳಗಳಿಗಿಂತ ವಿಭಿನ್ನ ಮಾನಂಡಗಳಿವೆ. ಜತೆಗೆ ಈ ಸ್ಥಳವು ಸಾಂಸ್ಕೃತಿಕ ಕೇಂದ್ರವೂ ಆಗಿದೆ. ಅಂದರೆ, ದಕ್ಷಿಣದ ಐದು ರಾಜ್ಯಗಳಲ್ಲಿನ ಶೈವ ಸಂಪ್ರದಾಯದ ಜನರಿಗೆ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಕಾಶಿಗೆ ಬರಬೇಕು ಎಂಬ ನಂಬಿಕೆ ಇದೆ ಎಂದು ಹೇಳಿದರು.
➡ ಪುಟ ೪

900 ಕೋಟಿ ರೂ. ವೆಚ್ಚದಲ್ಲಿ ಐತಿಹಾಸಿಕ ಪರಿವರ್ತನೆ



ಸಾಮಾಜಿಕ ಸೇವೆಯತ್ತ ಹೆಜ್ಜೆ

- 6000ಕ್ಕೂ ಹೆಚ್ಚು ಸಂಸ್ಕೃತ ವಿದ್ಯಾರ್ಥಿಗಳಿಗೆ ಉಚಿತ ಆಹಾರ, ವಸ್ತ್ರ, ಪುಸ್ತಕ
- ಆಸ್ಪತ್ರೆಗಳಲ್ಲಿ ರೋಗಿಗಳ ಜತೆ ಇರುವವರಿಗೆ ಉಚಿತ ಅನ್ನಸಂತರ್ಪಣೆ
- 100% ಪ್ಲಾಸ್ಟಿಕ್ ಮುಕ್ತ ಧಾಮ ಘೋಷಣೆ
- ನಂದಿ ಪೂಜಾ ಅಭಿಯಾನ ಹಾಗೂ ಗೋಶಾಲಾ ಆಧುನೀಕರಣ
- 12 ನಿಮಿಷಗಳಲ್ಲಿ ಐದು ಆರತಿಗಳ ದರ್ಶನಕ್ಕೆ ವ್ಯವಸ್ಥೆ

ಇರಾನ್ ವಿರುದ್ಧ ಟ್ರಂಪ್ ಎಪಿಕ್ ಫ್ಯೂರಿ ಕಾರ್ಯಾಚರಣೆ ಕ್ಷಣ ಕ್ಷಣಕ್ಕೂ ಹೊಸ ತಿರುವು

ಮಧ್ಯಪ್ರಾಚ್ಯ ಚಿತ್ರಣವೇ ಬದಲು



ವಾಷಿಂಗ್ಟನ್: ಸ್ಥಗಿತಗೊಂಡಿದ್ದ ರಾಜತಾಂತ್ರಿಕ ಮಾತುಕತೆಗಳಿಂದ ಮಿಲಿಟರಿ ಕ್ರಮದತ್ತ ದಿಢೀರ್ ತಿರುವು ಪಡೆದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ಧಾರ, ಇರಾನ್‌ನ ಉನ್ನತ ನಾಯಕತ್ವದ ಪತನಕ್ಕೆ ಕಾರಣವಾಗಿದೆ. ಆದರೆ ಶುಕ್ರವಾರ ಮಧ್ಯಾಹ್ನದವರೆಗೆ ಅನಿರ್ದಿಷ್ಟವಾಗಿದ್ದ ಅಮೆರಿಕ ನಿರ್ಧಾರ, ಏರ್ ಫೋರ್ಸ್ ಒನ್ ನಿಂದಲೇ ಟ್ರಂಪ್ ನೀಡಿದ ಆಪರೇಷನ್ ಎಪಿಕ್ ಫ್ಯೂರಿ ಆದೇಶದೊಂದಿಗೆ ಕೆಲವೇ ಗಂಟೆಗಳಲ್ಲಿ ಇಡೀ ಮಧ್ಯಪ್ರಾಚ್ಯದ ಚಿತ್ರಣವನ್ನೇ ಬದಲಿಸಿದೆ.

ಗಗನದಲ್ಲೇ ನಿರ್ಧಾರ: ಶುಕ್ರವಾರ ಮಧ್ಯಾಹ್ನ 3:38ಕ್ಕೆ (ಇಎಸ್‌ಟಿ) ಟೆಕ್ಸಾಸ್‌ಗೆ ಪ್ರಯಾಣಿಸುತ್ತಿದ್ದ ವೇಳೆ ಈ ದಾಳಿಯ ಆದೇಶವನ್ನು ಅಧಿಕೃತಗೊಳಿಸಲಾಯಿತು ಎನ್ನಲಾಗಿದೆ. ಜಂಟಿ ಮುಖ್ಯಸ್ಥರ ಸಮಿತಿಯ ಅಧ್ಯಕ್ಷ ಜನರಲ್ ಡ್ಯಾನ್ ಕೈನ್ಗೆ ಟ್ರಂಪ್ ನೇರ ಸೂಚನೆ ನೀಡಿದ್ದರು. ವಿಮಾನದಲ್ಲಿದ್ದ ರಿಪಬ್ಲಿಕನ್ ಸಂಸದರೊಂದಿಗೆ ಸಮಾಲೋಚನೆ ನಡೆಸಿದ ಬಳಿಕ, ಇರಾನ್‌ನ ರಾಜತಾಂತ್ರಿಕ ಮಾತುಕತೆಗಳು ಕೇವಲ ಕಾಲಹರಣದ ತಂತ್ರ ಎಂದು ವಿಶ್ಲೇಷಿಸಲಾಗಿತ್ತು.

ಆದರೆ, ಟೆಕ್ಸಾಸ್ ಸೆನೆಟರ್ ಕಾರ್ನಿನ್ ಮಾತನಾಡಿ, ಟ್ರಂಪ್ ತಾವು ಏನು ಮಾಡಲಿದ್ದಾರೆಂಬುದನ್ನು ನಮಗೆ ತಿಳಿಸಿರಲಿಲ್ಲ ಎಂದಿದ್ದಾರೆ. ಮಂಗಳವಾರ ನಡೆಯಲಿರುವ ರಾಜ್ಯದ ಚುನಾವಣೆಗಳ ಪ್ರಚಾರದ ನಡುವೆ ಮಾತನಾಡಿದ ಅವರು, ಇರಾನ್ ಅನ್ನು ತಡೆಯಲು ಅಗತ್ಯವಿರುವ ಯಾವುದೇ ಕ್ರಮಗಳನ್ನು ಕೈಗೊಳ್ಳಬೇಕೇ, ಎಂಬ ಪ್ರಶ್ನೆಯನ್ನು ಮಾತ್ರ ಟ್ರಂಪ್ ನಮ್ಮ ಮುಂದಿಟ್ಟಿದ್ದರು, ಎಂದು ತಿಳಿಸಿದರು.



ಸೈನಿಕ ಕಾರ್ಯಾಚರಣೆ: ಶನಿವಾರ ಬೆಳಗಿನ ಜಾವ 1:15ಕ್ಕೆ ಏಕಕಾಲದಲ್ಲಿ ಭೂಮಿ, ಆಕಾಶ ಮತ್ತು ಸಮುದ್ರದ ಮೂಲಕ ದಾಳಿ ಆರಂಭವಾಗಿತ್ತು. ಸಾವಿರಾರು ಸೈನಿಕರು ಹಾಗೂ ಎರಡು ಯುದ್ಧನೌಕೆಗಳನ್ನೊಳಗೊಂಡ ಈ ಕಾರ್ಯಾಚರಣೆಯಲ್ಲಿ ನೂರಾರು ಸುಧಾರಿತ ಯುದ್ಧ ವಿಮಾನಗಳನ್ನು ಬಳಸಲಾಗಿದೆ. ಕೇವಲ ಒಂದು ನಿಮಿಷದ ಅಂತರದಲ್ಲಿ ನಡೆದ ಮೂರು ಪ್ರಮುಖ ದಾಳಿಗಳಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಮತ್ತು ಸುಮಾರು 40 ಹಿರಿಯ ಮಿಲಿಟರಿ ಅಧಿಕಾರಿಗಳು ಹತರಾಗಿದ್ದಾರೆ ಎಂದು ಪೆಂಟಗನ್ ದೃಢಪಡಿಸಿದೆ. ಸಿಐಎ ಮತ್ತು ಇಸ್ರೇಲ್ ಗುಪ್ತಚರ ದಳಗಳು ತಿಂಗಳುಗಳಿಂದ ಸಂಗ್ರಹಿಸಿದ ನಿಖರ ಮಾಹಿತಿಯಿಂದಾಗಿ ಈ ಯಶಸ್ಸು ಲಭಿಸಿದೆ.

ಇರಾನ್ ದಾಳಿ ನಡೆಸುತ್ತಿರಲಿಲ್ಲ?: ಖಾಸಗಿ ಬ್ರೀಫಿಂಗ್‌ವೊಂದರಲ್ಲಿ ಟ್ರಂಪ್ ಆಡಳಿತದ ಅಧಿಕಾರಿಗಳು, ಅಮೆರಿಕದ ಮೇಲೆ ಯಾವುದೇ ತಕ್ಷಣದ ದಾಳಿಗೆ ಇರಾನ್ ಸಿದ್ಧತೆ ನಡೆಸುತ್ತಿರಲಿಲ್ಲ, ಎಂದು ಗುಪ್ತಚರ ವರದಿಗಳು ತಿಳಿಸಿರುವುದು ಬಯಲಾಗಿದೆ. ಆದರೂ ಪ್ರಾದೇಶಿಕ ಭದ್ರತೆಯ ದೃಷ್ಟಿಯಿಂದ ಈ ದಾಳಿ ಅನಿವಾರ್ಯವೆಂದು ಅಮೆರಿಕ ಆಡಳಿತ ನಿರ್ಧರಿಸಿತ್ತು. ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಮಾತನಾಡಿ, ಇದು ಆಡಳಿತ ಬದಲಾವಣೆಯ ಯುದ್ಧವಲ್ಲದಿದ್ದರೂ, ಆಡಳಿತ ವ್ಯವಸ್ಥೆ ಬದಲಾಗಿದೆ, ಎಂದು ತಿಳಿಸಿದ್ದಾರೆ.

ಜಾಗತಿಕ ಪ್ರಭಾವ

ಈ ಮಿಲಿಟರಿ ಕ್ರಮದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ತಲ್ಲಣ ಉಂಟಾಗಿದ್ದು, ಹಾರ್ಮುಜ್ ಜಲಸಂಧಿಯ ಬಳಿ ಉಂಟಾದ ಅಡಚಣೆಯಿಂದ ಕಚ್ಚಾ ತೈಲದ ಬೆಲೆ ಏರಿಕೆಯಾಗಿದೆ. ಯುಎಇ ಮತ್ತು ಕತಾರ್ ದೇಶಗಳು ಮುನ್ನೆಚ್ಚರಿಕಾ ಕ್ರಮವಾಗಿ ರಕ್ಷಣಾತ್ಮಕ ನಿಲುವು ತಳೆದಿವೆ. ಇದೇ ವೇಳೆ, ಇರಾನ್‌ನ ಹೊಸ ಸಂಭಾವ್ಯ ನಾಯಕತ್ವ ಅಮೆರಿಕದೊಂದಿಗೆ ಮಾತುಕತೆಗೆ ಮುಕ್ತವಾಗಿದೆ ಎಂದು ಶ್ವೇತಭವನದ ಹಿರಿಯ ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದರು.

ಚೀನಾ ಬೆಂಬಲ, ಇರಾನ್‌ಗೆ ಆನೆ ಬಲ!

ಬೀಜಿಂಗ್: ಅಮೆರಿಕ ಮತ್ತು ಇಸ್ರೇಲ್ ದಾಳಿಯಿಂದ ನಲುಗಿದ ಇರಾನ್‌ಗೆ ಚೀನಾ ತನ್ನ ಬೆಂಬಲ ವ್ಯಕ್ತಪಡಿಸಿದ್ದು, ಇರಾನ್‌ಗೆ ಆನೆಬಲ ದೊರೆತಂತಾಗಿದೆ. ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಘ್ಚಿ ಜತೆ ದೂರವಾಣಿ ಕರೆ ಮಾಡಿ ಮಾತನಾಡಿದ ಚೀನಾ ವಿದೇಶಾಂಗ ಸಚಿವ ವಾಂಗ್ ಯಿ, ತನ್ನ ಸಾರ್ವಭೌಮತ್ವ, ಭದ್ರತೆ, ಪ್ರಾದೇಶಿಕ ಸಮಗ್ರತೆ, ರಾಷ್ಟ್ರೀಯ ಘನತೆಯನ್ನು ಕಾಪಾಡಿಕೊಳ್ಳಲು ಹಾಗೂ ಅದರ ಕಾನೂನಾತ್ಮಕ ಹಕ್ಕುಗಳನ್ನು ಎತ್ತಿಹಿಡಿಯಲು ಇರಾನ್‌ಗೆ ಚೀನಾ ಬೆಂಬಲಿಸಲಿದೆ ಎಂದು ಹೇಳಿದ್ದಾರೆ. ಗಲ್ಫ್ ರಾಷ್ಟ್ರಗಳಲ್ಲಿನ ಅಮೆರಿಕದ ಸೇನಾ ನೆಲೆಗಳು ಮತ್ತು ಇಸ್ರೇಲ್ ಮೇಲಿನ ಪ್ರತಿದಾಳಿಯನ್ನು ಇರಾನ್ ಮುಂದುವರಿಸಿದೆ. ಇದೇ ಸಂದರ್ಭ ಬೈರೂತ್‌ನಲ್ಲಿ ಹಿಜ್ಬೊಲ್ಲಾ ಮೇಲೆ ಇಸ್ರೇಲ್ ದಾಳಿ ಚಾಲ್ತಿಯಲ್ಲಿದೆ.

165 ಇರಾನ್ ಶಾಲಾ ಬಾಲಕಿಯರು ಬಲಿ

ದಕ್ಷಿಣ ಇರಾನ್ ಮೇಲಿನ ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿಗೆ 165 ಶಾಲಾ ಬಾಲಕಿಯರು ಮತ್ತು ಸಿಬ್ಬಂದಿ ಮೃತಪಟ್ಟಿದ್ದಾರೆ. ದಕ್ಷಿಣ ಇರಾನ್ ನಗರವಾದ ಮಿನಾಬ್‌ನ ಬಾಲಕಿಯರ ಶಾಲೆಯೊಂದರ ಮೇಲೆ ಅಮೆರಿಕ ಮತ್ತು ಇಸ್ರೇಲ್ ವಾಯುದಾಳಿ ನಡೆಸಿತ್ತೆನ್ನಲಾಗಿದೆ. ಶಾಲಾ ಬಾಲಕಿಯರ ಮೃತದೇಹಗಳ ಅಂತ್ಯಸಂಸ್ಕಾರಕ್ಕೂ ಮುನ್ನ ನಡೆಸಿದ್ದ ಮೆರವಣಿಗೆಯಲ್ಲಿ ಭಾರೀ ಸಂಖ್ಯೆಯಲ್ಲಿ ಸಾರ್ವಜನಿಕರು ಸೇರಿದ್ದರು. ಶನಿವಾರ ಅಮೆರಿಕ ಮತ್ತು ಇಸ್ರೇಲ್ ಟೆಹ್ರಾನ್ ಮೇಲೆ ನಡೆಸಿದ್ದ ದಾಳಿ ಸಂದರ್ಭ ಈ ಘೋರ ದುರಂತ ನಡೆದಿತ್ತೆನ್ನಲಾಗುತ್ತಿದೆ. ಇರಾನ್ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಶಾಲಾ ಮಕ್ಕಳ ಅಂತ್ಯಸಂಸ್ಕಾರ ಮೆರವಣಿಗೆಯಲ್ಲಿ ಇರಾನಿಯನ್ನರು ಸೇರಿದ್ದರು. ಮಿನಾಬ್ ಬಾಲಕಿಯರ ಶಾಲೆ ಮೇಲಿನ ದಾಳಿಯನ್ನು ಯುನೆಸ್ಕೋ, ಪಾಕಿಸ್ತಾನಿ ಹೆಣ್ಣುಮಕ್ಕಳ ಶಿಕ್ಷಣ ಹಕ್ಕುಗಳ ಹೋರಾಟಗಾರ್ತಿ ಮತ್ತು ನೊಬೆಲ್ ಶಾಂತಿ ಪ್ರಶಸ್ತಿ ವಿಜೇತೆ ಮಲಾಲಾ ಯೂಸುಫ್ ಖಂಡಿಸಿದ್ದಾರೆ.

ದಾಳಿ ಬಗ್ಗೆ ಗೊತ್ತಿಲ್ಲವೆಂದ ಐಡಿಎಫ್: ಇಸ್ರೇಲಿ ಅಥವಾ ಅಮೆರಿಕ ಸೇನೆ ಈ ಪ್ರದೇಶದಲ್ಲಿ ದಾಳಿ ನಡೆಸಿದ ಬಗ್ಗೆ ಯಾವುದೇ ಮಾಹಿತಿಯಿಲ್ಲವೆಂದು ಇಸ್ರೇಲ್ ಪಡೆ(ಐಡಿಎಫ್) ಸ್ಪಷ್ಟಪಡಿಸಿದೆ.

ಈಗಾಗಲೇ ತುಂಬಾ ತಡವಾಗಿದೆ: ಟ್ರಂಪ್

ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ, ಮಾತುಕತೆ ನಡೆಸಲು ಟ್ರಂಪ್ ಮೊರೆ ಹೋಗುವ ಇರಾನ್‌ಗೆ ಮಾತುಕತೆಗಳನ್ನು ಪುನರಾರಂಭಿಸಲು ತುಂಬಾ ತಡವಾಗಿ ಬಂದಿದ್ದೀರಾ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಹೇಳಿದ್ದಾರೆ. ಈಗಾಗಲೇ ಇರಾನ್ ತನ್ನ ನಾಯಕತ್ವ ಕಳೆದುಕೊಂಡಿದ್ದು, ಅದರ ವಾಯು ಪಡೆ, ನೌಕಾಪಡೆಗಳು ನಾಶವಾಗಿವೆ ಎಂದು ತಿಳಿಸಿದ್ದಾರೆ. ಅವರ



ವಾಯುಪಡೆ, ನೌಕಾಪಡೆ ಮತ್ತು ನಾಯಕತ್ವ ಕಳೆದು ಹೋಗಿದೆ. ಅವರು ಮಾತನಾಡಲು ಬಯಸುತ್ತಾರೆ. ಆದರೆ ಈಗಾಗಲೇ ತುಂಬಾ ತಡವಾಗಿದೆ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ತಮ್ಮ ಟ್ರೂತ್ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿದ್ದಾರೆ.

ಇಸ್ಲಾಮಿಕ್ ಗಣರಾಜ್ಯದ ಸರ್ವೋಚ್ಚ ನಾಯಕ ದಿವಂಗತ ಆಯತೊಲ್ಲಾ ಸಯ್ಯದ್ ಅಲಿ ಖಮೇನಿ ಅವರ ಪ್ರತಿನಿಧಿ ಡಾ. ಅಬ್ದುಲ್ ಮಜೀದ್ ಹಕೀಮ್ ಇಲಾಹಿ ಅವರು ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಇರಾನ್ ಮಾತುಕತೆಗೆ ಸಿದ್ಧವಾಗಿದೆ. ಆದರೆ ಘನತೆಯಿಂದ ಕೂಡಿರಬೇಕು ಎಂದು ಹೇಳಿದ್ದರು. ಅವರ ಈ ಹೇಳಿಕೆ ಬೆನ್ನಲ್ಲೇ ಅಮೆರಿಕ ಅಧ್ಯಕ್ಷ ಟ್ರಂಪ್ ಪ್ರತಿಕ್ರಿಯೆ ಹೊರ ಬಿದ್ದಿದೆ.

ಸಿಬಿಎಸ್‌ಇ ಪರೀಕ್ಷೆ ಮುಂದೂಡಿಕೆ : ಹೆಚ್ಚುತ್ತಿರುವ ಪ್ರಾದೇಶಿಕ ಸಂಘರ್ಷದಿಂದಾಗಿ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್ (ಸಿಬಿಎಸ್‌ಇ) ಮಧ್ಯಪ್ರಾಚ್ಯದಾದ್ಯಂತ ತನ್ನ ಶಾಲೆಗಳಲ್ಲಿ 10 ಮತ್ತು 12 ನೇ ತರಗತಿಯ ಬೋರ್ಡ್ ಪರೀಕ್ಷೆಗಳನ್ನು ಮುಂದೂಡಿದೆ. ಮಂಗಳವಾರ ಹೊರಡಿಸಲಾದ ಪ್ರಕಟಣೆಯಲ್ಲಿ, ಮಧ್ಯಪ್ರಾಚ್ಯದಲ್ಲಿ ಮೂಲತಃ ಮಾರ್ಚ್ 5 ಮತ್ತು 6 ರಂದು ನಿಗದಿಯಾಗಿದ್ದ ಪರೀಕ್ಷೆಗಳನ್ನು ಮುಂದೂಡಲಾಗಿದೆ ಎಂದು ಮಂಡಳಿ ಘೋಷಿಸಿದೆ. ಮಂಡಳಿಯು ಇನ್ನೂ ಹೊಸ ಪರೀಕ್ಷಾ ದಿನಾಂಕಗಳನ್ನು ಘೋಷಿಸಿಲ್ಲ ಮತ್ತು ಅವುಗಳನ್ನು ನಂತರ ತಿಳಿಸಲಾಗುವುದು ಎಂದು ಹೇಳಿದೆ.



200 ವಿದ್ಯಾರ್ಥಿಗಳ ಸುರಕ್ಷಿತ ಸ್ಥಳಾಂತರ

ಯುದ್ಧಪೀಡಿತ ಇರಾನ್ ನಗರದಲ್ಲಿ ಸಿಲುಕಿದ್ದ 200ಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳನ್ನು ಕೋಮ್ ನಗರಕ್ಕೆ ಮಂಗಳವಾರ ಸುರಕ್ಷಿತ ಸ್ಥಳಾಂತರ ಮಾಡಲಾಗಿದೆ. ಸದ್ಯ ಕೋಮ್ ನಗರ ಸುರಕ್ಷಿತವಾಗಿದ್ದು, ಅಮೆರಿಕ–ಇಸ್ರೇಲ್ ಕ್ಷಿಪಣಿ ದಾಳಿಯಿಂದ ತತ್ತರಿಸಿದ ಟೆಹ್ರಾನ್ ನಗರದಿಂದ 140 ಕಿ.ಮೀ. ದೂರದಲ್ಲಿದೆ. ಬಸ್ ಮೂಲಕ ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತ ಸ್ಥಳಾಂತರ ಮಾಡಲಾಗಿದೆ. ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಸಹಯೋಗದಿಂದ ವಿದ್ಯಾರ್ಥಿಗಳನ್ನು ಸುರಕ್ಷಿತ ಸ್ಥಳಾಂತರ ಮಾಡಲಾಗಿದೆ ಎಂದು ಅಖಿಲ ಭಾರತ ವೈದ್ಯಕೀಯ ವಿದ್ಯಾರ್ಥಿಗಳ ಸಂಘ (ಎಐಎಂಎಸ್‌ಎ) ಹೇಳಿದೆ. ಇರಾನ್‌ನಲ್ಲಿರುವ ಎಲ್ಲಾ ಭಾರತೀಯರು ಅನಗತ್ಯವಾಗಿ ರಸ್ತೆಗಿಳಿಯದಂತೆ ಮತ್ತು ಸುರಕ್ಷಿತವಾಗಿ ತಮ್ಮ ಸ್ಥಳದಲ್ಲಿಯೇ ಇರಬೇಕೆಂದು ಭಾರತೀಯ ದೂತವಾಸ ಸಲಹೆ ನೀಡಿದೆ.

ಮಾತುಕತೆಯೊಂದೆ ಉದ್ವಿಗ್ನತೆ ಕಡಿಮೆಗೊಳಿಸಿಲಿರುವ ಹಾದಿ: ಎಂಇಎ

ಇರಾನ್ ಮತ್ತು ವಿಶಾಲವಾದ ಕೊಲ್ಲಿ ಪ್ರದೇಶದಲ್ಲಿ ಸಂಘರ್ಷ ಉಲ್ಬಣಗೊಳ್ಳುತ್ತಿದ್ದಂತೆ ಭಾರತವು ಸಂಯಮಕ್ಕಾಗಿ ತನ್ನ ಕರೆಯನ್ನು ಪುನರುಚ್ಚರಿಸಿದೆ. ಮಾತುಕತೆ ಮತ್ತು ರಾಜತಾಂತ್ರಿಕತೆಯು ಉದ್ವಿಗ್ನತೆಯನ್ನು ಕಡಿಮೆ ಮಾಡಲು ಮತ್ತು ಮತ್ತಷ್ಟು ನಾಗರಿಕ ಸಾವುನೋವುಗಳನ್ನು ತಡೆಗಟ್ಟಲು ಏಕೈಕ ಕಾರ್ಯಸಾಧ್ಯವಾದ ಮಾರ್ಗವಾಗಿದೆ ಎಂದು ಹೇಳಿದೆ. ಇರಾನ್ ಮತ್ತು ಕೊಲ್ಲಿ ಪ್ರದೇಶದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಭಾರತ ತೀವ್ರ ಕಳವಳಗೊಂಡಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಹೇಳಿದೆ. ಎಲ್ಲರೂ ಸಂಯಮ ವಹಿಸಬೇಕು, ಉದ್ವಿಗ್ನತೆಯನ್ನು ತಪ್ಪಿಸಬೇಕು ಮತ್ತು ನಾಗರಿಕರ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದೆ. ಉದ್ವಿಗ್ನತೆಯನ್ನು ಉಲ್ಬಣಗೊಳಿಸಲು ಮತ್ತು ಮೂಲ ಸಮಸ್ಯೆಗಳನ್ನು ಪರಿಹರಿಸಲು ಮಾತುಕತೆ ಮತ್ತು ರಾಜತಾಂತ್ರಿಕತೆಯನ್ನು ಅನುಸರಿಸಬೇಕು ಎಂದು ಸಚಿವಾಲಯ ಹೇಳಿದೆ. ಎಲ್ಲಾ ರಾಜ್ಯಗಳ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಬೇಕು ಎಂದಿದೆ. ಅಮೆರಕ, ಇಸ್ರೇಲ್ ಮತ್ತು ಇರಾನ್ ಒಳಗೊಂಡ ಇತ್ತೀಚಿನ ಮಿಲಿಟರಿ ದಾಳಿಯ ನಂತರ ಮಧ್ಯಪ್ರಾಚ್ಯದಲ್ಲಿ ತೀವ್ರ ಉಲ್ಬಣಗೊಳ್ಳುವ ಮಧ್ಯೆ ಈ ಹೇಳಿಕೆಗಳು ಬಂದಿವೆ. ಭಾರತದ ಬಿಕ್ಕಟ್ಟಿನ ನೇರ ಪರಿಣಾಮಗಳನ್ನು, ವಿಶೇಷವಾಗಿ ಈ ಪ್ರದೇಶದ ತನ್ನ ನಾಗರಿಕರ ಸುರಕ್ಷತೆಯನ್ನು ಎಂಇಎ ಒತ್ತಿಹೇಳಿತು.

ಆಮದು ವೆಚ್ಚ ಹೆಚ್ಚಳದ ಆತಂಕ

ತಕ್ಷಣದ ಕೊರತೆ ಎದುರಾಗುವ ಭೀತಿಯಿಲ್ಲವಾದರೂ, ಹೆಚ್ಚುತ್ತಿರುವ ಕಚ್ಚಾ ತೈಲ ಬೆಲೆಗಳು ಮತ್ತು ಹೆಚ್ಚಿ ಸಾಗಣೆ ವೆಚ್ಚ ,ವಿಮಾ ವೆಚ್ಚಗಳಿಂದಾಗಿ ದೇಶದ ತೈಲ ಆಮದು ಬಿಲ್ ಮತ್ತು ಒಟ್ಟಾರೆ ಹಣದುಬ್ಬರದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.ಈ ನಡುವೆ, ಕೇಂದ್ರ ತೈಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರು,ಪಸಕ್ತ ಸನ್ನಿವೇಶಗಳನ್ನು ಎದುರಿಸುವಲ್ಲಿ ಭಾರತದ ಸನ್ನದ್ಧತೆಯ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿರುವುದಾಗಿ ತೈಲ ಸಚಿವಾಲಯದ ಹೇಳಿಕೆ ತಿಳಿಸಿದೆ.ಭಾರತವು ಸಾಕಷ್ಟು ಪ್ರಮಾಣದಲ್ಲಿ ಕಚ್ಚಾ ತೈಲ, ಪೆಟ್ರೋಲ್, ಡೀಸೆಲ್, ಎಟಿಎಫ್ ಸೇರಿದಂತೆ ಪ್ರಮುಖ ಪೆಟ್ರೋಲಿಯಂ ಉತ್ಪನ್ನಗಳ ಸಂಗ್ರಹ ಹೊಂದಿದೆ.ಮಧ್ಯಪೂರ್ವ ಪ್ರದೇಶದಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದಾಗಿ ಅಲ್ಪಾವಧಿ ಅಡಚಣೆಗಳನ್ನು ನಿಭಾಯಿಸಲು ದೇಶ ಸಜ್ಜಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ವಿದೇಶಿ ವಿದ್ಯಾರ್ಥಿಗಳಿಗೆ ಗಡಿ ತೆರೆದ ಇರಾನ್

ಯುದ್ಧಪೀಡಿತ ಇರಾನ್‌ನಲ್ಲಿ ಶಿಕ್ಷಣ ಪಡೆಯುತ್ತಿರುವ ವಿದೇಶಿ ವಿದ್ಯಾರ್ಥಿಗಳು ಸುರಕ್ಷಿತವಾಗಿ ತಮ್ಮ ತಮ್ಮ ದೇಶಗಳಿಗೆ ವಾಪಸ್ ಹೋಗುವುದಕ್ಕಾಗಿ ತನ್ನ ಗಡಿಯನ್ನು ತೆರೆದು ಅವಕಾಶ ಮಾಡಿಕೊಟ್ಟಿದೆ. ಇದಲ್ಲದೆ ಸದ್ಯ ಇರಾನ್‌ನ ಶಿಕ್ಷಣ ಸಂಸ್ಥೆಗಳು ನಡೆಸುವ ವರ್ಷಾಂತ್ಯದ ಪರೀಕ್ಷೆಗಳಿಗೆ ಅವಕಾಶ ನೀಡಲಾಗುವುದು ಎಂದು ವಿದೇಶಿ ವಿದ್ಯಾರ್ಥಿಗಳಿಗೆ ಇರಾನ್ ಭರವಸೆ ನೀಡಿದೆ. ಗಡಿ ಪ್ರದೇಶದ ಮೂಲಕ ಇರಾನ್‌ನಿಂದ ಹೊರಬಂದ ವಿದೇಶಿ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಭಾರತೀಯ ವಿದ್ಯಾರ್ಥಿಗಳಾಗಿದ್ದರು ಎಂದು ವರದಿಯಾಗಿದೆ. ಟೆಹ್ರಾನ್, ಉರ್ಮಿಯಾ ಪ್ರದೇಶಗಳ ವಿದ್ಯಾಸಂಸ್ಥೆಗಳು, ವಿಶ್ವವಿದ್ಯಾಲಯಗಳನ್ನು ಮುಂದಿನ 15 ದಿನಗಳವರೆಗೆ ಸಂಪೂರ್ಣ ನಿಲ್ಲಿಸಲಾಗಿದೆ.

ರಾಷ್ಟ್ರಗೀತೆ ಹಾಡದೆ ಮೌನ ಪ್ರತಿಭಟನೆ



ಇಸ್ರೇಲ್ ಮತ್ತು ಅಮೆರಿಕದೊಂದಿಗೆ ಯುದ್ಧ ನಡೆಯುತ್ತಿರುವ ಮಧ್ಯೆಯೇ ಇರಾನ್ ಮಹಿಳೆಯರ ಫುಟ್‌ಬಾಲ್ ತಂಡವು ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಏಷ್ಯಾಕಪ್ ಪಂದ್ಯಾವಳಿಯಲ್ಲಿ ಭಾಗವಹಿಸಿತು. ಅಲ್ಲದೆ, ಯುದ್ಧದ ವಿರುದ್ಧ ಮೌನ ಪ್ರತಿಭಟನೆ ಮಾಡಿದ ಇರಾನಿನ ಆಟಗಾರ್ತಿಯರು ತಮ್ಮ ರಾಷ್ಟ್ರ ಗೀತೆ ಹಾಡಲು ನಿರಾಕರಿಸಿದ್ದಾರೆ. ಉದ್ಘಾಟನಾ ಪಂದ್ಯದಲ್ಲೇ ದಕ್ಷಿಣ ಕೊರಿಯಾದೊಂದಿಗೆ ಪಂದ್ಯವಾಡಿದ ಇರಾನ್ ತಂಡವು 0–3ರಿಂದ ಹೀನಾಯ ಸೋಲು ಕಂಡಿತು. ಏಷ್ಯಾಕಪ್ ಅಂತಹ ದೊಡ್ಡ ಕೂಟಗಳಲ್ಲಿ ಪಂದ್ಯಕ್ಕೂ ಮುನ್ನ ಎದುರಾಗುವ ಉಭಯ ದೇಶಗಳ ರಾಷ್ಟ್ರಗೀತೆ ಪ್ರಸಾರ ಮಾಡಲಾಗುತ್ತದೆ. ಆದರೆ ಇಸ್ರೇಲ್ ಮತ್ತು ಅಮೆರಿಕದ ವಿರುದ್ಧ ಮೌನ ಪ್ರತಿಭಟನೆ ಮಾಡಿರುವ ಇರಾನಿನ ಆಟಗಾರ್ತಿಯರು, ತಂಡದ ಸ್ಟಾಫ್ ರಾಷ್ಟ್ರಗೀತೆ ಹಾಡಲು ನಿರಾಕರಿಸಿದ್ದಾರೆ.

ಟ್ರಾಫಿಕ್ ಕ್ಯಾಮೆರಾಗಳನ್ನೇ ಹ್ಯಾಕ್ ಮಾಡಿದ್ದ ಮೊಸಾದ್

ಟೆಲ್ ಅವಿವ್: ಇರಾನ್‌ನ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆ ಹಿಂದೆ ಇಸ್ರೇಲ್‌ನ ಮೊಸಾದ್ ಸಂಸ್ಥೆ ಬೃಹತ್ ಸೈಬರ್ ಕಾರ್ಯಾಚರಣೆ ನಡೆಸಿರುವುದು ಬೆಳಕಿಗೆ ಬಂದಿದೆ. ಟೆಹ್ರಾನ್‌ನ ಸಂಚಾರಿ ಕ್ಯಾಮೆರಾ ಜಾಲವನ್ನು ಹ್ಯಾಕ್ ಮಾಡುವ ಮೂಲಕ ಇರಾನ್‌ನ ಉನ್ನತ ಅಧಿಕಾರಿಗಳ ದೈನಂದಿನ ಚಲನವಲನದ ದಾರಿಯ ಮೇಲೆ ಇಸ್ರೇಲ್ ಗುಪ್ತಚರ ಇಲಾಖೆ ದಶಕಗಳಿಂದಲೂ ನಿಗಾ ಇಟ್ಟಿತ್ತು ಎನ್ನಲಾಗಿದೆ.

ಸರ್ವೇಕ್ಷಣಾ ತಂತ್ರ ಮತ್ತು ದತ್ತಾಂಶ ಸಂಗ್ರಹ: ಟೆಹ್ರಾನ್‌ನ ಟ್ರಾಫಿಕ್ ಫೂಟೇಜ್‌ಗಳನ್ನು ರಹಸ್ಯವಾಗಿ ಟೆಲ್ ಅವಿವ್‌ನಲ್ಲಿರುವ ಸರ್ವರ್‌ಗಳಿಗೆ ಅಪ್‌ಲೋಡ್ ಮಾಡಲಾಗುತ್ತಿತ್ತು. ಇದರ ಮೂಲಕ ಪಾಸ್ಚರ್ ಸ್ಟ್ರೀಟ್ ಕಾಂಪೌಂಡ್‌ನಲ್ಲಿ ನಡೆಯುವ ಚಟುವಟಿಕೆಗಳ ಮೇಲೆ ನಿಗಾ ಇರಿಸಲಾಗಿತ್ತು. ನಿರ್ದಿಷ್ಟ ಕೋನದಲ್ಲಿ ಕ್ಯಾಮೆರಾ ಮೂಲಕ ಬಾಡಿಗಾರ್ಡ್‌ಗಳ ವಾಹನಗಳು ಮತ್ತು ಚಾಲಕರನ್ನು ಗುರುತಿಸಲಾಗುತ್ತಿತ್ತು. ಈ ಡಿಜಿಟಲ್ ಮಾಹಿತಿಯನ್ನು ಮಾನವ ಗುಪ್ತಚರ ಮತ್ತು 'ಯೂನಿಟ್ 8200' ದತ್ತಾಂಶಗಳೊಂದಿಗೆ ಸೇರಿಸಿ ಖಮೇನಿಯ ಸಂಪೂರ್ಣ ಚಲನವಲನದ ನಕ್ಷೆಯನ್ನೇ ಸಿದ್ಧಪಡಿಸಲಾಗಿತ್ತು.

ನಿರ್ಣಾಯಕ ದಾಳಿ: ಶನಿವಾರ ಬೆಳಗ್ಗೆ ಉನ್ನತ ಮಟ್ಟದ ಸಭೆಯೊಂದು ನಡೆಯಲಿದೆ ಎಂಬ ಮಾಹಿತಿ ಖಚಿತವಾದ ತಕ್ಷಣ ಇಸ್ರೇಲ್ ಈ ಕಾರ್ಯಾಚರಣೆಯನ್ನು ಕೈಗೆತ್ತಿಕೊಂಡಿದೆ. ಇರಾನ್ ಸಂಪೂರ್ಣ ಕಟ್ಟೆಚ್ಚರದಲ್ಲಿದ್ದರೂ ಸಹ, ಇಸ್ರೇಲಿ ವಿಮಾನಗಳು ಹಗಲಿನ ವೇಳೆಯಲ್ಲೇ ಎರಡು ಡಜನ್‌ಗಿಂತಲೂ ಹೆಚ್ಚು ನಿಖರ ಕ್ಷಿಪಣಿಗಳನ್ನು ಬಳಸಿ ದಾಳಿ ನಡೆಸಿವೆ. ದಾಳಿಯ ಸಮಯದಲ್ಲಿ ಯಾವುದೇ ಮುನ್ಸೂಚನೆ ಸಿಗದಂತೆ ಮಾಡಲು ಆ ಪ್ರದೇಶದ ಮೊಬೈಲ್ ಸೇವೆಗಳನ್ನು ಸಂಪೂರ್ಣವಾಗಿ ಜ್ಯಾಮ್ ಮಾಡಲಾಗಿತ್ತು.

ಕಾರ್ಯತಂತ್ರದ ಅಂತ್ಯ: ತಜ್ಞರ ಪ್ರಕಾರ, ಈ ಕಾರ್ಯಾಚರಣೆ ದಶಕಗಳ ಕಾಲದ ಯೋಜನೆಯ ಫಲಿತಾಂಶ. ಕೇವಲ 60 ಸೆಕೆಂಡುಗಳಲ್ಲಿ ನಡೆದ ಈ ದಾಳಿ, ಖಮೇನಿ ಮತ್ತು ಸುಮಾರು 40 ಹಿರಿಯ ಅಧಿಕಾರಿಗಳನ್ನು ಸಂಹರಿಸುವ ಮೂಲಕ ರೆವಲ್ಯೂಷನರಿ ಗಾರ್ಡ್‌ನ ನಾಯಕತ್ವದ ರಚನೆಯನ್ನೇ ಧ್ವಂಸಗೊಳಿಸಿದೆ.

ಕೇಂದ್ರದಿಂದ ಕಂಟ್ರೋಲ್ ರೂಮ್ ಸ್ಥಾಪನೆ

ಕೇಂದ್ರ ಪೆಟ್ರೋಲಿಯಂ ಸಚಿವಾಲಯವು, ದೇಶಾದ್ಯಂತ ತೈಲ ಪೂರೈಕೆ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಸಂಗ್ರಹ ಸ್ಥಿತಿಯ ಮೇಲೆ ಸತತ ನಿಗಾ ಇಡುವುದಕ್ಕಾಗಿ 24X7ಕಂಟ್ರೋಲ್ ರೂಮ್ ಒಂದನ್ನು ಸ್ಥಾಪಿಸಿದೆ.ಭಾರತೀಯ ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸಲು ಕೇಂದ್ರ ಸರಕಾರವು ಗರಿಷ್ಠ ಆದ್ಯತೆ ನೀಡಿದ್ದು, ಇದಕ್ಕಾಗಿ ವಿವಿಧ ಕ್ರಮಗಳನ್ನು ಕೈಗೊಂಡಿದೆ. ಅಗತ್ಯ ಬಿದ್ದರೆ ಇನ್ನಷ್ಟು ಉಪಕ್ರಮಗಳನ್ನು ಕೈಗೊಳ್ಳುವುದಕ್ಕೂ ಕೇಂದ್ರ ಸರಕಾರ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ ಎಂದು ಮೂಲಗಳು ತಿಳಿಸಿವೆ.ಭಾರತವು ವಿಶ್ವದ 3ನೇ ಅತಿದೊಡ್ಡ ತೈಲ ಆಮದುದಾರ, 4ನೇ ಅತಿದೊಡ್ಡ ತೈಲ ಸಂಸ್ಕರಣಾ ಮತ್ತು 5ನೇ ಅತಿದೊಡ್ಡ ರಫ್ತುದಾರ ದೇಶವಾಗಿರುವುದಿಲ್ಲಿ ಉಲ್ಲೇಖನೀಯ.

ಮುನ್ನೆಚ್ಚರಿಕೆ ವಹಿಸಿದ ಮೋದಿ ಸರಕಾರ

ಹೊಸದಿಲ್ಲಿ: ಕಳೆದ ಕೆಲವು ವರ್ಷಗಳಿಂದ ಪ್ರಧಾನಿ ನರೇಂದ್ರ ಮೋದಿ ಸರಕಾರವು ಭಾರತದ ತೈಲ ಪೂರೈಕೆ ಸರಪಣಿ ಮತ್ತು ಇಂಧನ ಲಭ್ಯತೆಯ ಮೂಲಗಳನ್ನು ವೈವಿಧ್ಯಮಯಗೊಳಿಸುವ ಮೂಲಕ ತನ್ನ ಜನತೆಯ ಹಿತರಕ್ಷಿಸುವಲ್ಲಿ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುತ್ತಾ ಬಂದಿರುವುದಿಲ್ಲಿ ಉಲ್ಲೇಖನೀಯ. ವ್ಯೂಹಾತ್ಮಕ ಸಂಗ್ರಹ ಹೆಚ್ಚಳ, ಒಂದೇ ಮೂಲವನ್ನು ನೆಚ್ಚಿಕೊಳ್ಳದೆ ವಿವಿಧ ದೇಶಗಳಿಂದ ತೈಲ ಖರೀದಿ, ಹೊರ್ಮುಜ್ ಜಲಸಂಧಿಯ ಮಾರ್ಗವನ್ನಷ್ಟೇ ಅವಲಂಬಿಸದೆ ಬದಲಿ ಇಂಧನ ಪೂರೈಕೆ ಮಾರ್ಗಗಳ ಖಾತ್ರಿ ಇತ್ಯಾದಿ ಕ್ರಮಗಳನ್ನು ಕೈಗೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು ಎಂದು ಮೂಲಗಳು ತಿಳಿಸಿವೆ.

ಈ ವರ್ಷ ರಷ್ಯಾದಿಂದ ಸರಕು ಸಾಗಣೆಯಲ್ಲಿ ಕಡಿತವಾಗಿರುವುದರಿಂದ ಹೊರ್ಮುಜ್ ಜಲಸಂಧಿಯ ಮೂಲಕ ತೈಲ ಸಾಗಣೆ ಶೇ.50ಕ್ಕಿಂತ ಹೆಚ್ಚಾಗಿದೆಯಾದರೂ, ಇದಕ್ಕೂ ಮುನ್ನ ಎರಡು ವರ್ಷಗಳಲ್ಲಿ ಸರಾಸರಿ ಶೇ.40ರಷ್ಟಿದ್ದು, ಉಳಿದ ಶೇ.60ರಷ್ಟು ಇತರ ಮಾರ್ಗಗಳಿಂದ ಬರುತ್ತಿತ್ತು. ದೇಶದ ಮಂಗಳೂರು, ಪಾದೂರು, ವಿಶಾಖಪಟ್ಟಣಂಗಳಲ್ಲಿನ ವ್ಯೂಹಾತ್ಮಕ ಸಂಗ್ರಹ ಸುಮಾರು 100ಮಿ.ಬ್ಯಾರೆಲ್‌ಗಳಾಗಿವೆ.

ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 80ಅಮೆರಿಕನ್ ಡಾಲರ್‌ಗೆ ಏರಿದ್ದು, ಇರಾನ್ ಬಿಕ್ಕಟ್ಟಿನ ಬಳಿಕ ತೈಲ ಆಮದು ಬೆಲೆಯಲ್ಲಿ ಶೇ.10ರಷ್ಟು ಏರಿಕೆಯಾಗಿದೆ.2025ರ ಮಾರ್ಚ್31ರವರೆಗಿನ ಹಣಕಾಸು ವರ್ಷದಲ್ಲಿ ಭಾರತ ಕಚ್ಚಾ ತೈಲ ಆಮದಿಗಾಗಿ 137ಬಿ.ಡಾ.ವೆಚ್ಚ ಮಾಡಿದೆ. 2025ರ ಏಪ್ರಿಲ್‌ನಿಂದ 2026ರ ಜನವರಿ ನಡುವಣ ಒಂದು ತಿಂಗಳಲ್ಲಿ 206.3ಮಿ.ಟನ್ ಕಚ್ಚಾತೈಲ ಆಮದು ಮಾಡಿದ್ದು, ಇದಕ್ಕಾಗಿ 100.4ಬಿ.ಡಾ.ವೆಚ್ಚ ಮಾಡಿರುವುದು ಕೇಂದ್ರ ಸರಕಾರ ಅಂತಾರಾಷ್ಟ್ರೀಯ ಬೆಳವಣಿಗೆಗಳ ಮೇಲೆ ಯಾವ ರೀತಿ ನಿಗಾ ಇಟ್ಟು ಮುನ್ನೆಚ್ಚರಿಕೆ ವಹಿಸಿದೆ ಎಂಬುದನ್ನು ಎತ್ತಿತೋರಿದೆ.

ವಿಶ್ವದ ಮೊದಲ ಜನನಾಯಕ ಪ್ರಧಾನಿ ನರೇಂದ್ರ ಮೋದಿ

ಮೂರು ಕೋಟಿ ಸಬ್‌ಸ್ಕ್ರೈಬರ್ಸ್

ಹೊಸದಿಲ್ಲಿ: ಯೂಟ್ಯೂಬ್ ಸಬ್‌ಸ್ಕ್ರೈಬರ್‌ಗಳ ಸಂಖ್ಯೆಯಲ್ಲಿ 30 ದಶಲಕ್ಷ (3 ಕೋಟಿ) ದಾಟಿದ ಮೊದಲ ವಿಶ್ವ ನಾಯಕ ಅಥವಾ ರಾಜಕಾರಣಿ ಎಂಬ ಮೈಲಿಗಲ್ಲನ್ನು ಪ್ರಧಾನಿ ನರೇಂದ್ರ ಮೋದಿ ಬರೆದಿದ್ದಾರೆ. ಇತ್ತೀಚೆಗೆ ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿ 100 ದಶಲಕ್ಷ (10 ಕೋಟಿ) ಹಿಂಬಾಲಕರನ್ನು ಹೊಂದಿರುವ ವಿಶ್ವದ ಮೊದಲ ರಾಜಕಾರಣಿ ಎಂಬ ದಾಖಲೆ ಬರೆದಿದ್ದರು.

ರ್ಯಾಂಕಿಂಗ್ ಪ್ರಕಾರ, ಯೂಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬರ್ಸ್ ಸಂಖ್ಯೆಯಲ್ಲಿ ಪ್ರಧಾನಿ ಮೋದಿ ಹಲವು ವಿಶ್ವ ನಾಯಕರನ್ನು ಹಿಂದಿಕ್ಕಿದ್ದಾರೆ. ಮೋದಿಯವರ ನಾಲ್ಕನೇ ಒಂದು ಭಾಗದಷ್ಟು ಸಬ್‌ಸ್ಕ್ರೈಬರ್‌ಗಳನ್ನು ಹೊಂದಿರುವ ಬ್ರೆಜಿಲ್ ಪ್ರಧಾನಿ ಜೈರ್ ಬೊಲ್ಸೊನಾರೊ ದ್ವಿತೀಯ ಸ್ಥಾನದಲ್ಲಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಹೋಲಿಸಿದರೆ ಏಳು ಪಟ್ಟು ಅಧಿಕ ಸಬ್‌ಸ್ಕ್ರೈಬರ್‌ಗಳನ್ನು ಮೋದಿ ಹೊಂದಿದ್ದಾರೆ.

ಮೋದಿಗಿದೆ ಡಿಜಿಟಲ್ ರೀಚ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಗಲಿ ಅಥವಾ ಇನ್ಯಾರೇ ವಿಶ್ವದ ದೊಡ್ಡ ನಾಯಕರಿಗೂ ಇಲ್ಲದಿರುವ ಡಿಜಿಟಲ್ ರೀಚ್ ಪ್ರಧಾನಿ ಮೋದಿಯವರಿಗಿದೆ. ಇದಲ್ಲದೆ ಭಾರತದ ಜನಸಂಖ್ಯೆ, ಭಾರತೀಯರು ಮೋದಿ ಮೇಲೆ ಇಟ್ಟಿರುವ ಅಪಾರ ನಂಬಿಕೆ, ಹೆಮ್ಮೆ ಮತ್ತು ಮೋದಿ ಜನಪ್ರಿಯತೆಯೂ ಯೂಟ್ಯೂಬ್ ಸಬ್‌ಸ್ಕ್ರೈಬರ್‌ಗಳ ಸಂಖ್ಯೆಯನ್ನು ಹೆಚ್ಚಿಸಿದೆ. ಮೋದಿ ಭಾಷಣ ಮಾಡುವ ಶೈಲಿ, ಅವರ ವಿರೋಧಿಗಳೂ ಕಿವಿಗೊಟ್ಟು ಆಲಿಸುವಂತೆ ಮಾಡುತ್ತದೆ. ಇದರಿಂದಾಗಿ ವಿದೇಶದಲ್ಲೂ ಮೋದಿ ಅವರಿಗೆ ಅಭಿಮಾನಿಗಳಿದ್ದು, ಸಬ್‌ಸ್ಕ್ರೈಬರ್‌ಗಳ ಸಂಖ್ಯೆ ಹೆಚ್ಚಾಗಿರುವ ಸಾಧ್ಯತೆಯಿದೆ.



ರಾಗಾಗಿಂತ 3 ಪಟ್ಟು ಹೆಚ್ಚು ಸಬ್‌ಸ್ಕ್ರೈಬರ್ಸ್

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗಿಂತ ಮೂರು ಪಟ್ಟು, ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ ಅರವಿಂದ ಕೇಜ್ರಿವಾಲ್ ಹಾಗೂ ಕಾಂಗ್ರೆಸ್ ಪಕ್ಷದ ಯೂಟ್ಯೂಬ್ ಖಾತೆಗಿಂತ ನಾಲ್ಕು ಪಟ್ಟು ಹೆಚ್ಚು ಸಬ್‌ಸ್ಕ್ರೈಬರ್‌ಗಳನ್ನು ಪ್ರಧಾನಿ ಮೋದಿ ಹೊಂದಿದ್ದಾರೆ.

ಪಹಲ್ಗಾಮ್ ಭಯೋತ್ಪಾದಕರ ಕ್ಯಾಮರಾ ಎನ್‌ಐಎ ವಶಕ್ಕೆ

ಶ್ರೀನಗರ: ಪಹಲ್ಗಾಮ್ ದಾಳಿಯಲ್ಲಿ ಪಾಕಿಸ್ತಾನಿ ಭಯೋತ್ಪಾದಕರು ಬಳಸಿದ್ದ ಗೋಪ್ರೋ ಹೀರೋ 12 ಬ್ಲ್ಯಾಕ್ ಕ್ಯಾಮರಾವನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಶಪಡಿಸಿದೆ. ಉಗ್ರರಿಗೆ ಕ್ಯಾಮರಾ ಪೂರೈಕೆ ಮಾಡಿದವರು ಯಾರೆಂದು ಪತ್ತೆಹಚ್ಚಲು ಎನ್‌ಐಎ ಚೀನಾ ಸರ್ಕಾರದ ಸಹಾಯ ಕೇಳಲು ನಿರ್ಧರಿಸಿದೆ.


ಪಹಲ್ಗಾಮ್ ದಾಳಿಗೆ ವರ್ಷದ ಮೊದಲೇ ಚೀನಾ ಮೂಲದ ಎಇ ಗ್ರೂಪ್‌ಗೆ ಗೋ ಪ್ರೋ ಹೀರೋ 12 ಬ್ಲ್ಯಾಕ್ ಕ್ಯಾಮರ ಪೂರೈಕೆ ಮಾಡಲಾಗಿದ್ದು, ಕೊನೆಯದಾಗಿ ಯಾರ ಕೈಸೇರಿತ್ತೆಂಬ ಬಗ್ಗೆ ಮಾಹಿತಿ ಲಭ್ಯವಿಲ್ಲ. 2024ರ ಜ.30ರಂದು ಚೀನಾದ ಡೊಂಗ್ವಾನ್ ಎಂಬಲ್ಲಿ ಉಪಕರಣ ಕೊನೆಯದಾಗಿ ಬಳಕೆಯಾಗಿತ್ತೆಂದು ಆದರೆ ಒಂದು ಕಂಪನಿಯಿಂದ ಇನ್ನೊಂದು ಕಂಪನಿಗೆ ನಡೆದಂತಹ ವಹಿವಾಟಿನ ಮಾಹಿತಿ ನಮ್ಮಲ್ಲಿ ಲಭ್ಯವಿಲ್ಲ ಎಂದು ಗೋಪ್ರೋ ಎನ್‌ಐಎಗೆ ತಿಳಿಸಿದೆ.

ಕ್ಯಾಮರಾ ಮಾತ್ರವಲ್ಲದೆ, ಪಹಲ್ಗಾಮ್ ದಾಳಿಗೆ ಸಂಬಂಧಿಸಿ ಹಲವು ವಸ್ತುಗಳು ಮತ್ತು ಇಲೆಕ್ಟ್ರಾನಿಕ್ ಉಪಕರಣಗಳನ್ನು ಎನ್‌ಐಎ ವಶಪಡಿಸಿಕೊಂಡಿದೆ. ಅವುಗಳನ್ನು ಪಹಲ್ಗಾಮ್ ಹೇಯ ಕೃತ್ಯದಲ್ಲಿ ಹೇಗೆ ಬಳಸಲಾಗಿದೆ ಎಂದು ಎನ್‌ಐಎ ಅಧಿಕಾರಿಗಳು ಮಾಹಿತಿ ಕಲೆಹಾಕುತ್ತಿದ್ದು, ಉಪಕರಣಗಳನ್ನು ಪರೀಕ್ಷೆಗೆ ಒಳಪಡಿಸುತ್ತಿದ್ದಾರೆ.

ಚೀನಾಗೆ ಮನವಿ ಪತ್ರ ಶೀಘ್ರ: ಕ್ಯಾಮರಾದ ತಾಂತ್ರಿಕ ದಾಖಲೆಗಳು, ಕೊನೆಯ ಬಳಕೆದಾರ ಮತ್ತು ಖರೀದಿದಾರನ ಮಾಹಿತಿಗಾಗಿ ಚೀನಾ ನ್ಯಾಯಾಲಯಕ್ಕೆ ಲೆಟರ್ ರೊಗೇಟರಿ (ಮನವಿ ಪತ್ರ) ಕಳುಹಿಸಲು ಎನ್‌ಐಎ, ಕೇಂದ್ರ ಗೃಹ ಸಚಿವಾಲಯದ ಅನುಮತಿ ಪಡೆಯಲಿದೆ.

ರಾಜ್ಯಸಭಾ ಚುನಾವಣೆಗೆ 9 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಹೊಸದಿಲ್ಲಿ: ಮುಂಬರುವ ರಾಜ್ಯಸಭಾ ಚುನಾವಣೆಗೆ ಬಿಹಾರದಿಂದ ಪಕ್ಷದ ಅಭ್ಯರ್ಥಿಯಾಗಿ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಅವರನ್ನು ಮಂಗಳವಾರ ನಾಮನಿರ್ದೇಶನ ಮಾಡಲಾಗಿದೆ. ಆಡಳಿತಾರೂಢ ಭಾರತೀಯ ಜನತಾ ಪಕ್ಷ (ಬಿಜೆಪಿ) ರಾಜ್ಯಸಭಾ ಚುನಾವಣೆಗೆ ಒಂಬತ್ತು ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಅದರ ಪಶ್ಚಿಮ ಬಂಗಾಳ ಘಟಕದ ಮಾಜಿ ಮುಖ್ಯಸ್ಥ ರಾಹುಲ್ ಸಿನ್ಹಾ ಮತ್ತು ಛತ್ತೀಸ್‌ಗಢ ಘಟಕದ ಉಪಾಧ್ಯಕ್ಷೆ ಲಕ್ಷ್ಮೀ ವರ್ಮಾ ಅವರನ್ನು ಆಯಾ ರಾಜ್ಯಗಳಿಂದ ಕಣಕ್ಕಿಳಿಸಿದೆ. ಅಸ್ಸಾಂನ ಲೋಕೋಪಯೋಗಿ ಸಚಿವ ಜೋಗೆನ್ ಮೋಹನ್ ಮತ್ತು ಶಾಸಕ ತೇರಾಶ್ ಗೋವಾಲಾ ಅವರು ರಾಜ್ಯದಿಂದ ಸಂಸತ್ತಿನ ಮೇಲ್ಮನೆಯ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳಾಗಲಿದ್ದಾರೆ. ಬಿಜೆಪಿ ತನ್ನ ಒಡಿಶಾ ಘಟಕದ ಅಧ್ಯಕ್ಷ ಮನಮೋಹನ್ ಸಮಲ್ ಮತ್ತು ಹಾಲಿ ರಾಜ್ಯಸಭಾ ಸಂಸದ ಸುಜೀತ್ ಕುಮಾರ್ ಅವರನ್ನು ಮುಂಬರುವ ಚುನಾವಣೆಗೆ ಅಭ್ಯರ್ಥಿಗಳಾಗಿ ನಾಮನಿರ್ದೇಶನ ಮಾಡಿದೆ.



ಬಿಹಾರದಿಂದ ಬಿಜೆಪಿ ನಾಯಕ ಶಿವೇಶ್ ಕುಮಾರ್ ಕಣಕ್ಕೆ ಇಳಿಯಲಿದ್ದು, ಪಕ್ಷದ ಮಾಜಿ ಲೋಕಸಭಾ ಸದಸ್ಯ ಸಂಜಯ್ ಭಾಟಿಯಾ ಹರ್ಯಾಣದಿಂದ ಪಕ್ಷದ ಅಭ್ಯರ್ಥಿಯಾಗಲಿದ್ದಾರೆ. ಕುಮಾರ್ ಅವರು ಬಿಹಾರದ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಅಭ್ಯರ್ಥಿಯ ಹೆಸರುಗಳನ್ನು ಪಕ್ಷದ ಕೇಂದ್ರ ಚುನಾವಣಾ ಸಮಿತಿಯು ಅನುಮೋದಿಸಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ತಿಳಿಸಿದ್ದಾರೆ.

ಬಿಹಾರದಿಂದ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ಅಭ್ಯರ್ಥಿ

ಕಿರುಸುದ್ದಿ


ಸಿ.ಎ. ಅಂತಿಮ ಪರೀಕ್ಷೆ ಫಲಿತಾಂಶ : ಆಳ್ವಾಸ್ ವಿದ್ಯಾರ್ಥಿಗಳ ಉತ್ತಮ ಸಾಧನೆ

• **ಮೂಡುಬಿದಿರೆ:** ಜನವರಿಯಲ್ಲಿ ನಡೆದ ಸಿ.ಎ. ಅಂತಿಮ ಪರೀಕ್ಷೆಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಹಿರಿಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ರೋಹಿತ್ ಪಾರಡ್ಕರ್, ಆಮೋಘ್, ಗಣೇಶ್ ಪೈ, ಶುಭಂ ಕೋಟ್ಯಾನ್, ಸುಬ್ರಮಣ್ಯ ಎಸ್ ಬಿ. ಮತ್ತು ಭರತ್ ಹೆಗ್ಡೆ ಅವರು ಉತ್ತಮ ಅಂಕದೊಂದಿಗೆ ಉತ್ತೀರ್ಣರಾಗಿದ್ದಾರೆ. ಇವರು ಸಿ.ಎ. ಅಂತಿಮ ಪರೀಕ್ಷೆಯ ಗ್ರೂಪ್-01 ಮತ್ತು ಗ್ರೂಪ್-02 ಎರಡೂ ವಿಭಾಗಗಳಲ್ಲಿ ಉತ್ತೀರ್ಣರಾಗಿ ಈ ಸಾಧನೆಯನ್ನು ಮಾಡಿದ್ದಾರೆ. ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ, ಪ್ರಾಂಶುಪಾಲ ಡಾ.ಕುರಿಯನ್ ಹಾಗೂ ಸಿ.ಎಸ್. ಸಂಯೋಜಕರು ಅಭಿನಂದಿಸಿದ್ದಾರೆ.



ಕೆನರಾ ಸಂಧ್ಯಾ ಕಾಲೇಜಿನ ಆಚಲ್‌ಗೆ ಬಿ. ಕಾಂ.ನಲ್ಲಿ ಮೂರನೇ ರ್‍ಯಾಂಕ್

• **ಮಂಗಳೂರು:** ಮಂಗಳೂರು ವಿಶ್ವವಿದ್ಯಾಲಯ ಜೂನ್-ಜುಲೈ 2025ರಲ್ಲಿ ನಡೆಸಿದ ಅಂತಿಮ ಬಿ.ಕಾಂ. ಪದವಿ ಪರೀಕ್ಷೆಯಲ್ಲಿ ಮಂಗಳೂರಿನ ಕೆನರಾ ಸಂಧ್ಯಾ ಕಾಲೇಜಿನ ಆಚಲ್ ಪ್ರವೀಣ್ ಉಳ್ಳಾಲ್ ಅವರು ಮೂರನೇ ರ್‍ಯಾಂಕ್ ಪಡೆದಿರುತ್ತಾರೆ. 2022ರಲ್ಲಿ ಕರ್ನಾಟಕ ಪದವಿಪೂರ್ವ ಮಂಡಳಿ ನಡೆಸಿದ ದ್ವಿತೀಯ ಪಿ. ಯು. ಸಿ. ಪರೀಕ್ಷೆಯಲ್ಲಿಯೂ ಎರಡನೇ ರ್‍ಯಾಂಕ್ ಪಡೆದ ಈ ಪ್ರತಿಭಾವಂತ ವಿದ್ಯಾರ್ಥಿಯ ಸಾಧನೆಯನ್ನು ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕರು ಮತ್ತು ಸಿಬ್ಬಂದಿ ವರ್ಗ ಶ್ಲಾಘಿಸಿದ್ದಾರೆ.



ಪವರ್ ಲಿಫ್ಟಿಂಗ್: ವಿನೋದ್ ಕುಮಾರ್‌ಗೆ ಚಿನ್ನ

• **ಮಂಗಳೂರು:** ಇತ್ತೀಚೆಗೆ ಕೂಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮಂಗಳೂರಿನ ಎಲ್‌ಐಸಿ ಸಂಸ್ಥೆಯ ನಿವೃತ್ತ ಅಧಿಕಾರಿ ವಿನೋದ್ ಕುಮಾರ್ ಎಂ. ಅವರು ಎರಡು ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದಾರೆ. ಇವರು 'ಕ್ಲಾಸಿಕ್' ಮತ್ತು 'ಎಕ್ವಿಪ್ಡ್' ಎಂಬ ಎರಡೂ ವಿಭಾಗಗಳಲ್ಲಿ ಪ್ರಥಮ ಸ್ಥಾನ ಗಳಿಸಿ ಎರಡು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ಇವರು ಮಂಗಳೂರಿನ ಬಾಲಾಂಜನೇಯ ಜಿಮ್ನಾಷಿಯಂನಲ್ಲಿ ಏಕಲವ್ಯ ಪ್ರಶಸ್ತಿ ಪುರಸ್ಕೃತ ಸತೀಶ್ ಕುಮಾರ್ ಕುದ್ರೋಳಿ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.



ಅಂತಿಮ ಪದವಿ ಪರೀಕ್ಷೆ: ಕೆನರಾ ಕಾಲೇಜಿಗೆ 7 ರ್‍ಯಾಂಕ್



ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯ ಜೂನ್ -ಜುಲೈ 2025 ರಲ್ಲಿ ನಡೆಸಿದ ಅಂತಿಮ ಪದವಿ ಪರೀಕ್ಷೆಯಲ್ಲಿ ಮಂಗಳೂರಿನ ಕೆನರಾ ಕಾಲೇಜು ಒಟ್ಟು ಏಳು ರ್‍ಯಾಂಕ್‌ಗಳನ್ನು ಪಡೆದುಕೊಂಡಿದೆ. ಬಿ.ಸಿ.ಎ. ಪದವಿಯಲ್ಲಿ ಆರ್ಯಮನ್ ಪ್ರಭು ಎರಡನೆಯ ರ್‍ಯಾಂಕ್, ಮೇಘನಾ ಐದನೇ ರ್‍ಯಾಂಕ್, ಅಶ್ವಿನಿ ಏಳನೇ ರ್‍ಯಾಂಕ್, ವೈಷ್ಣವಿ ಯೋಗೇಶ್ ಶಾಸ್ತ್ರಿ ಹತ್ತನೇ ರ್‍ಯಾಂಕ್, ಬಿ.ಎಸ್ಸಿ ಪದವಿಯಲ್ಲಿ ಪ್ರತೀಕ್ಷಾ ಕೆ.ಕೋಟ್ಯಾನ್ ಆರನೇ ರ್‍ಯಾಂಕ್, ಎಸ್ ಅನುಷಾ ಶೆಣೈ 8ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಯನ್ನು ಆಡಳಿತ ಮಂಡಳಿ, ಪ್ರಾಂಶುಪಾಲರು, ಪ್ರಾಧ್ಯಾಪಕರು ಮತ್ತು ಸಿಬ್ಬಂದಿ ಶ್ಲಾಘಿಸಿದ್ದಾರೆ.

ಇಂದು ವಿಶ್ವ ಶ್ರವಣ ದಿನಾಚರಣೆ

• **ಮಂಗಳೂರು:** ಯುವ ರೆಡ್ ಕ್ರಾಸ್ ಮಂಗಳೂರು ವಿ.ವಿ., ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜಿನ ಸ್ಪೀಚ್ ಮತ್ತು ಹಿಯರಿಂಗ್ ವಿಭಾಗ, ಸೈಂಟ್ ಆಗ್ನೆಸ್ (ಸ್ವಾಯತ್ತ) ಕಾಲೇಜು ಸಹಯೋಗದಲ್ಲಿ ಮಾ.4 ರಂದು ಬೆಳಗ್ಗೆ 10.30ಕ್ಕೆ ಸೈಂಟ್ ಆಗ್ನೆಸ್ ಕಾಲೇಜು ಸಭಾಂಗಣದಲ್ಲಿ ವಿಶ್ವ ಶ್ರವಣ ದಿನಾಚರಣೆ, ಶ್ರವಣ ತಪಾಸಣಾ ಶಿಬಿರ ಹಾಗೂ ಜಾಗೃತಿ ಕಾರ್ಯಕ್ರಮ ನಡೆಯಲಿದೆ. ಕರ್ನಾಟಕ ಆರ್ಥೋಪೆಡಿಕ್ ಅಸೋಸಿಯೇಷನ್ ಅಧ್ಯಕ್ಷ ಡಾ.ಬಿ.ಸಚ್ಚಿದಾನಂದ ರೈ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸೈಂಟ್ ಆಗ್ನೆಸ್ ಕಾಲೇಜಿನ ಉಪ ಪ್ರಾಂಶುಪಾಲೆ ಸಿ.ರೂಪಾ ರಾಡ್ರಿಗಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಫಾದರ್ ಮುಲ್ಲರ್ ಕಾಲೇಜ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್‌ನ ಪ್ರಾಂಶುಪಾಲೆ ಪ್ರೊ.ಸಿಂತಿಯಾ ಸಾಂತಮಯರ್ ಮತ್ತು ಆಡಿಯಾಲಜಿ ವಿಭಾಗದ ಮುಖ್ಯಸ್ಥೆ ಪ್ರೊ.ಪ್ರಶಾಂತಿ ಪೂವಯ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಹಾಗೂ ಯೂತ್ ರೆಡ್ ಕ್ರಾಸ್ ಮಂಗಳೂರು ವಿ.ವಿ.ಯ ನೋಡಲ್ ಅಧಿಕಾರಿ ಡಾ.ಗಾಯತ್ರಿ ಎನ್. ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ತಂದೆ, 5 ವರ್ಷದ ಪುತ್ರ ನಾಪತ್ತೆ

• **ಕಾಸರಗೋಡು:** ವಡಕ್ಕೇ ತೃಕರೀಪುರದಿಂದ ತಂದೆ ಹಾಗೂ 5 ವರ್ಷದ ಪುತ್ರ ನಾಪತ್ತೆಯಾಗಿರುವುದಾಗಿ ದೂರಲಾಗಿದೆ. ಆಯಿಟ್ಟಿಯ ಸುಕೇಶ್ (38), ಪುತ್ರ ಶ್ರೇಯನ್ ಸುಕೇಶ್ (5) ಎಂಬವರು ನಾಪತ್ತೆಯಾಗಿದ್ದಾರೆ. ಭಾನುವಾರ ಬೆಳಗ್ಗೆ ಪುತ್ರನನ್ನು ಕರೆದುಕೊಂಡು ಬೈಕ್‌ನಲ್ಲಿ ಹೊರಗೆ ತೆರಳಿದ ಪತಿ ಮರಳಿ ಬಂದಿಲ್ಲವೆಂದು ಪತ್ನಿ ತುಷಾರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ಎಸ್‌ಐ ಎಂ.ಅಜ್ಮಲ್ ನೇತೃತ್ವದಲ್ಲಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.



ಇತಿಹಾಸ ಪ್ರಸಿದ್ಧ ಸುಬ್ರಹ್ಮಣ್ಯ ಸಮೀಪದ ಕುಲ್ಕುಂದ ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆಯುವ ಒತ್ತೆಕೋಲದ ಅಂಗವಾಗಿ ಮಂಗಳವಾರ ರಾತ್ರಿ ಮೇಲೇರಿಗೆ ಅಗ್ನಿಸ್ಪರ್ಶ ಮಾಡಲಾಯಿತು. ಭಾರೀ ಸಂಖ್ಯೆಯಲ್ಲಿ ಭಕ್ತಾದಿಗಳಿದ್ದರು.

ಸಂಗ್ರಹಿಸಿಟ್ಟಿದ್ದ ಪೆಟ್ರೋಲ್‌ಗೆ ಆಕಸ್ಮಿಕ ಬೆಂಕಿ: ಕೊಡಗಿನ ನಿವೃತ್ತ ಯೋಧ ಸಾವು

• **ಸೋಮವಾರಪೇಟೆ:** ತೋಳೂರು ಶೆಟ್ಟಳ್ಳಿಯಲ್ಲಿ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿ ಮಾಜಿ ಸಿಆರ್‌ಪಿಎಫ್ ಯೋಧರೊಬ್ಬರು ದುರ್ಘಟನೆಯಲ್ಲಿ ಸಾವನ್ನಪ್ಪಿರುವ ಘಟನೆ ಮಂಗಳವಾರ ನಡೆದಿದೆ. ಎಚ್.ಎ. ವೆಂಕಟೇಶ್ (64) ಮೃತ ದುರ್ದೈವಿ ಎಂದು ಗುರುತಿಸಲಾಗಿದೆ.



ಮನೆಯಲ್ಲೇ ತೋಟದ ಬಳಕೆಯ ಯಂತ್ರಗಳಿಗೆಂದು ಸಂಗ್ರಹಿಸಿಟ್ಟಿದ್ದ ಪೆಟ್ರೋಲ್‌ಗೆ ಆಕಸ್ಮಿಕವಾಗಿ ಬೆಂಕಿ ತಗುಲಿದ್ದು, ಕ್ಷಣಾರ್ಧದಲ್ಲೇ ಅಗ್ನಿ ಭಾರೀ ಪ್ರಮಾಣದಲ್ಲಿ ವ್ಯಾಪಿಸಿದೆ ಎನ್ನಲಾಗಿದೆ. ಗ್ಯಾಂಗ್ರಿನ್ ಸಮಸ್ಯೆಯಿಂದಾಗಿ ವೆಂಕಟೇಶ್ ಅವರು ಒಂದು ಕಾಲನ್ನು ಕಳೆದುಕೊಂಡಿದ್ದರಿಂದ ತಕ್ಷಣ ಸ್ಥಳದಿಂದ ಹೊರಬರಲು ಸಾಧ್ಯವಾಗದೇ ಬೆಂಕಿಗೆ ಸಿಲುಕಿ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಮನೆಯ ಮೇಲ್ಭಾಗದಿಂದ ದಟ್ಟ ಹೊಗೆಯಾಡುತ್ತಿರುವುದನ್ನು ಗಮನಿಸಿದ ಸ್ಥಳೀಯರು ತಕ್ಷಣ ಧಾವಿಸಿ ಬೆಂಕಿ ನಂದಿಸಲು ಪ್ರಯತ್ನಿಸಿದ್ದಾರೆ. ಆದರೆ ಅಗ್ನಿಯ ತೀವ್ರತೆ ಹೆಚ್ಚಾಗಿದ್ದರಿಂದ ಮನೆಯ ಒಂದು ಭಾಗ ಸಂಪೂರ್ಣವಾಗಿ ಸುಟ್ಟು ಕರಕಲಾಗಿದ್ದು, ಆಗಲೇ ವೆಂಕಟೇಶ್ ಅವರು ಪ್ರಾಣ ಕಳೆದುಕೊಂಡಿರುವುದು ತಿಳಿದು ಬಂದಿದೆ.

ಘಟನಾ ಸ್ಥಳಕ್ಕೆ ಸೋಮವಾರಪೇಟೆ ವೃತ್ತ ನಿರೀಕ್ಷಕ ಮುದ್ದು ಮಾದೇವ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಗ್ನಿ ಅವಘಡಕ್ಕೆ ನಿಖರ ಕಾರಣ ತಿಳಿದುಬರಬೇಕಿದ್ದು, ತನಿಖೆ ಮುಂದುವರೆದಿದೆ. ಮೃತರು ಪತ್ನಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಕುಟುಂಬದವರ ಆಕ್ರಂದನ ಮುಗಿಲುಮುಟ್ಟಿದ್ದು, ಗ್ರಾಮದಲ್ಲಿ ಶೋಕಮಯ ವಾತಾವರಣ ನಿರ್ಮಾಣವಾಗಿದೆ.

ಅಂದು ಮಹಿಳಾ ಕಾಲೇಜಿಗೆ ಕಾಡಿತ್ತು ಧೂಳು | ಇಂದು ಮುಖ್ಯ ರಸ್ತೆಗಳಿಗೆ ಆವರಿಸಿದೆ ಗೋಳು

ಧೂಳೀಪಟವಾಗ್ತಿದೆ ಇಲ್ಲಿ ಆರೋಗ್ಯ!

• **ಪುತ್ತೂರು:** ಕಳೆದ ಕೆಲವು ದಿನಗಳಿಂದ ಪುತ್ತೂರಿಗೆ ಧೂಳಿನ ಕಂಟಕ ಎದುರಾಗಿದೆ. ಕಳೆದ ತಿಂಗಳು ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಧೂಳಿನ ಸಮಸ್ಯೆ ಎದುರಾಗಿ ವಿದ್ಯಾರ್ಥಿನಿಯರು ಬೀದಿಗೆ ಇಳಿದಿದ್ದರು. ಇದೀಗ ಮಣ್ಣು ಸಾಗಾಟದ ಟಿಪ್ಪರ್/ಲಾರಿಗಳಿಂದ ಧೂಳಿನ ಸಮಸ್ಯೆ ಎದುರಾಗಿ ಸಾರ್ವಜನಿಕರು ಹಿಡಿ ಶಾಪ ಹಾಕುವಂತಾಗಿದೆ. ಒಂದೆಡೆ ಖಾಸಗಿಯವರ ಕಟ್ಟಡ ನಿರ್ಮಾಣಕ್ಕೆ ಮಣ್ಣಿನ ತೆರವು, ಇನ್ನೊಂದೆಡೆ ನಗರದ ಪೊಲೀಸ್ ಲೇನ್‌ನಲ್ಲಿದ್ದ ಸುಮಾರು 70 ವರ್ಷಕ್ಕೂ ಹಳೆಯದಾದ ವಸತಿ ಗೃಹಗಳ ತೆರವು ಕಾರ್ಯಾಚರಣೆ ನಡೆಯುತ್ತಿದೆ. ಹಳೆಯ ಕಟ್ಟಡಗಳನ್ನು ಕೆಡವಿ ಹಾಕಲಾಗುತ್ತಿದ್ದು, ಈ ರೀತಿ ಸಂಗ್ರಹವಾದ ಮಣ್ಣನ್ನು ತೆರೆದ ಟಿಪ್ಪರ್/ಲಾರಿಗಳಲ್ಲಿ ರಾಜಾರೋಷವಾಗಿ ಸಾಗಿಸುತ್ತಿರುವುದರಿಂದ ನಗರದ ಮುಖ್ಯ ರಸ್ತೆ ಧೂಳಿನಿಂದ ಆವೃತವಾಗಿ ಸಾರ್ವಜನಿಕರು ಸಂಕಟಪಡುವಂತಾಗಿದೆ.

ಕಣ್ಣು-ಮೂಗು ಮುಚ್ಚಿಸುತ್ತಿದೆ

ಪೊಲೀಸ್ ಲೇನ್‌ನಿಂದ ಲೋಡ್ ಮಾಡಿಕೊಂಡು ಬರುವ ಟಿಪ್ಪರ್/ಲಾರಿಗಳು ಸಂಚಾರಿ ಪೊಲೀಸ್ ಠಾಣೆಯ ಮುಂಭಾಗದಿಂದಲೇ ಮುಖ್ಯ ರಸ್ತೆಗೆ ತೆರಳಿ ಅಲ್ಲಿಂದ ಬೊಳುವಾರಿನತ್ತ ಸಾಗುತ್ತವೆ. ಆದರೆ, ಈ ರೀತಿ ಮಣ್ಣನ್ನು ಟಿಪ್ಪರ್/ಲಾರಿಗೆ ಲೋಡ್ ಮಾಡಿ ಬಳಿಕ ಅದಕ್ಕೆ ಟರ್ಪಾಲ್ ಹೊದಿಕೆ ಹಾಕಿ ಸಾಗಾಟ ಮಾಡಬೇಕೆಂಬ ನಿಯಮವಿದೆ. ಆದರೆ, ಇಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಮಿತಿ ಮೀರಿ ಮಣ್ಣನ್ನು ಲೋಡ್ ಮಾಡಿಕೊಂಡು ಸಾಗುತ್ತವೆ. ಟಿಪ್ಪರ್/ಲಾರಿ ಈ ರೀತಿ ಸಂಚರಿಸುವಾಗ ರಸ್ತೆಯುದ್ದಕ್ಕೂ ಮಣ್ಣನ್ನು ಉದುರಿಸುತ್ತಾ ಸಾಗುತ್ತವೆ. ಈ ಸಂದರ್ಭ ರಸ್ತೆಯ ಇಕ್ಕೆಲಗಳಲ್ಲಿರುವ ಅಂಗಡಿ ಮುಂಗಟ್ಟುಗಳಿಗೆ ಧೂಳು ಹರಡಿ ಕಣ್ಣು-ಮೂಗು ಮುಚ್ಚಿಸುವಂತೆ ಮಾಡುತ್ತವೆ.



ವ್ಯಾಪಾರಿಗಳು ಸಂಕಷ್ಟದಲ್ಲಿ

ನಗರದ ರಸ್ತೆಯುದ್ದಕ್ಕೂ ಚೆಲ್ಲಲಾಗಿರುವ ಮಣ್ಣು ವಾಹನಗಳು ಸಂಚರಿಸುವಾಗ ಧೂಳು ಹಾರಿ ಪಾದಚಾರಿಗಳನ್ನು ಉಸಿರುಗಟ್ಟಿಸುವಂತೆ ಮಾಡುತ್ತದೆ. ರಸ್ತೆಯ ಇಕ್ಕೆಲಗಳಲ್ಲಿರುವ ವ್ಯಾಪಾರ, ವಾಣಿಜ್ಯ ಮಳಿಗೆಗಳ ಒಳಗಡೆ ಧೂಳು ಸೇರಿಕೊಳ್ಳುತ್ತಿವೆ. ಇದನ್ನು ತುಚಿಗೊಳಿಸುವುದೇ ಒಂದು ಸವಾಲಿನ ಕೆಲಸವಾಗಿಬಿಟ್ಟಿದೆ ಎನ್ನುತ್ತಾರೆ ಸ್ಥಳೀಯ ವ್ಯಾಪಾರಸ್ಥರು. ಆದರೆ, ಪೊಲೀಸ್ ಇಲಾಖೆಯಾಗಲಿ, ನಗರಸಭೆಯಾಗಲಿ ಈ ಕುರಿತು ತುಟಿ ಪಿಟಿಕ್ಕೆನ್ನುತ್ತಿಲ್ಲ. ದಿನ ನಿತ್ಯ ಧೂಳಿನ ಉಸಿರಾಟದಿಂದ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಮಾತ್ರವಲ್ಲದೆ, ಕಣ್ಣಿಗೂ ಹಾನಿಯುಂಟು ಮಾಡುತ್ತದೆ ಎಂದು ಎಚ್ಚರಿಸುತ್ತಾರೆ ತಜ್ಞ ವೈದ್ಯರು.



ಠಾಣೆಗೆ ಶೇಡ್ ನೆಟ್

ಮಣ್ಣನ್ನು ಹೊತ್ತ ಟಿಪ್ಪರ್/ಲಾರಿಗಳು ಪೊಲೀಸ್ ಲೇನ್‌ನಿಂದ ಹೊರಟು ಸಂಚಾರ ಪೊಲೀಸ್ ಠಾಣೆಯ ಮುಂಭಾಗದಿಂದಾಗಿ ಮಹಿಳಾ ಪೊಲೀಸ್ ಠಾಣೆಯ ಪಕ್ಕದಿಂದ ಹಾದು ಹೋಗುತ್ತವೆ. ಈ ಹಿನ್ನಲೆಯಲ್ಲಿ ಧೂಳಿನ ಸಮಸ್ಯೆಯಿಂದ ಪಾರಾಗಲು ಮಹಿಳಾ ಪೊಲೀಸ್ ಠಾಣೆಯ ಸಿಬಂದಿಗಳು ಠಾಣೆಯ ಕಟ್ಟಡದ ರಸ್ತೆಯ ಭಾಗಕ್ಕೆ ಶೇಡ್ ನೆಟ್ ಅಳವಡಿಸಿಕೊಂಡಿದ್ದಾರೆ. ಆದರೆ, ನಿಯಮ ಪ್ರಕಾರ ಸಮರ್ಪಕ ರೀತಿಯಲ್ಲಿ ಮಣ್ಣು ಸಾಗಾಟ ಮಾಡುವಂತೆ ಸೂಚಿಸುವ ಧೈರ್ಯ ಪೊಲೀಸರಿಗೂ ಇಲ್ಲದಂತಾಗಿದೆಯೇ ಎಂಬುದು ಸಾರ್ವಜನಿಕರ ಪ್ರಶ್ನೆ.

ಅಸಹಾಯಕರಾದರೇ ಅಧಿಕಾರಿಗಳು?

ಪುತ್ತೂರು ಮಹಿಳಾ ಸರಕಾರಿ ಪ್ರಥಮ ದರ್ಜೆ ಕಾಲೇಜ್ ಕಾರ್ಯ ನಿರ್ವಹಿಸುತ್ತಿರುವ ಆರೋಗ್ಯ ಇಲಾಖೆಯ ಕಟ್ಟಡದಲ್ಲಿ ನಡೆಯುತ್ತಿದ್ದ ಕಾಮಗಾರಿಯಿಂದ ಬರುತ್ತಿರುವ ಧೂಳಿನ ಸಮಸ್ಯೆ, ಅವ್ಯವಸ್ಥೆ ವಿರುದ್ಧ ವಿದ್ಯಾರ್ಥಿನಿಯರು ತರಗತಿ ತೊರೆದು ರಸ್ತೆಯಲ್ಲಿ ಕುಳಿತು ಪ್ರತಿಭಟಿಸಿದ ಘಟನೆ ನಡೆದಿತ್ತು. ಈ ಸಂದರ್ಭ ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ಶಾಸಕರ ಜತೆ ವಾಗ್ವಾದ ಮಾಡಿದ್ದರು. ಬಳಿಕ ನಡೆದ ವಿದ್ಯಮಾನದಲ್ಲಿ ಪ್ರಭಾರ ಪ್ರಾಂಶುಪಾಲೆಯನ್ನು ವಿವಿಧ ಕಾರಣಗಳನ್ನು ನೀಡಿ ಅಮಾನತು ಮಾಡಲಾಗಿತ್ತು. ಇದಕ್ಕೆ ಧೂಳಿನ ಸಮಸ್ಯೆ ಮುಖ್ಯ ಕಾರಣವಾಗಿತ್ತು. ಇದೀಗ ರಸ್ತೆಯುದ್ದಕ್ಕೂ ಲಾರಿಗಳು ಮಣ್ಣು ಚೆಲ್ಲಿಕೊಂಡು ಹೋಗುತ್ತಿದ್ದರೂ ಅಧಿಕಾರಿಗಳು ಅದರ ವಿರುದ್ಧ ಕ್ರಮ ಕೈಗೊಳ್ಳಲಾಗದಷ್ಟು ಅಸಹಾಯಕರಾದರೇ ಎಂಬ ಸಂಶಯ ಸಾರ್ವಜನಿಕ ವಲಯದಲ್ಲಿ ಮೂಡಿದೆ.

ಕೊೖಲ ಜಾನುವಾರು ಸಂವರ್ಧನ-ತರಬೇತಿ ಕೇಂದ್ರದಲ್ಲಿ ಪ್ರಗತಿ ಪರಿಶೀಲನಾ ಸಭೆ

ತರಬೇತಿ ಕೇಂದ್ರ-ಕಾಲೇಜ್ ವಿಲೀನ ಇಲ್ಲ

• **ಕಡಬ:** ಕೊೖಲದಲ್ಲಿ ಆರಂಭಗೊಳ್ಳಲಿರುವ ಪಶು ವೈದ್ಯಕೀಯ ಕಾಲೇಜಿನೊಂದಿಗೆ ಕೊೖಲ ಜಾನುವಾರು ಸಂವರ್ಧನ ಮತ್ತು ತರಬೇತಿ ಕೇಂದ್ರವನ್ನು ವಿಲೀನಗೊಳಿಸುವ ಯಾವುದೇ ಪ್ರಸ್ತಾಪ ಸರಕಾರದ ಮುಂದಿಲ್ಲ ಎಂದು ರಾಜ್ಯದ ಪಶು ಸಂಗೋಪನಾ ಮತ್ತು ರೇಷ್ಮೆ ಇಲಾಖಾ ಸಚಿವ ಕೆ. ವೆಂಕಟೇಶ್ ಹೇಳಿದರು.



ಅವರು ಮಂಗಳವಾರ ಕೊೖಲ ಜಾನುವಾರು ಸಂವರ್ಧನ ಮತ್ತು ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿ ಜರಗಿದ ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ತರಬೇತಿ ಕೇಂದ್ರದಲ್ಲಿರುವ ಕೆಲವು ಕಟ್ಟಡಗಳನ್ನು ಮತ್ತು ಇನ್ನಿತರ ವ್ಯವಸ್ಥೆಗಳನ್ನು ಅಗತ್ಯ ಬಿದ್ದರೆ ಪಶು ವೈದ್ಯಕೀಯ ಕಾಲೇಜಿನ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುತ್ತದೆ. ಈಗಾಗಲೇ ತರಬೇತಿ ಕೇಂದ್ರದ ಅಧೀನದಲ್ಲಿದ್ದ 247 ಎಕರೆ ಭೂಮಿಯನ್ನು ಪಶು ವೈದ್ಯಕೀಯ ಕಾಲೇಜಿಗೆ ಕೊಡಲಾಗಿದೆ. ವೈದ್ಯಕೀಯ ಕಾಲೇಜಿನ ಚಟುವಟಿಕೆಗಳೇ ಬೇರೆ ತರಬೇತಿ ಕೇಂದ್ರದ ಚಟುವಟಿಕೆಗಳೇ ಬೇರೆ. ಕೊೖಲ ಜಾನುವಾರು ಸಂವರ್ಧನ ಮತ್ತು ತರಬೇತಿ ಕೇಂದ್ರವು ಮುಖ್ಯವಾಗಿ ಅಳಿವಿನ ಅಂಚಿನಲ್ಲಿರುವ ಮಲೆನಾಡು ಗಿಡ್ಡ ತಳಿ ಜಾನುವಾರುಗಳ ಸಂವರ್ಧನೆ ಮತ್ತು ಸಂರಕ್ಷಣೆಯ ಕೆಲಸವನ್ನು ಮಾಡುವುದರೊಂದಿಗೆ ಇತರ ಸಂಶೋಧನೆಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುತ್ತಿದೆ ಎಂದು ವಿವರಿಸಿದರು.

ತರಬೇತಿ ಕೇಂದ್ರದಲ್ಲಿ ತಯಾರಿಸಲಾಗುತ್ತಿರುವ ಗೋ ಉತ್ಪನ್ನಗಳ ಜೊತೆಗೆ ಔಷಧೀಯ ಗುಣವುಳ್ಳ ದೇಸಿ ಹಸು ವಿನ ಹಾಲಿನ ಉತ್ಪಾದನೆ ಹೆಚ್ಚಿಸಿ ಮಾರಾಟ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸುಳ್ಯ ಶಾಸಕಿ ಶಾಸಕಿ ಭಾಗೀರಥಿ ಮುರುಳ್ಯ, ಪಶು ಸಂಗೋಪನೆ ಮತ್ತು ಮೀನುಗಾರಿಕಾ ಇಲಾಖಾ ಪ್ರಧಾನ ಕಾರ್ಯದರ್ಶಿ ವಿನೋತ್ ಪ್ರಿಯಾ, ಪಶುಪಾಲನೆ ಮತ್ತು ಪಶು ವೈದ್ಯ ಸೇವಾ ಇಲಾಖಾ ಆಯುಕ್ತೆ ಶಿಲ್ಪಾನಾಗ್ ಸಿ.ಟಿ., ಕರ್ನಾಟಕ ಪಶುವೈದ್ಯ ಮತ್ತು ಮೀನುಗಾರಿಕಾ ವಿಜ್ಞಾನಗಳ ವಿವಿಯ ಉಪಕುಲಪತಿ ಡಾ.ಕೆ.ಸಿ. ವೀರಣ್ಣ, ಭಾರತೀಯ ಪಶು ವೈದ್ಯಕೀಯ ಪರಿಷತ್‌ನ ಆಡಳಿತ ಮಂಡಳಿಯ ಸದಸ್ಯ ಡಾ. ಸುಶಾಂತ್ ರೈ ಬೆಳ್ಳಿಪ್ಪಾಡಿ, ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖಾ ಜಂಟಿ ನಿರ್ದೇಶಕ ಡಾ. ನಾಗರಾಜು, ಕೊೖಲ ಪಶು ವೈದ್ಯಕೀಯ ಕಾಲೇಜಿನ ಡೀನ್ ಡಾ. ಶಿವ ಕುಮಾರ್, ಮಂಗಳೂರು ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖಾ ಉಪನಿರ್ದೇಶಕ ಡಾ. ಅರುಣ್ ಕುಮಾರ್ ಶೆಟ್ಟಿ, ಕೊೖಲ ಫಾರ್ಮ್‌ನ ಉಪ ನಿರ್ದೇಶಕ ಡಾ. ಚಿದಾನಂದ ಕೆ.ಬಿ., ಮುಖ್ಯ ಪಶು ವೈದ್ಯಾಧಿಕಾರಿಗಳಾದ ಡಾ. ಪ್ರಸನ್ನ ಹೆಬ್ಬಾರ್, ಡಾ. ಪುನೀತ್, ಕಡಬ ತಾಲೂಕು ಪಶುವೈದ್ಯಾಧಿಕಾರಿ ಡಾ. ಅಜಿತ್ ಎಂ.ಸಿ., ಕಾಂಗ್ರೆಸ್‌ನ ಕೃಷ್ಣಪ್ಪ ಜಿ. ರಾಮಕುಂಜ, ಪಿ.ಪಿ. ವರ್ಗೀಸ್, ಸರ್ವೋತ್ತಮ ಗೌಡ, ಅಭಿಲಾಷ್ ಪಿ.ಕೆ., ಆದಂ ಎಚ್., ಅಬ್ಬಾಸ್ ಕುಂತೂರು, ಯತೀಶ್ ಬಾನಡ್ಕ, ಅಶ್ರಫ್ ಶೇಡಿಗುಂಡಿ, ಕರುಣಾಕರ ಉರ್ಕ, ನಝೀರ್ ಪೂರಿಂಗ, ಎ.ಕೆ. ಬಶೀರ್, ಬಿಜೆಪಿಯ ಲಕ್ಷ್ಮೀನಾರಾಯಣ ರಾವ್ ಆತೂರು, ಬಾಲಕೃಷ್ಣ ಗೌಡ ಬೇಂಗದಪಡ್ಪು, ಪ್ರಶಾಂತ್ ಆರ್.ಕೆ., ಶರತ್ ಕೆದಿಲ ಮತ್ತಿತರರಿದ್ದರು.

ಮಧ್ಯಪ್ರಾಚ್ಯದಲ್ಲಿ ಸಂಘರ್ಷ: ಈಗ ಹತ್ತಕ್ಕೆ ಏರಿತು ಸಹಾಯವಾಣಿ ಸಂಪರ್ಕಿತರ ಸಂಖ್ಯೆ

• **ಉಡುಪಿ:** ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷ ತಾರಕಕ್ಕೇರಿ ಮಧ್ಯಪ್ರಾಚ್ಯದಲ್ಲಿ ಯುದ್ಧದ ಭೀತಿ ಆವರಿಸಿರುವ ಬೆನ್ನಲ್ಲೇ, ಉಡುಪಿ ಜಿಲ್ಲೆಯ ಪ್ರವಾಸಿಗರು ಮತ್ತು ಉದ್ಯೋಗಿಗಳಲ್ಲಿ ಆತಂಕ ಮನೆಮಾಡಿದೆ. ಮಂಗಳವಾರ ಜಿಲ್ಲಾ ಸಹಾಯವಾಣಿಗೆ ಮತ್ತೆ ನಾಲ್ವರು ಕರೆ ಮಾಡಿ ನೆರವು ಕೋರಿದ್ದು, ಇವರಲ್ಲಿ ಉಡುಪಿಯ ಇಬ್ಬರು ಹಾಗೂ ಕುಂದಾಪುರದ ಇಬ್ಬರು ಸೇರಿದ್ದಾರೆ. ಪ್ರಸ್ತುತ ಇವರೆಲ್ಲರೂ ಯುಎಇನಲ್ಲಿದ್ದಾರೆ.



ಇದರೊಂದಿಗೆ ಸಂಕಷ್ಟಕ್ಕೆ ಸಿಲುಕಿ ಜಿಲ್ಲಾಡಳಿತವನ್ನು ಸಂಪರ್ಕಿಸಿದವರ ಒಟ್ಟು ಸಂಖ್ಯೆ 10ಕ್ಕೆ ಏರಿಕೆಯಾಗಿದೆ. ಇರಾನ್‌ನಿಂದ ಇಸ್ರೇಲ್ ಮೇಲೆ ನಡೆಯುತ್ತಿರುವ ಕ್ಷಿಪಣಿ ದಾಳಿ ಮತ್ತು ಪ್ರತಿಯಾಗಿ ಇಸ್ರೇಲ್ ನಡೆಸುತ್ತಿರುವ ವಾಯುದಾಳಿಯಿಂದಾಗಿ ಮಧ್ಯಪ್ರಾಚ್ಯದ ವಿಮಾನಯಾನ ಸೇವೆಗಳು ಸಂಪೂರ್ಣ ಏರುಪೇರಾಗಿವೆ. ಪರಿಣಾಮ ಸಂಕಷ್ಟದಲ್ಲಿರುವವರನ್ನು ತಾಯ್ನಾಡಿಗೆ ಕರೆತರುವ ಪ್ರಕ್ರಿಯೆಗೆ ಹಿನ್ನಡೆಯಾಗಿದೆ. ವಿಮಾನ ನಿಲ್ದಾಣಗಳ ತಾತ್ಕಾಲಿಕ ಮುಚ್ಚುವಿಕೆ ಹಾಗೂ ರದ್ದತಿಯಿಂದಾಗಿ ಭಾರತಕ್ಕೆ ಮರಳುವ ಹಾದಿ ಇನ್ನೂ ಸುಗಮವಾಗಿಲ್ಲ. ಜಿಲ್ಲಾಡಳಿತವು ವಿದೇಶಾಂಗ ಇಲಾಖೆಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಸುರಕ್ಷಿತ ವಾಪಸಾತಿಗಾಗಿ ಪ್ರಯತ್ನ ಮುಂದುವರಿಸಿದೆ.

ಮಂಗಳೂರು: ಮಾರ್ಚ್ ಮೊದಲ ವಾರದಲ್ಲಿಯೇ ಎಲ್ಲೆಡೆ ಉರಿಬಿಸಿಲಿನ ವಾತಾವರಣ ಕಂಡುಬರುತ್ತಿದ್ದು, ದಾಹ ತಣಿಸಿಕೊಳ್ಳಲು ಜನತೆ ತಂಪು ಪಾನೀಯಗಳಿಗೆ ಮೊರೆ ಹೋಗುತ್ತಿರುವುದು ಕಂಡುಬರುತ್ತಿದೆ. ಮಂಗಳೂರು ನಗರದಲ್ಲಂತೂ ರಸ್ತೆಯ ಇಕ್ಕೆಲಗಳಲ್ಲಿ ಎಳನೀರು, ಕಬ್ಬು ಜ್ಯೂಸ್, ಕಲ್ಲಂಗಡಿ ಹಣ್ಣಿನ ವ್ಯಾಪಾರ ಜೋರಾಗಿದೆ. ಅಲ್ಲಲ್ಲಿ ಮಡಕೆಯಲ್ಲಿ ಮಜ್ಜಿಗೆಯನ್ನಿಟ್ಟುಕೊಂಡು ಮಾರುವವರೂ ಕೂಡ ನಗರದಲ್ಲಿ ಕಂಡುಬರುತ್ತಿದ್ದಾರೆ. ಇವೆಲ್ಲವೂ ಬಿಸಿಲ ಝಳ ಹೇಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಹೆಚ್ಚಾಗುತ್ತಿದೆ ತಾಪಮಾನ

ತಂಪು ಪಾನೀಯಗಳಿಗೆ ಜನತೆ ಮೊರೆ



- ಬಿಸಿಲಿನ ಬೇಗೆಯಿಂದ ತತ್ತರಿಸುತ್ತಿರುವ ಜನತೆ ದಾಹ ತಣಿಸಿಕೊಳ್ಳಲು ತಂಪು ಪಾನೀಯದ ಮೊರೆ ಹೋಗುವುದು ಸಾಮಾನ್ಯವಾಗಿದೆ.
- ನಗರದ ಬಹುತೇಕ ಕಡೆಗಳಲ್ಲಿ ರಸ್ತೆ ಬದಿಗಳಲ್ಲಿ ನಿಂತು ಮಡಿಕೆಗಳಲ್ಲಿ ಮಜ್ಜಿಗೆ ಇಟ್ಟು ಮಾರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ.
- ಉರಿಬಿಸಿಲು ಆರೋಗ್ಯದ ಮೇಲೂ ಪರಿಣಾಮ ಉಂಟುಮಾಡುತ್ತಿದೆ.



ಬೊಂಡಕ್ಕೆ ಬಂತು ರೇಟ್!

ಎಳನೀರಿನ ದರ 60ರಲ್ಲಿದೆ. ತೆಂಗಿಲ್ ಬೊಂಡ 70-75ರ ದರದಲ್ಲಿ ಮಾರಾಟವಾಗುತ್ತಿದೆ. ಈ ಬಾರಿ ಫೆಬ್ರವರಿ ಆರಂಭದಿಂದಲೇ ಬೊಂಡಕ್ಕೆ ಉತ್ತಮ ಬೇಡಿಕೆ ಕಂಡುಬರುತ್ತಿದೆ. ನಾವು ತಮಿಳುನಾಡಿನಿಂದ ಬರುವ ಲಾರಿಗಳಿಂದ ಬೊಂಡವನ್ನು ಖರೀದಿಸಿ ಮಾರಾಟ ಮಾಡುತ್ತಿದ್ದೇವೆ ಎನ್ನುತ್ತಾರೆ ಉರ್ವದ ಎಳನೀರು ವ್ಯಾಪಾರಿಯೊಬ್ಬರು.


ಕಳಪೆ ಕಾಮಗಾರಿ: ಅಭಿಯಂತರ ಅಮಾನತು

• **ಕಲಬುರಗಿ:** ಪ್ರಬುದ್ಧ ಅಕಾಡೆಮಿಯ ಭವನದಲ್ಲಿ ಕುಸಿದು ಬಿದ್ದಿರುವುದು ಸೇರಿದಂತೆ ಕರ್ನಾಟಕ ರಾಜ್ಯ ಮೂಲಭೂತ ಸೌಕರ್ಯಗಳ (ಕೆಆರ್‌ಐಡಿಎಲ್) ಇಲಾಖೆಯ ಕಾಮಗಾರಿಗಳಲ್ಲಿ ವ್ಯಾಪಕ ಕಳಪೆ ಅವಲೋಕಿಸಿ ಇಲಾಖೆಯ ಕಲಬುರಗಿ ಪ್ರಭಾರಿ ಕಾರ್ಯ ನಿರ್ವಾಹಕ ಅಭಿಯಂತರ ಸೌರಭ ಎಸ್ ಭೀಮನ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಐವಾನ್ ಶಾಹಿ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಬುದ್ಧ ಅಕಾಡೆಮಿಯ ಉನ್ನತ ಕೋರ್ಸ್‌ಗಳ ಕೋಚಿಂಗ್ ತರಬೇತಿ ಕಟ್ಟಡದ ಕಾಮಗಾರಿಯಲ್ಲಿ ಆಗಿರುವ ಕಳಪೆ ಜತೆಗೆ ಇಲಾಖೆಯ ಹಲವಾರು ಕಾಮಗಾರಿಗಳ ಸಹ ಕಳಪೆ ನಡೆಯುತ್ತಿವೆ ಎಂಬುದನ್ನು ಇಲಾಖಾ ಅರಿವಿಗೆ ಬರುತ್ತಿದ್ದಂತೆ ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದರು. ಪ್ರಬುದ್ಧ ಅಕಾಡೆಮಿಯ ಮೇಲ್ಛಾವಣಿ ಕುಸಿದು ಬಿದ್ದಿರುವುದು ಹಾಗೂ ಇತರ ಕಾಮಗಾರಿಗಳ ಕಳಪೆಯನ್ನು ಥರ್ಡ್ ಪಾರ್ಟಿಯಿಂದ ತನಿಖೆ ನಡೆಸಿ, ಅದರ ವರದಿ ಆಧಾರದ ಮೇಲೆಯೇ ಅಮಾನತು ಕ್ರಮ ಕೈಗೊಳ್ಳಲಾಗಿದೆ. ಪ್ರಬುದ್ಧ ಅಕಾಡೆಮಿಯಲ್ಲಿ ನಿರೀಕ್ಷೆಯಂತೆ ತರಬೇತಿ ನಡೆಯದಿರುವುದು ತಮ್ಮ ಗಮನಕ್ಕೆ ಬಂದಿದೆ. ಸೂಕ್ತ ತರಬೇತಿದಾರ ನಿಯೋಜನೆ ಸೇರಿದಂತೆ ಒಂದೊಂದಾಗಿ ಸಮಸ್ಯೆ ಸಂಪಡಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

ಕಲಬುರಗಿ ಜಿಲ್ಲೆಯ ಅಭಿವೃದ್ಧಿ ಸಂಬಂಧಿಸಿದಂತೆ ಎಲ್ಲ ಇಲಾಖೆಗಳ ಪ್ರಗತಿಯನ್ನು ಬೆಂಗಳೂರು ಹಾಗೂ ಕಲಬುರಗಿಯಲ್ಲಿ ಸಭೆ ನಡೆಸಿ ಪರಾಮರ್ಶಿಸಲಾಗಿದೆ. ಕೃಷಿ ಇಲಾಖೆಗೆ ಸಂಬಂಧಿಸಿದ ಕಳೆದ ಮೂರು ವರ್ಷದಲ್ಲಿ 1200 ಕೋಟಿ ರೂ. ಅಧಿಕ ಬೆಳೆ ಪರಿಹಾರ ಹಾಗೂ ಬೆಳೆವಿಮೆ ಕೊಡಿಸಲಾಗಿದೆ ಎಂದರು.

ರಾಮ ಬಾಣ



ಕಂದಾಯ ಸೇವೆ ಡಿಜಿಟಲೀಕರಣ: ಸಚಿವ

• **ಬೆಂಗಳೂರು:** ಪೋಡಿ ದುರಸ್ತಿ, ಪೌತಿಖಾತೆ, ಭೂ ಸುರಕ್ಷಾ ಅಭಿಯಾನ ಸೇರಿದಂತೆ ಎಲ್ಲಾ ಕಂದಾಯ ಸೇವೆಗಳನ್ನೂ ಆನ್ಲೈನ್ ಡಿಜಿಟಲೀಕರಿಸಿ ಇಲಾಖೆಯ ಹತ್ತಾರು ಪ್ರಮುಖ ಸೇವೆಗಳನ್ನು ಜನಸಾಮಾನ್ಯರ



ಮನೆ ಬಾಗಿಲಿಗೆ ತಲುಪಿಸಿದ್ದು ನಮ್ಮ ಸಾವಿರ ದಿನಗಳ ಆಡಳಿತದ ಸಾಧನೆ ಎಂದು ಸಚಿವ ಕೃಷ್ಣ ಬೈರೇಗೌಡ ಅಭಿಪ್ರಾಯಪಟ್ಟರು.

ಮಂಗಳವಾರ ವಿಕಾಸಸೌಧದಲ್ಲಿ ನಡೆದ ಎಲ್ಲಾ ಜಿಲ್ಲಾಧಿಕಾರಿಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಹತ್ತಾರು ವರ್ಷಗಳಿಂದ ಆಗದ ಕೆಲಸಗಳು ಕೇವಲ ಕಳೆದ ಸಾವಿರ ದಿನಗಳಲ್ಲಾಗಿವೆ. ಈ ಮಾತು ಜನರ ಬಾಯಿಂದಲೇ ಬರುತ್ತಿರುವುದು ವಿಶೇಷ. ನಾವು ಮಾಡುತ್ತಿರುವ ಕೆಲಸ ಜನರಿಗೆ ಅನುಕೂಲವಾಗುತ್ತಿದೆ. ಈ ಹಿಂದೆ ಇಲಾಖೆಯ ಬಗ್ಗೆ ಜನರ ಮನಸ್ಸಲ್ಲಿದ್ದ ಭಾವನೆ ಈಗ ಬದಲಾಗಿದೆ ಎಂದರು.

ಈ ಹಿಂದೆ ಜಮೀನು ಮಂಜೂರು ಮಾಡಿದ್ದ ಸರ್ಕಾರಗಳು ಕೇವಲ ಆರ್‌ಟಿಸಿ ಮಾತ್ರ ಮಾಡಿಕೊಟ್ಟು ರೈತರ ಜುಟ್ಟನ್ನು ತಮ್ಮ ಕೈಯಲ್ಲೇ ಇಟ್ಟುಕೊಂಡಿದ್ದವು. ಹೀಗಾಗಿ ಪಕ್ಕಾ ದಾಖಲೆ ಇಲ್ಲದೆ ರೈತರ ಬದುಕು ಅತಂತ್ರ ಸ್ಥಿತಿಯಲ್ಲೇ ಇತ್ತು. ಆದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರೈತರು ಅರ್ಜಿ ಸಲ್ಲಿಸುವುದಕ್ಕೆ ಬದಲಾಗಿ, ಅಧಿಕಾರಿಗಳೇ ಮಂಜೂರಾಗಿರುವ ಎಲ್ಲಾ ರೈತರ ಮಾಹಿತಿ ಹಾಗೂ ದಾಖಲೆಗಳನ್ನು ಕಲೆಹಾಕಿ ಕಡತಗಳನ್ನು ಆನ್ಲೈನ್‌ನಲ್ಲಿ ತಯಾರಿಸಿ, ರೈತರ ಜಮೀನಿಗೆ ತೆರಳಿ ಮಂಜೂರಾದ ಜಮೀನುಗಳಿಗೆ ಸರ್ವೆ ಮಾಡಿ, ಸ್ಕೆಚ್ ತಯಾರಿಸಿ, ಆರ್‌ಟಿಸಿ, ಇಂಡೀಕರಣ ಮಾಡಿ ಸಂಪೂರ್ಣ ಪಕ್ಕಾ ದಾಖಲೆಗಳನ್ನು ರೈತರಿಗೆ ನೀಡಿ ಮಾಲೀಕತ್ವದ ಭೂಗ್ಯಾರಂಟಿ ನೀಡುವ ಅಭಿಯಾನವನ್ನು ಕಳೆದ ಒಂದು ವರ್ಷದಿಂದ ನಡೆಸಲಾಗುತ್ತಿದೆ ಎಂದು ತಿಳಿಸಿದರು. ಒಂದು ವರ್ಷದಲ್ಲಿ 2,05,757 ರೈತರ ಜಮೀನುಗಳ ಸರ್ವೆ ಕೈಗೆತ್ತಿಕೊಳ್ಳಲಾಗಿದೆ. ಬರುವ ಮೂರು ತಿಂಗಳುಗಳಲ್ಲಿ ಒಂದು ಲಕ್ಷ ಜಮೀನುಗಳನ್ನು ಸರ್ವೆಗೆ ಕೈಗೆತ್ತಿಕೊಳ್ಳಬೇಕು. ಇದಲ್ಲದೇ 1,07,217 ರೈತರ ಕಡತಗಳು ಮಿಸ್ಸಿಂಗ್ ರೇಕಾರ್ಡ್ ಕಮಿಟಿಗೆ ಕಳುಹಿಸಲಾಗಿದೆ. ಇವುಗಳಲ್ಲಿಯೂ ಈಗಾಗಲೇ 3,662 ರೈತರ ಕಡತಗಳನ್ನು ವಿಲೇ ಮಾಡಲಾಗಿದೆ. 50,000 ಕಡತಗಳನ್ನು 3 ತಿಂಗಳುಗಳಲ್ಲಿ ವಿಲೇಗೊಳಿಸಬೇಕು ಎಂದು ಅಧಿಕಾರಿಗಳಿಗೆ ಗಡುವು ನೀಡಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೇನೇಜಿ

◈ ದೇಶದ ಬಹುತೇಕ ರಾಜ್ಯಗಳು ಆದಾಯದ ಕೊರತೆಯನ್ನು ಎದುರಿಸುತ್ತಿವೆ. ಆದರೂ ಚುನಾವಣೆಗಳು ಬರುತ್ತಿರುವಾಗ ಉಚಿತ ಕೊಡುಗೆಗಳನ್ನು ಘೋಷಿಸುತ್ತಿರುವುದೇಕೆ, ಹೀಗೆ ಮಾಡಿದರೆ ಜನರು ಕೆಲಸ ಮಾಡುತ್ತಾರೆಯೇ? **- ಸುಪ್ರೀಂಕೋರ್ಟ್**

- ಜನಗಳು ಕೆಲಸ ಮಾಡುತ್ತಾರೆಯೋ ಇಲ್ಲವೋ ಎಂಬುದು ಸಿಲ್ಲಿ ಸಂಗತಿ, ಹೇಗಾದರೂ ಏನಾದರೂ ಮಾಡಿ ಅಧಿಕಾರಕ್ಕೆ ಬರುವುದು ದೊಡ್ಡ ಸಂಗತಿ.ಅದಕ್ಕಾಗಿ ಉಚಿತ ಕೊಡುಗೆಗಳನ್ನು ಕೊಡುವುದನ್ನು ಬಿಟ್ಟರೆ ಬೇರೆ ಸುಲಭದ ದಾರಿ ಎಲ್ಲಿದೆ?

ದಿನ ಭವಿಷ್ಯ

ಮೇಷ
ವೃತ್ತಿಯಲ್ಲಿ ಎಲ್ಲರ ಸಹಕಾರ. ಕೆಲಸ ಸುಲಲಿತ. ಆರ್ಥಿಕ ಸಮಸ್ಯೆ ನಿವಾರಣೆ. ಭಾವನಾತ್ಮಕವಾಗಿ ಸಂತೋಷದ ಮನಸ್ಥಿತಿ.

ವೃಷಭ
ಸಹೋದ್ಯೋಗಿ ನಿಮಗೆ ತೊಂದರೆ ಸೃಷ್ಟಿಸಬಹುದು. ಸಹನೆ ಕಾಯ್ದುಕೊಳ್ಳಿ. ಹಣ ಗಳಿಕೆ ಕಷ್ಟಕರವಾಗಲಿದೆ. ಮನೆಯಲ್ಲಿ ವಾಗ್ವಾದ.

ಮಿಥುನ
ವೃತ್ತಿಯಲ್ಲಿ ಹೆಚ್ಚುವರಿ ಹೊಣೆ. ಬೇರೆ ವಿಚಾರಗಳತ್ತ ಗಮನ ಹರಿಯದು. ಹಣದ ಸಮಸ್ಯೆ ಒದಗಿದರೂ ಬಳಿಕ ಪರಿಹಾರ.

ಕಟಕ
ಪ್ರೀತಿಪಾತ್ರರ ಜತೆ ಅಹಂ ಬಿಟ್ಟು ವರ್ತಿಸಿ. ಸಂಬಂಧ ಕೆಡಲು ಆಸ್ಪದ ಕೊಡಬೇಡಿ. ಖರ್ಚು ಅಧಿಕ. ತಲೆನೋವು ಕಾಡಬಹುದು.

ಸಿಂಹ
ಕೆಲ ವಿಚಾರಗಳಲ್ಲಿ ಇಂದು ಎಚ್ಚರಿಕೆಯಿಂದ ನಡೆಕೊಳ್ಳಿ. ಕೆಲಸದಲ್ಲಿ ಪ್ರಮಾದ, ಆಪ್ತರ ಜತೆ ಸಂಘರ್ಷ ನಡೆದೀತು. ತಾಳ್ಮೆಯ ನಡೆ ಅವಶ್ಯ.

ಕನ್ಯಾ
ಪ್ರಗತಿಯ ದಿನ. ವೃತ್ತಿ ಮತ್ತು ಖಾಸಗಿ ಬದುಕಲ್ಲಿ ನಿಮಗೆ ಅನುಕೂಲಕರ ಬೆಳವಣಿಗೆ. ಅನಿರೀಕ್ಷಿತ ಖರ್ಚು ಒದಗಲಿದೆ. ಆರೋಗ್ಯ ಸುಸ್ಥಿರ.

ತುಲಾ
ಅಧಿಕ ಜವಾಬ್ದಾರಿ. ಭಾವುಕತೆ ಬದಿಗಿಟ್ಟು ಕರ್ತವ್ಯದ ಮೇಲೆ ಗಮನ ಹರಿಸಿ. ಹಣದ ವಿಚಾರದಲ್ಲಿ ತುಸು ಗೊಂದಲ ಕಾಡಲಿದೆ.

ವೃಶ್ಚಿಕ
ವೃತ್ತಿ ಕ್ಷೇತ್ರದಲ್ಲಿ ಬದಲಾವಣೆ ಆದೀತು. ಹೊಣೆ ನಿಭಾಯಿಸುವಲ್ಲಿ ಎಚ್ಚರವಿರಲಿ. ಹದ ತಪ್ಪಿದ ಮಾತು ಬೇಡ. ಸಣ್ಣ ಜಗಳ ದೊಡ್ಡದಾದೀತು.

ಧನು
ಸಕಾಲದಲ್ಲಿ ನಿಮ್ಮ ಕೆಲಸ ಪೂರೈಸಲು ವಿಫಲ. ವಾಗ್ವಾದದಿಂದ ದೂರವಿರಿ. ವ್ಯವಹಾರದಲ್ಲಿ ಹಣದ ಕೊರತೆ. ಸಣ್ಣ ಮಟ್ಟದ ಆರೋಗ್ಯ ಸಮಸ್ಯೆ.

ಮಕರ
ಕೆಲಸದಲ್ಲಿ ಅತೀವ ಶ್ರದ್ಧೆ ತೋರುವಿರಿ. ಸೂಕ್ತ ಫಲ ಪಡೆಯುವಿರಿ. ಆದರೆ ಕೆಲವರ ಕುಹಕ ಕೇಳುವಿರಿ. ಮೈಕೈ ನೋವಿನಂತಹ ಆರೋಗ್ಯ ಸಮಸ್ಯೆ.

ಕುಂಭ
ಹೆಚ್ಚು ಒತ್ತಡ. ಕೆಲಸ ಅಧಿಕ. ಸಂಗಾತಿ ಜತೆಗೆ ಮಾತಿನ ಚಕಮಕಿ ನಡೆದೀತು. ಯಾವುದೋ ಹತಾಶ ಭಾವ ಕಾಡಲಿದೆ. ಧ್ಯಾನದಿಂದ ನೆಮ್ಮದಿ.

ಮೀನ
ಆತ್ಮೀಯರ ಜತೆ ಹರ್ಷದಿಂದ ಕಾಲ ಕಳೆಯುವಿರಿ. ಹಣ ಹೂಡಿಕೆಯಿಂದ ಲಾಭ. ಆರೋಗ್ಯ ಸಮಸ್ಯೆ ನಿವಾರಣೆ, ನಿರಾಳತೆ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 8,1,3,7

ಕೇಂದ್ರ ಸರ್ಕಾರದ ವಾರ್ತಾ ಮತ್ತು ಮಾಹಿತಿ ಇಲಾಖೆ ಪ್ರಸರಣ ಕಾರ್ಯಕ್ರಮ

ಬಿಎಲ್‌ಡಬ್ಲ್ಯುಗೆ ಜಾಗತಿಕ ಮನ್ನಣೆ

▸ **ಸೋಮಶೇಖರ ಸಿ.ಜೆ**

• **ವಾರಾಣಸಿ:** ಕೇಂದ್ರ ಸರ್ಕಾರದ ವಾರ್ತಾ ಮತ್ತು ಮಾಹಿತಿ ಇಲಾಖೆಯ ಪ್ರಸರಣ ಕಾರ್ಯಕ್ರಮದ ಅಂಗವಾಗಿ, ಕರ್ನಾಟಕದ ಮಾಧ್ಯಮ ಪ್ರತಿನಿಧಿಗಳನ್ನೊಳಗೊಂಡ ವಿಶೇಷ ತಂಡ ಮಂಗಳವಾರ ಬನಾರಸ್ ಲೋಕೋಮೋಟಿವ್ ವರ್ಕ್ಸ್ ಗೆ (ಬಿಎಲ್‌ಡಬ್ಲ್ಯು)ಗೆ ಭೇಟಿ ನೀಡಿ, ಉತ್ಪಾದನಾ ಪ್ರಕ್ರಿಯೆಗಳು ಹಾಗೂ ತಾಂತ್ರಿಕ ಸಾಧನೆಗಳನ್ನು ಅವಲೋಕಿಸಿತು.

ತಂಡವು ಪ್ರಯಾಣಿಕರ ವಿದ್ಯುತ್ ಎಂಜಿನ್ ಡಬ್ಲ್ಯುಎಪಿ-7, ಸರಕು ಸಾಗಣೆ ಎಂಜಿನ್ ಡಬ್ಲ್ಯುಎಜಿ-9 ಹಾಗೂ ಅಮೃತ ಭಾರತ ಲೋಕೋಮೋಟಿವ್ ನಿರ್ಮಾಣ ಪ್ರಕ್ರಿಯೆ ಕುರಿತು ವಿವರಗಳನ್ನು ತಿಳಿದುಕೊಂಡಿತು. ರೈಲ್ವೇತರ ಗ್ರಾಹಕರಿಗಾಗಿ ತಯಾರಿಸಲಾಗುತ್ತಿರುವ ಡೀಸೆಲ್ ಎಂಜಿನ್‌ಗಳ ಮಾಹಿತಿಯನ್ನೂ ನೀಡಲಾಯಿತು. ಚಾಲಕರಿಗೆ ಅನುಕೂಲವಾಗುವ ಎರ್ಗೋನಾಮಿಕ್ ವಿನ್ಯಾಸ, ಡಿಜಿಟಲ್ ನಿಯಂತ್ರಣ ವ್ಯವಸ್ಥೆ ಹಾಗೂ ಆಧುನಿಕ ಭದ್ರತಾ ಸೌಲಭ್ಯಗಳಿರುವ ಕ್ಯಾಬ್ ಮಾದರಿಯನ್ನು ಪ್ರದರ್ಶಿಸಲಾಯಿತು.

“ಮೇಕ್ ಇನ್ ಇಂಡಿಯಾ ಮೇಕ್ ಫಾರ್ ದ ವರ್ಲ್ಡ್” ಸಾಧನೆ: ಬಿಎಲ್‌ಡಬ್ಲ್ಯು 11 ರಾಷ್ಟ್ರಗಳಿಗೆ 182 ಡೀಸೆಲ್ ಲೋಕೋಮೋಟಿವ್‌ಗಳನ್ನು ರಫ್ತು ಮಾಡಿರುವ ಸಾಧನೆಗೆ ವಿಶೇಷ ಪ್ರಾಮುಖ್ಯತೆ ನೀಡಲಾಯಿತು. ಇದು ಭಾರತದ ಕೈಗಾರಿಕಾ ಸಾಮರ್ಥ್ಯವನ್ನು ಜಾಗತಿಕ ಮಟ್ಟದಲ್ಲಿ ಸ್ಥಾಪಿಸಿರುವುದಾಗಿ ಅಧಿಕಾರಿಗಳು ತಿಳಿಸಿದರು. ಉಪ ಮುಖ್ಯ ವಿದ್ಯುತ್ ಇಂಜಿನಿಯರ್ ಸುದೀಪ್ ರಾವತ್ ತಾಂತ್ರಿಕ ಪ್ರಕ್ರಿಯೆಗಳು ಹಾಗೂ ಗುಣಮಟ್ಟ ಭರವಸೆ ಕ್ರಮಗಳ ಕುರಿತು ವಿವರಿಸಿದರು.



ಜಾಗತಿಕ ಮುದ್ರೆ

ವಾರಾಣಸಿಯ ಬನಾರಸ್ ಲೋಕೋಮೋಟಿವ್ ವರ್ಕ್ಸ್ (ಬಿಎಲ್‌ಡಬ್ಲ್ಯು) ತನ್ನ ತಾಂತ್ರಿಕ ಮೇಲುಗೈ ಮತ್ತು ಜಾಗತಿಕ ವಿಶ್ವಾಸಾರ್ಹತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.

ಸಂವಾದ ಕಾರ್ಯಕ್ರಮ: ಆಡಳಿತ ಭವನದ ಕರ್ಹಿ ಸಭಾಂಗಣದಲ್ಲಿ ಮಹಾಪ್ರಬಂಧಕ ಆಶುತೋಷ್ ಪಂತ್ ಅಧ್ಯಕ್ಷತೆಯಲ್ಲಿ ಸಂವಾದ ಸಭೆ ನಡೆಯಿತು. ಉತ್ಪಾದನಾ ಸಾಮರ್ಥ್ಯ, ಆಧುನೀಕರಣ ಹಾಗೂ ರಫ್ತು ಸಾಧನೆಗಳ ಕುರಿತು ಮಹಾಪ್ರಬಂಧಕರು ವಿವರಿಸಿದರು. ಭಾರತೀಯ ರೈಲ್ವೆಯ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲೂ ಬಿಎಲ್‌ಡಬ್ಲ್ಯು ವಿಶ್ವಾಸಾರ್ಹತೆ ಗಳಿಸಿರುವುದಾಗಿ ಅವರು ಹೇಳಿದರು.

ಈ ಕಾರ್ಯಕ್ರಮದಲ್ಲಿ ಪ್ರಧಾನ ಮುಖ್ಯ ವಿದ್ಯುತ್ ಇಂಜಿನಿಯರ್ ಸುಶೀಲ ಕುಮಾರ್ ಶ್ರೀವಾಸ್ತವ, ಪ್ರಧಾನ ಮುಖ್ಯ ಯಾಂತ್ರಿಕ ಇಂಜಿನಿಯರ್ ವಿವೇಕ್ ಶೀಲ, ಉಪ ಮಹಾಪ್ರಬಂಧಕ ಸಾಗರ್ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು. ಮಾಧ್ಯಮ ಪ್ರತಿನಿಧಿಗಳು

ರಫ್ತುಗೊಂಡ ರಾಷ್ಟ್ರಗಳು

ಟಾಂಜಾನಿಯಾ	ಸುಡಾನ್
ವಿಯೆಟ್ನಾಂ	ಅಂಗೋಲಾ
ಬಾಂಗ್ಲಾದೇಶ	ಮ್ಯಾನ್ಮಾರ್
ಶ್ರೀಲಂಕಾ	ಸೆನೆಗಲ್
ಮಲೇಷ್ಯಾ	ಮಾಲಿ
	ಮೊಜಾಂಬಿಕ್

ಬಿಎಲ್‌ಡಬ್ಲ್ಯು ಕೈಗಾರಿಕಾ ಪ್ರಗತಿಯಲ್ಲಿ ಪ್ರಮುಖ ಸ್ತಂಭವಾಗಿದ್ದು, ದೇಶದ ಆತ್ಮನಿರ್ಭರತಾ ಯಾತ್ರೆಗೆ ಮಹತ್ವದ ಕೊಡುಗೆ ನೀಡುತ್ತಿದೆ ಎಂದು ಅಭಿಪ್ರಾಯಪಟ್ಟರು. ಬಿಎಲ್‌ಡಬ್ಲ್ಯು ಸಾರ್ವಜನಿಕ ಸಂಪರ್ಕಾಧಿಕಾರಿ ರಾಜೇಶ್ ಕುಮಾರ್ ತಂಡವನ್ನು ಸ್ವಾಗತಿಸಿದರು. ಮುಖ್ಯ ವಿದ್ಯುತ್ ಇಂಜಿನಿಯರ್ (ಲೋಕೋಮೋಟಿವ್) ಅರವಿಂದ್ ಕುಮಾರ್ ಜೈನ್ ಮಾರ್ಗದರ್ಶನದಲ್ಲಿ ಲೋಕೋ ಫ್ರೇಮ್ ಶಾಪ್, ಅಸೆಂಬ್ಲಿ ಶಾಪ್ ಹಾಗೂ ಟೆಸ್ಟ್ ಶಾಪ್‌ಗಳನ್ನು ವೀಕ್ಷಿಸಲಾಯಿತು. ಆಧುನಿಕ ಯಂತ್ರೋಪಕರಣಗಳು, ಸ್ವಯಂಚಾಲಿತ ಉತ್ಪಾದನಾ ವ್ಯವಸ್ಥೆ, ಗುಣಮಟ್ಟ ನಿಯಂತ್ರಣ ಕ್ರಮಗಳು ಮತ್ತು ಕಟ್ಟುನಿಟ್ಟಿನ ಭದ್ರತಾ ನಿಯಮಾವಳಿಗಳನ್ನು ಮಾಧ್ಯಮ ಪ್ರತಿನಿಧಿಗಳು ಸಮೀಪದಿಂದಲೇ ಪರಿಶೀಲಿ ಸಿದರು. ಈ ವೇಳೆ, ಪಿಐಬಿಯ ಸಹಾಯಕ ನಿರ್ದೇಶಕಿ ಕರೀಷ್ಮಾ ಪಂತ್. ಮತ್ತು ವಾರಾಣಸಿಯ ಪಿಐಬಿ ಅಧಿಕಾರಿಗಳು ಹಾಜರಿದ್ದರು.

ಚಂದ್ರಗ್ರಹಣ ಗೋಚರ: ದೇಗುಲದಲ್ಲಿ ವಿಶೇಷ ಪೂಜೆ

• **ಬೆಂಗಳೂರು:** ಮಂಗಳವಾರ ಚಂದ್ರಗ್ರಹಣ ಗೋಚರದ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಬಹುತೇಕ ದೇವಾಲಯಗಳಲ್ಲಿ ಬೆಳಿಗ್ಗೆ ಪೂಜೆ ಮುಗಿದ ಬಳಿಕ ದೇವಾಲಯದ ಬಾಗಿಲು ಬಂದ್ ಮಾಡಲಾಗಿತ್ತು. ಗ್ರಹಣದ ಬಳಿಕ ಶುದ್ಧೀಕರಣ ಮಾಡಿ, ಶಾಂತಿ ಹೋಮ ಸೇರಿದಂತೆ ವಿಶೇಷ ಪೂಜೆ ನಡೆಸಲಾಯಿತು.

ಬೆಂಗಳೂರಿನ ಶ್ರೀ ಗವಿಗಂಗಾಧರೇಶ್ವರ, ಹಲಸೂರಿನ ಸೋಮೇಶ್ವರ ದೇವಾಲಯ, ಬೇಲೂರು ಚನ್ನಕೇಶವ, ಶ್ರೀ ಕ್ಷೇತ್ರ ಧರ್ಮಸ್ಥಳ, ಹೊರನಾಡು ಅನ್ನಪೂರ್ಣೇಶ್ವರಿ, ಮೈಸೂರಿನ ಚಾಮುಂಡೇಶ್ವರಿ ದೇವಾಲಯ, ಮಲೆ ಮಹದೇಶ್ವರ ಬೆಟ್ಟ ಮೈಸೂರು ಚಾಮುಂಡೇಶ್ವರಿ ಸೇರಿದಂತೆ ರಾಜ್ಯದ ವಿವಿಧ ದೇವಾಲಯಗಳಲ್ಲಿ ಬೆಳಿಗ್ಗೆ ಪೂಜೆ ಮುಗಿದ ಬಳಿಕ ದೇವಸ್ಥಾನ ಬಂದ್ ಮಾಡಲಾಗಿತ್ತು. ಮಂಗಳವಾರ ಮಧ್ಯಾಹ್ನ 3.30 ರಿಂದ ಸಂಜೆ 6.48 ರವರೆಗೆ ಚಂದ್ರಗ್ರಹಣ ಗೋಚರಿಸಿತ್ತು. ಆ ನಂತರ ದೇವಾಲಯ ಶುದ್ಧಿ ಕಾರ್ಯ ಕೈಗೊಂಡು, ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಇಂದು(ಬುಧವಾರ)ವಿಶೇಷ ಪೂಜೆ ಇರುತ್ತದೆ.

ಮಲ್ಲೇಶ್ವರ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಮಧ್ಯಾಹ್ನ 12 ಗಂಟೆವರೆಗೂ ಭಕ್ತರ ದರ್ಶನಕ್ಕೆ ಅವಕಾಶ ನೀಡಲಾಗಿತ್ತು. ಬಳಿಕ ಗರ್ಭಗುಡಿಯನ್ನು ದರ್ಬೆಯಿಂದ ಮುಚ್ಚಿ ಬಂದ್ ಮಾಡಲಾಯಿತು. ಸಂಜೆ 7 ಗಂಟೆಗೆ ದೇವಸ್ಥಾನದ ಬಾಗಿಲು ತೆರೆದು, ಪುಣ್ಯಾ, ಶುಚಿತ್ವ, ಚಂದ್ರನಿಗೆ, ಕಾಡುಮಲ್ಲೇಶ್ವರನಿಗೆ ಕ್ಷೀರಾಭಿಷೇಕ ಹಾಗೂ ಪಂಚಾಮೃತ ನೈವೇದ್ಯ ನೆರವೇರಿತು. ಶ್ರೀ ಗವಿಗಂಗಾಧರೇಶ್ವರ ದೇವಸ್ಥಾನದಲ್ಲಿ ಎಂದಿನಂತೆ ಪೂಜಾ ಪುನಸ್ಕಾರಗಳು, ಜಲಾಭಿಷೇಕ, ವಿಶೇಷ ಪೂಜೆ ನಡೆಯಿತು, ಬಳಿಕ 9 ಗಂಟೆಗೆ ದೇವಾಲಯವನ್ನು ಬಂದ್ ಮಾಡಲಾಯಿತು. ಸಂಜೆ 7.30ಕ್ಕೆ ದೇವಸ್ಥಾನದ ಬಾಗಿಲನ್ನು ತೆರೆದು ಮತ್ತೆ ಪೂಜೆ ನೆರವೇರಿತು. ಬುಧವಾರ ಬೆಳಿಗ್ಗೆ ದೇವಾಲಯ ಶುಚಿಗೊಳಿಸಿ ದೇವರ ದರ್ಶನಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

ಹಲಸೂರಿನ ಸೋಮೇಶ್ವರ ದೇವಾಲಯದಲ್ಲಿ ಬೆಳಗ್ಗೆ 11 ಗಂಟೆಗೆ ಮಹಾಮಂಗಳಾರತಿ ನಂತರ ದೇವಾಲಯವನ್ನು ಮುಚ್ಚಲಾಗಿತ್ತು. ಗ್ರಹಣ ಮೋಕ್ಷದ ನಂತರ ರಾತ್ರಿ 9 ಗಂಟೆಗೆ ಪೂಜಾ ಕಾರ್ಯಗಳು ನಡೆಯಿತು. ಶ್ರೀ ಕ್ಷೇತ್ರ ಧರ್ಮಸ್ಥಳದ ಮಂಜುನಾಥ ದೇವಾಲಯದಲ್ಲಿ ಮಧ್ಯಾಹ್ನ 1.30ಕ್ಕೆ ಬಾಗಿಲನ್ನು ಮುಚ್ಚಲಾಗಿತ್ತು. ಗ್ರಹಣದ ಮುಕ್ತಾಯದ ನಂತರ ಸಂಜೆ 7ಕ್ಕೆ ದೇವಾಲಯದ ಬಾಗಿಲು ತೆರೆಯಲಾಯಿತು.

₹11.50 ಕೋಟಿ ಮೌಲ್ಯದ ಡ್ರಗ್ಸ್ ವಶ, ಇಬ್ಬರ ಸೆರೆ

ಪುಟ ೧➜ಆರೋಪಿಗಳು ದೇವರ ಚಿತ್ರ ಸೇರಿ ವಿವಿಧ ಚಿತ್ರಕಲಾ ರೂಪದಲ್ಲಿ ಎಲ್ ಎಸ್‌ಡಿ ಸ್ಟ್ರಿಪ್ಸ್ ಮಾರಾಟ ಮಾಡುತ್ತಿದ್ದರು ಎಂಬುದು ಸಿಸಿಬಿ ನಾರ್ಕೋಟಿಕ್ಸ್ ವಿಭಾಗದ ಕಾರ್ಯಾಚರಣೆಯ ವೇಳೆ ಬಯಲಾಗಿದೆ. ಬಂಧಿತ ಇಬ್ಬರೂ ಆರೋಪಿಗಳು ಡ್ರಗ್ಸ್ ಪೆಡ್ಲಿಂಗ್‌ನ್ನೇ ವೃತ್ತಿ ಮಾಡಿಕೊಂಡಿದ್ದರು. ಇವರಿಗೆ ವಿನ್ಸೆಂಟ್ ಎಂಬಾತ ಥೈಲ್ಯಾಂಡ್‌ನಿಂದ ಡ್ರಗ್ಸ್ ಕಳಿಸುತ್ತಿದ್ದ. ವಿಮಾನದ ಮೂಲಕ ಆಗಾಗ ಅಲ್ಪ ಪ್ರಮಾಣದಲ್ಲಿ ಡ್ರಗ್ಸ್ ಪೂರೈಕೆ ಆಗುತ್ತಿತ್ತು. ವಿನ್ಸೆಂಟ್ ಸೂಚಿಸಿದ ಜಾಗದಲ್ಲಿ ಆಸ್ಟಿನ್ ಮತ್ತು ಮೊಬಿನಾ ಡ್ರಗ್ಸ್ ಇಡುತ್ತಿದ್ದರು ಎಂಬುದು ತನಿಖೆ ವೇಳೆ ತಿಳಿದುಬಂದಿದೆ. ಇನ್ನು ಪ್ರಕರಣ ಸಂಬಂಧ ಫ್ಲ್ಯಾಟ್ ಮಾಲೀಕನ ಪಾತ್ರದ ಬಗ್ಗೆಯೂ ಸಿಸಿಬಿಯಿಂದ ಪರಿಶೀಲನೆ ಮುಂದುವರಿದಿದೆ.

ಅಂಚೆ ಮೂಲಕ ಡ್ರಗ್ಸ್ ಸರಬರಾಜು: ಮತ್ತೊಂದು ಪ್ರತ್ಯೇಕ ಕಾರ್ಯಾಚರಣೆಯಲ್ಲಿ, ವಿದೇಶದಿಂದ ಅಂಚೆ ಪಾರ್ಸೆಲ್ ಮೂಲಕ ತರಿಸಿಕೊಳ್ಳಲಾಗಿದ್ದ 1.5 ಕೆ.ಜಿ ಹೈಡ್ರೋ ಗಾಂಜಾವನ್ನು ಸಿಸಿಬಿ ಪೊಲೀಸರು ವಶಪಡಿಸಿ ಕೊಂಡಿದ್ದಾರೆ. ಯಾರಿಗೂ ಅನುಮಾನ ಬಾರದಿರಲಿ ಎಂಬ ಉದ್ದೇಶದಿಂದ ಆರೋಪಿಗಳು ಚಾಕಲೇಟ್ ಮತ್ತು ಬಿಸ್ಕೆಟ್ ಬಾಕ್ಸ್‌ಗಳಲ್ಲಿ ಈ ಗಾಂಜಾವನ್ನು ವ್ಯವಸ್ಥಿತವಾಗಿ ಪ್ಯಾಕ್ ಮಾಡಿ ನಗರಕ್ಕೆ ತರಿಸಿಕೊಳ್ಳುತ್ತಿದ್ದರು. ವಶಪಡಿಸಿಕೊಳ್ಳಲಾದ ಈ ಮಾದಕವಸ್ತುವಿನ ಮೌಲ್ಯ ಸುಮಾರು 1.5 ಕೋಟಿ ರೂ. ಎಂದು ಅಂದಾಜಿಸಲಾಗಿದ್ದು, ಈ ಸಂಬಂಧ ಕೆ.ಜಿ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.



ಆರೋಪಿಗಳಿಂದ ಜಪ್ತಿ ಮಾಡಿದ ಮಾಲು

ಸಿಸಿಬಿ ಪೊಲೀಸರು ಬಾಗಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ 8,335 ಎಲ್‌ಎಸ್‌ಡಿ ಸ್ಟ್ರಿಪ್ಸ್, 5 ಕೆ.ಜಿ ಹೈಡ್ರೋ ಗಾಂಜಾ, 534 ಗ್ರಾಂ ಚರಸ್, ಎರಡು ಮೊಬೈಲ್ ಫೋನ್‌ಗಳು ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ಒಂದು ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿದ್ದಾರೆ. ಈ ಸಂಬಂಧ ಬಾಗಲೂರು ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಲ್ಲಿ ಪ್ರಕರಣ ದಾಖಲಾಗಿದೆ.

ವೀಸಾ ಅವಧಿ ಮುಗಿದಿದ್ದರೂ ಅನಧಿಕೃತ ವಾಸ: ಮೈಕೋ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ಸಿಸಿಬಿ ತಂಡ, ವೀಸಾ ಅವಧಿ ಮುಗಿದಿದ್ದರೂ ಅನಧಿಕೃತವಾಗಿ ನಗರದಲ್ಲಿ ವಾಸವಾಗಿದ್ದ ಹೊರದೇಶದ ಇಬ್ಬರು ಮಹಿಳೆಯರನ್ನು ವಶಕ್ಕೆ ಪಡೆದಿದೆ. ಇವರನ್ನು ಎಫ್‌ಆರ್‌ಆರ್‌ಒ ಆದೇಶದಂತೆ ಫಾರಿನರ್ಸ್ ಡಿಟೆನ್ಷನ್ ಸೆಂಟರ್‌ಗೆ ರವಾನಿಸಲಾಗಿದೆ. ನಗರ ಪೊಲೀಸ್ ಆಯುಕ್ತ ಸೀಮಂತಕುಮಾರ್ ಸಿಂಗ್ ಅವರ ಮಾರ್ಗದರ್ಶನದಲ್ಲಿ, ಅವರ ಪೊಲೀಸ್ ಆಯುಕ್ತ ಅಜಯ್ ಹಿಲೋರಿ ಹಾಗೂ ಉಪ ಪೊಲೀಸ್ ಆಯುಕ್ತರಾದ ರಾಜಾ ಇಮಾಮ್ ಖಾಸಿಂ ಅವರ ನೇತೃತ್ವದಲ್ಲಿ ಎಸಿಪಿ ಎಚ್.ಕೆ. ಮಹಾನಂದ್ ಮತ್ತು ತಂಡವು ಈ ಯಶಸ್ವಿ ಕಾರ್ಯಾಚರಣೆ ನಡೆಸಿದೆ.

ಆಧ್ಯಾತ್ಮಿಕ ಪುನರುಜ್ಜೀವನದ ಹೊಸ ಅಧ್ಯಾಯ

ಪುಟ ೧➜ಪರಂಪರೆಯ ದೃಷ್ಟಿಯಿಂದ ಹೇಳುವುದಾದರೆ, ಭಾರತದ ಆಧ್ಯಾತ್ಮಿಕ ಕೇಂದ್ರ ಕಾಶಿ ಎಂದು ನಾವೆಲ್ಲರೂ ಒಪ್ಪಿದ್ದೇವೆ. ಅದು ಕೇವಲ ಅತ್ಯಂತ ಪ್ರಾಚೀನ ಜೀವಂತ ನಗರ ಎಂದಷ್ಟೇ ಅಲ್ಲ, ಜ್ಞಾನ ಪರಂಪರೆಯ ನಿರಂತರತೆಯಿಂದ ಕೂಡ. ವಾರಾಣಸಿಯ ಕೆಲವು ಭಾಗಗಳು ಹಾಗೆಯೇ ದಕ್ಷಿಣ ಭಾರತದಲ್ಲಿ ಘನಪಾಠ ಎಂಬ ಶೈಲಿಯಲ್ಲಿ ವೇದಮಂತ್ರಗಳ ಪಠಣವನ್ನೂ ಗುರುತಿಸಲಾಗಿದೆ. ಅನೇಕ ವೇದಪಂಡಿತರು ಕಾಶಿಗೆ ಬಂದು ವಾಸಿಸುತ್ತಾರೆ. ಅದಕ್ಕಾಗಿಯೇ ಕಾಶಿಯಲ್ಲಿ ಪ್ರತಿಯೊಂದು ರಾಜ್ಯಕ್ಕೂ ಒಂದು ಪ್ರದೇಶವಿದೆ. ಇಲ್ಲಿ ಕನ್ನಡ, ತಮಿಳು, ಬೆಂಗಾಳಿ, ತೆಲುಗು ಪ್ರದೇಶಗಳಿವೆ. ಹೀಗಾಗಿ ಇಲ್ಲ ಪ್ರತಿಯೊಂದು ಭಾಷೆ ಮತ್ತು ಸಂಸ್ಕೃತಿಗೂ ಇಲ್ಲಿ ಸ್ಥಾನವಿದೆ ಎಂದು ಭೂಷಣ್ ಹೇಳಿದರು.

ಏಳು ಬಾರಿ ಧ್ವಂಸ, ಮತ್ತೆ ಪುನರ್‌ನಿರ್ಮಾಣ: ಇತಿಹಾಸದಲ್ಲಿ ಕಾಶಿ ವಿಶ್ವನಾಥ ದೇವಸ್ಥಾನ ಏಳು ಬಾರಿ ಧ್ವಂಸಗೊಂಡು ಮತ್ತೆ ಪುನರ್ ನಿರ್ಮಾಣಗೊಂಡಿದೆ. ಆದರೆ ಪ್ರತೀ ಬಾರಿ ಹೊಸ ಸ್ಥಳದಲ್ಲಿ ದೇವಾಲಯ ನಿರ್ಮಿಸಲ್ಪಟ್ಟಿದ್ದು, ಧಾರ್ಮಿಕ ಸಹಿಷ್ಣುತೆಯ ಉದಾಹರಣೆಯಾಗಿದೆ. ಹಿಂದೆ ಆಕ್ರಮಣಕಾರರು ನಮ್ಮ ದೇಗುಲಗಳನ್ನು ಕೆಡವಿ, ಈ ಜಾಗದಲ್ಲಿ ಮಸೀದಿ ಕಟ್ಟಿದಾಗಲೂ ಬೇರೆ ಸ್ಥಳಗಳಲ್ಲಿ ಹೊಸದಾಗಿ ದೇಗುಲಗಳನ್ನು ಕಟ್ಟಿದರು. ಹೀಗಾಗಿ ಇತಿಹಾಸದಿಂದಲೂ ದೇಗುಲ ಪುನರುತ್ಥಾನವಾಗುತ್ತಲೇ ಬಂದಿದೆ ಎಂದು ಭೂಷಣ್ ಅಭಿಪ್ರಾಯಪಟ್ಟರು.

ಇದೇ ಕಾರಿಡಾರ್ ಅಡಿಯಲ್ಲಿ ನಾವು ದೊಡ್ಡದಾದ ದೃಷ್ಟಿಕೋನ ಹೊಂದಿದ್ದೇವೆ. ಸದ್ಯ 3000 ಚದರ ಅಡಿ ಇರುವ ಆವರಣವನ್ನು 5 ಲಕ್ಷ ಚದರ ಅಡಿಗೆ ಏರಿಸುವ ಬದ್ಧತೆ ಇದೆ. ಇದಕ್ಕೆ 400 ಕೋಟಿ ರೂ. ಅನುದಾನ ನೀಡಿದ್ದೇವೆ ಎಂದು ಮಿಶ್ರ ಹೇಳಿದರು.

ವ್ಯಾಜ್ಯವಿಲ್ಲದೆ ಆಸ್ತಿಗಳ ಸ್ವಾಧೀನ

ಕಾಶಿಯ ಪುನರುತ್ಥಾನದಲ್ಲಿ ನಮ್ಮ ಜತೆಗೆ ಜನ ಕೂಡ ನಿಂತಿದ್ದಾರೆ. ಧಾಮ್‌ನ ಅಭಿವೃದ್ಧಿಗಾಗಿ 314 ಆಸ್ತಿಗಳನ್ನು ಸ್ವಾಧೀನ ಮಾಡಿಕೊಂಡಿದ್ದೇವೆ. 1400 ಮಂದಿ ಯಾವುದೇ. ವಿವಾದವಿಲ್ಲದೇ ಆಸ್ತಿ ಬಿಟ್ಟುಕೊಟ್ಟರು. ಒಂದೇ ಒಂದು ಕಾನೂನು ವ್ಯಾಜ್ಯವಿಲ್ಲದೇ ಸ್ವಾಧೀನ ಮಾಡಿಕೊಂಡಿದ್ದೇವೆ ಎಂದು ಮಿಶ್ರ ಹೇಳಿದರು.

ಅತ್ಯಾಧುನಿಕ ಭದ್ರತೆ, ವಿಮಾನ ನಿಲ್ದಾಣ ಮಟ್ಟದ ಸ್ವಚ್ಛತೆ: ಧಾಮದಲ್ಲಿ ಸಂಸತ್ ಮಾದರಿಯ ಮೂರು ಹಂತದ ಭದ್ರತಾ ವ್ಯವಸ್ಥೆ ಜಾರಿಯಾಗಿದೆ. ಸ್ವಚ್ಛತೆ ಹಾಗೂ ಹೈಜೀನ್‌ನಲ್ಲಿ ವಿಮಾನ ನಿಲ್ದಾಣ ಮಟ್ಟದ ಮಾನದಂಡಗಳನ್ನು ಸಾಧಿಸಲಾಗಿದೆ. ದೇಶದಲ್ಲಿ ದಿನನಿತ್ಯ ಭಕ್ತರ ಆಗಮನದಲ್ಲಿ ಕಾಶಿ ವಿಶ್ವನಾಥ ಧಾಮ ಅಗ್ರಸ್ಥಾನದಲ್ಲಿದೆ ಎಂದು ತಿಳಿಸಿದರು. ಅಂದರೆ ಏಕಕಾಲಕ್ಕೆ 50 ಸಾವಿರ ಮಂದಿ ಆಗಮಿಸಬಹುದು. 300 ಸಿಸಿಟಿವಿಗಳ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಸಾಂಸ್ಕೃತಿಕ ವಿನಿಮಯಕ್ಕೆ ಹೊಸ ಆಯಾಮ: ತಮಿಳುನಾಡಿನ ರಾಮೇಶ್ವರಂನೊಂದಿಗೆ ತೀರ್ಥ ಜಲ ವಿನಿಮಯ ಯೋಜನೆ, ನವರಾತ್ರಿ ಉತ್ಸವಗಳಲ್ಲಿ ಕಾಶಿಯಲ್ಲಿರುವ 51 ಶಕ್ತಿಪೀಠಗಳಿಗೆ ದೇವಿಯರ ಅಲಂಕಾರಕ್ಕಾಗಿ ಶೃಂಗಾರ ವಸ್ತ್ರ ವಿತರಣೆ, ಶಿವರಾತ್ರಿಯಲ್ಲಿ ಜಾಗತಿಕ ದೇವಾಲಯಗಳೊಂದಿಗೆ ಸಾಂಸ್ಕೃತಿಕ ಸಂಪರ್ಕ? ಇವು ಧಾಮದ ವಿಶೇಷ ಕಾರ್ಯಗಳಾಗಿವೆ ಎಂಬ ಮಾಹಿತಿಯನ್ನೂ ಅವರು ನೀಡಿದರು.

ಹಣ ದುರ್ಬಳಕೆಯಾದರೆ ಹೋರಾಟ

ಪುಟ ೧➜ದುರ್ಬಳಕೆಗೆ ದಾರಿ ಮಾಡಿ ಕೊಡುತ್ತಿರುವ 7ಇ ಕಾಯ್ದೆ ರದ್ದುಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಲು ಸಭೆಯಲ್ಲಿ ಬೇಡಿಕೆ ಮಂಡಿಸಲಾಯಿತು. ಸುಮಾರು 60ಕ್ಕೂ ಹೆಚ್ಚು ಸಂಘಟನೆಗಳು ಈ ದುಂಡುಮೇಜಿನ ಸಭೆಯಲ್ಲಿ ಭಾಗವಹಿಸಿದ್ದು, ಎಸ್‌ಇಪಿ, ಟಿಎಸ್‌ಪಿ ಹಣ ದುರ್ಬಳಕೆ ಆಗುತ್ತಿದೆ ಎಂದು ತಮ್ಮದೇ ಅಭಿಪ್ರಾಯ ಮತ್ತು ಈ ಬಗ್ಗೆ ಹೋರಾಟದ ಕುರಿತು ಮಾತನಾಡಿದರು. ಸಭೆಯಲ್ಲಿ ಕೇಂದ್ರ ಮಾಜಿ ಸಚಿವ ಎ. ನಾರಾಯಣಸ್ವಾಮಿ, ನಿವೃತ್ತ ಐಎಎಸ್ ಅಧಿಕಾರಿ ಲಕ್ಷ್ಮೀನಾರಾಯಣ್ ಮತ್ತು ಪ್ರಮುಖರು ಉಪಸ್ಥಿತರಿದ್ದರು. ದುಂಡುಮೇಜಿನ ಸಭೆ ಉದ್ದೇಶಿಸಿ ಮಾತನಾಡಿದ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು, ಎಸ್‌ಇಪಿ, ಟಿಎಸ್‌ಪಿ ಹಣ 42 ಸಾವಿರ ಕೋಟಿ ಎಂದು ಜನರಿಗೆ ತೋರಿಸುತ್ತೀರಿ, ಇದರಲ್ಲಿ 34 ಇಲಾಖೆಗಳಿವೆ. 21 ಸಾವಿರ ಕೋಟಿ ಅವುಗಳಿಗೆ ಕೊಡುತ್ತೀರಿ. ಉಳಿದ 21 ಸಾವಿರ ಕೋಟಿಯಲ್ಲಿ 14 ಸಾವಿರ ಕೋಟಿಯನ್ನು ಗ್ಯಾರಂಟಿಗಳಿಗೆ ಬಳಸಿದರೆ ಉಳಿಯುವುದು 7 ಸಾವಿರ ಕೋಟಿ. ಅಂದರೆ ಪರಿಶಿಷ್ಟ ಜಾತಿ, ಪಂಗಡಕ್ಕೆ ಸಿಗುವ ಎಸ್‌ಇಪಿ, ಟಿಎಸ್‌ಪಿ ಹಣ ಕೇವಲ 7 ಸಾವಿರ ಕೋಟಿ ರೂ., ಆದರೆ, 42 ಸಾವಿರ ಕೋಟಿ ರೂ.ಎಂದು ಹೇಳಲಾಗುತ್ತಿದೆ ಎಂದು ಗಮನ ಸೆಳೆದರು.

ನಮ್ಮದು ಹಾಲು ಜೇನು ಬಂಧ: ಸಿಎಂ

ಪುಟ ೧➜ಆರೋಪ ಮಾಡಿರುವ ಒಬ್ಬರು ಮುಖ್ಯಮಂತ್ರಿಯಾಗಿದ್ದವರು, ಇನ್ನೊಬ್ಬರು ಉಪಮುಖ್ಯಮಂತ್ರಿ ಮತ್ತು ಗೃಹ ಸಚಿವರಾಗಿದ್ದವರು. ಅವರ ಕಾಲದಲ್ಲಿ ಕೂಡ ಗುಪ್ತಚರ ವಿಭಾಗ ಮುಖ್ಯಮಂತ್ರಿ ಬಳಿಯೇ ಇತ್ತು. ಅವರ ಹೇಳಿಕೆ ಗಮನಿಸಿದರೆ ಇವರಿಬ್ಬರೂ ತಮ್ಮ ಅನುಭವದ ಬಲದಿಂದಲೇ ಈ ಆರೋಪ ಮಾಡುತ್ತಿದ್ದಾರೆ ಎಂದರು. ಈ ರೀತಿ ಸುಳ್ಳು ಸುದ್ದಿಗಳನ್ನು ಹರಡಿ ನಮ್ಮಿಬ್ಬರ ಸಂಬಂಧ ಕೆಡಿಸಿ ಡಿ.ಕೆ. ಶಿವಕುಮಾರ್ ಅವರನ್ನು ಒಲಿಸಿಕೊಳ್ಳುವ ದುರಾಲೋಚನೆ ಏನಾದರೂ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಇದ್ದರೆ ಅವರ ಹಗಲುಗನಸುಗಳಿಗೆ ಶುಭ ಹಾರೈಸುತ್ತೇನೆ. ಶಿವಕುಮಾರ್ ಒಬ್ಬ ಕಟ್ಟಾ ಕಾಂಗ್ರೆಸಿಗ, ಸುಳ್ಳು ಕೇಸ್‌ಗಳನ್ನು ಹಾಕಿ, ಜೈಲಿಗೆ ಕಳಿಸಿ ಅವರನ್ನು ಮಣಿಸುವ ಎಲ್ಲ ಪ್ರಯತ್ನಗಳನ್ನು ಬಿಜೆಪಿ ಮಾಡಿಯಾಗಿದೆ. ಇದಕ್ಕೆಲ್ಲ ಮಣಿಯದೆ ಅವರು ಪಕ್ಷಕ್ಕೆ ನಿಷ್ಠರಾಗಿ ಉಳಿದವರು ಎನ್ನುವುದು ಈ ಕುತಂತ್ರಿ ನಾಯಕರಿಗೆ ತಿಳಿದಿರಲಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆನ್ನಿಗೆ ಚೂರಿ ಹಾಕುವ ಕುತಂತ್ರ: ಫೋನ್ ಕದ್ದಾಲಿಕೆ, ಗೂಢಚರ್ಯೆಗಳೆಲ್ಲ ಯಾವ ಪಕ್ಷದ ದುಷ್ಕೃತ್ಯಗಳು ಎನ್ನುವುದು ಅರಿವಾಗುತ್ತದೆ. ಈ ದುರ್ಬುದ್ಧಿಯ ಕಾರಣದಿಂದಾಗಿಯೇ ರಾಜ್ಯ ರಾಜಕೀಯದಲ್ಲಿ ಆಪರೇಷನ್ ಕಮಲ, ರೆಸಾರ್ಟ್ ರಾಜಕಾರಣ, ವಚನಭಂಗದಂತಹ ಅನಿಷ್ಟಗಳು ಕಾಣಿಸಿಕೊಂಡಿರುವುದು. 2004ರಿಂದ 2013ರವರೆಗಿನ 9 ವರ್ಷಗಳ ಅವಧಿಯಲ್ಲಿ ರಾಜ್ಯ 5 ಮುಖ್ಯಮಂತ್ರಿಗಳನ್ನು, 2018ರಿಂದ 2023ರ 5 ವರ್ಷಗಳ ಅವಧಿಯಲ್ಲಿ 3 ಮುಖ್ಯಮಂತ್ರಿಗಳನ್ನು ರಾಜ್ಯ ಕಾಣುವಂತಾಗಲು ಇವರೊಳಗಿನ ಪರಸ್ಪರ ಅಪನಂಬಿಕೆ, ದ್ವೇಷ, ಅಸೂಯೆ, ಬೆನ್ನಿಗೆ ಚೂರಿ ಹಾಕುವ ಕುತಂತ್ರಗಳೇ ಕಾರಣ ಎಂದು ಗುಡುಗಿದ್ದಾರೆ.

ಜಾಗತಿಕ ಇಂಧನ ಪೂರೈಕೆಯಲ್ಲಿ ಆತಂಕ

ಪುಟ ೧➜ಕೆಲವು ಹಡಗುಗಳು, ಆಫ್ರಿಕಾದ ಗುಡ್ ಹೋಪ್ ಭೂಶಿರದ ಮೂಲಕ ಸುತ್ತಿಬಳಸಿ ಪ್ರಯಾಣಿಸುತ್ತಿವೆ.

ಜಾಗತಿಕ ಪೂರೈಕೆಯ ಮೇಲೆ ಪರಿಣಾಮ: ಅಮೆರಿಕ ಮಧ್ಯಪ್ರಾಚ್ಯದ ತೈಲದ ಮೇಲೆ ಹೆಚ್ಚಿನ ಅವಲಂಬನೆ ಹೊಂದಿಲ್ಲದಿದ್ದರೂ, ಈ ಅಡಚಣೆ ವಿಶ್ವಾದ ಆರ್ಥಿಕತೆಗಳಿಗೆ ದೊಡ್ಡ ಹೊಡೆತ ನೀಡಲಿದೆ. ಏಕೆಂದರೆ ಈ ಜಲಸಂಧಿಯ ಮೂಲಕ ಸಾಗುವ ತೈಲದ ಶೇ.70 ರಷ್ಟು ಪಾಲನ್ನು ಏಷ್ಯಾದ ದೇಶಗಳೇ ಪಡೆಯುತ್ತವೆ. ಅಲ್ಲದೆ, ವಿಶ್ವದ ಶೇ.20 ರಷ್ಟು ಎಲ್‌ಎನ್‌ಜಿ ಮತ್ತು ಯುರೋಪಿನ ಶೇ.30 ರಷ್ಟು ಜೆಟ್ ಇಂಧನ ಪೂರೈಕೆಯೂ ಇದೇ ಮಾರ್ಗದ ಮೂಲಕ ನಡೆಯುತ್ತದೆ. ಈ ಪರಿಸ್ಥಿತಿ, ಜಾಗತಿಕ ಸರಬರಾಜು ಸರಪಳಿಯಲ್ಲಿ ದೀರ್ಘಕಾಲದ ವಿಳಂಬ ಮತ್ತು ಭಾರೀ ಹೆಚ್ಚುವರಿ ವೆಚ್ಚಗಳಿಗೆ ಕಾರಣವಾಗಿದೆ. ಸದ್ಯಕ್ಕಂತೂ ಈ ಪರಿಸ್ಥಿತಿ ಬದಲಾಗುವ ಯಾವುದೇ ಸೂಚನೆಗಳಿಲ್ಲ.

ಭಾರತದಲ್ಲಿದೆ ತೈಲ ಸಂಗ್ರಹ

ಪುಟ ೧➜**ಇದೇ ವೇಳೆ, ದೇಶದಲ್ಲಿ ಒಟ್ಟಾರೆಯಾಗಿ ಕಚ್ಚಾ ತೈಲ ಮತ್ತು ಇಂಧನ ಸಂಗ್ರಹ 25 ದಿನಗಳಿಗಾಗುವಷ್ಟಿದೆ. ಈ ಪೈಕಿ ತುರ್ತು ಯೋಜನೆಗಳು, ವ್ಯೂಹಾತ್ಮಕ ಪೆಟ್ರೋಲಿಯಂ ಮೀಸಲು, ವಾಣಿಜ್ಯ ಸಂಗ್ರಹಗಳು, ಅಮೆರಿಕ, ರಷ್ಯಾ, ಪಶ್ಚಿಮ ಆಫ್ರಿಕಾ, ಲ್ಯಾಟಿನ್ ಅಮೆರಿಕ ಸೇರಿದಂತೆ ವೈವಿಧ್ಯಮಯ ಮೂಲಗಳಿಂದಾಗಿ ಬಿಕ್ಕಟ್ಟು ದೀರ್ಘವಾದರೂ ತೈಲ ಪೂರೈಕೆ ಬಗ್ಗೆ ಆತಂಕಪಡಬೇಕಾಗಿಲ್ಲ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.**

ಗಲ್ಫ್‌ನ ಯುಎಸ್ ನೆಲೆ ಮೇಲೆ ದಾಳಿ

ಪುಟ ೧➜**ಹೆಚ್ಚುತ್ತಿರುವ ಭದ್ರತಾ ಬೆದರಿಕೆಗಳ ಹಿನ್ನೆಲೆಯಲ್ಲಿ, ಬಹ್ರೇನ್, ಕುವೈತ್, ಕತಾರ್ ಜೋರ್ಡಾನ್ ಮತ್ತು ಇರಾಕ್‌ನಲ್ಲಿರುವ ತನ್ನ ತುರ್ತು ರಹಿತ ಸಿಬ್ಬಂದಿ ಕೂಡಲೇ ದೇಶ ತೊರೆಯುವಂತೆ ಅಮೆರಿಕ ವಿದೇಶಾಂಗ ಇಲಾಖೆ ಆದೇಶಿಸಿದೆ.**

ಆಲಮಟ್ಟಿ ಎತ್ತರಕ್ಕೆ ಆಂಧ್ರ ಅಡ್ಡಗಾಲು: ಶಿವಕುಮಾರ್

• **ಬೆಂಗಳೂರು:** ಆಲಮಟ್ಟಿ ಅಣೆಕಟ್ಟೆಯ ಎತ್ತರ ಹೆಚ್ಚಿಸಲು ಆಂಧ್ರ ಸರ್ಕಾರ ಅಡ್ಡಗಾಲು ಹಾಕುತ್ತಿದೆ. ಈ ವಿಚಾರ ಸುಪ್ರೀಂಕೋರ್ಟ್‌ನಲ್ಲಿದೆ ಭೂಸ್ವಾಧೀನ ಮಾಡಬಾರದೆಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ. ಕೂಡಲೇ ಕೇಂದ್ರ ಮಧ್ಯ



ಪ್ರವೇಶಿಸಿ ಈ ಹಿಂದೆ ಆಗಿರುವ ಆದೇಶದದಂತೆ ನಡೆದುಕೊಳ್ಳಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಜಲಸಂಪನ್ಮೂಲ ಸಚಿವರೂ ಆಗಿರುವ ಶಿವಕುಮಾರ್ ಅವರು ಮಂಗಳವಾರ ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದರು. ಆಲಮಟ್ಟಿ ಅಣೆಕಟ್ಟೆಯ ಎತ್ತರ 519 ಮೀ.ನಿಂದ 524 ಮೀ.ಗೆ ಹೆಚ್ಚಿಸಲು ಅವಕಾಶ ನೀಡಬಾರದು ಮತ್ತು ಗೆಜೆಟ್ ನೋಟಿಫಿಕೇಶನ್ ಮಾಡಬಾರದು ಎಂದು ಆಂಧ್ರ ಸರ್ಕಾರವು ಕೇಂದ್ರಕ್ಕೆ ಪತ್ರ ಬರೆದಿದೆ. ಈ ಬಗ್ಗೆ ನಮ್ಮ ಪ್ರತಿಕ್ರಿಯೆ ಕೇಳಿ ಈ ತಿಂಗಳಲ್ಲಿ ಕೇಂದ್ರ ಸರ್ಕಾರ ಪತ್ರವನ್ನು ಕಳುಹಿಸಿಕೊಟ್ಟಿದೆ. ಇದನ್ನು ನಾನು ಪರಿಶೀಲನೆ ನಡೆಸಿದ್ದೇನೆ ಎಂದರು. ರಾಜ್ಯ ಸರ್ಕಾರ ಸಚಿವ ಸಂಪುಟ ಸಭೆಯ ಮೂಲಕ 1.33 ಲಕ್ಷ ಎಕರೆ ಭೂಮಿಯನ್ನು ಒಂದೇ ಬಾರಿಗೆ ಸ್ವಾಧೀನ ಪಡಿಸಿಕೊಳ್ಳಲು ತೀರ್ಮಾನಿಸಿದ್ದು, 70 ಸಾವಿರ ಕೋಟಿ ರೂ.ಗಳನ್ನು ಮೂರು ಹಂತದಲ್ಲಿ ನಿಗದಿ ಮಾಡಿಕೊಳ್ಳಲು ಹೊರಟಿದ್ದೆವು. ಎಕರೆಗೆ 35- 40 ಲಕ್ಷ ರೂ. ಪರಿಹಾರ ನಿಗದಿ ಮಾಡಿದ್ದೆವು. ಆದರೆ, ಭೂಸ್ವಾಧೀನವನ್ನು ಆಂಧ್ರ ಸರ್ಕಾರ ಪ್ರಶ್ನಿಸಿದೆ ಎಂದರು.

ಸಹಕರಿಸುತ್ತಿಲ್ಲ ಆಂಧ್ರ, ಸರ್ಕಾರ: ಕಳೆದ 12 ವರ್ಷದಿಂದ ಈ ವಿಚಾರವಾಗಿ ನೋಟಿಫಿಕೇಷನ್ ಮಾಡುವಂತೆ ಒತ್ತಡ ಹೇರುತ್ತಲೇ ಇದ್ದೇವೆ. ಈ ಬಗ್ಗೆ 2010ರ ಡಿ.30ರಂದು ತೀರ್ಮಾನವಾಗಿತ್ತು ಎಂದು ಹೇಳಿದರು.

ದುಬೈನಲ್ಲಿ ಸಿಲುಕಿದ ಕನ್ನಡಿಗರಿಗೆ ಧೈರ್ಯ ತುಂಬಿದ ವಿಜಯೇಂದ್ರ

ಬೆಂಗಳೂರು: ಅಮೆರಿಕ, ಇಸ್ರೇಲ್ - ಇರಾನ್ ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ದುಬೈನಲ್ಲಿ ಸಿಲುಕಿ ಆತಂಕದಲ್ಲಿ ಸಿಲುಕಿರುವ ಕನ್ನಡಿಗರ ಜೊತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಮಂಗಳವಾರ ಮಾತನಾಡಿ ಅವರಿಗೆ ಧೈರ್ಯ ತುಂಬಿದರು.



ಸಂಕಷ್ಟದಲ್ಲಿ ಸಿಲುಕಿದ ಕನ್ನಡಿಗರನ್ನು ತಕ್ಷಣ ಕರ್ನಾಟಕಕ್ಕೆ ಕರೆದು ಕೊಂಡು ಬರಲು ಕೇಂದ್ರ ಸರ್ಕಾರದ ಜತೆ ಮಾತನಾಡುವುದಾಗಿ ಅವರು ಭರವಸೆ ನೀಡಿದರು. ಪ್ರಶಸ್ತಿ ಪಡೆಯಲೆಂದು ಒಟ್ಟು 61 ಜನರ ತಂಡವು ತೆರಳಿದ್ದು, ದುಬೈಯಲ್ಲಿ ವಾಸ್ತವ್ಯ ಇರುವುದಾಗಿ ತಂಡದವರು ಹೇಳಿದರು. ಅರಸೀಕೆರೆಯ ಐದು ಜನರೂ ಇವರ ಜತೆಗೆ ಇರುವುದಾಗಿ ಹಾಗೂ ಹೋಟೆಲ್ ಒಂದರಲ್ಲಿ ತಂಗಿರುವುದಾಗಿ ಅವರು ಆತಂಕವನ್ನು ಹಂಚಿಕೊಂಡರು. ಇದೀಗ 7ನೇ ದಿನ ತಲುಪಿದೆ.

ಮಂಗಳವಾರ ರಾತ್ರಿ ಇದ್ದ ವಿಮಾನವೂ ರದ್ದಾಗಿದೆ ಎಂದು ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ವಿಜಯೇಂದ್ರ ಅವರು, ಪ್ರಧಾನಿ ಮೋದಿ ಅವರು ಇದರ ಸಂಬಂಧ ಆದ್ಯ ಗಮನ ಕೊಟ್ಟಿದ್ದಾರೆ. ಹಿಂದೆ ಉಕ್ರೇನ್‌ನಲ್ಲಿ ಇಂಥ ಸಮಸ್ಯೆ ಆದಾಗ ಕೇಂದ್ರ ಸರ್ಕಾರವು ಅದನ್ನು ಬಗೆಹರಿಸಿತ್ತು. ಅಲ್ಲಿ ಸಿಲುಕಿದ್ದವರನ್ನು ಕರೆದುಕೊಂಡು ಬರುವ ವ್ಯವಸ್ಥೆ ಮಾಡಲಾಗಿತ್ತು. ಈ ಯುದ್ಧ ಅಚಾನಕ್ ಆಗಿ ಆರಂಭವಾಗಿದೆ. ದಿಲ್ಲಿಯ ಸಂಬಂಧಿತರ ಜೊತೆ ನಾನು ಕೂಡ ಮಾತನಾಡುವೆ ಎಂದು ಧೈರ್ಯ ತುಂಬಿದರು. ತಂಡವು ಸುರಕ್ಷಿತವಾಗಿ ವಾಪಸ್ ಬರಲು ಕ್ರಮ ಕೈಗೊಳ್ಳುವಂತೆ ಕೇಂದ್ರವನ್ನು ಕೋರುವುದಾಗಿ ತಿಳಿಸಿದರು. ಆತಂಕಗೊಳ್ಳದಿರಿ; ನೀವೆಲ್ಲರೂ ಸುರಕ್ಷಿತವಾಗಿ ವಾಪಸ್ ಬರಲು ಕ್ರಮ ಕೈಗೊಳ್ಳಲು ಕೋರಲಿದ್ದೇನೆ ಎಂದು ಧೈರ್ಯ ಹೇಳಿದರು.

ದುಬೈನಲ್ಲಿ ಸುರಕ್ಷಿತವಾಗಿದ್ದೇವೆ: ತಪ್ಪು ಸಂದೇಶ ಬೇಡ

ರಬಕವಿ-ಬನಹಟ್ಟಿ: ದುಬೈದೊಳಗಿನ ಅಬುದಾಬಿ, ಬರ್ ದುಬೈ ಸೇರಿದಂತೆ ಬಹುತೇಕ ಕಡೆಗಳಲ್ಲಿ ಕಳೆದ ಸೋಮವಾರ ಬೆಳಗ್ಗೆ ನಂತರ ಮಧ್ಯಾಹ್ನದಿಂದ ಸಾಮಾನ್ಯ ಸ್ಥಿತಿಗೆ ಬಂದಿದ್ದು, ಎಲ್ಲ ಕಾರ್ಯವೂ ನಿರಂತರವಾಗಿ ನಡೆಯುತ್ತಿವೆಂದು ಬರ್ ದುಬೈನಲ್ಲಿ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿರುವ ಬನಹಟ್ಟಿಯ ಸಂಜೀವ ಮುನ್ನೋಳ್ಳಿ 'ಹೊಸ ದಿಗಂತ'ದೊಂದಿಗೆ ಮಾಹಿತಿ ಹಂಚಿಕೊಂಡರು.



ದಿನನಿತ್ಯದ ಕಾರ್ಯಗಳು ನಿರ್ವಹಣೆಯಾಗುತ್ತಿದ್ದು, ಎಲ್ಲವೂ ಶಾಂತವಾಗಿದೆ. ಕೆಲ ಮಾಧ್ಯಮಗಳು ತಪ್ಪು ಮಾಹಿತಿಗಳನ್ನು ನೀಡುತ್ತಿರುವುದರಿಂದ ಇಲ್ಲಿಯ ಭಾರತೀಯರಿಗೆ ಸುರಕ್ಷತೆ ಇದ್ದರೂ ಕುಟುಂಬಗಳಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಜಗತ್ತಿನ ಪ್ರಖ್ಯಾತ ಹೊಟೇಲ್ ಬುರ್ಜ್ ಅಲ್ ಅರಬ್ ಕಟ್ಟಡ ಸಮೀಪ ಬಾಂಬ್ ಬಿದ್ದಿದೆ ಎಂದು ಮಾಹಿತಿ ದೊರೆತಾಗ ನಾನು ಕೆಲಸ ನಿರ್ವಹಿಸುತ್ತಿರುವ 4 ಕಿ.ಮೀ. ಅಂತರದಲ್ಲಿ ಕಟ್ಟಡವಿದೆ. ಅದರ ಸಮೀಪವೇ ತೆರಳಿ ನೋಡಿದಾಗ ಎಲ್ಲಿಯೂ ಅಂತಹ ಘಟನೆಗಳು ನಡೆದಿಲ್ಲ. ಆದರೂ ದೊಡ್ಡ ಪ್ರಮಾಣದ ಹಾನಿಯಾಗಿದೆ ಎಂದು ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಪ್ರಸಾರ ಮಾಡುತ್ತಿದ್ದಾರೆಂದು ಬೇಸರ ಹೊರಹಾಕಿದರು. ಡ್ರೋನ್, ಮಿಸೈಲ್‌ಗಳು ಭಾನುವಾರ ಒಂದೆರೆಡು ಕಡೆಗಳಲ್ಲಿ ಸ್ಫೋಟಗೊಂಡ ವರದಿಯಾಗಿದ್ದು ಹೊರತು ಇನ್ನುಳಿದವುಗಳನ್ನು ಆಕಾಶದಲ್ಲಿಯೇ ಹಂತ-ಹಂತವಾಗಿ ಹೊಡೆದುರುಳಿಸಿದ್ದಾರೆ. ಮೋಡಗಳಂತೆ ಕಾಣುತ್ತಿರುವುದು ಸಾಮಾನ್ಯವಾಗಿತ್ತು. ಸೋಮವಾರ ನಾವಿರುವ ಮನೆ ಮೇಲೆಯೇ ಈ ರೀತಿಯ ದೃಶ್ಯ ಕಂಡಿದ್ದೇನೆಂದು ತಿಳಿಸಿದರು. ಬರ್ ದುಬೈನಲ್ಲಿ ಸದ್ಯ ಕೆಲಸ ಮಾಡುತ್ತಿರುವ ಕಟ್ಟಡದ ಮೇಲೆಯೂ ಈ ರೀತಿಯ ದೃಶ್ಯ ಕಂಡು ಬಂದಾಗ 1500 ಜನ ಕೆಲಸ ಮಾಡುತ್ತಿರುವ ಕಾರ್ಮಿಕರೆಲ್ಲರೂ ಬೇಸ್‌ಮೆಂಟ್ (ನೆಲಮಾಳಿಗೆ)ನಲ್ಲಿ ಕೂಡ್ರುವ ಪರಿಸ್ಥಿತಿ ಎದುರಾಯಿತು. ಎಲ್ಲವೂ ಶಾಂತವಾದ ಮೇಲೆ ಮಧ್ಯಾಹ್ನ ಹೊತ್ತು ಮನೆಗೆ ತೆರಳಿದೆವೆಂದು ಪ್ರತ್ಯಕ್ಷದರ್ಶಿ ಮುನ್ನೋಳ್ಳಿ ತಿಳಿಸಿದರು.

ಡಾ.ಕೆ.ಶಿವರಾಜ ಕುಟುಂಬ ನಿರಾಳ

ಸಿಂಧನೂರು: ಇರಾನ್ ಮತ್ತು ಇಸ್ರೇಲ್ ನಡುವೆ ನಡೆಯುತ್ತಿರುವ ಯುದ್ಧದ ಕಾರಣದಿಂದಾಗಿ ರದ್ದಾಗಿದ್ದ ವಿಮಾನ ಸೇವೆ ಪ್ರಾರಂಭವಾಗುವ ಸೂಚನೆ ಲಭಿಸಿದ್ದು, ನಗರದ ಸಹಾನ ಮಕ್ಕಳ ಆಸ್ಪತ್ರೆಯ ಖ್ಯಾತ ವೈದ್ಯ, ಡಾ.ಕೆ.ಶಿವರಾಜ ಮತ್ತು ಅವರ ಕುಟುಂಬ ಈಗ ನಿರಾಳವಾಗಿದೆ. ಕಾರಣ ಮಂಗಳವಾರ ರಾತ್ರಿ 9ಕ್ಕೆ ದುಬೈಯಿಂದ ವಿಮಾನ ನಿರ್ಗಮಿಸಲಿದ್ದು, ಮಾರ್ಚ್ 4ರ ಬೆಳಗಿನ ಜಾವ 3 ಗಂಟೆಗೆ ಬೆಂಗಳೂರಿಗೆ ಬರುವುದಾಗಿ ಕುಟುಂಬದ ಮೂಲಗಳಿಂದ ತಿಳಿದು ಬಂದಿದ್ದು, ಅವರ ಆಗಮನಕ್ಕಾಗಿ ಸಿಂಧನೂರು ಸೇರಿದಂತೆ ಜಿಲ್ಲೆಯ ಜನರು ಕಾಯಿತ್ತಿದ್ದಾರೆ.

ಮಹಾರಥೋತ್ಸವ



ಉತ್ತರ ಕರ್ನಾಟಕದ ಗಣಿನಾಡು ಜಿಲ್ಲೆಯ ದಕ್ಷಿಣ ಕಾಶಿ ಎಂದೇ ಹೆಸರಾದ ಐತಿಹಾಸಿಕ ಕುರುಗೋಡಲ್ಲಿ ಮಂಗಳವಾರ ಶ್ರೀ ದೊಡ್ಡಬಸವೇಶ್ವರ ಜಾತ್ರಾ ಮಹಾರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಕಿರುಸುದ್ದಿ

ಫೋನ್ ಕದ್ದಾಲಿಕೆ ತಪ್ಪು: ಶಾಸಕ ಟೆಂಗಿನಕಾಯಿ

ಹುಬ್ಬಳ್ಳಿ: ರಾಜ್ಯದ ಸರ್ಕಾರದ ಸಚಿವರ ಹಾಗೂ ಶಾಸಕರ ಫೋನ್ ಕದ್ದಾಲಿಕೆ ಯಾರೇ ಮಾಡಿದರೂ ಅದು ತಪ್ಪು. ಸರ್ಕಾರವೇ ಈ ರೀತಿ ಮಾಡುತ್ತಿರುವುದು ಸರಿಯಲ್ಲ ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು. ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ವಿರೋಧ ಪಕ್ಷದ ನಾಯಕ ಆರ್.ಅಶೋಕ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಒಬ್ಬ ವ್ಯಕ್ತಿಯ ವೈಯಕ್ತಿಕ ಮಾಹಿತಿ ಕದ್ದಾಲಿಸು ವುದು ಸರಿಯಲ್ಲ. ಕಾಂಗ್ರೆಸ್‌ನಲ್ಲಿ ಎರಡು ಮೂರು ಬಣಗಳಿ ದಿದ್ದರಿಂದ ಇಂತಹ ಕೃತ್ಯಗಳು ನಡೆಯುತ್ತಿವೆ ಎಂದರು. ಹು-ಧಾ ಮಹಾನಗರ ಪಾಲಿಕೆ ಪ್ರತ್ಯೇಕ ಮಾಡುವುದು ನನಗೆ ಮೊದಲಿನಿಂದಲೂ ಒಪ್ಪಿಗೆ ಇರಲಿಲ್ಲ. ಶಾಸಕ ಅರವಿಂದ ಬೆಲ್ಲದ ಅವರು ಅಭಿವೃದ್ಧಿ ದೃಷ್ಟಿಯಿಂದ ಈಗ ಪ್ರತ್ಯೇಕ ಪಾಲಿಕೆ ಬೇಡಾ ಎಂದು ಹೇಳಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ಸಿಗೆ ರಾಜಕೀಯ ಹಿತಾಸಕ್ತಿ ಮುಖ್ಯ: ಸಿ.ಟಿ. ರವಿ

ಬೆಂಗಳೂರು: ಕಾಂಗ್ರೆಸ್ಸಿಗೆ ರಾಷ್ಟ್ರದ ಹಿತಾಸಕ್ತಿಗಿಂತ ರಾಜಕೀಯ ಹಿತಾಸಕ್ತಿ ಮುಖ್ಯ. ಯುದ್ಧದ ವಾತಾವರಣ, ಭಾರತದ ನಿಲುವಿಗೆ ಕಾಂಗ್ರೆಸ್ಸಿನವರು, ಪ್ರತಿಪಕ್ಷಗಳು ಆಕ್ಷೇಪ ವ್ಯಕ್ತಪಡಿಸುತ್ತಿವೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಆಕ್ಷೇಪಿಸಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಂಗಳವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಭಾರತ ಒಂದು ರಾಷ್ಟ್ರವಾಗಿ ರಾಷ್ಟ್ರದ ರಕ್ಷಣೆ ವಿಚಾರದಲ್ಲಿ ರಾಷ್ಟ್ರದ ಹಿತಾಸಕ್ತಿಯನ್ನು ಆಧರಿಸಿ ಸಾಂದರ್ಭಿಕ ನಿಲುವು ತೆಗೆದುಕೊಳ್ಳುತ್ತದೆ. ಅಲಿಪ್ತ ನೀತಿ ಎಂಬುದು ಒಂದು ಕಾಲದಲ್ಲಿ ಭಾರತ ತಾತ್ಕಾಲಿಕವಾಗಿ ಅಳವಡಿಸಿಕೊಂಡ ನೀತಿಯಾಗಿತ್ತು. ಆದರೆ, ಕಾಂಗ್ರೆಸ್ಸಿಗೆ ರಾಷ್ಟ್ರದ ಹಿತಾಸಕ್ತಿಗಿಂತ ರಾಜಕೀಯ ಹಿತಾಸಕ್ತಿ ಮುಖ್ಯ ಎಂದು ಟೀಕಿಸಿದರು. ಕಾಂಗ್ರೆಸ್ಸಿಗೆ ಏನು? ಕಳ್ಳನೋ, ಸುಳ್ಳನೋ ತಮ್ಮ ಮತಬ್ಯಾಂಕನ್ನು ರಕ್ಷಿಸಿಕೊಳ್ಳಬೇಕು. ಭಯೋತ್ಪಾದಕ ಆಗಿದ್ದರೂ ಪರವಾಗಿಲ್ಲ. ಅವನ ಬಗ್ಗೆ ಕರುಣೆ ತೋರಿಸಬೇಕು ಎಂಬ ನಿಲುವು. ಬಿಜೆಪಿ ಆ ನಿಲುವನ್ನು ಹೊಂದಿಲ್ಲ. ರಾಷ್ಟ್ರದ ವಿಷಯದಲ್ಲಿ ಕಾಂಗ್ರೆಸ್ಸಿನದು ಒಂದು ನಿಲುವು, ಕಮ್ಯುನಿಸ್ಟರದು ಒಂದು ನಿಲುವು, ಮುಸ್ಲಿಮರದು ಒಂದು ನಿಲುವು ಇರಬಾರದು ಎಂದು ತಿಳಿಸಿದರು. ಇನ್ನೊಂದು ಪ್ರಶ್ನೆಗೆ ಉತ್ತರಿಸಿದ ಅವರು, 4ನೇ ತಾರೀಕಿನ ಬಳಿಕ ಅಂದರೆ ನಾಳೆಯ ನಂತರ ವಾತಾವರಣ ತಿಳಿ ಆಗಬಹುದೆಂಬ ಭಾವನೆ ಇದೆ. ಈಗಾಗಲೇ ಅಬುಧಾಬಿ, ದುಬೈಯಿಂದ ಎರಡು ವಿಮಾನಗಳು ಬೆಂಗಳೂರಿಗೆ ಬಂದಿವೆ. ವಾತಾವರಣ ನಿಧಾನಕ್ಕೆ ತಿಳಿ ಆಗುತ್ತಿದೆ. ಯಾರೂ ಆತಂಕ ಪಡಬೇಕಾದ ಅಗತ್ಯವಿಲ್ಲ ಎಂದರು.

ಉಳ್ಳಾಲ ಮಸೀದಿ ಬಳಿ ಬಾಂಬ್ ಸ್ಫೋಟ ಬೆದರಿಕೆ : ಆರೋಪಿ ಸೆರೆ

ಉಳ್ಳಾಲ: ಉಳ್ಳಾಲದ ಮಸೀದಿ ಬಳಿ ಬಾಂಬ್ ಸ್ಫೋಟಿಸುತ್ತೇನೆಂದು ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಸಂದೇಶ ರವಾನಿಸಿದ್ದ ಕಿಡಿಗೇಡಿಯನ್ನು ಉಳ್ಳಾಲ ಪೊಲೀಸರು ಬಂಧಿಸಿದ್ದಾರೆ. ಉತ್ತರ ಕನ್ನಡದ ಭಟ್ಕಳ, ದೇವಿನಗರ, ಜಾಲಿ ನಿವಾಸಿ ಶಂಕರ್ ಮಸ್ತಪ್ಪ ಮೊಗೇರ್ (35) ಬಂಧಿತ ಆರೋಪಿಯಾಗಿದ್ದಾನೆ. ಬಜ್ಪೆಯಲ್ಲಿ ಕಳೆದ ವರ್ಷ ದುಷ್ಕರ್ಮಿಗಳಿಂದಬರ್ಬರವಾಗಿ ಹತ್ಯೆಗೀಡಾಗಿದ್ದ ಸುಹಾಸ್ ಶೆಟ್ಟಿಯ ಭಾವ ಚಿತ್ರವುಳ್ಳ ಇನ್ಸ್ಟಾ ಪೋಸ್ಟ್ ಒಂದರಲ್ಲಿ ಬಂಧಿತ ಆರೋಪಿ ಶಂಕರ್ ಎಂಬಾತ shankar11916 ಎಂಬ ಇನ್ಸ್ಟಾ ಖಾತೆಯಿಂದ 'ಸಪೋರ್ಟ್ ಮಾಡಿ ಬ್ರೋ ಉಳ್ಳಾಲ ಮಸ್ಜಿದ್ ಹತ್ರ ಬಾಂಬ್ ಬ್ಲಾಸ್ಟ್ ಮಾಡ್ತೀನಿ' ಎಂಬ ಪ್ರಚೋದನಕಾರಿ ಸಂದೇಶವನ್ನು ಹಾಕಿದ್ದ.



ಎಚ್‌ಡಿ ಕುಮಾರಸ್ವಾಮಿ ವಿರುದ್ಧ ಸಂಪುಟ ಸದಸ್ಯರಿಂದ ವಾಗ್ದಾಳಿ

ಫೋನ್ ಕದ್ದಾಲಿಕೆ ಪ್ರತಿಧ್ವನಿ

ಬೆಂಗಳೂರು: ರಾಜ್ಯದಲ್ಲಿ ಮತ್ತೊಮ್ಮೆ ಫೋನ್ ಟ್ಯಾಪಿಂಗ್ ವಿಚಾರ ಪ್ರತಿಧ್ವನಿಸಿದೆ. ಕೇಂದ್ರ ಸಚಿವ ಕುಮಾರಸ್ವಾಮಿ ಅವರು ರಾಜ್ಯದಲ್ಲಿ ಖುರ್ಚಿ ಉಳಿಸಿಕೊಳ್ಳಲು ಫೋನ್ ಟ್ಯಾಪಿಂಗ್ ನಡೆಯುತ್ತಿರಬಹುದು ಎಂದು ಹೇಳಿಕೆ ನೀಡಿದ ಬೆನ್ನಲ್ಲೇ, ಸಿಎಂ ಸೇರಿದಂತೆ ಸಂಪುಟ ಸದಸ್ಯರು ಎಚ್‌ಡಿಕೆ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.



ಈ ಕುರಿತು ಮಾತನಾಡಿದ ಗೃಹ ಸಚಿವ ಪರಮೇಶ್ವರ್, ಸರ್ಕಾರ ನಡೆಸುವವರು ನಾವು. ನಮಗೆ ಹೆಚ್ಚಿನ ಮಾಹಿತಿ ಇರುತ್ತೆ, ಅವರಿಗಲ್ಲ. ವಿಪಕ್ಷದವರಿಗೆ ಯಾರು ಹೇಳಿದ್ದು. ರಾಜ್ಯದಲ್ಲಿ ಗೂಢಚಾರಿಕೆ, ಫೋನ್ ಟ್ಯಾಪಿಂಗ್ ಮಾಡುತ್ತಿದ್ದಾರೆ ಅಂತ? ಅಂತಹ ಯಾವುದೇ ಬೆಳವಣಿಗೆಗಳು ನಡೆಯುತ್ತಿಲ್ಲ. ಮುಖ್ಯಮಂತ್ರಿಗಳ ಗಮನಕ್ಕೂ ಅಂತದ್ದು ಬಂದಿಲ್ಲ. ಪೊಲಿಟಿಕಲ್ ಇಂಟಲಿಜೆನ್ಸ್ ಪ್ರತ್ಯೇಕ ವಿಭಾಗವಿದೆ. ಅದರ ಮೂಲಕ ಮುಖ್ಯಮಂತ್ರಿಗಳಿಗೆ ಮಾಹಿತಿ ಹೋಗುತ್ತದೆ ಎಂದರು.

ಫೋನ್ ಟ್ಯಾಪಿಂಗ್ ಮಾಡುವುದಿಲ್ಲ. ಯಾರು ಯಾರು ಎಲ್ಲಿ ಹೋದರು ಅಂತ ಮಾಡುವುದಿಲ್ಲ. ಪೊಲಿಟಿಕಲ್ ಇಂಟಲಿಜೆನ್ಸ್ ವಿಭಾಗ ಇದೆ. ಇದು ಹಿಂದಿನಿಂದಲೂ ಮುಖ್ಯಮಂತ್ರಿಗಳಿಗೆ ಮಾಹಿತಿ ಹೋಗುತ್ತದೆ. ಯಾವ ಮಾಹಿತಿಬೇಕು ಎನ್ನುವುದನ್ನು ಸಿಎಂ ಪಡೆಯಬಹುದು. ಅದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿದ್ದು ಎಂದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, ಫೋನ್ ಟ್ಯಾಪಿಂಗ್ ಮಾಡಿ ಏನು ಮಾಡಲು ಸಾಧ್ಯ, ಬೇಕಾದರೆ ನನ್ನ ಫೋನನ್ನೇ ಟ್ಯಾಪ್ ಮಾಡಿ ಎಂದು ಸವಾಲು ಹಾಕಿದರು. ರಾಜ್ಯ ಸರ್ಕಾರ ಫೋನ್ ಟ್ಯಾಪಿಂಗ್ ಮಾಡುತ್ತಿಲ್ಲ. ಕೇಂದ್ರದವರು ಟ್ಯಾಪಿಂಗ್ ಮಾಡುತ್ತಿರಬಹುದು. ನಮ್ಮ ಸರ್ಕಾರಕ್ಕಂತೂ ಅದರ ಅವಶ್ಯಕತೆ ಇಲ್ಲ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಸಿಎಂಗೆ ಕುಮಾರಸ್ವಾಮಿ ತಿರುಗೇಟು

ಫೋನ್ ಕದ್ದಾಲಿಕೆ ಬಗ್ಗೆ ತಮ್ಮ ಹೇಳಿಕೆಯನ್ನು ಗ್ರಹಿಸದೆ ತಮ್ಮ ಮೇಲೆ ವಿನಾಕಾರಣ ಆರೋಪ ಮಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.



ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ನಾನು ಎರಡು ಸಲವೂ ಅಧಿಕಾರ ಕಳೆದುಕೊಂಡವನು. ಇತಿಹಾಸ ಎಂದಿಗೂ ಮೌನವಾಗಿರುವುದಿಲ್ಲ ಎಂಬುದು ನಿಮಗೂ ಗೊತ್ತಿರಲಿ. ನೀವೂ ಚರಿತ್ರೆಯಿಂದ ಪಾರಾಗಲು ಆಗದು ಸಿದ್ದರಾಮಯ್ಯನವರೇ? ನಾನು ಫೋನ್ ಕದ್ದಾಲಿಕೆ ಮಾಡಿದ್ದಿದ್ದರೆ ಹೇಗಾದರೂ ಸರಿ, ಅಧಿಕಾರ ಉಳಿಸಿಕೊಳ್ಳುತ್ತಿದ್ದೆ. ಹಾಗೆ ಮಾಡಿದ್ದಿದ್ದರೆ ಸಿದ್ದವನದಲ್ಲಿ ಕೂತು ಯಾವ ಕಚ್ಚೆಕ್ಕು ಕರಾಮತ್ತು ನಡೆಸಿತು ಎನ್ನುವುದನ್ನು ಪತ್ತೆ ಹಚ್ಚುತ್ತಿದ್ದೆ. ಅದು ನನಗೆ ಬೇಕಿರಲಿಲ್ಲ, ಕಳೆದುಕೊಂಡಿದ್ದರ ಬಗ್ಗೆಯೂ ನನಗೆ ಚಿಂತೆ ಇಲ್ಲ. ಆದರೆ, ಆ ಪಾಪಪ್ರಜ್ಞೆ ನಿಮ್ಮನ್ನು ಕಾಡುತ್ತಿದೆ, ಸದಾ ನೆರಳಿನಂತೆ! ಕದ್ದಾಲಿಕೆ ನನ್ನ ಗುಣವಲ್ಲ, ಅದೇನಿದ್ದರೂ ಕಾಂಗ್ರೆಸ್ ಪಕ್ಷದ್ದೇ ಆವಿಷ್ಕಾರ! ಅದೇ ನಿಮಗೆ ಬಂದಿರುವ ಸಂಸ್ಕಾರ!! ಎಂದು ಕೇಂದ್ರ ಸಚಿವರು ಮುಖ್ಯಮಂತ್ರಿ ಮೇಲೆ ಹರಿಹಾಯ್ದಿದ್ದಾರೆ. ಈ ನಡುವೆ ನೀವು ಬಹಳ ಪುರುಸೊತ್ತಾಗಿದ್ದೀರಿ ಎಂದು ಭಾವಿಸಿದ್ದೇನೆ. ಕೆಲಸ ಮಾಡುವುದು ಬಿಟ್ಟು ಕೌಂಟರ್ ಕೊಡುವುದರಲ್ಲಿ ಹೆಚ್ಚು ಬ್ಯುಸಿಯಾಗಿದ್ದೀರಿ! ಕುಂಬಳಕಾಯಿ ಕಳ್ಳ ಎಂದರೆ ನಾನೇ.. ನಾನೇ.. ಹೆಗಲು ಮುಟ್ಟಿ ನೋಡಿಕೊಂಡರೆ ನಾನೇನು ಮಾಡಲಿ? ಫೋನ್ ಕದ್ದಾಲಿಕೆ ಬಗ್ಗೆ ಮಾಧ್ಯಮಗಳೇ ಮಾತನಾಡುತ್ತಿವೆ. ಆ ಬಗ್ಗೆ ನಾನು ಪ್ರತಿಕ್ರಿಯಿಸಿದ್ದೇನೆ, ಅಷ್ಟೇ. ಮುಖ್ಯಮಂತ್ರಿಗಳೇ, ನಿಮ್ಮ ಪುಂಖಾನುಪುಂಖ ಪುರಾಣ ನೋಡಿದರೆ ನಿಮಗೆ ಆಡಳಿತಕ್ಕಿಂತ ಮತ್ತೊಬ್ಬರನ್ನು ಆಡಿಕೊಳ್ಳುವುದರಲ್ಲೇ ಹೆಚ್ಚು ಮುತುವರ್ಜಿ, ಆಸಕ್ತಿ ಇದ್ದಂತಿದೆ ಎಂದು ಟಾಂಗ್ ನೀಡಿದ್ದಾರೆ.

> ಫೋನ್ ಟ್ಯಾಪಿಂಗ್ ನೂರಕ್ಕೆ ನೂರರಷ್ಟು ಸಾಧ್ಯವಿಲ್ಲ. ಈಗ ನ್ಯಾಯಾಲಯ, ಕಾನೂನು ಇದೆ. ಯಾರೂ ಬೇಕಾದರೂ ಕಾನೂನು ಮೊರೆ ಹೋಗಬಹುದು
> ■ ಮಧು ಬಂಗಾರಪ್ಪ, ಶಿಕ್ಷಣ ಸಚಿವ

ರಾಜ್ಯಾದ್ಯಂತ ಮಾ.6ಕ್ಕೆ ಗುತ್ತಿಗೆದಾರರ ಮುಷ್ಕರ

ಬೆಂಗಳೂರು: ರಾಜ್ಯ ಸರ್ಕಾರದಿಂದ ಬರಬೇಕಿರುವ ಸಾವಿರಾರು ಕೋಟಿ ರೂಪಾಯಿ ಬಾಕಿ ಬಿಲ್ ಪಾವತಿಗೆ ಒತ್ತಾಯಿಸಿ ಮಾರ್ಚ್ 6ರಂದು ರಾಜ್ಯಾದ್ಯಂತ ಸಾಂಕೇತಿಕ ಮುಷ್ಕರ ನಡೆಸಲು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಹಾಗೂ ಬೃಹತ್ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಗುತ್ತಿಗೆದಾರರ ಸಂಘ ನಿರ್ಧರಿಸಿದೆ.

ವಿಜಯನಗರ ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಆರ್. ಮಂಜುನಾಥ್ ಮಾತನಾಡಿ, ಪೂರ್ವಭಾವಿ ಸಭೆಯಲ್ಲಿ ಮುಷ್ಕರ ನಡೆಸುವ ನಿರ್ಧಾರ ಕೈಗೊಳ್ಳಲಾಗಿದ್ದು, ಅಂದು ಜಿಬಿಎ ಜಲಮಂಡಳಿ ಹಾಗೂ ಲೋಕೋಪಯೋಗಿ ಇಲಾಖೆಯ ಎಲ್ಲಾ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ತೀರ್ಮಾನಿಸಲಾಗಿದೆ. ಮಾರ್ಚ್‌ನಲ್ಲಿ ಸರ್ಕಾರ ಸ್ಪಂದಿಸದಿದ್ದರೆ, ಏಪ್ರಿಲ್ ತಿಂಗಳಿನಿಂದ ಅನಿರ್ದಿಷ್ಟಾವಧಿ ಮುಷ್ಕರ ಹಾಗೂ ಮುಖ್ಯಮಂತ್ರಿಗಳ ಕ್ಷೇತ್ರದಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಲು ಸಂಘ ನಿರ್ಧರಿಸಿದೆ. ಮಾ.6 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸುಮಾರು 15 ರಿಂದ 20 ಸಾವಿರ ಗುತ್ತಿಗೆದಾರರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ.ರಾಜ್ಯದ ಬೇರೆಡೆಯು ಸಹ ಸಾಂಕೇತಿಕ ಹೋರಾಟ ನಡೆಯಲಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ, ಅಧಿಕಾರಿಗಳು ಸಭೆಗಳನ್ನು ಮುಂದೂಡುತ್ತಾ ಕಾಲಹರಣ ಮಾಡುತ್ತಿದ್ದಾರೆ.

ಕಮಿಷನ್ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳ ವಿರುದ್ಧ ಗುತ್ತಿಗೆದಾರರು ಆಕ್ರೋಶ ಹೊರ ಹಾಕಿದ್ದಾರೆ. ಬಿಜೆಪಿ ಕಾಲಕ್ಕಿಂತಲೂ ಈಗ ಕಮಿಷನ್ ದಂಧೆ ಹೆಚ್ಚಾಗಿದೆ ಎಂದು ಗುತ್ತಿಗೆದಾರರ ಸಂಘ ಆರೋಪಿಸಿದೆ.

ಕಮಿಷನ್ ದಂಧೆ ಹೆಚ್ಚು: ಮಂಜುನಾಥ್

ಜಿಬಿಎಯೊಂದರಲ್ಲೇ 1,600 ಕೋಟಿ ರೂ. ಬಾಕಿ ಇದ್ದು, ರಾಜ್ಯಾದ್ಯಂತ ವಿವಿಧ ಇಲಾಖೆಗಳಿಂದ ಒಟ್ಟು 37,000 ಕೋಟಿ ರೂ. ಮೊತ್ತದ ಬಿಲ್‌ಗಳು ಪೆಂಡಿಂಗ್ ಇವೆ. ಕಳೆದ ಮೂರು ವರ್ಷಗಳಿಂದ ಹಣ ಬಿಡುಗಡೆಯಾಗದ ಕಾರಣ ಅನೇಕ ಗುತ್ತಿಗೆದಾರರು ದಿವಾಳಿಯಾಗಿದ್ದಾರೆ, ಕೆಲವರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಪ್ಯಾಕೇಜ್ ಟೆಂಡರ್ ಮೂಲಕ ಅವ್ಯವಹಾರ ನಡೆಯುತ್ತಿದೆ. ಶಾಸಕರು ತಮ್ಮ ಸಂಬಂಧಿಕರ ಹೆಸರಲ್ಲಿ ಕಾಮಗಾರಿ ಪಡೆದು ಕಮಿಷನ್ ದಂಧೆಯಲ್ಲಿ ತೊಡಗಿದ್ದಾರೆ ಎಂದು ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಸಿಎಂ ಕ್ಷೇತ್ರದಿಂದ ಬೆಂಗಳೂರಿಗೆ ಪಾದಯಾತ್ರೆಗೆ ನಿರ್ಧಾರ

ಒಳ ಮೀಸಲಾತಿ ಜಾರಿಗಾಗಿ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ

ಚಿತ್ರದುರ್ಗ: ಒಳ ಮೀಸಲಾತಿ ಜಾರಿ ಮಾಡುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಮಾದಿಗ ಸಮುದಾಯದ ವತಿಯಿಂದ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಮಂಗಳವಾರ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು.



ಜಿಲ್ಲಾ ಕಾಂಗ್ರೆಸ್ ಕಚೇರಿ ಎದುರು ಜಮಾಯಿಸಿದ ಮಾದಿಗ ಸಮುದಾಯದ ಅನೇಕ ಮುಖಂಡರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಸ್ಥ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಪರಮೇಶ್ವರ್, ಸಚಿವ ಹೆಚ್.ಸಿ.ಮಹದೇವಪ್ಪ ಅವರ ಭಾವಚಿತ್ರಗಳನ್ನು ಹರಿದು ಬೆಂಕಿ ಹಚ್ಚಿದರು. ಒಳ ಮೀಸಲಾತಿ ಜಾರಿ ಮಾಡಲು ನ್ಯಾಯಾಲಯ ಆಯಾ ರಾಜ್ಯಗಳಿಗೆ ಅಧಿಕಾರ ನೀಡಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಆಯೋಗ ರಚನೆ ಮಾಡುವ ನಾಟಕ ಮಾಡಿತು. ಆಯೋಗದಿಂದ ವರದಿ ಪಡೆದು ಬಹಳ ದಿನಗಳು ಕಳೆದರೂ ಒಳ ಮೀಸಲಾತಿ ಜಾರಿ ಮಾಡುವಲ್ಲಿ ಮೀನಮೇಷ ಎಣಿಸುತ್ತಿದೆ. ಆಯೋಗ ವರದಿ ನೀಡಿದರೂ ಅದನ್ನು ಜಾರಿ ಮಾಡದೆ ಕಾಂಗ್ರೆಸ್ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ ಎಂದು ಸಮಾಜದ ಮುಖಂಡರು ಕಿಡಿಕಾರಿದರು.

ಉದ್ಯೋಗದಲ್ಲಿ ಮಾದಿಗ ಸಮುದಾಯಕ್ಕೆ ಅನ್ಯಾಯ

ಕರ್ನಾಟಕ ಸರ್ಕಾರ 56432 ಹುದ್ದೆಗಳ ಭರ್ತಿಗೆ ಮುಂದಿನ 30 ದಿನಗಳಲ್ಲಿ ಪ್ರಕ್ರಿಯೆ ಆರಂಭಿಸುವುದಾಗಿ ಪ್ರಕಟಿಸಿದೆ. ಆದರೆ ರಾಜ್ಯದಲ್ಲಿ ಒಳ ಮೀಸಲಾತಿ ಜಾರಿ ಮಾಡದ ಹೊರತು ಈ ಹುದ್ದೆಗಳನ್ನು ಭರ್ತಿ ಮಾಡಬಾರದು. ಒಳ ಮೀಸಲಾತಿ ಜಾರಿ ಮಾಡದೆ ಈ ಹುದ್ದೆಗಳನ್ನು ಭರ್ತಿ ಮಾಡಿದರೆ ಮಾದಿಗ ಸಮುದಾಯಕ್ಕೆ ಅನ್ಯಾಯವಾಗುತ್ತದೆ. ಸಾವಿರಾರು ಯುವ ಜನರು ಉದ್ಯೋಗ ಪಡೆಯುವಲ್ಲಿ ವಂಚಿತರಾಗುತ್ತಾರೆ ಎಂದು ದೂರಿದರು. ರಾಜ್ಯದಲ್ಲಿ ಒಳ ಮೀಸಲಾತಿ ಜಾರಿಯಾಗುವವರೆಗೂ ಹುದ್ದೆಗಳನ್ನು ಭರ್ತಿ ಮಾಡುವುದನ್ನು ತಡೆ ಹಿಡಿಯಬೇಕು. ತಪ್ಪಿದಲ್ಲಿ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲೆಗಳ ನ್ಯಾಯಾಲಯದ ಆವರಣದಲ್ಲಿ ಶ್ವಾನ ದಳದ ಜತೆ ಪೊಲೀಸ್ ತಂಡ ತೀವ್ರ ಶೋಧ

ರಾಜ್ಯದ ವಿವಿಧೆಡೆ ಬಾಂಬ್ ಬೆದರಿಕೆ

ಕಲಬುರಗಿ/ಬೆಳಗಾವಿ/ ಹಾಸನ: ರಾಜ್ಯ ಹಲವೆಡೆ ಜಿಲ್ಲಾ ನ್ಯಾಯಾಲಯಗಳಿಗೆ ಮಂಗಳವಾರ ಬಾಂಬ್ ಬೆದರಿಕೆ ಇಮೇಲ್ ಕಳುಹಿಸಲಾಗಿದ್ದು, ಕೆಲಕಾಲ ಆತಂಕ ಸೃಷ್ಟಿಸಿತ್ತು. ತಕ್ಷಣವೇ ಕೋರ್ಟ್‌ಗಳ ಆವರಣದಲ್ಲಿ ಎಲ್ಲರನ್ನೂ ಸ್ಥಳಾಂತರಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಕಲಬುರಗಿ, ಹಾಸನ ಮತ್ತು ಬೆಳಗಾವಿ ಸೇರಿದಂತೆ ಆಯಾ ಜಿಲ್ಲಾ ನ್ಯಾಯಾಲಯಗಳ ಅಧಿಕೃತ ಐಡಿಗಳಲ್ಲಿ ಇಮೇಲ್ ಸ್ವೀಕರಿಸಿದ ಕೂಡಲೇ ಮುನ್ನೆಚ್ಚರಿಕೆ ಕ್ರಮವಾಗಿ ವಕೀಲರು, ದಾವೆ ಹೂಡುವವರು ಮತ್ತು ನ್ಯಾಯಾಲಯದ ಸಿಬ್ಬಂದಿಯನ್ನು ನ್ಯಾಯಾಲಯ ಸಂಕೀರ್ಣಗಳಿಂದ ಹೊರಗೆ ಕರೆದೊಯ್ಯಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಬಾಂಬ್ ಪತ್ತೆ ಹಾಗೂ ವಿಲೇವಾರಿ ದಳ, ಶ್ವಾನ ದಳದ ಜೊತೆಗೆ ಪೊಲೀಸ್ ತಂಡಗಳು ಎಲ್ಲಾ ಜಿಲ್ಲೆಗಳ ನ್ಯಾಯಾಲಯದ ಆವರಣದಲ್ಲಿ ತೀವ್ರ ಶೋಧ ನಡೆಸಿದವು. ಆದರೆ, ಶೋಧದ ಸಮಯದಲ್ಲಿ ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡುಬಂದಿಲ್ಲ ಎಂದು ಅವರು ಹೇಳಿದರು.

ಕಲಬುರಗಿಯಲ್ಲಿ ತೀವ್ರ ತಪಾಸಣೆ: ಸ್ಥಳಕ್ಕೆ ಕಲಬುರಗಿ ನಗರ ಪೊಲೀಸ್ ಅಧಿಕಾರಿಗಳು, ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದ ಸಿಬ್ಬಂದಿ ದೌಡಾಯಿಸಿ ನ್ಯಾಯಾಲಯ ಆವರಣದಲ್ಲಿ ತೀವ್ರ ಶೋಧ ಕಾರ್ಯಾಚರಣೆ ನಡೆಸಿದರು. ಪ್ರತಿ



ಕೊಠಡಿ, ದಾಖಲೆ ವಿಭಾಗ ಮತ್ತು ವಾಹನ ನಿಲ್ದಾಣ ಪ್ರದೇಶಗಳಲ್ಲಿ ಪರಿಶೀಲನೆ ಕೈಗೊಳ್ಳಲಾಗಿದೆ. ಪೊಲೀಸರು ನಡೆಸಿದ ಪ್ರಾಥಮಿಕ ತಪಾಸಣೆಯಲ್ಲಿ ಯಾವುದೇ ಸ್ಫೋಟಕ ವಸ್ತು ಪತ್ತೆಯಾಗಿಲ್ಲ ಎಂದು ಮೂಲಗಳು ತಿಳಿಸಿವೆ. ಇದರಿಂದ ಬೆದರಿಕೆ ಹುಸಿಯಾಗಿದೆ ಎನ್ನುವ ಶಂಕೆ ವ್ಯಕ್ತವಾಗಿದೆ. ಆದರೆ, ಎಚ್ಚರಿಕೆಯ ಕ್ರಮವಾಗಿ ಸಂಪೂರ್ಣ ಕಟ್ಟಡವನ್ನು ಮರು ಪರಿಶೀಲನೆಗೊಳಪಡಿಸಲಾಗುತ್ತಿದೆ.

ಇಮೇಲ್ ಕಳುಹಿಸಿದ ಅನಾಮಿಕ ವ್ಯಕ್ತಿಯ ಪತ್ತೆಗಾಗಿ ಸೈಬರ್ ಕ್ರೈಂ ವಿಭಾಗ ಕಾರ್ಯಾಚರಣೆ ಆರಂಭಿಸಿದ್ದು, ಐಪಿ ವಿಳಾಸ ಸೇರಿದಂತೆ ತಾಂತ್ರಿಕ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ. ಘಟನೆಯಿಂದ ಕೆಲಕಾಲ ನ್ಯಾಯಾಲಯ ಆವರಣದಲ್ಲಿ ಆತಂಕದ ವಾತಾವರಣ ನಿರ್ಮಾಣವಾದರೂ, ಬಳಿಕ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ.

ಇಮೇಲ್ ಮೂಲಕ ಬೆದರಿಕೆ

ಹಾಸನ ನಗರದ ಜಿಲ್ಲಾ ನ್ಯಾಯಾಲಯದ ಅಧಿಕೃತ ಇಮೇಲ್ ಐಡಿಗೆ ಮತ್ತೆ ಹುಸಿ ಬಾಂಬ್ ಬೆದರಿಕೆ ಸಂದೇಶ ಬಂದಿರುವ ಘಟನೆ ಮಂಗಳವಾರ ನಡೆದಿದೆ. ಘಟನೆಯ ಮಾಹಿತಿ ಸಿಕ್ಕ ತಕ್ಷಣ ಆಂಖಿ ಡಿವೈಎಸ್‌ಪಿ ಪಾಲಾಕ್ಷ ಅವರ ನೇತೃತ್ವದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಶ್ವಾನದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಹಾಯದಿಂದ ಕಟ್ಟಡವನ್ನು ಸಂಪೂರ್ಣವಾಗಿ ಪರಿಶೀಲಿಸಿದರು. ಸಮಗ್ರ ತಪಾಸಣೆ ನಡೆಸಿದರೂ ಯಾವುದೇ ಬಾಂಬ್ ಅಥವಾ ಅನುಮಾನಾಸ್ಪದ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ.

ಬೆಳಗಾವಿ ನ್ಯಾಯಾಲಯದಲ್ಲಿ ಪರಿಶೀಲನೆ: ಬೆಳಗಾವಿಯಲ್ಲಿ ಪ್ರಿನ್ಸಿಪಲ್ ಡಿಸ್ಟ್ರಿಕ್ಟ್ ಜಡ್ಜ್ (ಪಿಡಿಜೆ) ಅವರ ಇಮೇಲ್‌ಗೆ ಅನಾಮಧೇಯ ವ್ಯಕ್ತಿಯಿಂದ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಸಂದೇಶ ಬಂದಿರುವುದಾಗಿ ತಿಳಿದುಬಂದಿದೆ. ಇಮೇಲ್ ಬಂದ ತಕ್ಷಣವೇ ಕೋರ್ಟ್ ಆವರಣದಲ್ಲಿ ಫುಲ್ ಅಲರ್ಟ್ ಘೋಷಿಸಲಾಯಿತು. ತಕ್ಷಣವೇ ಬೆಳಗಾವಿ ಜಿಲ್ಲಾ ನ್ಯಾಯಾಲಯ ಆವರಣಕ್ಕೆ ಬಾಂಬ್ ಸ್ಕ್ವಾಡ್ ಹಾಗೂ ಡಾಗ್ ಸ್ಕ್ವಾಡ್ ತಂಡಗಳು ದೌಡಾಯಿಸಿ ಪರಿಶೀಲನೆ ನಡೆಸಿದವು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದಲ್ಲಿ ಕಾರ್ಯಕ್ರಮ | ಅಭಿವೃದ್ಧಿ ಬಗ್ಗೆ ಜಾಗೃತಿ

ಪಿಜಿ ವಿಭಾಗಗಳಿಂದ ಕನಿಷ್ಠ 2 ಗ್ರಾಮಗಳಲ್ಲಿ ಕಾರ್ಯಾಗಾರ

▸ ನಂದಿನಿ ಎನ್.

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು 2026-27ನೇ ಶೈಕ್ಷಣಿಕ ವರ್ಷದಿಂದ ಸಮುದಾಯ ಸಂಪರ್ಕ ಮತ್ತು ಸಾರ್ವಜನಿಕ ಹೊಣೆಗಾರಿಕೆಯ ಭಾಗವಾಗಿ ಎಲ್ಲ ಸ್ನಾತಕೋತ್ತರ (ಪಿಜಿ) ವಿಭಾಗಗಳು ಕನಿಷ್ಠ ಎರಡು ಗ್ರಾಮಗಳಲ್ಲಿ ಕಾರ್ಯಾಗಾರಗಳನ್ನು ಚಟುವಟಿಕೆಗಳನ್ನು ನಡೆಸಲು ಸೂಚಿಸಿದೆ.

ದಿಗಂತ ವಿಶೇಷ

ಈ ನಿರ್ಧಾರಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜು ಕೈಗೊಂಡಿದ್ದ ಮುಂದಾಳತ್ವವೇ ಪ್ರೇರಣೆಯಾಗಿದೆ. ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದಲ್ಲಿ ಕಾನೂನು ಕಾಲೇಜು ಈ ಉಪಕ್ರಮವನ್ನು ಕೈಗೊಂಡಿತ್ತು. ತುಮಕೂರು ಜಿಲ್ಲೆಯ ಎರಡು ಗ್ರಾಮಗಳಲ್ಲಿ ಗ್ರಾಮಸ್ಥರಿಗೆ ಅಭಿವೃದ್ಧಿ ಮತ್ತು ಜಾಗೃತಿ ಚಟುವಟಿಕೆಗಳಿಂದ ಅರಿವು ಮೂಡಿಸುವ ಕಾನೂನು ಕಾಲೇಜಿನ ಈ ಪ್ರಯತ್ನಕ್ಕೆ ಗ್ರಾಮಸ್ಥರು ಕಾಲೇಜಿನ ಕಾರ್ಯಕ್ಕೆ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ.

ಜಾಗೃತಿ ಮೂಡಿಸುವಂತಹ ಕಾರ್ಯಾಗಾರ ಕೈಗೊಳ್ಳಬೇಕು

ಗ್ರಾಮಗಳಿಗೆ ಕಾರ್ಯಗಾರಗಳಲ್ಲಿ ಯಾವ ಚಟುವಟಿಕೆಗಳನ್ನು ಕೈಗೊಳ್ಳಬೇಕು ಎಂಬುದನ್ನು ಸಂಬಂಧಿತ ವಿಭಾಗಗಳೇ ನಿರ್ಧರಿಸಲಿವೆ. ಸ್ವಚ್ಛತೆ, ಸ್ವಾಸ್ಥ್ಯ, ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಅಥವಾ ಇತರೆ ವಿಷಯಗಳ ಬೋಧನೆ, ಕಲಾ ತರಗತಿಗಳು, ನೀರಿನ ಮಹತ್ವ, ಆರೋಗ್ಯ ಯೋಜನೆಗಳು ಹಾಗೂ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವಂತಹ ಕಾರ್ಯಾಗಾರಗಳನ್ನು ಕೈಗೊಳ್ಳಬೇಕು ಎಂಬುದು ವಿಶ್ವವಿದ್ಯಾಲಯದ ಉದ್ದೇಶವಾಗಿದೆ.

ಇದೀಗ ಬೆಂಗಳೂರು ವಿಶ್ವವಿದ್ಯಾಲಯವು ಈ ಯಶಸ್ವಿ ಮಾದರಿಯನ್ನು ಅನುಸರಿಸಿ, ಇತರೆ ಎಲ್ಲ ವಿಭಾಗಗಳಿಗೂ ಇದೇ ರೀತಿಯ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದೆ. ಕಾರ್ಯಾಗಾರಗಳನ್ನು ಕೈಗೊಳ್ಳಬೇಕಾದ ಗ್ರಾಮಗಳ ಕುರಿತು ವಿಶ್ವವಿದ್ಯಾಲಯ ನಿರ್ದಿಷ್ಟವಾಗಿ ಹೇಳಿಲ್ಲ. ಆದರೆ, ಸಂಬಂಧಿತ ವಿಭಾಗಗಳು ಸಮೀಪದ ಜಿಲ್ಲೆಗಳಲ್ಲಿನ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

> ಕಾನೂನು ಕಾಲೇಜು ಕೈಗೊಂಡ ಈ ಉಪಕ್ರಮ ಅತ್ಯಂತ ಯಶಸ್ವಿಯಾಗಿದ್ದು, ಗ್ರಾಮಸ್ಥರಿಂದ ಪ್ರಶಂಸೆಯನ್ನೂ ಪಡೆದಿದೆ. ಈ ಯಶಸ್ಸನ್ನು ಗಮನದಲ್ಲಿಟ್ಟುಕೊಂಡು, ಅದೇ ಮಾದರಿಯನ್ನು ಸ್ನಾತಕೋತ್ತರ ಎಲ್ಲ 42 ವಿಭಾಗಗಳಿಗೆ ವಿಸ್ತರಿಸಲು ನಿರ್ಧರಿಸಿದ್ದೇವೆ.
> ■ ಜಯಕರ ಎಸ್.ಎಂ, ಬೆಂಗಳೂರು ವಿಶ್ವವಿದ್ಯಾಲದ ಕುಲಪತಿ

ಬಾಕಿಯಿದ್ದ ಕಾನೂನು ಸಮಸ್ಯೆಗಳು ಪರಿಹಾರ: ವಿಶ್ವವಿದ್ಯಾಲಯದ ಕಾನೂನು ಕಾಲೇಜು ನಡೆಸಿದ ಕಾರ್ಯಾಗಾರದಲ್ಲಿ ಗ್ರಾಮಗಳಲ್ಲಿ ಕಾನೂನು ಅರಿವು ಮತ್ತು ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿತು. ಈ ಉಪಕ್ರಮದ ಭಾಗವಾಗಿ ಅಂತಿಮ ವರ್ಷದ ಕಾನೂನು ವಿದ್ಯಾರ್ಥಿಗಳು ಗ್ರಾಮಸ್ಥರಿಗೆ ಅನೇಕ ವರ್ಷಗಳಿಂದ ಬಾಕಿ ಉಳಿದಿದ್ದ ಕಾನೂನು ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡಿದರು.

ವಿದ್ಯಾರ್ಥಿಗಳ ಮಾಹಿತಿ ಪ್ರಕಾರ, ಕಾರ್ಯಾಗಾರದ ವೇಳೆ ಚಾಲನಾ ಪರವಾನಗಿಗಳು, ವಾಹನ ವಿಮೆ, ಜನನ ಪ್ರಮಾಣಪತ್ರ ಮತ್ತು ಮರಣ ಪ್ರಮಾಣಪತ್ರಗಳಂತಹ ಅಗತ್ಯ ಸರ್ಕಾರಿ ದಾಖಲೆಗಳ ಮಹತ್ವದ ಬಗ್ಗೆ ಅನೇಕ ಜನರಿಗೆ ತಿಳಿದಿಲ್ಲ. ಜತೆಗೆ ಆಧಾರ್ ಕಾರ್ಡ್ ಸೇರಿದಂತೆ ಡಿಜಿಟಲ್ ದಾಖಲೆಗಳನ್ನು ಯಾವ ರೀತಿ ಪಡೆಯಬೇಕು ಎಂಬ ಅರಿವು ಸಹ ಹಲವಾರು ಗ್ರಾಮಸ್ಥರಿಗೆ ಇರಲಿಲ್ಲ.

ಈ ಪ್ರಮುಖ ದಾಖಲೆಗಳ ಅನುಪಸ್ಥಿತಿಯು ಹಲವಾರು ಕುಟುಂಬಗಳು ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳು ಮತ್ತು ಸವಲತ್ತುಗಳಿಂದ ವಂಚಿತರಾಗಲು ಕಾರಣವಾಗಿದೆ. ಇನ್ನೂ ವಿದ್ಯಾರ್ಥಿಗಳು ಬಾಲ್ಯವಿವಾಹ, ಬಾಲಕಾರ್ಮಿಕತೆ, ಮಹಿಳೆಯರ ಆಸ್ತಿ ಹಕ್ಕುಗಳು, ವರದಕ್ಷಿಣೆ ಕಿರುಕುಳ ಸೇರಿದಂತೆ ಹಲವು ವಿಷಯಗಳ ಕುರಿತು ಗ್ರಾಮಸ್ಥರಿಗೆ ಜಾಗೃತಿ ಮೂಡಿಸಲಾಯಿತು.

ಪಾರದರ್ಶಕ ಆಡಳಿತ ನೀಡಿ

ಬೆಂಗಳೂರು: ಕರ್ನಾಟಕದ ಜನತೆಗೆ ಬೇಕಿರುವುದು ಪಾರದರ್ಶಕತೆಯೇ ಹೊರತು ರಾಜಕೀಯ ನಾಟಕವಲ್ಲ ಎಂದು ವಿಪಕ್ಷ ನಾಯಕ ಆರ್. ಅಶೋಕ ಹೇಳಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಅವರು ಸುದೀರ್ಘ ಪೋಸ್ಟ್ ಹಾಕಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರೇ ಗುಪ್ತಚರ ಇಲಾಖೆಯ ದುರ್ಬಳಕೆ ಆಗುತ್ತಿದೆ ಎನ್ನುವುದು ನನ್ನ ವೈಯಕ್ತಿಕ ಆರೋಪವಲ್ಲ. ಈ ವರದಿಯನ್ನು ಪ್ರತಿಷ್ಠಿತ ಮಾಧ್ಯಮ ಸಂಸ್ಥೆಯೊಂದು ತನ್ನ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಪ್ರಕಟಿಸಿದೆ. ತಮಗೆ ಈ ವರದಿಯ ಬಗ್ಗೆ ಆಕ್ಷೇಪ ಇದ್ದರೆ, ವರದಿ ಪ್ರಕಟಿಸಿದ ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳಬೇಕೇ ಹೊರತು, ಆ ವರದಿಗೆ ಪ್ರತಿಕ್ರಿಯಿಸಿದ ಪ್ರತಿಪಕ್ಷದ ವಿರುದ್ಧವಲ್ಲ ಎಂದಿದ್ದಾರೆ.



ವರದಿಯಲ್ಲಿರುವ ಗಂಭೀರ ಅಂಶಗಳಿಗೆ ನೇರವಾಗಿ ಉತ್ತರಿಸುವ ಬದಲು, ತಾವು ಕ್ಷುಲ್ಲಕ, ಅಸಂಬದ್ಧ ರಾಜಕೀಯ ವಾಗ್ದಾಳಿ ನಡೆಸಲು ಮುಂದಾಗಿ ದ್ದೀರಿ. ನಿಮ್ಮ ಈ ಪ್ರತಿಕ್ರಿಯೆಯೇ ಹಲವು ಅನುಮಾನಗಳಿಗೆ ಎಡೆಮಾಡಿಕೊಡುತ್ತಿದೆ. ಒಂದು ವೇಳೆ ವರದಿ ಸುಳ್ಳಾಗಿದ್ದರೆ, ಅದನ್ನು ಸ್ಪಷ್ಟವಾಗಿ ನಿರಾಕರಿಸಿ ಪತ್ರಿಕೆಯಿಂದ ಸ್ಪಷ್ಟೀಕರಣ ಕೇಳಿ. ಅದನ್ನು ಬಿಟ್ಟು, ವಿಷಯಕ್ಕೆ ಸಂಬಂಧವೇ ಇಲ್ಲದಂತೆ ಪ್ರತಿಪಕ್ಷದ ಮೇಲೆ ಹರಿಹಾಯುವುದು ಸಂಶಯವನ್ನು ಇನ್ನಷ್ಟು ಹೆಚ್ಚಿಸುತ್ತದೆ ಎಂದು ಹೇಳಿದ್ದಾರೆ.

ಇಂತಹ ಗಂಭೀರ ವಿಷಯಗಳು ಮುನ್ನೆಲೆಗೆ ಬಂದಾಗ, ಪ್ರತಿ ಪಕ್ಷದ ನಾಯಕನಾಗಿ ಆದರ ಬಗ್ಗೆ ಸ್ಪಷ್ಟತೆ ಕೇಳುವುದು ನನ್ನ ಸಾಂವಿಧಾನಿಕ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಸಂಪಾದಕೀಯ

ಕದನ ಸಾಂಕ್ರಾಮಿಕ ಗುಣದ್ದು

ಅಮೆರಿಕಾ ಮತ್ತು ಇಸ್ರೇಲ್, ಇರಾನಿನ ಮೇಲೆ ನಡೆಸಿರುವ ದಾಳಿ ಈಗ ಮೂರು ದೇಶಗಳಿಗೆ ಮಾತ್ರ ಸಂಬಂಧಪಟ್ಟ ಸಂಗತಿಯಾಗುಳಿದಿಲ್ಲ. ಯುದ್ಧವೆಂಬುದು ಕೇವಲ ಎರಡು ಸೈನಿಕ ಶಕ್ತಿಯ ನಡೆಯುವ ಕದನ ಅಲ್ಲ ಎಂಬ ಮಾತು ಈ ಯುದ್ಧದ ಮೂಲಕ ಶೀಘ್ರವಾಗಿ ಜಗತ್ತಿನ ಅನುಭವಕ್ಕೆ ಬಂದಿದೆ. ಅದರಲ್ಲೂ ಜಗತ್ತಿನ ಪ್ರಬಲ ಶಕ್ತಿಗಳು ಯುದ್ಧದಲ್ಲಿ ತೊಡಗಿರುವುದು ಒಂದು ರೀತಿಯಲ್ಲಿ ಇಡೀ ಜಗತ್ತನ್ನೇ ಯುದ್ಧದಲ್ಲಿ ತೊಡಗಿಸಿದಂತೆ. ಖಮೇನಿ ಹತ್ಯೆಯ ನಂತರ ಯುದ್ಧವು ವೇಗವಾಗಿ ಜಾಗತಿಕವಾಗಿ ವ್ಯಾಪಿಸಿದೆ. ಮಧ್ಯಪ್ರಾಚ್ಯ ಮತ್ತು ಅಮೆರಿಕಾದ ಇದುವರೆಗಿನ ತೈಲ ಮತ್ತು ಇತರ ವ್ಯಾಪಾರ ಸಂಬಂಧಗಳನ್ನೂ ಮೀರಿ ಯುದ್ಧ ನಡೆಯುತ್ತಿವೆ. ಅಮೆರಿಕಾ ಸೇನಾನೆಲೆಗಳ ಮೇಲೆ ದಾಳಿ ನಡೆಸುವ ಮೂಲಕ ಇರಾನ್ ಯುದ್ಧವನ್ನು ಮತ್ತಷ್ಟು ಭೀಕರವಾಗಿಸುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ



ವಿಶ್ವದ ಎಲ್ಲಾ ದೇಶಗಳ ಮೇಲೂ ಈ ಯುದ್ಧ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪರಿಣಾಮವನ್ನು ಬೀರುತ್ತಿದೆ. ಮುಖ್ಯವಾಗಿ ಆರ್ಥಿಕ ಕಾರಣಗಳಿಂದ ಈ ಯುದ್ಧ ಅನೇಕ ಸ್ಥಿತ್ಯಂತರಗಳನ್ನು ಉಂಟುಮಾಡುತ್ತದೆ. ಯುದ್ಧದ ಘಟನಾವಳಿಗಳನ್ನು ಗಮನಿಸುವುದರ ಜೊತೆಗೆ ಜಗತ್ತಿನ ಎಲ್ಲಾ ದೇಶಗಳು ಸವಾಲುಗಳಿಗೆ ಕೂಡ ಸಿದ್ಧವಾಗಬೇಕಿದೆ.

ಭಾರತದ ಮೇಲೆ ಕೂಡ ಮಧ್ಯಪ್ರಾಚ್ಯದ ಕದನ ಪ್ರಭಾವ ಬೀರಲಿದೆ. ಯುದ್ಧದ ಬಗ್ಗೆ ಭಾರತಕ್ಕೆ ಸ್ಪಷ್ಟತೆಯಿದ್ದು, ಅದು ತಾಮಸಿಕ ಶಕ್ತಿಗಳನ್ನು ದೂರದಲ್ಲಿಡುವ ಮತ್ತು ಸಾತ್ವಿಕತೆಯನ್ನು ಬೆಂಬಲಿಸುವ ತನ್ನ ಜಾಯಮಾನಕ್ಕೆ ಬದ್ಧವಾಗಿದೆ. ಭಾರತದ ಇಂಥ ಗುಣದಿಂದಲೇ ಅದು ವಿಶ್ವದಲ್ಲಿ ತನ್ನ ಗೌರವದ ಸ್ಥಾನವನ್ನು ಉಳಿಸಿಕೊಂಡಿದೆ ಎನ್ನುವುದು ಸತ್ಯವಾಗಿದ್ದರೂ ಖಮೇನಿಯ ಸಾವನ್ನು ಇನ್ನಿಲ್ಲದಂತೆ ಶೋಕಿಸುತ್ತಿರುವ ತನ್ನದೇ ಪ್ರಜೆಗಳ ಮನೋಭಾವವನ್ನೂ ಗಂಭೀರವಾಗಿ ನೋಡಬೇಕಾಗಿದೆ. ಸದ್ಯದ ಕದನ ರಾಷ್ಟ್ರರಾಷ್ಟ್ರಗಳ ಘನತೆ-ರಕ್ಷಣೆ ಮತ್ತು ಸಾರ್ವಭೌಮತೆಯ ಕಾರಣಕ್ಕೆ ನಡೆದಿರುವುದಾದರೂ ಭಾರತಕ್ಕೆ ಅದು ಮತೀಯ ಆತಂಕವನ್ನು ಮೂಡಿಸಿರುವುದು ಅಪಾಯಕಾರಿ. ಖಮೇನಿ ಒಂದು ದೇಶದ ಪರಮೋಚ್ಚ ನಾಯಕನಾದರೂ ಆತ ಮತೀಯ ಗುರು. ಆತನ ಸಾವನ್ನು ಒರ್ವ ಸರ್ವಾಧಿಕಾರಿಯ ಸಾವಂತೆ ನೋಡುವ ಬದಲು ಮತೀಯ ನಾಯಕನ ಅಂತ್ಯವೆಂಬಂತೆ ನೋಡಬೇಕಾದ ಅನಿವಾರ್ಯ ಪರಿಸ್ಥಿತಿ ಇಲ್ಲಿ ಸೃಷ್ಟಿಯಾಗಿದೆ. ಖಮೇನಿಯದ್ದೇ ಒಂದು ರಾಷ್ಟ್ರೀಯತೆಯಾಗಿತ್ತು ಮತ್ತು ಆತ ಅದನ್ನು ಮತೀಯ ನೆಲೆಗಟ್ಟಿನಲ್ಲಿ ಬಿಂಬಿಸಿದ್ದ. ಈಗ ಆತನಿಗಾಗಿ ಶೋಕಿಸುತ್ತಿರುವವರು ಭಾರತದ ರಾಷ್ಟ್ರೀಯತೆಯನ್ನು ಯಾವ ನೆಲೆಗಟ್ಟಿನಲ್ಲಿ ನೋಡುತ್ತಾರೆ, ಏನು ಬೆಲೆ ಕೊಡುತ್ತಾರೆ ಎಂಬುದು ಭಾರತಕ್ಕೆ ಮುಂದಿನ ದಿನಗಳಲ್ಲಿ ಎದುರಿಸಬೇಕಾದ ಸಮಸ್ಯೆಯಾಗಲಿದೆ. ಭಾರತದ ಪುಟ್ಟ ಹಳ್ಳಿಯೊಂದು ಕೂಡ ಖಮೇನಿಗಾಗಿ ಮರುಗುವುದು ಘೋರ ಯುದ್ಧಕ್ಕಿಂತ ಅಪಾಯಕಾರಿ. ಆ ಅಪಾಯವನ್ನು ಎದುರಿಸಲು ಭಾರತ ಸಿದ್ಧವಾಗಬೇಕಾಗಿದೆ. ಮಧ್ಯಪ್ರಾಚ್ಯದ ಯುದ್ಧದಲ್ಲಿ ಭಾರತ ನೇರವಾಗಿ ಭಾಗಿಯಾಗದಿದ್ದರೂ ಯುದ್ಧಕ್ಕೆ ಸಿದ್ಧವಾಗಬೇಕೆಂಬ ಸೂಚನೆಯನ್ನು ಈ ಯುದ್ಧ ನೀಡಿದೆ. ಇರಾನ್ ಕೂಡ ಇಸ್ರೇಲಿನಂತೆ ಭಾರತಕ್ಕೆ ವ್ಯಾಪಾರಿ ದೇಶ. ಆದರೆ ಇಸ್ರೇಲಿನ ಸಂಬಂಧ ಕೇವಲ ವ್ಯಾಪಾರಕ್ಕೆ ಸೀಮಿತವಾದುದಲ್ಲ. ಅದು ಶಾಸ್ವತವಾದದ್ದು. ಇಂತಹ ಸ್ಥಿತಿ ಇರುವಾಗ ಇಸ್ರೇಲಿ ವಿರೋಧಿ ಮಾನಸಿಕತೆ ಭಾರತದೊಳಗಿರುವುದು ಗಂಭೀರವಾದ ಸಂಗತಿ.

ಜಗವೆಲ್ಲ ಹೊತ್ತಿ ಉರಿಯುತ್ತಿರಲು ನಾವು ತಣ್ಣಗಿದ್ದೇವೆ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
vakradanta@gmail.com



ಒಬ್ಬರ ವಿರುದ್ಧ ಒಬ್ಬರು ಪಿತೂರಿ ಮಾಡುತ್ತ, ಕತ್ತಿ ಮಸೆಯುವ ಬದಲು, ಸಮಷ್ಠಿಯ ಅಭಿವೃದ್ಧಿಗೆ ಕೈಜೋಡಿಸೋಣ ಎಂಬ ಭಾರತದ ನೀತಿಗೆ ವಿಶ್ವದೆಲ್ಲೆಡೆ ಮಾನ್ಯತೆ ದೊರಕಿದೆ. ಹಾಗಾಗಿಯೇ ಇಂದು ನಾವು ಭಾರತದ ಪ್ರಜೆಗಳು ನೆಮ್ಮದಿಯಿಂದಿದ್ದೇವೆ.

ಎಲ್ಲೆಲ್ಲೂ ಅಶಾಂತಿ. ನಮ್ಮ ಆಸುಪಾಸಿನ ದೇಶಗಳೆಲ್ಲ ಒಂದಲ್ಲ ಒಂದು ಸಮಸ್ಯೆ ಅಥವಾ ಯುದ್ಧ ಸ್ಥಿತಿಯಲ್ಲಿವೆ. ಪಾಕಿಸ್ತಾನ-ಅಫ್ಘಾನಿಸ್ತಾನ ಹೊಡೆದಾಡುತ್ತಿವೆ. ರಷ್ಯಾ-ಉಕ್ರೇನ್ ಯುದ್ಧ ಮುಗಿಯದ ಕತೆ. ಇನ್ನು ಇರಾನ್ ಜತೆ ಅಮೆರಿಕ-ಇಸ್ರೇಲ್ ಯುದ್ಧ ನಡೆಸುತ್ತಿವೆಯಾದರೂ, ಅದರಲ್ಲಿ ಗಲ್ಫ್ ದೇಶಗಳು ಕೂಡ ದಾಳಿಗೊಳಗಾಗಿವೆ. ಇದು ಸಾಲದೆಂಬಂತೆ ಇರಾನ್ ಮಂಗಳವಾರ ಆಸ್ಟ್ರೇಲಿಯಾದ ವಾಯುನೆಲೆಯ ಮೇಲೂ ದಾಳಿ ಮಾಡಿದೆ. ಇವೆಲ್ಲದರ ಪರಿಣಾಮ ವಿಶ್ವದಲ್ಲಿ ಒಂದು ಡಜನ್ ದೇಶಗಳು ಯುದ್ಧ ಸ್ಥಿತಿಯಲ್ಲಿವೆ. ನಾಲ್ಕು ಸಾವಿರ ವಿಮಾನಗಳ ಹಾರಾಟ ಸ್ಥಗಿತಗೊಂಡಿದೆ. ಯುದ್ಧ ಎಷ್ಟು ದಿನ ನಡೆಯಬಹುದು? ಯುದ್ಧದ ತೀವ್ರತೆ ಹೆಚ್ಚಬಹುದಾ? ಇಷ್ಟಕ್ಕೇ ಕಡಿಮೆಯಾಬಹುದಾ? ಯಾವಾಗ ಸಾಮಾನ್ಯ ಸ್ಥಿತಿ ನಿರ್ಮಾಣವಾಗಬಹುದು? ಇದ್ಯಾವ ಪ್ರಶ್ನೆಗೂ ಯಾವ ತಜ್ಞರೂ ಉತ್ತರ ನೀಡುವ ಸ್ಥಿತಿಯಲ್ಲಿಲ್ಲ.

ಇವೆಲ್ಲದರ ನಡುವೆ ಭಾರತ ಮಾತ್ರ ಆರಾಮವಾಗಿದೆ. ಯುದ್ಧದಲ್ಲಿ ಏನಾಯಿತು ಎಂದು ಎಲ್ಲರೂ ತಲೆಕೆಡಿಸಿಕೊಂಡಿದ್ದರೆ ನಾವು ಟಿ20 ವಿಶ್ವಕಪ್‌ನಲ್ಲಿ ಭಾರತ-ವೆಸ್ಟಿಂಡೀಸ್ ಪಂದ್ಯ ಏನಾಯಿತು ಮತ್ತು ಭಾರತ-ಇಂಗ್ಲೆಂಡ್ ನಡುವಿನ ಸೆಮಿಫೈನಲ್ ಪಂದ್ಯ ಏನಾಗುತ್ತದೆ ಎಂದು ಯೋಚಿಸುತ್ತಿದ್ದೇವೆ ಎಂದರೆ ನಾವೆಷ್ಟು ಆರಾಮಾಗಿದ್ದೇವೆ ಎಂಬುದು ತಿಳಿಯುತ್ತದೆ. ಎಲ್ಲರ ಸಂಬಂಧ ಹಾಳಾಗುತ್ತಿದ್ದರೆ ಭಾರತ ಮಾತ್ರ ಹಲವು ದೇಶಗಳ ಜತೆ ಸಂಬಂಧ ವೃದ್ಧಿಸಿಕೊಳ್ಳುತ್ತ ಸಾಗುತ್ತಿದೆ. ಜಗಳವಾಡುವವರ ನಡುವೆ ಗೆಳೆತನದ ಹಸ್ತ ಚಾಚುತ್ತಿರುವುದು ಭಾರತ ಮಾತ್ರ. ರಾಹುಲ್ ಗಾಂಧಿ ಬಾಯಲ್ಲಿ 'ಮೊಹಬತ್ ದುಖಾನ್' ಅನ್ನುತ್ತಿದ್ದರೆ, ಭಾರತ ವಿಶ್ವಕ್ಕೆ ನಿಜವಾದ 'ಮೊಹಬತ್ ಕಾ ದುಖಾನ್' ತೆರೆದಿಟ್ಟಿದೆ.

ಮೊದಲು ಭಾರತ-ಐರೋಪ್ಯ ದೇಶಗಳ ನಡುವೆ ವ್ಯಾಪಾರ ಒಪ್ಪಂದ ನಡೆಯಿತು. ಅದಾಗುತ್ತಿದ್ದಂತೆ ಅಮೆರಿಕ-ಭಾರತ ವ್ಯಾಪಾರ ಒಪ್ಪಂದ ನಡೆಯಿತು. ಅದಕ್ಕೂ ಮೊದಲು ಅಮೆರಿಕ-ಭಾರತ ಸಂಬಂಧ ಕೊಂಚ ಹಳಸಿದ್ದ ಸಂದರ್ಭದಲ್ಲಿ, ನಮ್ಮ ದೇಶ ಚಾಣಾಕ್ಷತನದಿಂದ ಚೀನಾ ಜತೆ ಸಂಬಂಧ ವೃದ್ಧಿಸಿಕೊಂಡಿತ್ತು. ಪಕ್ಕದ ಬಾಂಗ್ಲಾದೇಶದಲ್ಲಿ ಅರಾಜಕತೆ ಸೃಷ್ಟಿಯಾದಾಗ, ಅಲ್ಲಿನ ಮಾಜಿ ಪ್ರಧಾನಿ ಶೇಖ್ ಹಸೀನಾಗೆ ಆಶ್ರಯ ನೀಡಿದ ಕಾರಣಕ್ಕಾಗಿ ಭಾರತ-ಬಾಂಗ್ಲಾ ಸಂಬಂಧ ಹದಗೆಟ್ಟಿತ್ತು. ಆದರೆ ಈಗ ಹೊಸ ಪ್ರಧಾನಿ ಆಯ್ಕೆಯಾದ ನಂತರ ಭಾರತ-ಬಾಂಗ್ಲಾ ಸಂಬಂಧ ಮತ್ತೆ ಸುಧಾರಣೆಯ ದಾರಿ ಹಿಡಿದಿದೆ. ಸ್ವಲ್ಪ ಸಮಯದ ಹಿಂದಷ್ಟೇ ಅಫ್ಘಾನಿಸ್ತಾನ ಸಚಿವರು ಭಾರತಕ್ಕೆ ಭೇಟಿಕೊಟ್ಟು ಹೋಗಿದ್ದಾರೆ. ತುಂಬಾ ಕ್ಲಿಷ್ಟಕರ ಸನ್ನಿವೇಶದಲ್ಲಿ ರಷ್ಯಾದ ಅಧ್ಯಕ್ಷ ಪುಟಿನ್ ಭಾರತಕ್ಕೆ ಭೇಟಿ ನೀಡಿದ್ದರು. ಯುದ್ಧೋನ್ಮಾದಿ ಪುಟಿನ್‌ರನ್ನು ದೇಶಕ್ಕೆ ಕರೆಸಬಾರದು ಎಂದು ಅಂತಾರಾಷ್ಟ್ರೀಯ ಒತ್ತಡವಿತ್ತು. ಅದನ್ನೆಲ್ಲ ಮೀರಿಯೂ ರಷ್ಯಾದ ಅಧ್ಯಕ್ಷರು ಭಾರತಕ್ಕೆ ಭೇಟಿ ನೀಡಿದರು. ಅದಾದ ನಂತರ ಐರೋಪ್ಯ ದೇಶಗಳೊಂದಿಗೆ ನಾವು ವ್ಯಾಪಾರ ಒಪ್ಪಂದ ಮಾಡಿಕೊಂಡೆವು. ಪುಟಿನ್‌ರ ಭಾರತದ ಭೇಟಿಯನ್ನು ಐರೋಪ್ಯ ದೇಶಗಳು ವಿರೋಧಿಸಿದ್ದವು ಎಂಬುದು ಗಮನಾರ್ಹ.

ಹೀಗೆ ಭಾರತ ಒಂದೊಂದೇ ದೇಶಗಳ ಜತೆ ತನ್ನ ಸಂಬಂಧ ಸುಧಾರಿಸಿಕೊಳ್ಳುವ, ಸಹಭಾಗಿತ್ವ ಹೆಚ್ಚಿಸಿಕೊಳ್ಳುವತ್ತ ಹೆಜ್ಜೆ ಇಟ್ಟಿದೆ. ವಿಶ್ವದಲ್ಲಿ ಯುದ್ಧ ನಡೆಯುತ್ತಿದ್ದರೆ, ಯುದ್ಧ ಮಾಡುತ್ತಿರುವ ಎರಡೂ ದೇಶಗಳ ಜತೆ ಮಾತನಾಡುವ ಶಕ್ತಿ ಮತ್ತು ಅವಕಾಶ ಎರಡೂ ಇರುವುದು ಭಾರತಕ್ಕೆ ಮಾತ್ರ ಎಂಬಂತಹ ಸ್ಥಿತಿ ನಿರ್ಮಾಣವಾಗಿದೆ. ರಷ್ಯಾ-ಉಕ್ರೇನ್ ಯುದ್ಧ ನಡೆಯುತ್ತಿರುವಾಗಲೆ ಪ್ರಧಾನಿ ನರೇಂದ್ರ ಮೋದಿ ರಷ್ಯಾಕ್ಕೆ ಭೇಟಿ ನೀಡಿದ್ದರು. ಇನ್ನೇನು ಯುದ್ಧ ಶುರುವಾಗಿಯೇಬಿಡುತ್ತದೆ ಎಂಬಂತಹ ಸ್ಥಿತಿ ಇದ್ದಾಗಲೂ ಪ್ರಧಾನಿ ನರೇಂದ್ರ ಮೋದಿ ಇಸ್ರೇಲ್‌ಗೆ ಹೋಗಿ ಬಂದಿದ್ದಾರೆ. ಅವರು ಮರಳಿ ಬಂದ ಎರಡೇ ದಿನಕ್ಕೆ ಯುದ್ಧ ಆರಂಭವಾಗಿದೆ ಅಂದರೆ ಅವರು ಎಷ್ಟು ಕ್ಲಿಷ್ಟಕರ ಸನ್ನಿವೇಶದಲ್ಲಿ ಭೇಟಿ ನೀಡಿದ್ದರು ಎಂಬುದನ್ನು ನೀವು ಊಹಿಸಬಹುದು. ಸಾಮಾನ್ಯವಾಗಿ ಯುದ್ಧ ಸಂಭಾವ್ಯ ಸ್ಥಿತಿಯಲ್ಲಿರುವ ದೇಶಕ್ಕೆ ಬೇರೆ ದೇಶದ ಯಾವ ನಾಯಕರೂ ಸಾಮಾನ್ಯವಾಗಿ ಭೇಟಿ ನೀಡುವುದಿಲ್ಲ. ಪೂರ್ವನಿರ್ಧಾರಿತ ಕಾರ್ಯಕ್ರಮಗಳನ್ನೂ ರದ್ದುಪಡಿಸಿಬಿಡುತ್ತಾರೆ. ಹಾಗಿದ್ದರೂ ಪ್ರಧಾನಿ ನರೇಂದ್ರ ಮೋದಿ ಹೋಗಿ ಬಂದರು ಅಂದರೆ ವಿಶ್ವಮಟ್ಟದಲ್ಲಿ ಭಾರತ ಎಷ್ಟು ಪ್ರಭಾವಶಾಲಿ ಎಂಬುದನ್ನು ನೀವು ಊಹಿಸಬಹುದು.

ಭಾರತ ವಿಶ್ವಗುರುವಾಗುವುದು ಹೀಗೆ ಅಲ್ಲವೆ?



ಇಷ್ಟೆಲ್ಲ ಇದ್ದರೂ ನಮ್ಮಲ್ಲೇ ಕೆಲವರು ತುಂಬಾ ಸೂಕ್ತವಲ್ಲದ ಸಮಯದಲ್ಲಿ ಮೋದಿ ಇಸ್ರೇಲ್‌ಗೆ ಭೇಟಿ ನೀಡಿದರು ಎಂದು ವಿಶ್ಲೇಷಣೆ ಮಾಡುತ್ತಿದ್ದಾರೆ. ಆಶ್ಚರ್ಯವೆಂದರೆ ಮೋದಿಯವರ ಇಸ್ರೇಲ್ ಭೇಟಿಯನ್ನು ಇರಾನ್ ಕೂಡ ವಿರೋಧಿಸಿಲ್ಲ ಅಥವಾ ಈ ಸಮಯದಲ್ಲಿ ಅವರು ಹೋಗಬಾರದಿತ್ತು ಎಂದು ಹೇಳಿಲ್ಲ ಅಥವಾ ತನ್ನ ವೈರಿ ದೇಶಕ್ಕೆ ಹೋಗುವವರೂ ನಮ್ಮ ವೈರಿಯೇ ಎಂದು ಕೂಡ ಹೇಳಿಲ್ಲ. ಇರಾನ್‌ಗಿಲ್ಲದ ತಲೆಬಿಸಿ ನಮ್ಮಲ್ಲಿ ಕೆಲವರಿಗಿದೆ ಎಂದಾಯಿತು!

ಭಾರತ-ಪಾಕಿಸ್ತಾನ ಯುದ್ಧ ನಿಲ್ಲಿಸುವ ಸಮಯದಲ್ಲೂ ಕೂಡ ಭಾರತ ವಿಶ್ವಗುರುವಾಗುವ ದೊಡ್ಡತನ ತೋರಿತ್ತು. ಆದೆಲ್ಲಕ್ಕಿಂತ ಹೆಚ್ಚಾಗಿ ಯುದ್ಧವನ್ನು ಬೆಳಸದೆ ದೇಶದ ಹಿತದ ಕಾರಣಕ್ಕಾಗಿ ಯುದ್ಧ ನಿಲ್ಲಿಸುವ ನಿರ್ಧಾರ ತೆಗೆದುಕೊಂಡಿತು. ನಮ್ಮವರೇ ಕೆಲವರಿಗೆ ಇದರಿಂದ ಅಸಮಾಧಾನವಾಯಿತು. ವಿರೋಧ ಪಕ್ಷಗಳು ಅಮೆರಿಕದ ಕೈಗೊಂಬೆ ಸರ್ಕಾರ ಎಂದರು. ಆದಕ್ಕೆ ಸರಿಯಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಕೂಡ ತಾನೇ ಭಾರತ-ಅಮೆರಿಕ ಯುದ್ಧ ನಿಲ್ಲಿಸಿದ್ದು ಎಂದು ಹತ್ತಾರು ಬಾರಿ ಹೇಳಿಕೊಂಡರು. ಇಬ್ಬರು ಜಗಳ ಮಾಡುವಾಗ ಮೂರನೆಯವರು ಅದನ್ನು ನಿಲ್ಲಿಸಲು ಪ್ರಯತ್ನಿಸುವುದು, ಆ ಕಾರಣಕ್ಕಾಗಿ ಮಾತನಾಡುವುದು ಸಹಜ ಬೆಳವಣಿಗೆ. ಆದರೆ ಯುದ್ಧ ನಿಲ್ಲಿಸುವುದು ಅಂತಿಮವಾಗಿ ಯುದ್ಧದಲ್ಲಿ ಮೇಲುಗೈ ಸಾಧಿಸಿದ ದೇಶದ ತೀರ್ಮಾನವೇ ಆಗಿರುತ್ತದೆ. ಭಾರತ ಯುದ್ಧ ನಿಲ್ಲಿಸಬೇಕು ಎಂದು ತೀರ್ಮಾನಿಸದೇ ಇದ್ದಿದ್ದರೆ, ಯುದ್ಧ ಖಂಡಿತ ನಿಲ್ಲುತ್ತಿರಲಿಲ್ಲ. ಆದರೆ ಪಾಕಿಸ್ತಾನಕ್ಕೆ ಕಲಿಸಬೇಕಾದ ಪಾಠ ಕಲಿಸಿಯಾಗಿತ್ತು. ಮಾಡಬೇಕಾದ ಹಾನಿ ಮಾಡಿಯಾಗಿತ್ತು. ಅದನ್ನು ಮುಂದುವರಿಸಿದ್ದರೆ ಪಾಕಿಸ್ತಾನಕ್ಕೆ ಇನ್ನೂ ಹೆಚ್ಚು ಹಾನಿಯಾಗುತ್ತಿತ್ತು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಭಾರತವೂ ಬೇರೆ ಬೇರೆ ರೀತಿಯಲ್ಲಿ ನಷ್ಟ ಅನುಭವಿಸಬೇಕಾಗುತ್ತಿತ್ತು. ಪರಿಸ್ಥಿತಿಯ ಕಾರಣಕ್ಕಾಗಿ ದೆಹಲಿ, ಪಂಜಾಬ್, ಕಾಶ್ಮೀರ ಮುಂತಾದ ರಾಜ್ಯಗಳಲ್ಲಿ ವಿಮಾನ ಹಾರಾಟ ಸ್ಥಗಿತಗೊಳಿಸಲಾಗಿತ್ತು. ಹಾಗೆಯೇ ದೆಹಲಿಯಲ್ಲಿ ರಾತ್ರಿ ವಿದ್ಯುತ್ ದೀಪಗಳನ್ನು ಆರಿಸಲಾಗುತ್ತಿತ್ತು. ಈ ಎಲ್ಲ ಕ್ರಮಗಳನ್ನು ತುಂಬಾ ದಿನ ಮುಂದುವರಿಸಿದರೆ ಅಭಿವೃದ್ಧಿ ಕೆಲಸಗಳಿಗೆ ತೊಂದರೆಯಾಗುವ ಜತೆಗೆ, ವ್ಯಾಪಾರ-ವಹಿವಾಟು, ಜನಜೀವನ ಎಲ್ಲ ವ್ಯತ್ಯಯವಾಗುತ್ತಿತ್ತು. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು, ದೇಶದ ಹಿತದೃಷ್ಟಿಯಿಂದಲೇ ಭಾರತ ಯುದ್ಧ ನಿಲ್ಲಿಸುವ ನಿರ್ಧಾರ ಕೈಗೊಂಡಿದ್ದು. ಯಾರು ಏನೇ ಟೀಕೆ ಮಾಡಿದರೂ, ಆ ನಿರ್ಧಾರ ಭಾರತದ ಅತ್ಯಂತ ಸೂಕ್ತ ಹಾಗೂ ಬುದ್ಧಿವಂತ ನಿರ್ಧಾರವಾಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ.

ನಾವು ಅಂದು ಹಾಗೆ ಯುದ್ಧ ನಿಲ್ಲಿಸಿದ್ದರ ಪರಿಣಾಮವಾಗಿಯೇ ಇಂದು ನಾವು ಬೇರೆ ದೇಶಗಳಿಗೆ ಇದು ಯುದ್ಧದ ಕಾಲವಲ್ಲ ಎಂದು ಹೇಳುವ ನೈತಿಕ ಸ್ಥಿತಿಯಲ್ಲಿದ್ದೇವೆ. ಇಲ್ಲವಾದರೆ ಈಗ ಅಮೆರಿಕ ಅಧ್ಯಕ್ಷ ಟ್ರಂಪ್ ರೀತಿಯಲ್ಲಿ, ಬೇರೆಯವರಿಗೆ ಯುದ್ಧ ನಿಲ್ಲಿಸಿ ಎಂದು ಹೇಳುತ್ತ, ತಾವು ಮಾತ್ರ ಬೇಕಾದ ದೇಶಗಳ ಮೇಲೆ ದಾಳಿ ಮಾಡುತ್ತ ಸಾಗುವ ಸ್ಥಿತಿ ಭಾರತದ್ದೂ ಆಗುತ್ತಿತ್ತು. ವಿಶ್ವದ ವಿವಿಧ ದೇಶದ ನಾಯಕರು, ಬೇರೆ ಬೇರೆ ದೇಶದ ಜನರು ಭಾರತಕ್ಕೆ, ದೇಶದ ಪ್ರಧಾನಿ ನರೇಂದ್ರ ಮೋದಿಗೆ ಯಾಕೆ ಅಷ್ಟೆಲ್ಲ ಗೌರವ-ಪ್ರೀತಿ ತೋರಿಸುತ್ತಾರೆಂದರೆ ಅದು ಅವರ ನಡವಳಿಕೆಯ ಕಾರಣಕ್ಕೆ. ಎಲ್ಲ ದೇಶದೊಂದಿಗೂ ಉತ್ತಮ ಸಂಬಂಧಹೊಂದುವ ಅವರ ವಿಶಾಲ ವಿದೇಶ ನೀತಿಗೆ. ತಾವು ಬೆಳೆಯುವುದರ ಜತೆಗೆ ಬೇರೆ ದೇಶಗಳೂ ಸೇರಿ ಒಟ್ಟಿಗೆ ಬೆಳೆಯಬೇಕೆಂಬ ವಸುಧೈವ ಕುಟುಂಬಕಂ ನೀತಿಗೆ.

ಇವತ್ತು ಎಲ್ಲೆಡೆ ಭಾರತಕ್ಕೆ, ಭಾರತೀಯರಿಗೆ ಗೌರವವಿದೆ. ಎಂತಹ ಕ್ಲಿಷ್ಟ ಸನ್ನಿವೇಶದಲ್ಲೂ ಭಾರತೀಯರನ್ನು ಮರಳಿ ದೇಶಕ್ಕೆ ಕರೆತರುವ ತಾಕತ್ತು ದೇಶಕ್ಕಿದೆ. ಒಬ್ಬರ ವಿರುದ್ಧ ಒಬ್ಬರು ಪಿತೂರಿ ಮಾಡುತ್ತ, ಕತ್ತಿ ಮಸೆಯುವ ಬದಲು, ಸಮಷ್ಠಿಯ ಅಭಿವೃದ್ಧಿಗೆ ಕೈಜೋಡಿಸೋಣ ಎಂಬ ಭಾರತದ ನೀತಿಗೆ ವಿಶ್ವದೆಲ್ಲೆಡೆ ಮಾನ್ಯತೆ ದೊರಕಿದೆ. ಹಾಗಾಗಿಯೇ ಇಂದು ನಾವು ಭಾರತದ ಪ್ರಜೆಗಳು ನೆಮ್ಮದಿಯಿಂದಿದ್ದೇವೆ.

ಆದರೂ ಕೆಲವರಿಗೆ ದೇಶದ ಬಗ್ಗೆ ಅಸಹನೆ, ಅಸಮಾಧಾನ. ಮೊಸರಲ್ಲೂ ಕಲ್ಲು ಹುಡುಕುವುದು ಅಂದರೆ ಇದೇ ಇರಬೇಕು.

ಇರಾನ್: ಯುದ್ಧಾನಂತರದ ಅಪಾಯಗಳು...

ಉತ್ಪಲ್ ಕುಮಾರ್

ನೂತನ ಯುದ್ಧಗಳು ಅದ್ಭುತ ಜಯವನ್ನು ಒದಗಿಸಿಕೊಡುತ್ತವೆ. ಆದರೆ ಯುದ್ಧಾನಂತರದ ಪರಿಸ್ಥಿತಿ ಮಾತ್ರ ಶೋಚನೀಯವಾಗುತ್ತವೆ.

ಇರಾನಿನ ಸರ್ವೋಚ್ಚ ಮುಖಂಡ ಅಯತೊಲ್ಲಾ ಖಮೇನಿಯ ಹತ್ಯೆಯಾಗಿದೆ. ಅಮೆರಿಕವು ಯುದ್ಧ ಆರಂಭಿಸಿದ 24 ಗಂಟೆಗಳೊಳಗೆಯೇ ಖಮೇನಿ ಸಾವು ಖಚಿತಪಟ್ಟಿರುವುದು ಕೆಲವು ನಿರಂಕುಶಾಧಿಕಾರಗಳು ಕಣ್ಣಿಗೆ ಬಲಿಷ್ಠವಾಗಿಯೇ ಕಂಡರೂ ವಾಸ್ತವದಲ್ಲಿ ಹಾಗಿರುವುದಿಲ್ಲ ಎಂಬುದನ್ನು ತೋರ್ಪಡಿಸಿದೆ.ನಿರಂಕುಶಾಧಿಕಾರಿಗಳ ಅಧಿಕಾರ ಕೇಂದ್ರವು ಸಂಪೂರ್ಣ ನಿಯಂತ್ರದಲ್ಲಿರುವಂತೆ ಹಾಗೂ ಅಭೇದ್ಯವಾಗಿರುವಂತೆ ಕಂಡುಬರುತ್ತವಾದರೂ ಇಸ್ಪೀಟಿನ ಮನೆಯಂತೆ ಹಠಾತ್ತನೆ ಕುಸಿದು ಬೀಳುತ್ತದೆ ಎಂಬುದನ್ನು ಇತಿಹಾಸ ಪದೇಪದೇ ನೆನಪಿಸುತ್ತಲೇ ಇರುತ್ತದೆ.

ಇರಾನ್‌ನಲ್ಲಿ ಸಮರ ನಡೆಯುವುದೆಂಬುದು ಮುಂಚಿತವಾಗಿ ತಿಳಿದಿತ್ತು. ಆದರೆ ಖಮೇನಿ ಯುದ್ಧಾರಂಭದಲ್ಲೇ ಸಾವಿಗೀಡಾದುದು ಆಶ್ಚರ್ಯಕರ ಬೆಳವಣಿಗೆ. ಕೊಲ್ಲಿ ಪ್ರದೇಶದಲ್ಲಿ ಕೆಲವಾರು ತಿಂಗಳುಗಳಿಂದಲೇ ಉದ್ವಿಗ್ನತೆ ನೆಲೆಸಿತ್ತು. ಉದ್ವಿಗ್ನತೆ ಶಮನಕ್ಕೆ ರಾಜತಾಂತ್ರಿಕ ಪ್ರಯತ್ನಗಳೂ ನಡೆಯುತ್ತಿದ್ದವು. ಆದರ ಜತೆಜತೆಗೇ ಯುದ್ಧಕ್ಕೆ ಮಿಲಿಟರಿ ಸಿದ್ಧತೆಗಳೂ ನಡೆಯುತ್ತಿದ್ದವು. ಸಂಘರ್ಷಕ್ಕೆ ಸದಾ ಸಿದ್ಧ ಎಂದು ಹೇಳುತ್ತಲೇ ಬಂದಿದ್ದ ಈ ಸರ್ವೋಚ್ಚ ಮುಖಂಡ ಅಷ್ಟು ಸುಲಭದಲ್ಲಿ ಎದುರಾಳಿಗಳ ದಾಳಿಗೆ ಬಲಿಯಾದುದು ಆಶ್ಚರ್ಯಕರವೆ ಸರಿ.

ಇರಾನಿನ ಹರಾಕಿರಿ

ಯುದ್ಧ ಮುಂದುವರಿಯುತ್ತಿರುವಂತೆಯೆ ಇರಾನ್ ದೇಶವು ಸೌದಿ ಅರೇಬಿಯಾ, ಬಹ್ರೇನ್, ಯುಎಇ ಇನ್ನಿತರ ಅರಬ್ ದೇಶಗಳ ನಾಗರಿಕ ಪ್ರದೇಶಗಳ ಮೇಲೆ ದಾಳಿ ಮಾಡುತ್ತಿರುವುದು ಹೆಚ್ಚಿನ ಆತಂಕ ಸೃಷ್ಟಿಸಿದೆ. ಸೌದಿ ಅರೇಬಿಯಾ, ಬಹ್ರೇನ್, ಯುಎಇ ಮೊದಲಾದ ದೇಶಗಳು ಸಂಧಾನಾತ್ಮಕ ಪ್ರಕ್ರಿಯೆಗೆ ಮಹತ್ವ ಕೊಡುತ್ತಿದ್ದ ದೇಶಗಳು. ಅವುಗಳ ನಿಲುವುಗಳು ಇಸ್ರೇಲ್ ಮತ್ತು ಅಮೆರಿಕಕ್ಕೆ ಹೊಂದಿಕೆಯಾಗುವುದಕ್ಕಿಂತಲೂ ಇರಾನಿಗೆ ಹೆಚ್ಚು ಹೊಂದಿಕೊಳ್ಳುತ್ತಿತ್ತು. ಅವುಗಳ ಮೇಲೆಯೇ ದಾಳಿ ಮಾಡುವ ಮೂಲಕ ಇರಾನ್ ಇನ್ನಿತರ ಅರಬ್ ರಾಷ್ಟ್ರಗಳ ವಿಶ್ವಾಸವನ್ನೂ ಕಳೆದುಕೊಂಡಿದೆ. ಈವರೆಗೆ ಈ ದೇಶಗಳು ಅಮೆರಿಕವು ಇರಾನನ್ನು ಬಲಿಪಶು ಮಾಡುತ್ತಿದೆ ಎಂದು ಭಾವಿಸಿದ್ದವು. ಆದರೀಗ ಅವುಗಳೇ ಇರಾನ್ ವಿರುದ್ಧ ತಿರುಗಿ ಬೀಳುವಂತಾಗಿದೆ. ಇದು ಒಂದು ರೀತಿಯಲ್ಲಿ ಇರಾನಿನ 'ಹರಾಕಿರಿ'ಯೆಂದು ಹೇಳಿದರೂ ತಪ್ಪಾಗಲಾರದು. ತನ್ನ ಕಾಲಿಗೆ ತಾನೇ ಇರಾನ್ ಚಪ್ಪಡಿ ಹಾಕಿಕೊಳ್ಳುತ್ತಿದೆ.



ಇದು, ದೀರ್ಘಾವಧಿ ಸಮರಕ್ಕೆ ತಾನು ಸನ್ನದ್ಧ ಎಂದು ಇರಾನ್ ತೋರಿಸಿಕೊಳ್ಳುವ ನಡೆಯಾಗಿರಲೂಬಹುದು. ಅದಕ್ಕಿಂತಲೂ ಮುಖ್ಯವಾಗಿ ಕಾಣುವುದೆಂದರೆ ಇರಾನಿನಲ್ಲಿ ಅಧಿಕಾರ ಕೇಂದ್ರವೊಂದು ಕುಸಿದು ಬಿದ್ದುದರ ಸೂಚನೆ. ಏಕೀಕೃತ ಹಾಗೂ ನಿಚ್ಚಳ ನಿರ್ಧಾರ ತೆಗೆದುಕೊಳ್ಳುವಲ್ಲಿ ಇರಾನ್ ಈಗ ವಿಫಲವಾಗಿರುವಂತೆ ತೋರಿ ಬರುತ್ತಿದೆ. ಗೊಂದಲದ ತೀರ್ಮಾನಗಳು ಇರಾನಿಗೆ ಹೆಚ್ಚೇ ಹಾನಿ ತರಬಹುದು.

ಈ ಅನಿಶ್ಚಿತತೆಯು ಆಧುನಿಕ ಭೌರಾಜಕೀಯದಲ್ಲಿ ಮತ್ತೊಂದು ಅಸ್ಥಿರತೆಯ ಅಧ್ಯಾಯ ತೆರೆದಿಟ್ಟಿದೆ. ಒಂದು ಆಡಳಿತವನ್ನು ಕಿತ್ತು ಹಾಕುವುದು ಸುಲಭ, ಆದರೆ ಅದರ ಜಾಗದಲ್ಲಿ ಪರ್ಯಾಯವಾದ ಸಮರ್ಥ ಆಡಳಿತವನ್ನು ಕೂರಿಸುವುದು ಸುಲಭವಲ್ಲ. ಇದಕ್ಕೆ ಆಫಘಾನಿಸ್ತಾನ, ಇರಾಕ್ ಮತ್ತು ಲಿಬಿಯಾಗಳೇ ನಿದರ್ಶನ. ಅಲ್ಲಿ ಹಿಂದಿನ ಅಧಿಪತ್ಯ ಅಂತ್ಯವಾದ ಬಳಿಕ ಅಸ್ಥಿರತೆ, ಅಂತಃಕಲಹಗಳೇ ಹೆಚ್ಚು ತುಂಬಿವೆ. ಅದೇರೀತಿ, ಇರಾನ್ ಮೇಲೆ ನಡೆಯುತ್ತಿರುವ ವೈಮಾನಿಕ ದಾಳಿ ಮತ್ತು ಗುರಿ ನಿರ್ದೇಶಿತ ಹತ್ಯೆಗಳು ಅಲ್ಲಿನ ನಾಯಕತ್ವವನ್ನು ಕದಲಿಸಬಹುದು. ಆದರೆ ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ರೂಪುಗೊಳಿಸಲು ಶಕ್ತವಾಗದು.

ಸಮರ್ಥ ಆಡಳಿತ ಬದಲಾವಣೆಗೆ ಇನ್ನಿತರ ಹಲವಾರು ಪೂರಕ ವ್ಯವಸ್ಥೆಗಳು, ಜಾಗತಿಕ ಸಂಸ್ಥೆಗಳ ಸಹಕಾರವೂ ಬೇಕು.

'ನೂತನ ಯುದ್ಧ'ಗಳ ರೀತಿ

'ನೂತನ ಯುದ್ಧ'ಗಳ ರೀತಿಯೇ ಬದಲಾಗಿದೆ. ಆದಷ್ಟು ಕಡಮೆ ಜೀವಹಾನಿಯೊಂದಿಗೆ ಹೆಚ್ಚು ಸೊತ್ತು ಹಾನಿ ಸಂಭವಿಸುವಂತೆ ಮಾಡುವುದು ನೂತನ ಯುದ್ಧಗಳ ಉದ್ದೇಶ. "ನನ್ನ ಕಡೆಯಿಂದ ಹೆಚ್ಚು ಸಾವು ಉಂಟಾಗಬಾರದು. ವೈರಿ ಕಡೆಯಿಂದಲೂ ಆದಷ್ಟು ಕಡಿಮೆ ಜನ ಸಾಯಬೇಕು. ಆದರೆ ಉಳಿದೆಲ್ಲ ವ್ಯವಸ್ಥೆಗಳು ನಾಶವಾಗಬೇಕು" ಎಂಬುದು ಈ ನೀತಿ. ಈ ನೂತನ ಯುದ್ಧಗಳು ಅದ್ಭುತ ಜಯವನ್ನು ಒದಗಿಸಿಕೊಡುತ್ತವೆ. ಆದರೆ ಯುದ್ಧಾನಂತರದ ಪರಿಸ್ಥಿತಿ ಮಾತ್ರ ಶೋಚನೀಯವಾಗುತ್ತವೆ. ಲಿಬಿಯಾ ಇದಕ್ಕೆ ಉತ್ತಮ ಉದಾಹರಣೆ. ಗಡ್ಡಾಫಿಯನ್ನು ಕೊಲ್ಲುವುದು ಅತ್ಯಂತ ಸುಲಭ ಸಾಧ್ಯವಾಯಿತು. ಆದರೆ ಆ ಬಳಿಕ ಲಿಬಿಯಾ ರಾಜಕೀಯ ನೆಲಬಾಂಬ್ ತುಂಬಿದ ಮೈದಾನದಂತಾಗಿದೆ. ಅಲ್ಲಿ ಪ್ರಜಾಪ್ರಭುತ್ವ ಬರಲಿಲ್ಲ. ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿತು. ಆಂತರಿಕ ಕಲಹ ಹೆಚ್ಚಿತು. ಇರಾನ್ ಲಿಬಿಯಾಕ್ಕಿಂತ ದೊಡ್ಡ ದೇಶ. ಭೌಗೋಳಿಕವಾಗಿ, ರಾಜಕೀಯವಾಗಿ ಮತ್ತು ವಾಣಿಜ್ಯಿಕವಾಗಿ ಹೆಚ್ಚು ಮಹತ್ವ ಪಡೆದಿದೆ. ಅಲ್ಲಿ ಉಂಟಾಗುವ ಅಸ್ಥಿರತೆ, ಅಂತಃಕಲಹ ಇಡೀ ಜಗತ್ತಿನ ಮೇಲೆಯೇ ಪರಿಣಾಮ ಬೀರಬಲ್ಲದು. ಜಾಗತಿಕ ತೈಲ ಪೂರೈಕೆಯನ್ನು ಅಸ್ತವ್ಯಸ್ತಗೊಳಿಸಬಲ್ಲುದು.

ನಿರಂಕುಶ ಇಸ್ಲಾಮಿಕ್ ಅಧಿಕಾರವೊಂದು ಪತನಗೊಂಡರೆ ಆ ಬಳಿಕ ಅಲ್ಲಿ ಲಿಬರಲ್ ಪ್ರಜಾತಂತ್ರ ನೆಲೆಗೊಳ್ಳುತ್ತದೆ ಎಂದು ನಂಬುವಂತಿಲ್ಲ. ಫರೀದ್ ಜಕಾರಿಯಾ ಹೇಳಿದ್ದರು "ಅರಬ್ ಜಗತ್ತು ಒಂದು ರಾಜಕೀಯ ಮರುಭೂಮಿಯಂತೆ. ಅಲ್ಲಿ ನಿಜವಾದ ರಾಜಕೀಯ ಪಕ್ಷಗಳಿಲ್ಲ. ಪತ್ರಿಕಾ ಸ್ವಾತಂತ್ರ್ಯವಿಲ್ಲ, ಭಿನ್ನಮತಕ್ಕೆ ಅವಕಾಶವೂ ಇಲ್ಲ. ಹಾಗಾಗಿ ಮಸೀದಿಗಳು ರಾಜಕೀಯದ ಅಡ್ಡೆಗಳಾಗುತ್ತವೆ. ಮುಸ್ಲಿಂ ಸಮಾಜದಲ್ಲಿ ನಿಷೇಧಕ್ಕೆ ಒಳಗಾಗದ ಪ್ರದೇಶವೆಂದರೆ ಮಸೀದಿ ಮಾತ್ರವಾಗಿರುವುದರಿಂದ ಅಲ್ಲಿ ಆಡಳಿತದ ವಿರುದ್ಧ ದ್ವೇಷ ಮತ್ತು ವಿರೋಧ ಬೆಳೆಯುತ್ತದೆ. ಆಡಳಿತ ಕುಸಿದರೆ ಮಸೀದಿಯಲ್ಲಿರುವ ಮೂಲಭೂತವಾದಿಗಳೇ ಅಧಿಕಾರ ಕಬಳಿಸುವಂತಾಗುತ್ತದೆ"

ಅರಬ್ ವಸಂತದ ನಂತರ ಉಂಟಾದ ಬೆಳವಣಿಗೆಗಳು ಇದನ್ನು ದೃಢೀಕರಿಸುತ್ತವೆ. ಕೆಲವು ಅರಬ್ ರಾಷ್ಟ್ರಗಳಲ್ಲಿ ಜನಾಂದೋಲನದಿಂದ ರಾಜಪ್ರಭುತ್ವಗಳು ಪದಚ್ಯುತಗೊಂಡವಾದರೂ ಅಲ್ಲಿ ಬಳಿಕ ಹಿಡಿತ ಸಾಧಿಸಿದ್ದು ಇಸ್ಲಾಮಿಕ್ ಶಕ್ತಿಗಳೇ. ಮೂಲಭೂತವಾದಿ ಶಕ್ತಿಗಳೇ ವಿಜೃಂಭಿಸಿದವು. ಪ್ರಜಾತಾಂತ್ರಿಕ ವ್ಯವಸ್ಥೆಯೇನೂ ಅಲ್ಲಿ ಜನ್ಮತಳೆಯಲಿಲ್ಲ. ಇರಾನ್ ಕೂಡಾ ಆದಕ್ಕೆ ಅಪವಾದವಾಗಲಾರದು. ಇರಾನಿನನಲ್ಲಿ ಆಡಳಿತದ ವಿರುದ್ಧ ಜನರ ಆಕ್ರೋಶವಿರುವುದು ನಿಜವಾದರೂ ಅದು ಆರ್ಥಿಕ ದುಸ್ಥಿತಿಯ ವಿರುದ್ಧ ಮೂಡಿಬಂದ ಆಕ್ರೋಶ ಮತ್ತು ನವಪೀಳಿಗೆಯ ಆಕ್ರೋಶ.

ಯುದ್ಧ ಮುಗಿದ ಬಳಿಕ ಇರಾನ್ ಲಿಬರಲ್ ಪ್ರಜಾತಂತ್ರ ದೇಶವಾಗಬಹುದು ಅಥವಾ 1979ರ ಇಸ್ಲಾಮಿಕ್ ಕ್ರಾಂತಿಯ ಮೊದಲಿನ ಷಾ ಆಡಳಿತ ವ್ಯವಸ್ಥೆಗೆ ಮರಳಬಹುದು ಎಂದು ನಿರೀಕ್ಷಿಸುವುದು ರಾಜಕೀಯ ವಾಸ್ತವ ಎನಿಸಲಾರದು. 1979ರ ಮೊದಲಿನ ಷಾ ಆಡಳಿತ ಕೂಡಾ ಪ್ರಜಾತಾಂತ್ರಿಕವಾಗಿರಲಿಲ್ಲ. ಭಾರತದ ಪಾಲಿಗಂತೂ ಅದು ಪ್ರತಿಕೂಲ ಆಡಳಿತವಾಗಿತ್ತು. ಶೀತಲ ಸಮರದ ಸಂದರ್ಭದಲ್ಲಿ ಷಾ ಆಡಳಿತದ ಇರಾನ್ ಪಾಕಿಸ್ತಾನಕ್ಕೆ ಬೆಂಬಲ ನೀಡಿದ್ದು 1965 ಮತ್ತು 1971ರ ಯುದ್ಧದಲ್ಲಿ ಪಾಕಿಸ್ತಾನಕ್ಕೆ ಸೇನಾ ಸಹಾಯವನ್ನೂ ನೀಡಿತ್ತು.

ಭಾರತದ ಮೇಲೆ ಪರಿಣಾಮ

ಇರಾನ್‌ನಲ್ಲಿ ಈಗ ನಡೆಯುತ್ತಿರುವ ಯುದ್ಧವು ಭಾರತದ ಪಾಲಿಗಂತೂ ದೊಡ್ಡ ಹೊಡೆತವೇ. ಕೊಲ್ಲಿಯಲ್ಲಿ 95 ಲಕ್ಷ ಭಾರತೀಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ವಾರ್ಷಿಕವಾಗಿ 50 ಬಿಲಿಯ ಡಾಲರ್ ಆದಾಯವನ್ನು ತರುತ್ತಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಭಾರತದ ತೈಲ ಆಮದಿನ ಶೇ. 60ರಷ್ಟು ಕೊಲ್ಲಿಯಿಂದಲೇ ಬರುತ್ತಿರುವುದು. ಕೊಲ್ಲಿಯಲ್ಲಿ ಸ್ಥಿರ ಪರಿಸ್ಥಿತಿ ನೆಲೆಗೊಂಡಷ್ಟು ಭಾರತಕ್ಕೆ ಲಾಭ. ಅಸ್ಥಿರ ಇರಾನ್ ಭಾರತಕ್ಕೆ ಒಳ್ಳೆ ಫಲ ನೀಡದು. ಹಾಗಾಗಿಯೇ ಭಾರತವು ಮಧ್ಯಪ್ರಾಚ್ಯಕ್ಕೆ ಸಂಬಂಧಿಸಿ ಯಾರೊಂದಿಗೂ ವಿರೋಧ ಕಟ್ಟಿಕೊಳ್ಳದ ನೀತಿ ಅನುಸರಿಸುತ್ತಿರುವುದು. ಇಸ್ರೇಲ್ ಮತ್ತು ಇರಾನ್ ಎರಡರೊಂದಿಗೂ ಭಾರತದ ಸಂಬಂಧ ಸೌಹಾರ್ದಯುತವಾಗಿದೆ.

ಆಧುನಿಕ ಯುದ್ಧದ ಮತ್ತೊಂದು ಲಕ್ಷಣವೆಂದರೆ ಯುದ್ಧ ನಿರತರು ಅಪೇಕ್ಷಿಸಿದ ರಾಜಕೀಯ ಫಲಿತಾಂಶವನ್ನು ಅದು ಎಂದಿಗೂ ನೀಡುವುದಿಲ್ಲ. ಪ್ರಭಾವಿ ನಾಯಕನೊಬ್ಬನನ್ನು ಕೊನೆಗಾಣಿಸುವುದು ಆ ಕ್ಷಣದ ಗುರಿಯನ್ನು ಈಡೇರಿಸಬಹುದಾದರೂ ಅದು ಬಹಳಷ್ಟು ಬಾರಿ ಅನಿಶ್ಚಿತ ಅಧ್ಯಾಯವನ್ನು ಹೊಸದಾಗಿ ತೆರೆಯುತ್ತದೆ. ಇರಾನ್‌ನಲ್ಲಿ ಯುದ್ಧ ನಿರಂತರವಾಗಿ ಮುಂದುವರಿದರೆ ಅಯತೊಲ್ಲಾ ಖಮೇನಿ ಬದಲಿಗೆ ಸುಧಾರಣಾವಾದಿಗಳು ಅಧಿಕಾರ ಹಿಡಿಯುವುದಕ್ಕಿಂತಲೂ ಹೆಚ್ಚಾಗಿ ಉಗ್ರವಾದಿಗಳು ಮತ್ತು ಮೂಲಭೂತವಾದಿಗಳು ಅಧಿಕಾರ ಹಿಡಿಯುವ ಸಾಧ್ಯತೆಗಳಿವೆ. ರಾಜಕೀಯ ಶೂನ್ಯವು ಯಾವತ್ತೂ ಒಂದೇ ರೀತಿ ಇರುವುದಿಲ್ಲ. ಆ ಜಾಗವನ್ನು ಹೆಚ್ಚು ಸಂಘಟಿತವಾಗಿರುವ ಶಕ್ತಿಗಳು ತುಂಬಿಕೊಳ್ಳುತ್ತವೆ. ಅರಬ್ ಜಗತ್ತಿನಲ್ಲಿ ಸಂಘಟಿತ ಶಕ್ತಿಗಳೆಂದರೆ ಇಸ್ಲಾಮಿಕ್ ಮೂಲಭೂತವಾದಿಗಳು. ಅವರು ಹೆಚ್ಚು ಪ್ರಭಾವಶಾಲಿಗಳೂ ಆಗಿದ್ದಾರೆ.

ಆದ್ದರಿಂದ ಇರಾನಿಗೆ ಸಂಬಂಧಿಸಿ ಅಮೆರಿಕವು ಆಯ್ದುಕೊಳ್ಳಬಹುದಾದ ವಿವೇಕಯುತ ತಂತ್ರವೆಂದರೆ 'ಇರಾನ್ ಕಾರ್ಯತಂತ್ರ'ವನ್ನು ದೀರ್ಘಾವಧಿ ಮುಂದುವರಿಸದಿರುವುದು. ಇರಾನಿನಲ್ಲಿ ತನ್ನ ಹಸ್ತಕ್ಷೇಪವನ್ನು ಆದಷ್ಟು ಕಡಿಮೆ ಮಾಡಿಕೊಳ್ಳಬೇಕು. ಇರಾನಿನ ಪರಮಾಣು ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸುವುದಕ್ಕೆ ಮಾತ್ರ ತನ್ನ ಗುರಿಯನ್ನು ಸೀಮಿತಗೊಳಿಸಬೇಕು. ಇರಾನ್‌ನ ಹೊಸ ಆಡಳಿತದೊಂದಿಗೆ ರಾಜತಾಂತ್ರಿಕ ಸಂಬಂಧವನ್ನು ತಕ್ಷಣವೇ ಬೆಳೆಸಿಕೊಳ್ಳಬೇಕು.

ಇರಾನ್ ಮತ್ತು ಕೊಲ್ಲಿಯ ಭವಿಷ್ಯವು ತಕ್ಷಣದ ಮಿಲಿಟರಿ ಸ್ವಾಧೀನಕ್ಕಿಂತಲೂ ದೀರ್ಘಾವಧಿ ಸಹಿಷ್ಣುತೆ ಮತ್ತು ವಾಸ್ತವಿಕ ರಾಜಕೀಯದ ಮೇಲೆ ಹೆಚ್ಚು ಅವಲಂಬಿತವಾಗಿದೆ. ಬಿಕ್ಕಟ್ಟಿನ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಮುಟ್ಟದೇ ಬಿಡುವುದು ಹೆಚ್ಚು ಜಾಣತನ. ಪ್ರಜಾಪ್ರಭುತ್ವ ಯೋಜನೆಯೂ ಅದರಲ್ಲಿ ಒಂದು. ಇರಾನಿನ ಜನರು ಸದ್ಯಕ್ಕೆ ಪ್ರಜಾಪ್ರಭುತ್ವ ಬಯಸುವುದಿಲ್ಲವೆಂದಾದರೆ ಅವರಿಗೆ ಪ್ರಜಾತಂತ್ರದ ಪಾಠದ ಅಗತ್ಯವಿಲ್ಲ. ಆದರೆ ಇರಾನಿನಲ್ಲಿ ಸುವ್ಯವಸ್ಥೆ ನೆಲೆಸಬೇಕಾಗಿರುವುದು ಮುಖ್ಯ. ಈ ನಿಟ್ಟಿನಲ್ಲಿ ಪಾಶ್ಚಿಮಾತ್ಯ ದೇಶಗಳ ಹಸ್ತಕ್ಷೇಪ ಕೂಡಾ ಕಡಿಮೆಯಾಗಬೇಕು.

ಒಂದಂತೂ ನಿಜ, ಇದನ್ನೆಲ್ಲ ಆಲೋಚಿಸಬೇಕಾಗಿರುವುದು ಇರಾನಿನ ಪರಮಾಣು ವ್ಯವಸ್ಥೆಯನ್ನು ನಿಷ್ಕ್ರಿಯಗೊಳಿಸಿದ ಬಳಿಕ ಮತ್ತು ಪರಿಸರದಲ್ಲಿ ಯುದ್ಧ ಕೊನೆಗೊಂಡ ಬಳಿಕ!

ಗರುಡಪುರಾಣದಲ್ಲಿ ನರಕಗಳ ವರ್ಣನೆ

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಗರುಡಪುರಾಣವು ವಿಶೇಷವಾಗಿ ಜೀವನ ಪ್ರಾಯಣ (ಮರಣಪ್ರಕ್ರಿಯೆ, ಆದರ ಅನಂತರದ ಪ್ರಕ್ರಿಯೆಗಳು)ದ ವಿಚಾರವನ್ನು ತಿಳಿಸುತ್ತದೆ. ಗರುಡಪುರಾಣದ ಧರ್ಮಕಾಂಡ-ಪ್ರೇತಕಲ್ಪದಲ್ಲಿ ಕೃಷ್ಣನು ಗರುಡನಿಗೆ ಅನೇಕ ವಿಧದ ನರಕಗಳನ್ನು ವರ್ಣಿಸುವ ಪ್ರಸಂಗವಿದೆ. ಇಲ್ಲಿ ನರಕವು ಸಾವಿರಾರು ಸಂಖ್ಯೆಯಲ್ಲಿದ್ದು, ಅವೆಲ್ಲವುಗಳ ವರ್ಣನೆಯು ಕಷ್ಟಸಾಧ್ಯವಾದುದರಿಂದ ಕೆಲವು ಮುಖ್ಯ ನರಕಗಳನ್ನು ಮಾತ್ರ ವರ್ಣಿಸುವುದಾಗಿ ಪರಮಾತ್ಮನು ತಿಳಿಸುತ್ತಾ ನರಕವರ್ಣನೆಯನ್ನು ಆರಂಭಿಸುತ್ತಾನೆ.

ಮೊದಲಿಗೆ ರೌರವ ಎಂಬ ಹೆಸರಿನ ನರಕದ ವರ್ಣನೆಯನ್ನು ಮಾಡುತ್ತಾ, ಇದು ಎಲ್ಲ ನರಕಗಳಲ್ಲಿ ಪ್ರಧಾನವಾದ ನರಕವಾಗಿದೆಯೆಂಬುದಾಗಿ ತಿಳಿಸುತ್ತಾನೆ. ಇದು ಎರಡು ಸಾವಿರ ಯೋಜನಗಳಷ್ಟು ವಿಸ್ತೀರ್ಣವುಳ್ಳದ್ದಾಗಿದ್ದು, ಸುಳ್ಳನ್ನು ಹೇಳುವವರು ಈ ನರಕಕ್ಕೆ ಬೀಳುತ್ತಾರೆ. ಮೊಣಕಾಲಿನಷ್ಟು ಎತ್ತರದ ಗುಂಡಿಗಳಿಂದ ಕೂಡಿದ್ದಲ್ಲದೇ, ನಿಗಿನಿಗಿ ಸುಡುವ ಕೆಂಡಗಳಿಂದ ಇದು ಆವೃತವಾಗಿದೆ. ಇಡೀ ಲೋಕವೇ ತಪ್ತ ಅಂಗಾರಗಳಿಂದ ಕೂಡಿ ದಹಿಸುತ್ತಿದೆ. ಇಂಥ ಲೋಕಕ್ಕೆ ಯಮನ ದೂತರು ಪಾಪಿಗಳನ್ನು ನೂಕುತ್ತಾರೆ. ಆ ಲೋಕದಲ್ಲಿ ಪಾಪಿಯು ಅಗ್ನಿಯಿಂದ ತೀವ್ರವಾಗಿ ಸುಡಲ್ಪಡುತ್ತಾ ಅಲ್ಲಿಂದ ತಪ್ಪಿಸಿಕೊಳ್ಳಲು ಓಡುತ್ತಲೇ ಇರುತ್ತಾನೆ. ಕಾಲಿಟ್ಟಲ್ಲೆಲ್ಲ ಬೆಂಕಿಯ ಕೆಂಡ. ಆತನ ಕಾಲು ಬೆಂದು ಹೋಗುತ್ತದೆ. ಹೀಗೆ ಹಗಲು-ರಾತ್ರಿ ಓಡುತ್ತಾ ಓಡುತ್ತಾ ಸಾವಿರ ಯೋಜನಗಳಷ್ಟು ದೂರ ಸಾಗಿ ಆ ನರಕವನ್ನು ದಾಟುತ್ತಾನೆ. ಅವನನ್ನು ಮತ್ತೆ ಶುದ್ಧಿಗೋಸ್ಕರವಾಗಿ ಅದೇ ರೀತಿಯ ಮತ್ತೊಂದು ನರಕಕ್ಕೆ ಯಮದೂತರು ಕಳುಹಿಸುತ್ತಾರೆ.

ಇದು ರೌರವವೆಂಬ ನರಕದ ವರ್ಣನೆಯಾದರೆ, ಮುಂದೆ ಮಹಾರೌರವವೆಂಬ ಹೆಸರಿನ ನರಕದ ವರ್ಣನೆಯನ್ನು ಕೇಳು ಎನ್ನುತ್ತಾ ಕೃಷ್ಣನು ಆ ಲೋಕದ ಸ್ಥಿತಿಯನ್ನು ವಿವರಿಸುತ್ತಾನೆ. ಮಹಾರೌರವವೆಂಬ ನರಕವು ಐದು ಸಾವಿರ ಯೋಜನಗಳಷ್ಟು ವಿಸ್ತೀರ್ಣವಾದುದು. ಅಲ್ಲಿನ ಭೂಮಿಯು ತಾಮ್ರಬಣ್ಣದ್ದಾಗಿದ್ದು, ಆದರ ಕೆಳಗೆ ಬೆಂಕಿ ಉರಿಯುತ್ತಲೇ ಇರುವುದು. ಅಲ್ಲಿನ ಭೂಮಿಯು ಮಿಂಚಿನಷ್ಟು ಹೊಳಪುಳ್ಳದ್ದಾಗಿದೆ. ಇದು ಪಾಪಿಗಳಿಗೆ ಅತ್ಯಂತ ಭಯಜನಕವಾಗಿದ್ದು, ಯಮದೂತರು ಪಾಪಿಯ ಕೈ-ಕಾಲು ಕಟ್ಟಿ ಅಲ್ಲಿ ಉರುಳಿಸುತ್ತಾರೆ. ಹಾಗೆ ಬಿದ್ದ ಪಾಪಿಯು ಅಲ್ಲಿ ಉರುಳುತ್ತಲೇ ಇರುತ್ತಾನೆ. ದಾರಿಯಲ್ಲಿ ಕಾಗೆಗಳು, ಕೋಪದಿಂದ ಕೆರಳಿದ ತೋಳಗಳು, ಗೂಬೆಗಳು, ಸೊಳ್ಳೆಗಳು ಮೊದಲಾದ ಪ್ರಾಣಿಗಳು ಮತ್ತು ಕೀಟಗಳು ಆತನನ್ನು ಭಕ್ಷಿಸಲು ಹಾತೊರೆಯುತ್ತಿರುತ್ತವೆ. ಈ ಎಲ್ಲ ಕ್ರೂರ ಪ್ರಾಣಿಗಳಿಂದ ಆತ ಎಷ್ಟು ಹೆದರಿ ಕಂಗಾಲಾಗುತ್ತಾನೆಂದರೆ, ಆತನ ಬುದ್ಧಿಯೇ ಸ್ತಿಮಿತ ಕಳೆದುಕೊಳ್ಳುತ್ತದೆ. ಹೀಗೆ ಅಸಹಾಯಕನಾಗಿ ಚೀರಾಡುತ್ತಾ, ಅಶಾಂತನಾಗಿ ನರಳುತ್ತಾನೆ. ಸಾವಿರಾರು ವರ್ಷಗಳ ಕಾಲ ಅಲ್ಲಿ ಕಷ್ಟವನ್ನು ಅನುಭವಿಸುತ್ತಾ, ಕೊನೆಗೊಮ್ಮೆ ಅಲ್ಲಿಂದ ಆತನಿಗೆ ಮುಕ್ತಿ ದೊರೆಯುತ್ತದೆ.

ಇದರ ಅನಂತರ ಅತಿಶೀತವೆಂಬ ಹೆಸರಿನ ನರಕವಿದೆ. ಇದು ಈ ಹಿಂದಿನ ನರಕಗಳಿಗೆ ವಿರುದ್ಧವಾಗಿ ಅತ್ಯಂತ ಶೈತ್ಯದಿಂದ ಕೂಡಿದೆ. ಇದೂ ಕೂಡ ಮಹಾರೌರವನರಕದಂತೆ ಅತ್ಯಂತ ವಿಸ್ತಾರವಾದುದಾಗಿದೆ. ಇದು ಅತ್ಯಂತ ಗಹನವಾದ ಅಂಧಕಾರದಿಂದ ಕೂಡಿದುದಾಗಿದೆ. ಅತ್ಯಂತ ಚಳಿ ಇರುವುದರಿಂದ ಇಲ್ಲಿನ ಪಾಪಿಗಳು ಒಬ್ಬರನ್ನೊಬ್ಬರು ತಬ್ಬಿಕೊಂಡು ಚಳಿಯಿಂದ ರಕ್ಷಿಸಿಕೊಳ್ಳಲು ಹವಣಿಸುತ್ತಾರೆ. ಅವರ ಹಲ್ಲುಗಳು ಕಟಕಟನೆ ಶಬ್ದ ಮಾಡುವಷ್ಟು ತೀವ್ರವಾದ ಚಳಿ ಅಲ್ಲಿರುತ್ತದೆ. ಅಷ್ಟೇ ಅಲ್ಲ, ಶೀತಗಾಳಿಗೆ ಅವರ ದೇಹದ ಮೂಳೆಗಳೂ ಕೊರೆಯುವಂತಾಗುತ್ತದೆ. ಜೀವಿಯು ಅತ್ಯಂತ ಹಸಿವಿನಿಂದ ಕೊಳೆಯುತ್ತಿರುವ ಮೂಳೆ, ಮಾಂಸಗಳನ್ನು ತಿನ್ನುತ್ತದೆ. ಇಂಥ ಈ ನರಕದಲ್ಲಿ ಜೀವನಿಗೆ ತೀವ್ರವಾದ ಕಷ್ಟವನ್ನು ಎದುರಿಸಬೇಕಾಗುತ್ತದೆ.

ಇನ್ನು ಮುಂದಿನ ನರಕದ ಹೆಸರು ನಿಕೃಂತನ ಎಂಬುದಾಗಿ. ಇಲ್ಲಿ ನಿರಂತರವಾಗಿ ಕುಂಭಕಾರನ ಚಕ್ರದಂತೆ ಒಂದು ದೊಡ್ಡ ಚಕ್ರವು ತಿರುಗುತ್ತಲೇ ಇರುತ್ತದೆ. ಅದರ ಮೇಲೆ ಪಾಪಿಗಳನ್ನು ನಿಲ್ಲಿಸಿಕೊಂಡು ಯಮನ ಅನುಚರರು ತಮ್ಮ ಹರಿತವಾದ ಉಗುರುಗಳಿಂದ ಅವರ ಶರೀರವನ್ನು ಛೇದಿಸುತ್ತಾರೆ. ಆದರೂ ಆ ಪಾಪಿಗಳ ಪ್ರಾಣವು ಹೋಗುವುದಿಲ್ಲ. ಇದರಲ್ಲಿ ಶರೀರವು ನೂರಾರು ತುಂಡುಗಳಾಗಿ ಕತ್ತರಿಸಿಹೋಗುತ್ತದೆ. ಅನಂತರ ಮತ್ತೆ ಮೊದಲಿನಂತೆ ಶರೀರದ ಅವಯವಗಳು ಕೂಡಿಕೊಳ್ಳುತ್ತವೆ. ಈ ರೀತಿಯಲ್ಲಿ ಸಾವಿರಾರು ವರ್ಷಗಳವರೆಗೆ ಯಮದೂತರು ಇಲ್ಲಿ ಪಾಪಿಗಳನ್ನು ಶಿಕ್ಷಿಸುತ್ತಾ ಇರುತ್ತಾರೆ. ಅವರ ಎಲ್ಲ ಪಾಪಗಳೂ ನಾಶವಾಗಲಾಗಿ, ಕೊನೆಗೊಮ್ಮೆ ಈ ಲೋಕದಿಂದ ಅವರು ಮುಕ್ತಿಯನ್ನು ಹೊಂದುತ್ತಾರೆ.

ಇದಕ್ಕೆ ಕೊಂಚ ಭಿನ್ನವಾದ ಮತ್ತೊಂದು ನರಕವಿದೆ. ಅದರ ಹೆಸರು ಅಪ್ರತಿಷ್ಠ ಎಂಬುದಾಗಿ. ಈ ಲೋಕವನ್ನು ಹೊಂದಿದ ಪ್ರಾಣಿಯು ಸಹಿಸಲಸಾಧ್ಯವಾದ ದುಃಖವನ್ನು ಹೊಂದುತ್ತಾನೆ. ಈ ಲೋಕದಲ್ಲಿಯೂ ಚಕ್ರಗಳಿರುತ್ತವೆ. ಅದಕ್ಕೆ ಪಾಪಿಗಳನ್ನು ಕಟ್ಟಿ ಹಾಕಿ ಜೋರಾಗಿ ತಿರುಗಿಸುತ್ತಲೇ ಇರಲಾಗುತ್ತದೆ. ಜೀವನು ಆ ವೇಗವಾಗಿ ತಿರುಗುವ ಚಕ್ರಕ್ಕೆ ಬಂಽಸಲ್ಪಟ್ಟು, ತಲೆ ತಿರುಗಿ, ರಕ್ತವಾಂತಿಯನ್ನು ಮಾಡಿಕೊಳ್ಳುತ್ತಾನೆ. ಚಕ್ರದ ವೇಗಕ್ಕೆ ಕಣ್ಣುಗಳು ಸಿಕ್ಕಿಹಾಕಿಕೊಳ್ಳುತ್ತವೆ. ಅವಯವಗಳು ಶಿಥಿಲಗೊಳ್ಳುತ್ತವೆ. ಕರುಳುಗಳು ಬಾಯಿಂದ ಹೊರಬರುತ್ತವೆ. ಹೀಗೆ ಇದು ಕೂಡ ಅತ್ಯಂತ ಕಷ್ಟಕರವಾದ ಶಿಕ್ಷೆಯನ್ನು ಒಳಗೊಂಡ ನರಕವಾಗಿದೆ.

ಇನ್ನು ಅಸಿಪತ್ರವೆಂಬ ಒಂದು ನರಕಲೋಕವಿದೆ. ಇದು ಸಾವಿರ ಯೋಜನಗಳಷ್ಟು ವಿಸ್ತೀರ್ಣವಾದುದು. ಇದರಲ್ಲಿ ಅಗ್ನಿಯು ತುಂಬಿಹೋಗಿರುವುದರಿಂದ ಸರ್ವದಾ ಜ್ವಲಿಸುತ್ತಲೇ ಇರುತ್ತದೆ. ಈ ಭಯಂಕರವಾದ ನರಕದಲ್ಲಿ ಏಳು ಸೂರ್ಯರು ತಮ್ಮ ಪ್ರಖರ ರಶ್ಮಿಗಳಿಂದ ಸುಡುತ್ತಲೇ ಇರುತ್ತಾರೆ. ಇದರ ತಾಪದಿಂದ ಜೀವಿಗಳು ಇನ್ನಿಲ್ಲದಷ್ಟು ಕಷ್ಟವನ್ನು ಅನುಭವಿಸುತ್ತಾರೆ. ವಿಶೇಷವೆಂದರೆ ಈ ನರಕದ ಮಧ್ಯಭಾಗದಲ್ಲಿ ಶೀತಸ್ನಿಗ್ಧಪತ್ರವೆಂಬ ಹೆಸರಿನ ವನವಿದೆ. ಅಲ್ಲಿ ಮರಗಳಿಂದ ಉದುರಿಬಿದ್ದಿರುವ ಫಲಗಳು ಮತ್ತು ಎಲೆಗಳ ರಾಶಿಯೇ ಇರುತ್ತದೆ. ಇಲ್ಲಿ ಅತ್ಯಂತ ಶೈತ್ಯವಿದ್ದು, ದೊಡ್ಡ ದೊಡ್ಡ ಹಲ್ಲುಗಳಿರುವ ಕ್ರೂರ ನಾಯಿಗಳು ಕಾವಲು ಕಾಯುತ್ತಿರುತ್ತವೆ. ಇದನ್ನು ನೋಡಿ ಜೀವನು ಬಾಯಾರಿಕೆಯಿಂದ ಪೀಡಿತನಾಗಿ ದೊಡ್ಡದಾಗಿ ಅಳುತ್ತಾ ಈ ನರಕವನ್ನು ಪ್ರವೇಶಿಸುತ್ತಾನೆ. ಹಾಗೆ ಪ್ರವೇಶಿಸಿದ ಜೀವಿಯ ಮೇಲೆ ಖಡ್ಗದಷ್ಟು ಹರಿತವಾದ ಎಲೆಗಳು ಅವನ ಮೈಮೇಲೆ ಬೀಳಲು ತೊಡಗುತ್ತವೆ. ಜೊತೆಗೆ ಅಲ್ಲಿನ ನಾಯಿಗಳು ಆತನ ಮೇಲೆ ಆಕ್ರಮಣ ಮಾಡುತ್ತವೆ. ಹೀಗೆ ಇದು ಅತ್ಯಂತ ಭಯಾನಕವಾದ ನರಕವಾಗಿದೆ.

ಇಂಥದ್ದೇ ಮತ್ತೊಂದು ನರಕದ ಹೆಸರು ತಪ್ತಕುಂಭ ಎಂಬುದಾಗಿ. ಇಲ್ಲಿ ಬಿಸಿ ಎಣ್ಣೆ ತುಂಬಿರುವ ಪಾತ್ರೆಗಳು ಹರಡಿಕೊಂಡಿರುತ್ತವೆ. ಇವುಗಳಲ್ಲಿ ಕುದಿಯುತ್ತಿರುವ ಎಣ್ಣೆ ಮತ್ತು ಕಬ್ಬಿಣದ ಪುಡಿಯಿರುತ್ತದೆ. ಇದರಲ್ಲಿ ಪಾಪಿಗಳನ್ನು ಕೊಂಡೊಯ್ದು ಎಣ್ಣೆಯಲ್ಲಿ ಅದ್ದಲಾಗುತ್ತದೆ. ಹೀಗೆ ಬಿಸಿ ಎಣ್ಣೆಯಲ್ಲಿ ಸುಡಲ್ಪಟ್ಟ ಆ ದೇಹವನ್ನು ಹರಿತವಾದ ಆಯುಧಗಳಿಂದ ಛಿನ್ನಗೊಳಿಸಲಾಗುತ್ತದೆ. ಅವರ ನರಗಳನ್ನೂ, ಸ್ನಾಯುಗಳನ್ನೂ, ದ್ರವೀಭೂತವಾದ ಮಾಂಸಗಳನ್ನೂ ಆ ಮಾಂಸದಲ್ಲಿ ಹಾಕಿ ಕರಿಯಲಾಗುತ್ತದೆ.

ಹೀಗೆ ನರಕಗಳಲ್ಲಿ ಕ್ರಮವಾಗಿ ರೌರವ, ಮಹಾರೌರವ, ಅತಿಶೀತ, ನಿಕೃಂತನ, ಅಪ್ರತಿಷ್ಠ, ಅಸಿಪತ್ರವನ, ಏಳನೆಯದಾಗಿ ತಪ್ತಕುಂಭಗಳೆಂಬ ನರಕಗಳು ಕ್ರಮವಾಗಿ ಕ್ರೂರತೆಯಲ್ಲಿ ಪ್ರಧಾನವಾದವುಗಳಾಗಿವೆ. ಇವುಗಳಷ್ಟೇ ಅಲ್ಲದೇ, ರೋಧ, ಸೂಕರ, ತಾಲ, ಮಹಾಜ್ವಾಲ, ಶಬಲ, ವಿಮೋಹನ, ಕೃಮಿ, ಕೃಮಿಭಕ್ಷ, ಲಾಲಾಭಕ್ಷ, ವಿಷಂಜನ, ಅಧಃಶಿರ, ಪೂಯವಹ, ರುಽರಾಂಧ, ವಿಡ್ಭುಜ, ವೈತರಣೀ, ಅಸಿಪತ್ರವನ, ಅಗ್ನಿಜ್ವಾಲ, ಮಹಾಘೋರ, ಸಂದಂಶ, ಅಭೋಜನ, ತಮಸ್, ಕಾಲಸೂತ್ರ, ಲೌಹತಾಪೀ, ಅಭಿದ, ಅಪ್ರತಿಷ್ಠ, ಅವೀಚಿ ಮೊದಲಾದ ನರಕಗಳೂ ಇವೆ. ಪಾಪಿಗಳು ತಮ್ಮ ಕರ್ಮಾನುಸಾರ ಆಯಾ ಲೋಕಕ್ಕೆ ಹೋಗಿ ಬೀಳುತ್ತಾರೆ.

ಈ ಎಲ್ಲ ನರಕಗಳೂ ಭೂಲೋಕದಿಂದ ಕೆಳಗಿವೆ. ಗೋಹತ್ಯೆ, ಭ್ರೂಣಹತ್ಯೆ, ಬೆಂಕಿ ಇಡುವಂಥ ಕೆಟ್ಟ ಕಾರ್ಯಗಳನ್ನು ಯಾರು ಮಾಡುತ್ತಾರೋ ಅಂಥವರು ರೋಧ ಎಂಬ ಹೆಸರಿನ ನರಕವನ್ನು ಹೊಂದುತ್ತಾರೆ. ಯಾರು ಬ್ರಹ್ಮಘಾತಿಯೂ, ಮದ್ಯಪಾನವನ್ನು ಮಾಡುವವನೂ, ಸುವರ್ಣವನ್ನು ಅಪಹರಿಸಿದವನೂ ಆಗಿದ್ದಾನೋ ಅಂಥವನು ಸೂಕರವೆಂಬ ನರಕವನ್ನು ಹೊಂದುತ್ತಾನೆ. ಕ್ಷತ್ರಿಯ ಮತ್ತು ವೈಶ್ಯನ ಹತ್ಯೆಯನ್ನು ಗೈದವನು ತಾಲ ಎಂಬ ನರಕವನ್ನು ಹೊಂದುತ್ತಾನೆ. ಬ್ರಹ್ಮಹತ್ಯೆ ಮತ್ತು ಗುರುಪತ್ನೀ ಸಹವಾಸವನ್ನು ಮಾಡುತ್ತಾನೋ ಅಂಥವನು ತಪ್ತಕುಂಭವೆಂಬ ನರಕವನ್ನೂ, ನಿಷಿದ್ಧ ಪದಾರ್ಥಗಳನ್ನು ಮಾರುವವನೂ, ಸ್ವಾಮಿಭಕ್ತ ಸೇವಕನನ್ನು ಪರಿತ್ಯಜಿಸುವವನೋ ಅಂಥವನು ತಪ್ತಲೌಹವೆಂಬ ನರಕವನ್ನು ಹೊಂದುತ್ತಾನೆ. ವೇದನಿಂದಕರು ಮಹಾಜ್ವಾಲವೆಂಬ ನರಕವನ್ನೂ, ಗುರುವಿಗೆ ಅಪಮಾನ ಮಾಡಿದವರು ಶಬಲವೆಂಬ ನರಕವನ್ನು ಹೊಂದುತ್ತಾರೆ.

ಯುದ್ಧನಿಯಮವನ್ನು ಮೀರಿದವನು ವಿಮೋಹನವೆಂಬ ನರಕವನ್ನೂ, ಮತ್ತೊಬ್ಬರಿಗೆ ಅನಿಷ್ಟವನ್ನು ಉಂಟುಮಾಡುವವನು ಕೃಮಿಭಕ್ಷವೆಂಬ ನರಕವನ್ನೂ, ದೇವ-ದ್ವಿಜದ್ವೇಷಿಗಳು ಲಾಲಾಭಕ್ಷವೆಂಬ ನರಕವನ್ನು ಹೊಂದುತ್ತಾರೆ. ಹೀಗೆ ಒಂದೊಂದು ಪಾಪಕ್ಕೂ ಅದಕ್ಕೆ ತಕ್ಕುದಾದ ನರಕಗಳ ಪಟ್ಟಿಯನ್ನೇ ಗರುಡಪುರಾಣದಲ್ಲಿ ಕೊಡಲಾಗಿದೆ. ಒಟ್ಟಿನಲ್ಲಿ ಇವುಗಳ ಸಾರಾಂಶವೇನೆಂದರೆ, ಇಂಥ ಪಾಪಗಳನ್ನು ಆಚರಿಸುವಾಗ ಇವೆಲ್ಲವೂ ನೆನಪಾಗಿ ಮನುಷ್ಯ ಅಧರ್ಮಮಾರ್ಗದಿಂದ ಹಿಂದೆ ಸರಿಯುವಂತಾಗಬೇಕೆಂಬುದೇ ಆಗಿದೆ. ಇವೆಲ್ಲವನ್ನು ತಿಳಿದೂ ನಾವು ಪಾಪಾಚರಣೆಯಿಂದ ಹಿಂದೆ ಸರಿಯುವುದಿಲ್ಲವೆಂಬುದು ಮಾತ್ರ ಅತ್ಯಂತ ಸೋಜಿಗದ ವಿಷಯ.

ಕಿರುಸುದ್ದಿ

ನಿಟ್ಟೆ ಉಷಾ ನರ್ಸಿಂಗ್ ಸೈನ್ಸಸ್ ಸಂಸ್ಥೆಯ 33ನೇ ವಾರ್ಷಿಕೋತ್ಸವ

ಮಂಗಳೂರು: ನಿಟ್ಟೆ ಉಷಾ ನರ್ಸಿಂಗ್ ಸೈನ್ಸಸ್ ಸಂಸ್ಥೆಯ 33ನೇ ವಾರ್ಷಿಕೋತ್ಸವ ಮಾ.6ರಂದು ಬೆಳಗ್ಗೆ 10ಕ್ಕೆ ದೇರಳಕಟ್ಟೆಯ ಕೆ.ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿ ಆಡಿಟೋರಿಯಂನಲ್ಲಿ ಸಮನ್ವಯ–2026 ಎಂಬ ಶೀರ್ಷಿಕೆಯಡಿಯಲ್ಲಿ ನಡೆಯಲಿದೆ. ಮುಖ್ಯ ಅತಿಥಿಯಾಗಿ ಹೊಸದಿಲ್ಲಿಯ ಟ್ರೈನ್ಡ್ ನರ್ಸ್ ಅಸೋಸಿಯೇಶನ್ ಆಫ್ ಇಂಡಿಯಾದ ಕಾರ್ಯದರ್ಶಿ ಎವ್ಲಿನ್ ಪಿ. ಕಣ್ಣನ್ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ನಿಟ್ಟೆ ಡೀಮ್ಡ್ ಟು ಬಿ ಯುನಿವರ್ಸಿಟಿಯ ತಾಂತ್ರಿಕ ಶಿಕ್ಷಣದ ಉಪಾಧ್ಯಕ್ಷ ಡಾ. ಗೋಪಾಲ್ ಮೊಗರಾಯ ವಹಿಸಲಿದ್ದಾರೆ. ಇದೇ ಸಂದರ್ಭ ಸಾಧಕ ವಿದ್ಯಾರ್ಥಿಗಳನ್ನು ಹಾಗೂ 2025ರಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿ, ಅತ್ಯುತ್ತಮ ಸಂಶೋಧಕ ಪ್ರಶಸ್ತಿ ಹಾಗೂ ಅತ್ಯುತ್ತಮ ಸಂಶೋಧನಾ ಪ್ರಬಂಧ ಪ್ರಶಸ್ತಿ ಪಡೆದವರನ್ನು ಸನ್ಮಾನಿಸಲಾಗುತ್ತದೆ ಎಂದು ಸಂಸ್ಥೆಯ ಪ್ರಾಂಶುಪಾಲರಾದ ಡಾ.ಫಾತಿಮಾ ಡಿಸಿಲ್ವ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ವಿದ್ಯಾರ್ಥಿಗಳಾದ ಎಂಎಸ್ಸಿ ನರ್ಸಿಂಗ್‌ನ ಚಾಸಲ್ ರೋಸಲಿನ್ ಡಾಕ್ರು, ಪಿ.ಬಿ.ಬಿ.ಎಸ್.ಸಿ. ನರ್ಸಿಂಗ್‌ನ ಫ್ಲೋರಿನ ಮುರ್ರೆ ಮತ್ತು ಬಿಎಸ್ಸಿ ನರ್ಸಿಂಗ್‌ನ ಗ್ಯಾಬ್ರಿಯೆಲ್ಲಾ ಲ್ಯಾನೋ ಅವರನ್ನು ಸನ್ಮಾನಿಸಲಾಗುವುದು ಎಂದರು. ಸಂಸ್ಥೆಯ ಉಪ ಪ್ರಾಂಶುಪಾಲರಾದ ಸಬಿತಾ ನಾಯಕ್, ಉಪನ್ಯಾಸಕರಾದ ಮಾಳವಿಕಾ, ಪ್ರತಿಮಾ ಶೆಣೈ, ಡಾ.ಜೆಸಿಂತಾ ವೇಗಸ್ ಉಪಸ್ಥಿತರಿದ್ದರು.

ತಣ್ಣೀರುಬಾವಿ ಬೀಚ್‌ನಲ್ಲಿ 'ಅಲ್ಟಿಮೇಟ್ ಫ್ರಿಸ್ಬಿ' ಕ್ರೀಡೆ

ಮಂಗಳೂರು: ಕರ್ನಾಟಕ ಅಲ್ಟಿಮೇಟ್ ಪ್ಲೇಯರ್ಸ್ ಅಸೋಸಿಯೇಶನ್ ವತಿಯಿಂದ ಮಾ. 6ರಿಂದ 8ರವರೆಗೆ ಮಂಗಳೂರಿನ ತಣ್ಣೀರುಬಾವಿ ಬೀಚ್‌ನಲ್ಲಿ ಇಂಡಿಯಾ ಅಲ್ಟಿಮೇಟ್ ಬೀಚ್ ನ್ಯಾಶನಲ್ 2026– 'ಅಲ್ಟಿಮೇಟ್ ಫ್ರಿಸ್ಬಿ' ಕ್ರೀಡೆ ಆಯೋಜಿಸಲಾಗಿದೆ. ಫುಟ್‌ಬಾಲ್, ಬಾಸ್ಕೆಟ್‌ಬಾಲ್‌ನ ಅಂಶಗಳನ್ನು ಹೊಂದಿರುವ, ಆದರೆ ರೆಫ್ರಿಯೇ ಇಲ್ಲದೆ ಆಡುವ ಕ್ರೀಡೆ ಇದಾಗಿದ್ದು, ಕರ್ನಾಟಕದ ಕರಾವಳಿಗರಿಗೆ ವಿನೂತನ ಕ್ರೀಡೆಯಾಗಿದೆ. ಇಂಡಿಯಾ ಅಲ್ಟಿಮೇಟ್ ಬೀಚ್ ನ್ಯಾಶನಲ್ಸ್ 2026 ಸ್ಪರ್ಧೆಯಲ್ಲಿ ದೇಶದ ವಿವಿಧ ಭಾಗಗಳಿಂದ ಒಟ್ಟು 25 ತಂಡಗಳು ಭಾಗವಹಿಸಲಿವೆ ಎಂದು ಕರ್ನಾಟಕ ಅಲ್ಟಿಮೇಟ್ ಪ್ಲೇಯರ್ಸ್ ಅಸೋಸಿಯೇಶನ್(ಕೆಯುಪಿಎ) ಅಧ್ಯಕ್ಷ ಅಭಿಷೇಕ್ ಕುಮಾರ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 9 ಮಹಿಳಾ ತಂಡಗಳು ಹಾಗೂ 16 ಮುಕ್ತ ತಂಡಗಳಿವೆ. ಈ ಕ್ರೀಡೆಯು ಬೆಳಗ್ಗೆ 6.30ರಿಂದ 10.30ರವರೆಗೆ ಹಾಗೂ ಸಂಜೆ 3ರಿಂದ 6.45ರವರೆಗೆ ನಡೆಯಲಿದೆ. ಇಂಡಿಯಾ ಅಲ್ಟಿಮೇಟ್ ಭಾರತದಲ್ಲಿ ಅಲ್ಟಿಮೇಟ್ ಫ್ರಿಸ್ಬಿ ಕ್ರೀಡೆಯ ಅಧಿಕೃತ ಸಂಸ್ಥೆಯಾಗಿದೆ. ಕೆಯುಪಿಎ ಕಳೆದ 10 ವರ್ಷಗಳಿಂದ ಕರ್ನಾಟಕದಲ್ಲಿ ಕ್ರೀಡೆಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಅತೀ ಹೆಚ್ಚು ಅಲ್ಟಿಮೇಟ್ ಆಟಗಾರರನ್ನು ಹೊಂದಿದೆ ಎಂದರು. ಸಾಮಾನ್ಯವಾಗಿ ಹುಲ್ಲಿನಲ್ಲಿ ಆಡಲಾಗುವ ಈ ಆಟವನ್ನು ಕಡಲ ತೀರದಲ್ಲಿಯೂ ನಡೆಸಲಾಗುತ್ತಿದೆ. ದೇಶದ ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲ ಬಾರಿಗೆ ಮಂಗಳೂರಿನ ಬೀಚ್‌ನಲ್ಲಿ ಈ ಕ್ರೀಡೆಯನ್ನು ಆಯೋಜಿಸಲಾಗಿದ್ದು, ಕರಾವಳಿಗರಿಗೆ ಈ ವಿನೂತನ ಆಟವನ್ನು ವೀಕ್ಷಿಸಲು ಸದವಕಾಶ ಎಂದು ಅವರು ಹೇಳಿದರು. ಪ್ರಮುಖರಾದ ಶರಣ್ ಶೆಟ್ಟಿ, ಸುಹಾನಿ ವೇದಿ, ಸುಧೀರ್ ಶೆಣೈ, ಕ್ಷಿತಿ ರವಿ ಉಪಸ್ಥಿತರಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಪ್ರಭಾಕರ ಶೆಟ್ಟಿ, 'ಶ್ರೀ ಬಾಂಧವ್ಯ', ಹೆಜಮಾಡಿ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
2. ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಬೀಬಲಬೆಟ್ಟು, ಅಡ್ವಪಾಡಿ, ಬಜಪೆ.
3. ಹತ್ತು ಸಮಸ್ತರು, ಆಲೆಕ್ಕಾಡಿ ಶಾಲಾ ವಠಾರದಲ್ಲಿ ವಯಾ ನಿಂತಿಕಲ್ಲು, ಸುಳ್ಯ (ತಾ).
4. ಸುಮತಿ ಸುಂದರ ಸಾಲ್ಯಾನ್, ವಿಶ್ವಲ್ ಮನೆ, ಯರ್ಲಪಾಡಿ ವಯಾ ಬೈಲೂರು, ಕಾರ್ಕಳ (ತಾ).
5. ಶಶೀಂದ್ರ ಜೆ. ಬಂಗೇರ, 'ಐಶ್ವರ್ಯ', ಕಲ್ಲಪೆ ಪದವು, ಕುಲಶೇಖರ, ಮಂಗಳೂರು (ತಾ).
6. ಬಾಲಕೃಷ್ಣ ಕೆ. ಶೆಟ್ಟಿ, 'ರಥಿ', ವಿಜಯ ನಗರ, ಮಧ್ಯ, ಸುರತ್ಕಲ್ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ಡಾ। ಪದ್ಮನಾಭ ಉಡುಪ, ಮಿತ್ತಬೈಲ್, ಪುತ್ತಿಗೆ ವಯಾ ಮೂಡುಬಿದ್ರಿ

ಶ್ರೀ ಧರ್ಮಸ್ಥಳ ಮೇಳ
ಆರ್ಡಿ ತೊಣ್ಣಾಸೆಯಲ್ಲಿ
ಶ್ರೀ ಅನಂತ ಆಚಾರ್ ಮತ್ತು ಮನೆಯವರು
ತೊಣ್ಣಾಸೆ ಮನೆ

ಶ್ರೀ ಸಾಲಿಗ್ರಾಮ ಮೇಳ
ಸಾಗರದ ಬಟ್ಟೆಮಲ್ಲಪ್ಪದಲ್ಲಿ

ಶ್ರೀ ಪೆರ್ಡೂರು ಮೇಳ
ಮಂಗೂರಿನಲ್ಲಿ
ಬ್ರಹ್ಮಕಪಾಲ, ಕನಕಾಂಗಿ ಕಲ್ಯಾಣ

ಶ್ರೀ ಹನುಮಗಿರಿ ಮೇಳ
ಕೈರಂಗಳದಲ್ಲಿ

ಶ್ರೀ ಪಾವಂಜೆ ಮೇಳ
ಮುಂಡಪ್ಪಳ್ಳ ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ
ಶ್ರೀ ದೇವಿ ಮಹಾತ್ಮೆ



ಕೇರಳ ಎಸ್‌ಆರ್‌ಟಿಸಿ ಕಾಸರಗೋಡು ಡಿಪೋಗೆ ಹೊಸದಾಗಿ ಮಂಜೂರು ಮಾಡಲಾದ ಪ್ರೀಮಿಯಂ ಸೂಪರ್ ಫಾಸ್ಟ್ ಬಸ್‌ಗಳ ಸಂಚಾರಕ್ಕೆ ಶಾಸಕ ಎನ್.ಎ. ನೆಲ್ಲಿಕುನ್ನು ಹಸಿರು ನಿಶಾನೆ ತೋರಿದರು. ವಾರ್ಡ್ ಕೌನ್ಸಿಲರ್ ರಾಮಕೃಷ್ಣ ಹೊಳ್ಳ, ಡಿಪೋ ಜ. ಕಂಟ್ರೋಲಿಂಗ್ ಇನ್ಸ್‌ಪೆಕ್ಟರ್ ಎಂ.ಕೆ. ಸಜಿತ್, ಡಿಪೋ ಜೋರ್ಜ್‌ಮನ್ ಮೋಹನ್‌ಕುಮಾರ್ ಇದ್ದರು.

ಅರೆಭಾಷೆ ಅಕಾಡೆಮಿ 2025ನೇ ಸಾಲಿನ ಗೌರವ ಪ್ರಶಸ್ತಿ ಪ್ರಕಟ

ಮಾ.14 ರಂದು ಗೌರವ ಪ್ರಶಸ್ತಿ ಪ್ರದಾನ

ಮಡಿಕೇರಿ: ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ 2025ನೇ ಸಾಲಿನ ಗೌರವ ಪ್ರಶಸ್ತಿ ಪ್ರಕಟಿಸಲಾಗಿದೆ. ಮಾರ್ಚ್ 14 ರಂದು ಮಂಗಳೂರಿನ ಉರ್ವ ಸ್ಟೋರ್ ಸಮೀಪದಲ್ಲಿರುವ ಅಂಬೇಡ್ಕರ್ ಭವನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಗೌರವ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಪ್ರಶಸ್ತಿಯು 50 ಸಾವಿರ ರೂ.ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ ಎಂದು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಅವರು ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಅನಂತರಾಜ ಗೌಡ (ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರ), ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಲೋಕೇಶ್ವರಿ ವಿನಯಚಂದ್ರ (ಅರೆಬಾಷಿಕ ಸಂಘಟನಾ ಕ್ಷೇತ್ರ) ಮತ್ತು ಕೊಡಗು ಜಿಲ್ಲೆ ಮಡಿಕೇರಿಯ ಕಟ್ರತನ ಲಲಿತಾ ಅಯ್ಯಣ್ಣ (ಅರೆಭಾಷೆ





ಸಾಹಿತ್ಯ ಕ್ಷೇತ್ರ) ಅವರುಗಳನ್ನು ಆಯ್ಕೆ ಮಾಡಲಾಗಿದೆ.

ಮಂಗಳೂರಿನಲ್ಲಿ ಮಾರ್ಚ್ 14 ರಂದು ನಡೆಯುವ ಸಮಾರಂಭದಲ್ಲಿ ಅಕಾಡೆಮಿ ಪ್ರಕಟಿತ ಪುಸ್ತಕಗಳ ಬಿಡುಗಡೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲಾವಿದರಿಗೆ ವಾದ್ಯ ಪರಿಕರಗಳ ವಿತರಣೆ ಹಾಗೂ ಅರೆಭಾಷೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಅವರು ತಿಳಿಸಿದ್ದಾರೆ.

ತುಳುನಾಡ ಸಾಂಪ್ರದಾಯಿಕ ಆಚರಣೆ ನಡೆಸಲು ಅವಕಾಶ ಬೇಕು

ವೇದಿಕೆ, ಪಶುಸಖಿ ಮನವಿ

ಸುಳ್ಯ: ತುಳುನಾಡಿನ ಸಾಂಪ್ರದಾಯಿಕ ಮತ್ತು ಆಚರಣೆಗಳನ್ನು ನಡೆಸಲು ಅವಕಾಶ ನೀಡಲು, ಅದನ್ನು ಉಳಿಸಲು ಕ್ರಮ ವಹಿಸಬೇಕು ಎಂದು ಸಾಂಪ್ರದಾಯಿಕ ಆಚರಣಾ ಹಿತರಕ್ಷಣಾ ವೇದಿಕೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಸುಳ್ಯ ಪಶು ಸಖಿಯರು ತಮ್ಮ ಗೌರವಧನ ಮತ್ತು ಪ್ರಯಾಣ ಭತ್ಯೆ ಕುರಿತಾಗಿ ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರಿಗೆ ಕಚೇರಿಯಲ್ಲಿ ಮನವಿ ಸಲ್ಲಿಸಿದರು.

ತುಳುನಾಡಿನ ಕ್ರೀಡೆಗಳಾಗಿ ಸಾಂಪ್ರದಾಯಿಕ ಹಿಂದಿನಿಂದಲೂ ಪ್ರಚಲಿತದಲ್ಲಿರುವ ಕಂಬಳ, ಕೋಳಿ ಅಂಕ, ತೆಂಗಿನಕಾಯಿ ಕುಟ್ಟುವುದು ಮುಂತಾದ ಕ್ರೀಡೆಗಳು ತುಳುನಾಡಿನ ಜಾತ್ರೆ, ದೈವ ಕೋಲ ಮುಂತಾದ ಪರ್ವದಿನಗಳಲ್ಲಿ ಸಂಪ್ರದಾಯಬದ್ಧವಾಗಿ ನಡೆಸಲ್ಪಡುವ ಕ್ರೀಡೆಗಳಾಗಿದೆ. ಇದನ್ನು ಜೂಜಾಟವೆಂಬಂತೆ ಬಿಂಬಿಸಿ ಸಾಂಪ್ರದಾಯಿಕ ಆಚರಣೆಗಳನ್ನು ಹತ್ತಿಕ್ಕುವುದು ನಮಗೆ ಅತೀವ ನೋವಿನ ಸಂಗತಿಯಾಗಿದೆ. ತುಳುನಾಡಿನ ಸಾಂಸ್ಕೃತಿಕ ಸೌಂದರ್ಯ ಉಳಿದುಕೊಳ್ಳಬೇಕಾದರೆ ಇಲ್ಲಿನ ಪ್ರತಿಯೊಂದು ಆಚರಣೆಗಳನ್ನು ಕೂಡ ಯಥಾ ಪ್ರಕಾರ ಉಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಮನವಿಯಲ್ಲಿ ಹೇಳಲಾಗಿದೆ.

ಮೇಲ್ನೋಟಕ್ಕೆ ಇವೆಲ್ಲ ಕ್ರೀಡೆಗಳಂತೆ ಕಂಡು ಬಂದರೂ ಇದರ ಹಿನ್ನೆಲೆಯಲ್ಲಿತಲೆ ಎತ್ತುವ ಗೂಡಂಗಡಿ, ಹೋಟೇಲ್, ತಂಪು ಪಾನೀಯ ಇತ್ಯಾದಿ ಅಂಗಡಿಗಳ ಮೂಲಕ ತಮ್ಮ ತಮ್ಮ ತಮ್ಮ ಹೊಟ್ಟೆಪಾಡಿಗಾಗಿ ಅದೆಷ್ಟೋ ಮಧ್ಯಮವರ್ಗದ ವ್ಯಾಪಾರಿಗಳು ಬದುಕನ್ನು ಕೂಡ ಕಟ್ಟಿಕೊಂಡಿದ್ದಾರೆ. ಈ ಕ್ರೀಡೆಗಳನ್ನು ಹತ್ತಿಕ್ಕಿದರೆ ಅದೆಷ್ಟೋ ಮಧ್ಯಮ ವರ್ಗದವರ ದುಡಿಮೆಯನ್ನು ಕಿತ್ತುಕೊಂಡಂತಾಗುತ್ತದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಮಾಮೂಲಿ ದಿನಗಳಲ್ಲಿ ಈ ಕ್ರೀಡೆಗಳಿಗೆ ಅವಕಾಶ ಕೊಡದಿದ್ದರೂ, ತುಳುನಾಡಿನ ಜಾತ್ರೆ, ನೇಮೋತ್ಸವ ಮುಂತಾದ ಪರ್ವ ದಿನಗಳಲ್ಲಿ ಕಾನೂನಿನ ಚೌಕಟ್ಟಿನೊಳಗೆ ಈ ಸಾಂಪ್ರದಾಯಿಕ ಕ್ರೀಡೆಗೆ ಅವಕಾಶ ಕಲ್ಪಿಸಿಕೊಡಬೇಕು. ಪ್ರತಿಯೊಂದು ತಾಲೂಕಿನಲ್ಲಿಯೂ ಒಂದೊಂದು ಐತಿಹಾಸಿಕ ದೈವಸ್ಥಾನಗಳಿದ್ದು, ಈ ದೈವಸ್ಥಾನಗಳ ಸಂಪ್ರದಾಯ ಹಾಗೂ ಆಚರಣೆಗಳನ್ನು ಉಳಿಸುವ ನಿಟ್ಟಿನಲ್ಲಿ ಸರ್ವ ರಾಜಕೀಯ ಪಕ್ಷಗಳು ಒಂದಾಗಿ ಪಕ್ಷಬೇಧ ಮರೆತು ಹಿತಾಸಕ್ತಿಗಳನ್ನು ಬದಿಗೊತ್ತಿ ತಮ್ಮ ಕ್ಷೇತ್ರದ ಪ್ರಸಿದ್ಧ ಹಾಗೂ ಕಾರಣಿಕ ದೈವಸ್ಥಾನದ ಸಂಪ್ರದಾಯದಂತೆ ನಡೆದುಕೊಂಡು ಬಂದ ಕ್ರೀಡೆ ಮತ್ತು ಆಚರಣೆಗಳಿಗೆ ಯಾವುದೇ ತೊಡಕಾಗದಂತೆ ನಡೆಸಲು ಅಧಿಕಾರಿ ವರ್ಗಕ್ಕೆ ಸಂಪ್ರದಾಯವನ್ನು ಮನವರಿಕೆ ಮಾಡಿ ಆದೇಶ ನೀಡಬೇಕು ಎಂದು ಮನವಿಯಲ್ಲಿ ವಿನಂತಿಸಲಾಗಿದೆ.



ಇತ್ತ ಪಶು ಸಖಿಯರು ಶಾಸಕಿಯನ್ನು ಭೇಟಿಯಾಗಿ ನಮಗೆ ಎನ್‌ಆರ್‌ಎಲ್‌ಎಂ ಯೋಜನೆಯಡಿ ಸಂಜೀವಿನಿ ಒಕ್ಕೂಟಗಳ ಮೂಲಕ ಗೌರವಧನ ಪಾವತಿಸಲಾಗುತ್ತಿದ್ದು, ಪಶುಪಾಲನಾ ಇಲಾಖೆಯಿಂದ ನಾವು ನಿರ್ವಹಿಸುವ ಕೆಲಸಗಳಿಗೆ ಮಾತ್ರ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಈ ಪ್ರೋತ್ಸಾಹ ಧನ ಎಲ್ಲಾ ತಿಂಗಳೂ ದೊರೆಯುವುದಿಲ್ಲ. ಎನ್‌ಆರ್‌ಎಲ್ ಎಂನಿಂದ ದೊರೆಯುವ ಗೌರವಧನದಿಂದ ಕುಟುಂಬ ನಿರ್ವಹಣೆ ಸಾಧ್ಯವಾಗುತ್ತಿಲ್ಲ, ಪಶು ಸಂಗೋಪನೆ ಇಲಾಖೆಯಿಂದಲೂ ಕನಿಷ್ಠ ಮಾಸಿಕ ಗೌರವಧನ ಹಾಗೂ ಕನಿಷ್ಠ ಪ್ರಯಾಣ ಭತ್ಯೆ ನಿಗದಿ ಪಡಿಸುವಂತೆ ಮನವಿ ಸಲ್ಲಿಸಿದರು.

ಪಶು ಸಖಿ ಪ್ರಮುಖರಾದ ಅನಿತಾ, ತಾರಾ, ಮಾಲತಿ, ವಸಂತಿ, ಜಯಶೀಲ, ಅನುರಾಧಾ, ಸರೋಜಿನಿ, ರಶ್ಮಿ ಮೀನಾಕ್ಷಿ ಹರಿಣಿ, ರಾಜೇಶ್ವರಿ, ಗೀತಾ, ಪದ್ಮಾವತಿ, ಸುಮಿತ್ರಾ, ರೇಣುಕಾ, ಪ್ರತಿಮಾ, ವಿನೋದ ಕುಮಾರಿ, ಪೂರ್ಣಿಮಾ, ಪ್ರತಿಮಾ ಬೆಳ್ಳಾರೆ, ಇಂದಿರಾ, ಗೀತಾ ಕೆ., ಭಾರತಿ, ಪುಷ್ಪಲತಾ ಹಾಗೂ ಸಾಂಪ್ರದಾಯಿಕ ಹಿತರಕ್ಷಣಾ ವೇದಿಕೆ ದ.ಕ. ಜಿಲ್ಲಾಧ್ಯಕ್ಷ ಬೆಳಿಯಪ್ಪ ಗೌಡ ತಿಮರೆಗುಡ್ಡೆ ವೇದಿಕೆಯ ಪ್ರಮುಖರಾದ ಆನಂದ ಪೂಜಾರಿ ಕಡಬ, ಸೀತಾರಾಮ ಪೂಜಾರಿ, ವಿವೇಕ್ ರೈ ಗೋಪಿನಾಥ್ ಕಡಬ ಮತ್ತಿತರರು ಉಪಸ್ಥಿತರಿದ್ದರು.

ಶಾಸಕ ವೇದವ್ಯಾಸ ಕಾಮತ್ ಆಕ್ರೋಶ

ಕಾಂಗ್ರೆಸ್‌ನಿಂದ ಸುಳ್ಳು ಮಾಹಿತಿ

ಮಂಗಳೂರು: ಸುಳ್ಳು ಮಾಹಿತಿಯ ಮೂಲಕ ಜನತೆಯನ್ನು ಹಾದಿ ತಪ್ಪಿಸುವ ಕೆಲಸವನ್ನು ಕಾಂಗ್ರೆಸ್ ನಾಯಕರು ಮಾಡುತ್ತಿದ್ದಾರೆ ಎಂದು ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಿ.ವೇದವ್ಯಾಸ ಕಾಮತ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೊಡಿಯಾಲ್‌ಬೈಲ್‌ನ ಸೇವಾ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎರಡು ಕಾಮಗಾರಿಗೆ ಬಿಜೆಪಿ ಆಡಳಿತದಲ್ಲಿ ಅನುದಾನ ನೀಡಿದ್ದು, ಅದನ್ನು ಕಾಂಗ್ರೆಸ್ ಅವಧಿಯಲ್ಲಿ ಮಂಜೂರುಗೊಳಿಸಿದ್ದು ಎಂದು ಜನತೆಯ ಹಾದಿ ತಪ್ಪಿಸುವ ಕೆಲಸ ನಡೆಯುತ್ತಿದೆ. ಈ ಮೂಲಕ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ ಅವರು ಅಭಿವೃದ್ಧಿಯಲ್ಲಿ ರಾಜಕೀಯ ಮಾಡುತ್ತಿದ್ದಾರೆ ಎಂದರು.



ನಾನು ಶಾಸಕನಾಗಿ ಪಾಲಿಕೆಯಲ್ಲಿ ಬಿಜೆಪಿ ಆಡಳಿತ ಅವಧಿಯಲ್ಲಿ ನಗರದ ಕೊಡಿಯಾಲ್‌ಗುತ್ತು ವೆಟ್‌ವೆಲ್‌ನಿಂದ ಕುದ್ರೋಳಿ ವೆಟ್‌ವೆಲ್ ಸಂಪರ್ಕಿಸುವ ಪಂಪಿಂಗ್ ಕೊಳವೆಯನ್ನು ಕೊಡಿಯಾಲ್ ಗುತ್ತಿನಿಂದ ಹಾಲ್‌ಮಾರ್ಕ್ ಅಪಾರ್ಟ್‌ಮೆಂಟ್ ವರೆಗೆ ಬದಲಾಯಿಸಲು 3.42 ಕೋಟಿ ರೂ.ಗೆ ಆಡಳಿತಾತ್ಮಕ ಅನುಮೋದನೆ ಸಿಕ್ಕಿತ್ತು. ಈಗ ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ ಅವರು ತಾನೇ ಮಂಜೂರುಗೊಳಿಸಿದ್ದು ಎಂದು ತಪ್ಪು ಮಾಹಿತಿ ನೀಡಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಸ್ಥಳ ಪರಿಶೀಲನೆ ಕರೆಸುತ್ತಿದ್ದಾರೆ. ಕಾಮಗಾರಿಗೆ ಅನುಮೋದನೆ ಲಭಿಸಿದ ಬಳಿಕ ಪರಿಶೀಲಿಸುವ ವಿಚಾರ ಏನಿದೆ ಎಂದು ಪ್ರಶ್ನಿಸಿದರು.

ಪಾಲಿಕೆ ವ್ಯಾಪ್ತಿಯ ಎಂ.ಜಿ.ರಸ್ತೆಯ ಬಲ್ಲಾಳ್‌ಬಾಗ್ ಸೇತುವೆ ಅಭಿವೃದ್ಧಿಗೆ ನಾನು 2 ಕೋಟಿ ರೂ. ಮೀಸಲಿರಿಸಿದ್ದೆ. ಇದು ಕೂಡ ಪಾಲಿಕೆ ಬಿಜೆಪಿ ಆಡಳಿತದ ಅವಧಿಯಲ್ಲೇ ಮಂಜೂರುಗೊಂಡಿದೆ. ಆದರೆ ಇಲ್ಲಿ ಸೇತುವೆಯ ಅಗತ್ಯ ಇಲ್ಲ ಎಂದು ಉಸ್ತುವಾರಿ ಸಚಿವರು ದಿಢೀರ್ ತೀರ್ಮಾನಿಸಿ ಆ ಮೊತ್ತವನ್ನು ಪಡೀಲಿನ ಡಿಸಿ ಕಚೇರಿ ಸಂಕೀರ್ಣ ಪೂರ್ಣಗೊಳಿಸಲು ವರ್ಗಾಯಿಸಿದ್ದಾರೆ. ಹೀಗಾಗಿ ಮತ್ತು ನಾಗರಿಕರ ಒತ್ತಾಯದ ಮೇರೆಗೆ ಸೇತುವೆ ಕಾಮಗಾರಿಗೆ ಜಿಲ್ಲಾಧಿಕಾರಿಗಳು ಅನುಮತಿ ನೀಡಿದ್ದಾರೆ. ಈಗ ಅನುಮತಿ ಲಭಿಸಿದ ಬಳಿಕ ಮತ್ತೆ ಉಸ್ತುವಾರಿ ಸಚಿವರು ಸ್ಥಳ ವೀಕ್ಷಣೆಗೆ ಮಾಡುವ ಔಚಿತ್ಯವಾದರೂ ಏನು ಎಂದು ವೇದವ್ಯಾಸ ಕಾಮತ್ ಪ್ರಶ್ನಿಸಿದರು. ಅಳಪೆಯಲ್ಲಿ ತಡೆಗೋಡೆ ಅಡ್ಡಿಯಾಗಿ 800 ಮನೆಗಳಿಗೆ ದಾರಿ ಸಂಪರ್ಕ ಇಲ್ಲ. ಇದನ್ನು ಪರಿಶೀಲಿಸಿ ಸರಿಪಡಿಸಲು ಉಸ್ತುವಾರಿ ಸಚಿವರು ಮುಂದಾಗಲಿ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಪ್ರೇಮಾನಂದ ಶೆಟ್ಟಿ, ಸುಧೀರ್ ಶೆಟ್ಟಿ ಕಣ್ಣೂರು, ದಿವಾಕರ್ ಪಾಂಡೇಶ್ವರ, ಶಕೀಲಾ ಕಾವ, ಮನೋಹರ್ ಕದ್ರಿ, ಮೋಹನ ಪೂಜಾರಿ, ಅಶ್ವಿತ್ ಕೊಟ್ಟಾರಿ, ಪ್ರವೀಣ್ ನಿಡ್ಡೋಡಿ, ಲಲ್ಲೇಶ್ ಉಪಸ್ಥಿತರಿದ್ದರು.

ಆರೋಗ್ಯಕರ ಸಮಾಜ ರಚನೆಗೆ ಮಹಿಳೆಯ ಪಾತ್ರ ಬಹಳ ಮುಖ್ಯ: ಮಾತಾನಂದಮಯೀ



ವಿಟ್ಲ: ಆರೋಗ್ಯಕರ ಸಮಾಜ ಕಟ್ಟುವಲ್ಲಿ ಮಹಿಳೆಯ ಪಾತ್ರ ಬಹಳ ಮುಖ್ಯವಾಗಿದೆ. ಮಹಿಳೆಯಲ್ಲಿರುವ ಕೌಶಲ್ಯವನ್ನು ಹೊರ ತೆಗೆದು ಸ್ವಾವಲಂಬಿಗೊಳಿಸಿ ಸ್ವಾಭಿಮಾನದ ಜೀವನ ನಡೆಸಲು ಶ್ರೀ ಕ್ಷೇತ್ರ ಧರ್ಮಸ್ಥಳದ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮಗಳು ಉತ್ತಮ ವೇದಿಕೆ ಆಗಿದೆ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಸಾಧ್ವಿ ಮಾತಾನಂದಮಯೀ ಹೇಳಿದರು.

ವಿಟ್ಲ ಶಿವಗಿರಿ ಬ್ರಹ್ಮಶ್ರೀ ನಾರಾಯಣ ಗುರು ಸಭಾಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ವಿಟ್ಲ ತಾಲೂಕು ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ನಡೆದ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಆಶೀರ್ವಚನ ನೀಡಿದರು.

ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟ ವಿಟ್ಲ ವಲಯ ಅಧ್ಯಕ್ಷೆ ಪ್ರಮೀಳಾ ಅಧ್ಯಕ್ಷತೆ ವಹಿಸಿದ್ದರು. ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ 2ರ ನಿರ್ದೇಶಕ ಬಾಬು ನಾಯ್ಕ ಮಾತನಾಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ನ್ಯಾಯವಾದಿ ಶೈಲಜಾ ರಾಜೇಶ್ ಭಾಗವಹಿಸಿದರು. ಉದ್ಯಮಿ ಪ್ರದೀಪ್ ಮಾಹಿತಿ ನೀಡಿದರು. ಜ್ಞಾನ ವಿಕಾಸ ಸದಸ್ಯರಾದ ಶಾಲಿನಿ, ಲೀಲಾಕ್ಷಿ ಅನಿಸಿಕೆ ವ್ಯಕ್ತಪಡಿಸಿದರು. ರಂಗೋಲಿ ಹಾಗೂ ಹೂಗುಚ್ಛ ತಯಾರಿ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ವಿಟ್ಲ ವಲಯ ಅಧ್ಯಕ್ಷ ಕೃಷ್ಣಯ್ಯ ಬಲ್ಲಾಳ್, ಜನಜಾಗೃತಿ ವೇದಿಕೆ ವಿಟ್ಲ ವಲಯ ಸದಸ್ಯ ನಟೇಶ್ ವಿಟ್ಲ ಉಪಸ್ಥಿತರಿದ್ದರು. ಗ್ರಾಮಾಭಿವೃದ್ಧಿ ಯೋಜನೆಯ ವಿಟ್ಲ ಜ್ಞಾನವಿಕಾಸ ಸಮನ್ವಯಾಧಿಕಾರಿ ದೀಪ ವಾರ್ಷಿಕ ವರದಿ ವಾಚಿಸಿದರು. ತಾಲೂಕು ಯೋಜನಾಧಿಕಾರಿ ಸುರೇಶ್ ಗೌಡ ಸ್ವಾಗತಿಸಿ, ವಿಟ್ಲ ವಲಯ ಮೇಲ್ವಿಚಾರಕ ಜಗದೀಶ್ ವಂದಿಸಿದರು. ಚೈತನ್ಯ ಚಂದಪ್ಪ ಕಾರ್ಯಕ್ರಮ ನಿರ್ವಹಿಸಿದರು.

ಹನುಮಗಿರಿಯ ಶ್ರೀ ಕ್ಷೇತ್ರದಲ್ಲಿ ಬ್ರಹ್ಮಕಲಶ: ಅಯೋಧ್ಯೆಯಿಂದ ಬರಲಿದೆ ರಾಮಜ್ಯೋತಿ

ಕಡಬ: ಈಶ್ವರಮಂಗಲದ ಹನುಮಗಿರಿ ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರದ ಬ್ರಹ್ಮಕಲಶೋತ್ಸವ ಕಾರ್ಯಕ್ರಮ ಏ.9ರಿಂದ 12ರವರೆಗೆ ನಡೆಯುವ ಪ್ರಯುಕ್ತ ಅಯೋಧ್ಯೆಯಿಂದ ರಾಮಜ್ಯೋತಿ ಆಗಮನ, ಕೋಟಿ ಶ್ರೀ ರಾಮ ತಾರಕ ಮಹಾಯಜ್ಞ ಜಪದೀಕ್ಷೆ ಹಾಗೂ ಲಕ್ಷೋತ್ತರ ನಾರಿಕೇಳ ಸಮರ್ಪಣಾ ಕಾರ್ಯಕ್ರಮ ನಡೆಯಲಿದ್ದು, ಅದರ ಪೂರ್ವಭಾವಿ ಸಭೆ ರಾಮಕುಂಜದ ಶ್ರೀ ರಾಮಕುಂಜೇಶ್ವರ ದೇವಸ್ಥಾನದ ವಠಾರದಲ್ಲಿ ನಡೆಯಿತು.

ಈ ಸಂದರ್ಭ ಮಾತನಾಡಿದ ಹನುಮಗಿರಿ ಕ್ಷೇತ್ರದ ಆಡಳಿತ ಧರ್ಮದರ್ಶಿನನ್ನ ಅಚ್ಯುತ ಮೂಡೆತ್ತಾಯ, ಕ್ಷೇತ್ರದಲ್ಲಿ ಧಾರ್ಮಿಕ, ಸಾಮಾಜಿಕ ಮತ್ತು ರಾಷ್ಟ್ರ ಪ್ರೇಮ ಉದ್ದೀಪನ ಕೆಲಸಗಳು ನಡೆಯುತ್ತಿದ್ದು, ಇಲ್ಲಿ ಎಲ್ಲರಿಗೂ ಮುಕ್ತ ಅವಕಾಶ ನೀಡಿ ಸಾಮರಸ್ಯದ ಕೇಂದ್ರವಾಗಿ ರೂಪುಗೊಂಡಿದೆ. ಇದೀಗ ಕ್ಷೇತ್ರದಲ್ಲಿ ರಾಮ ದೇವರು ಹಾಗೂ ಹನುಮಂತ ದೇವರ ಬ್ರಹ್ಮಕಲಶೋತ್ಸವ ಕಾರ್ಯಕ್ರಮ ನಡೆಯಲಿದೆ. ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷರಾಗಿದ್ದು, ಇಲ್ಲಿ ಕೇವಲ ಬ್ರಹ್ಮಕಲಶೋತ್ಸವ ನಡೆದರೆ ಸಾಲದು ಇಲ್ಲಿಂದ ಸಮಾಜಕ್ಕೆ ಒಗ್ಗೂಡಬೇಕು ಎನ್ನುವ ಅವರ ಆಲೋಚನೆಯಿಂದಾಗಿ 1 ಕೋಟಿ ರಾಮ ತಾರಕ ಜಪದಲ್ಲಿ ಎಲ್ಲರೂ ಭಾಗ ವಹಿಸಲು ಸಾಧ್ಯವಾಗುತ್ತದೆ ಎಂದರು.



ಅಯೋಧ್ಯೆಯಿಂದ ರಾಮಜ್ಯೋತಿಯನ್ನು ತರಲಾಗುತ್ತದೆ. ಅದನ್ನು ತಾಲೂಕಿನ ದೇವಸ್ಥಾನಗಳಲ್ಲಿ ಸ್ವಾಗತಿಸಿ ಬಳಿಕ ಊರಿನ ಹಿಂದು ಬಂಧುಗಳ ಮನೆಗೆ ಜ್ಯೋತಿ ತಲುಪಿಸುವ ಕಾರ್ಯ ಮಾಡಲಿಕ್ಕಿದೆ. ಜ್ಯೋತಿಯನ್ನು ಅದ್ದೂರಿಯಾಗಿ ಸ್ವಾಗತಿಸುವ ದೃಷ್ಟಿಯಿಂದ ಭಜನಾ ತಂಡಗಳನ್ನು, ಮಹಿಳೆಯರು, ಮಾತೆಯರು ಹಾಗೂ ಸಾರ್ವಜನಿಕರನ್ನು ಸೇರಿಸಿಕೊಂಡು ಕಾರ್ಯಕ್ರಮವನ್ನು ಮಾಡಬೇಕಿದೆ. ಆ ಹಿನ್ನೆಲೆಯಲ್ಲಿ 60 ಗ್ರಾಮ ಸಮಿತಿಗಳನ್ನು ರಚಿಸಲಾಗುವುದು ಎಂದು ಅವರು ತಿಳಿಸಿದರು.

ಈ ಸಂದರ್ಭ ವಿವಿಧ ಸಮಿತಿಗಳನ್ನು ರಚಿಸಲಾಯಿತು. ಬ್ರಹ್ಮಕಲಶೋತ್ಸವ ಸಮಿತಿ ಉಪಾಧ್ಯಕ್ಷ ಸಾಜ ರಾಧಾಕೃಷ್ಣ ಆಳ್ವ ಪೂರಕ ಮಾಹಿತಿ ನೀಡಿದರು. ಪ್ರಧಾನ ಕಾರ್ಯದರ್ಶಿ ನವ್ಯಶಾ ಭಟ್, ಪದಾಧಿಕಾರಿ ರಾಕೇಶ್ ರೈ ಕೆಡೆಂಜಿ, ಆತೂರು ಶ್ರೀ ಸದಾಶಿವ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ನೀರಜ್ ಕುಮಾರ್ ರೈ, ಶ್ರೀ ರಾಮಕುಂಜೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಗುರುಪ್ರಸಾದ್ ರಾಮಕುಂಜ ಉಪಸ್ಥಿತರಿದ್ದರು.

ಲಕ್ಷ್ಮೀನಾರಾಯಣ ರಾವ್ ಆತೂರು ಸ್ವಾಗತಿಸಿ, ಬ್ರಹ್ಮಕಲಶೋತ್ಸವ ಸಮಿತಿಯ ಸಾಮಾಜಿಕ ಜಾಲತಾಣ ಸಂಯೋಜಕ ಹರಿಪ್ರಸಾದ್ ಈಶ್ವರಮಂಗಲ ವಂದಿಸಿದರು.

ವಿಕಾಸ್ ಭಾರತ್ ಯುವ ಸಂಸತ್ತು: ಭಾಷಣ ಸ್ಪರ್ಧೆ

ಕಾಸರಗೋಡು: ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಆಯೋಜಿಸಿರುವ ವಿಕಾಸ್ ಭಾರತ್ ಯುವ ಸಂಸತ್ತು – 2026ರ ಅಂಗವಾಗಿ ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಎನ್‌ಎಸ್‌ಎಸ್ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

50 ವರ್ಷಗಳ ತುರ್ತು ಪರಿಸ್ಥಿತಿ: ಭಾರತೀಯ ಪ್ರಜಾಪ್ರಭುತ್ವಕ್ಕೆ ಪಾಠಗಳು ಎಂಬ ವಿಷಯದ ಕುರಿತು ನಡೆದ ಸ್ಪರ್ಧೆಯಲ್ಲಿ ವಿವಿಧ ಶಿಕ್ಷಣ ಸಂಸ್ಥೆಗಳ ಅನೇಕ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಉಪಕುಲಪತಿ ಪ್ರೊ.ಸಿದ್ದು ಪಿ. ಅಲ್ಗೂರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳ ಕಲ್ಯಾಣ ವಿಭಾಗದ ಡೀನ್ ಪ್ರೊ. ರಾಜೇಂದ್ರ ಪಿಲಾಂಕಟ್ಟೆ, ವಿಕಾಸ್ ಭಾರತ್ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ನೋಡಲ್ ಅಧಿಕಾರಿ ಡಾ.ಗುಜ್ಜೆಟ್ಟಿ ತಿರುಪತಿ ಮತ್ತು ಉಪ ನೋಡಲ್ ಅಧಿಕಾರಿ ಡಾ.ಧರ್ಮೇಂದ್ರ ಪ್ರತಾಪ್ ಸಿಂಗ್ ಮಾತನಾಡಿದರು. ವಿಕಾಸ್ ಭಾರತ್ ಯುವ ಸಂಸತ್ತಿನ ಜಿಲ್ಲಾ ಸಂಯೋಜಕ ಡಾ.ಎಸ್.ಅನ್ವಳಗಿ



ಸ್ವಾಗತಿಸಿ, ಜಿಲ್ಲಾ ಕಾರ್ಯದರ್ಶಿ ಡಾ.ಜಂಪಾಲ ಗಣೇಶ್ ರಣಧೀರ್ ವಂದಿಸಿದರು.

ಗೌತಮ್ ಶಂಕರ್ (ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ), ಕಾಸಿಸ್ ಮುಖೇಶ್ (ಸರಕಾರಿ ಕಲಾ ಕಾಲೇಜು ಮಾನಂತವಾಡಿ), ಆದಿತ್ಯ (ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ), ಶ್ರೀಲಕ್ಷ್ಮಿ ನಾಯರ್ (ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ), ದಿಲ್ಜಿತ್ (ಎಸ್‌ಐಎಂಇಟಿ ಕಾಲೇಜ್ ಆಫ್ ನರ್ಸಿಂಗ್ ಕಾಸರಗೋಡು) ಕ್ರಮವಾಗಿ ಒಂದರಿಂದ ಐದು ಸ್ಥಾನಗಳನ್ನು ಪಡೆದರು. ಈ ಸ್ಪರ್ಧಾಳುಗಳು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಕಾಸರಗೋಡು ಜಿಲ್ಲೆಯನ್ನು ಪ್ರತಿನಿಧಿಸಲಿದ್ದಾರೆ.

ಮೀಂಜ ಸಿಡಿಎಸ್ ಸಭಾಂಗಣದಲ್ಲಿ ಜಾಗೃತಿ ಕಾರ್ಯಕ್ರಮ

ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಸಮಾಜಕಾರ್ಯ ಅಧ್ಯಯನ ವಿಭಾಗ ಮತ್ತು ಕಾಸರಗೋಡಿನ ಸಾಮಾಜಿಕ ನ್ಯಾಯ ವಿಭಾಗ ಜಂಟಿಯಾಗಿ ಹಿರಿಯ ನಾಗರಿಕರಿಗೆ ಯೋಜನೆಗಳು ಮತ್ತು ಅವರ ಕಾನೂನು ಹಕ್ಕುಗಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿದ್ದವು. ಮೀಂಜ ಸಿಡಿಎಸ್ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಪಂಚಾಯತ್ ಅಧ್ಯಕ್ಷ ತಾಜುದ್ದೀನ್ ಉದ್ಘಾಟಿಸಿದರು. ವಕೀಲೆ ಅರುಣಿಮಾ ಚಂದ್ರನ್ ತರಗತಿ ನಡೆಸಿದರು. ಅಸೋಸಿಯೇಟ್ ಪ್ರೊಫೆಸರ್ ಡಾ.ಲಕ್ಷ್ಮಿ, ಫೀಲ್ಡ್ ರೆಸ್ಪಾನ್ಸ್ ಆಫೀಸರ್ ಚಿದಿರಾ, ಎಂಎಸ್‌ಡಬ್ಲ್ಯೂ ಟ್ರೈನಿ ಮುರ್ಷಿದಾ ಪಿ.ಕೆ. ಮಾತನಾಡಿದರು.

ಕರಿಮಜಲು: ಒತ್ತೆಕೋಲಕ್ಕೆ ಕೊಳ್ಳಿ ಮುಹೂರ್ತ



ಸುಬ್ರಹ್ಮಣ್ಯ: ಕರಿಮಜಲು ವಿಷ್ಣುಪುರ ಶ್ರೀ ವಿಷ್ಣುಮೂರ್ತಿ ದೈವಸ್ಥಾನದಲ್ಲಿ 57ನೇ ವರ್ಷದ ಶ್ರೀ ವಿಷ್ಣುಮೂರ್ತಿ ದೈವದ ಒತ್ತೆಕೋಲ ಏ. 2, 3, 4 ರಂದು ನಡೆಯಲಿದ್ದು, ಇದರ ಪೂರ್ವಬಾವಿಯಾಗಿ ಕೊಳ್ಳಿ ಮುಹೂರ್ತ ಕಾರ್ಯಕ್ರಮವು ಭಾನುವಾರ ಬೆಳಗ್ಗೆ ನಡೆಯಿತು.

ಭಕ್ತಾದಿಗಳ ಉಪಸ್ಥಿತಿಯಲ್ಲಿ ದೈವಸ್ಥಾನದ ಮುಖ್ಯ ಪೂಜಾರಿಗಳು ವೈದಿಕ ವಿಧಿ ವಿಧಾನ ನೆರವೇರಿಸಿದರು. ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು. ಬಳಿಕ ಒತ್ತೆಕೋಲ ಮಹೋತ್ಸವದ ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕ್ಷೇತ್ರದ ಆಡಳಿತ ಮಂಡಳಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರ್, ಮೊಕ್ತೇಸರರಾದ ವೆಂಕಟ್ರಮಣ ಆಚಾರ್ಯ ವಿಷ್ಣುಪುರ, ಜನಾರ್ದನ ಆಚಾರ್ಯ ವಿಷ್ಣುಪುರ, ಕೃಷ್ಣ ಆಚಾರ್ಯ ವಿಷ್ಣುಪುರ, ಆಡಳಿತ ಮಂಡಳಿ ಕಾರ್ಯದರ್ಶಿ ಮೋನಪ್ಪ ಬಂಡಾಜೆ, ಉಪಾಧ್ಯಕ್ಷ ಶೇಷಪ್ಪ ಗೌಡ ಬೆದ್ರಂಗಳ, ಜತೆ ಕಾರ್ಯದರ್ಶಿ ಮಿಥುನ್ ಪೈಕ, ಆಡಳಿತ ಮಂಡಳಿ ಸದಸ್ಯರಾದ ಸಂಜೀವ ರೈ ಪೈಕ, ಕುಮಾರ್ ಆಚಾರ್ಯ ದೋಳ್ಪಾಡಿ, ಪ್ರದೀಪ್ ಬೊಬ್ಬೆಕೇರಿ, ಭವಿಷ್ ವಿಷ್ಣುಪುರ, ಪ್ರಮೋದ್ ವಿಷ್ಣುಪುರ, ಮೋಹನ್ ವಿಷ್ಣುಪುರ, ರಾಕೇಶ್ ವಿಷ್ಣುಪುರ, ರಾಜೇಶ್ ವಿಷ್ಣುಪುರ ಹಾಗೂ ಭಕ್ತಾಧಿಗಳು ಉಪಸ್ಥಿತರಿದ್ದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-509th) ಡ್ರಾ ಮಾರ್ಚ್ 3ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SZ 765596 (PALAKKAD)

Cons Prize-Rs: 5000/-
SN 765596 SO 765596 SP 765596 SR 765596
SS 765596 ST 765596 SU 765596 SV 765596
SW 765596 SX 765596 SY 765596

2nd Prize Rs: 30,00,000/- [30 Lakhs]
SW 236905 (KOLLAM)

3d Prize Rs: 5,00,000/- [5 Lakhs]
SY 948737 (PALAKKAD)

FOR THE TICKETS ENDING WITH THE FOLLOWING NUMBERS

4th Prize Rs.5,000/-
0891 1733 1853 2617 3637 4212 4680 6710 6821 7087 7259 7294 7349 7547 7656 8238 8823 9116 9125

5th Prize Rs.2,000/-
1039 5974 6322 7766 7988 9760

6th Prize Rs.1,000/-
0117 0357 0839 0853 1055 1531 1878 1960 2218 2531 3775 4770 5440 5774 5890 6107 7079 7734 8031 8584 8990 9188 9402 9765 9809

7th Prize Rs.500/-
0082 0334 0370 0829 0883 1480 1486 1504 1507 1523 1608 1834 1848 2286 2637 2743 2901 2972 3106 3129 4074 4159 4295 4557 4583 4705 4733 4748 4816 4889 4935 4995 5017 5132 5156 5326 5445 5516 5613 5647 5730 5810 5870 6013 6050 6060 6119 6211 6280 6338 6570 6819 6968 7199 7417 7667 7947 8244 8369 8474 8723 8765 9049 9130 9195 9210 9348 9587 9642 9807 9814

8th Prize Rs.200/-
0684 0709 0786 0828 0844 0847 0879 1212 1299 1390 1502 1619 1705 1715 1749 1874 2101 2361 2534 2748 2786 2877 2912 3040 3091 3118 3155 3170 3188 3248 3286 3298 3718 3788 3813 3831 3892 4069 4189 4213 4235 4283 4332 4468 4529 4669 4873 4884 5120 5258 5282 5353 5444 5524 5583 6204 6292 6521 6575 6607 6625 6702 6794 6797 6925 7001 7127 7136 7193 7222 7384 7396 7526 7572 7753 7974 8508 8579 8767 8869 8876 8942 9119 9171 9306 9564 9650 9727 9940 9952

9th Prize Rs.100/-
0137 0139 0158 0189 0231 0291 0310 0348 0373 0668 0728 0800 0818 0912 0927 0937 1053 1133 1136 1182 1196 1260 1280 1422 1522 1565 1597 1798 2032 2040 2155 2298 2312 2318 2474 2483 2540 2649 2707 2851 2858 3048 3102 3111 3156 3198 3267 3290 3307 3422 3588 3685 3778 3781 3817 3890 3957 3966 3973 4258 4274 4348 4421 4487 4517 4596 4649 4722 4734 4812 4905 5080 5116 5308 5347 5364 5513 5559 5621 5669 5678 5679 5726 5816 5869 5918 5975 6201 6206 6259 6290 6324 6499 6531 6583 6697 6747 6828 6863 6909 6990 7017 7070 7175 7230 7252 7260 7366 7401 7557 7605 7617 7644 7957 8034 8045 8203 8255 8272 8335 8426 8430 8473 8512 8539 8638 8659 8674 8756 8791 8868 8915 8999 9009 9202 9205 9261 9282 9300 9326 9338 9343 9394 9560 9585 9605 9770 9793 9832 9835

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ, ಗದಗ)
ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಗದಗ. ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ, ಗದಗ,

ಇಮೇಲ್: dhogadag@gmail.com

ಕ್ರ.ಸಂ:ಜಿಆಕುಕಗಸೊ/NUHM/PM-ABHIM/2025–26 ದಿನಾಂಕ:03.03.2026

ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಗದಗ ಜಿಲ್ಲೆಯಲ್ಲಿ **PM-ABHIM** ಕಾರ್ಯಕ್ರಮದಡಿಯಲ್ಲಿ ನಮ್ಮ ಕ್ಲಿನಿಕ್‌ಗಳಿಗೆ ಅವಶ್ಯವಿರುವ ಟೆಲಿಕನ್ಸಲ್‌ಟೇಶನ್ ಸಾಮಗ್ರಿಗಳು **(Computer, Web Camera, Headphone or microphone Printer & UPS) Tender Reference No–(DHFWS/2025-26/IND2290)** ಟೆಂಡರ್ ಅಂದಾಜು ಮೊತ್ತ **ರೂ. 7.68** ಲಕ್ಷಗಳು. ಇ.ಎಮ್.ಡಿ ಮೊತ್ತ **ರೂ. 19,200/–** ಟೆಂಡರ್ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ : **02.03.2026** ರಿಂದ ದಿನಾಂಕ : **10.03.2026**ರ ಸಂಜೆ 4.30 ಗಂಟೆವರೆಗೆ ಇ–ಪ್ರಕ್ಯೂರ್‌ಮೆಂಟ ಮೂಲಕ ಮರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in/** ಮೂಲಕ **Tender Reference No–(DHFWS/2025-26/IND2290)** ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ ಅಥವಾ **dhogadag@gmail.com** ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/687/25–26

THE KASARAGOD CO-OPERATIVE TOWN BANK LTD.

(Under the control of Reserve Bank of India)
Head Office, Panduranga Temple Road, Kasaragod-671121
Ph:04994 223 994
Email:ho@kasaragodtown.bank.in | Web: https://kasaragodtown.bank.in

INVITING APPLICATION FOR THE POST OF CHIEF EXECUTIVE OFFICER

The Kasaragod Co-operative Town Bank Ltd is a leading Non Scheduled Primary Urban Co-operative Bank with 11 branches in Kasaragod District, Kerala State, proposes to appoint a Chief Executive Officer on contract basis subject to the approval of RBI. The appointment shall initially be for a period of 2 years and shall be renewed subject to the satisfactory performance in the opinion of the Board of Directors of the bank and with prior approval of RBI. Salary will be commensurate with age, qualifications and experience, **Last date for submission of application 17-03-2026.**

For further details please visit our website: https://kasaragodtown.bank.in

Sd/- Chairman
The Kasaragod Co-operative Town Bank Ltd.

Kasaragod,
03-03-2026.

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ದೂರವಾಣಿ ಸಂಖ್ಯೆ: 08539–220054

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2025–26/5418 ದಿ: 02–03–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ರಾಯಚೂರು ಜಿಲ್ಲೆಯ 02 ಟೆಂಡರ್ ಕಾಮಗಾರಿಗಳನ್ನು 4702 ಏತ ನೀರಾವರಿ ಯೋಜನೆಯಡಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ **ರೂ. 2100.00** ಹಾಗೂ ಗರಿಷ್ಠ ಅಂದಾಜು ಮೊತ್ತ, **ರೂ 3400.00** ಲಕ್ಷಗಳಿರುತ್ತದೆ. ಟೆಂಡರ್‌ಗಳನ್ನು **ದಿನಾಂಕ: 04–03–2026** ರಿಂದ **ದಿನಾಂಕ: 20–03–2026 ಸಂಜೆ. 5.30** ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ **ದಿನಾಂಕ: 12–03–2026** ರಂದು ಬೆಳಿಗ್ಗೆ **11.00** ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್‌ನ್ನು **ದಿನಾಂಕ: 23–03–2026** ಬೆಳಿಗ್ಗೆ **11.00** ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್‌ನ್ನು (ಸಾಧ್ಯವಾದಲ್ಲಿ) **ದಿನಾಂಕ: 25–03–2026** ರಂದು ಬೆಳಿಗ್ಗೆ **11.00** ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆಪಿಪಿಪಿ" ವೆಬ್‌ಸೈಟ್ **https://kppp.karnataka.gov.in/** ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ವಾ.ಸಾ.ಇ/ಕೊಪ್ಪಳ/723/ದೇಶಪಾಂಡೆಪಬ್ಲಿಸಿಟಿ/2025–26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ+ ಮಾನ್ಯತೆ
ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು–560065
ದೂರವಾಣಿ : GKVK: 2330153-250, Direct : 23332765
Email : eo@uasbangalore.edu.in, Website: www.uasbangalore.edu.in

ಸಂ:ಇ.ಒ/ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/20/2025–26 ದಿನಾಂಕ:02.03.2026

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕೆ.ಜಿ–1, ಮತ್ತು ಕೆ.ಜಿ–2, ಟೆಂಡರ್ ನಿಬಂದನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.

ವಿವರ: ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 11.03.2026 ಸಂಜೆ 4:00 ಘಂಟೆಯವರೆಗೆ** ಮತ್ತು ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 13.03.2026 ಸಮಯ ಬೆಳಗ್ಗೆ 10.30ಕ್ಕೆ,** ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ: 16.03.2026 ಸಮಯ ಬೆಳಗ್ಗೆ 10:30ಕ್ಕೆ.** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. **ಸೂಚನೆ:** ಯಾವುದೇಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು, ಕಛೇರಿಯ ವೇಳೆಯಲ್ಲಿ ಸಹಾಯವಾಣಿದೂರವಾಣಿ ಸಂಖ್ಯೆ. 91–8046010000, +91–8068948777 09240214000/09240214001 **support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: 23630128 ಅನ್ನು ಸಂಪರ್ಕಿಸಬಹುದು.

ಸಹಿ/–
ಆಸ್ತಿ ಅಧಿಕಾರಿಗಳು

ವಾಸಾಸಂಇ/ವಾಪ್ರ/ಜಿಎ/5969/2025–26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ವಿದ್ಯುತ್ ಭವನ, ಗೋಪನಕೊಪ್ಪ, ಹುಬ್ಬಳ್ಳಿ.
Tel/Fax No: (0836) 2322771/2324307. e-mail: seeit@hescom.co.in
Website: https://hescom.karnataka.gov.in
CIN No: U31401KA2002SGCO30437

ಸಂಖ್ಯೆ: ಹೆಸ್ಕಾಂ/ಅಅ(ಮಾ&ತಂ)/ಕಾನಿಅ-ಐಟಿ-2/1431/2025-26/ಸಿವೈಎಸ್-11782 ದಿನಾಂಕ: 03.03.2026

ಆಸಕ್ತಿಯ ಅಭಿವ್ಯಕ್ತಿ (EOI) ಅಧಿಸೂಚನೆ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಹೆಸ್ಕಾಂ) ನಲ್ಲಿ ಆನ್‌ಲೈನ್ ಪಾವತಿ ಗೇಟ್‌ವೇ ಸೌಲಭ್ಯವನ್ನು ಒದಗಿಸಲು ಪೇಮೆಂಟ್ ಗೇಟ್‌ವೇ ಸೇವಾ ಪೂರೈಕೆದಾರರ ಆಯ್ಕೆಗಾಗಿ ಆಸಕ್ತಿಯ ಅಭಿವ್ಯಕ್ತಿಯನ್ನು (EOI) ಅನ್ನು ಆಹ್ವಾನಿಸುತ್ತದೆ.

ಆಸಕ್ತ ಗೇಟ್‌ವೇ ಸೇವಾ ಪೂರೈಕೆದಾರರು ತಮ್ಮ ಉದ್ಧರಣವನ್ನು ದಿನಾಂಕ **25.03.2026 ಮುಂಜಾನೆ ಸಮಯ 11.30 ಗಂಟೆಯ** ಒಳಗಾಗಿ ಸಲ್ಲಿಸ ಬಹುದಾಗಿದೆ, ಉದ್ಧರಣವನ್ನು ದಿನಾಂಕ **25.03.2026 ರಂದು ಸಾಯಂಕಾಲ 17.00 ಗಂಟೆಗೆ** ಹೆಸ್ಕಾಂ ನಿಗಮ ಕಚೇರಿಯಲ್ಲಿ ತೆರೆಯಲಾಗುವುದು.

ವಿವರವಾದ EOI ಸಂಬಂಧಪಟ್ಟ ದಾಖಲೆಗಳು, ನಿಯಮಗಳು ಮತ್ತು ಷರತ್ತುಗಳನ್ನು ಹೆಸ್ಕಾಂ ವೆಬ್‌ಸೈಟ್‌ನಿಂದ ದಿನಾಂಕ **04.03.2026 ಸಮಯ 17.00 ರ ನಂತರ** ಹೆಸ್ಕಾಂ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು **(https://hescom.karnataka.gov.in)**.

ಆಸಕ್ತ ಗೇಟ್‌ವೇ ಸೇವಾ ಪೂರೈಕೆದಾರರು ಯಾವುದೇ ಪ್ರಶ್ನೆಗಳು/ಸ್ಪಷ್ಟೀಕರಣಗಳ ಸಂದರ್ಭ–ದಲ್ಲಿ ಕೆಳಗೆ ತಿಳಿಸಲಾದ ಸಂಪರ್ಕ ವಿವರಗಳೊಂದಿಗೆ ಸಂಪರ್ಕಿಸಬಹುದು.

ಸಂಪರ್ಕ ಸಂಖ್ಯೆ: 94808 81007 / 94808 81003.

ಅಧೀಕ್ಷಕ ಅಭಿಯಂತರರು (ವಿ)
(ಐ ಟಿ ಮತ್ತು ಎಂ ಟಿ), ಹೆಸ್ಕಾಂ, ಹುಬ್ಬಳ್ಳಿ.

ವಾಸಾಸಂಇ/ಧಾ/ದಿಶಾ/1302/2025–26

ನಗರಸಭಾ ಕಾರ್ಯಾಲಯ, ಪುತ್ತೂರು

ಕಿಲ್ಲೆ ಮೈದಾನ ಹತ್ತಿರ, ಕೋರ್ಟ್ ರಸ್ತೆ, ಪುತ್ತೂರು, ದಕ್ಷಿಣ ಕನ್ನಡ–574201.
ಇ–ಮೇಲ್: ka.puttur.cmc@gmail.com ವೆಬ್‌ಸೈಟ್: www.putturcity.mrc.gov.in

ಕ್ರಸಂ. ಪುನಸ/ಆವಿ/ವಿನಿ05/ಸಿಆರ್469/Tour/2025–26 ದಿನಾಂಕ: 27.02.2026

ಪರಿಶೀಲನಾ ದರಪಟ್ಟಿ

ಪುತ್ತೂರು ನಗರಸಭೆಯು 2025–26 ನೇ ಸಾಲಿನ ಸ್ವಚ್ಛ ಭಾರತ್ ಮಿಷನ್–2.0(ನ) ಯೋಜನೆಯಡಿ ಐಇಸಿ ಚಟುವಟಿಕೆ ಮತ್ತು ಸಾಮರ್ಥ್ಯಾಭಿವೃದ್ಧಿ (Capacity Building) ಘಟಕದಡಿ ಪುತ್ತೂರು ನಗರಸಭೆಯ ಅಧಿಕಾರಿಗಳು, ಪೌರಕಾರ್ಮಿಕರು ಹಾಗೂ ಇತರೆ ಸ್ವಚ್ಛತಾ ಸಿಬ್ಬಂದಿಗಳಿಗೆ ಕ್ಷೇತ್ರ ಅಧ್ಯಯನ ಪ್ರವಾಸ ಹಾಗೂ ಘನತ್ಯಾಜ್ಯ ನಿರ್ವಹಣೆ ಕುರಿತು ಸಾಮರ್ಥ್ಯಾಭಿವೃದ್ಧಿ ತರಬೇತಿಗಾಗಿ ಹೊರರಾಜ್ಯದ ವಿವಿಧ ಸ್ಥಳಿಯ ಸಂಸ್ಥೆಗಳ ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ಅಧ್ಯಯನ ಪ್ರವಾಸ ಕೈಗೊಳ್ಳುವ ವಿವಿಧ ವ್ಯವಸ್ಥೆಗಳ ಸಂಬಂಧಪಟ್ಟಂತೆ ಮಾರುಕಟ್ಟೆ ದರಗಳನ್ನು ಪರಿಶೀಲಿಸಬೇಕಾಗಿರುವುದರಿಂದ ನೋಂದಾಯಿತ ಪ್ರವಾಸಿ/ ಟ್ರಾವೆಲ್ ಏಜೆನ್ಸಿಗಳಿಂದ ವಾಹನ, ತಂಗುವಿಕೆ ಜೊತೆಗೆ ಇತರ ಎಲ್ಲಾ ವ್ಯವಸ್ಥೆಗಳನ್ನು ಒದಗಿಸಲು ಪರಿಶೀಲನಾ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಸರಬರಾಜುದಾರರು/ಏಜೆನ್ಸಿದಾರರು ಮೊಹರು ಮಾಡಲಾದ ವಿಚಾರಣಾ ದರಪಟ್ಟಿಗಳ ನಮೂನೆಯನ್ನು ಕಛೇರಿಯಿಂದ ಪಡೆದು ದಿನಾಂಕ: 07.03.2026 ರಂದು ಅಪರಾಹ್ನ 4.00 ಗಂಟೆಗೆ ಪೌರಾಯುಕ್ತರು ನಗರಸಭೆ ಇವರಿಗೆ ಸಲ್ಲಿಸಬಹುದು. ನಂತರ ಬಂದ ದರಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಹಾಗೂ ನಿರ್ಧಿಷ್ಠೆಗಳ ವಿವರಣೆಗಳನ್ನು, (Specification) ಕಛೇರಿ ವೇಳೆಯಲ್ಲಿ ಆರೋಗ್ಯ ಶಾಖೆಯಿಂದ ಪಡೆಯಬಹುದು.

ಸಹಿ/–, ಪೌರಾಯುಕ್ತರು, ನಗರಸಭೆ ಪುತ್ತೂರು

DIPR/DK/KSMCA/1691/25-26 dt. 03.03.2026

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜನಿಯರಿಂಗ್ ಘಟಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಆ&ಕು.ಕ.ಇ.ಇಂ ವಿಭಾಗ, ಫೋರ್ಟ್ ರೋಡ್, ಧಾರವಾಡ–580008

ದೂರವಾಣಿ ಸಂ : 0836 – 2955800
(E-Mail : eehfwedvndwd1@gmail.com)

ಸಂಖ್ಯೆ: ಕಾನಿಅ/ಆಕುಕಇಇಂ/ವಿಭಾಗ–ಧಾ/ಪಿ.ಎಮ್. ಅಭಿಮ್/1913/25–26 ದಿ : 03.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ – 2ನೇ ಕರೆ

(Through KPP Portal only)

ಕಾರ್ಯನಿರ್ವಾಹಕ ಅಭಿಯಂತರರು, ಆ&ಕು.ಕ.ಇ.ಇಂ., ವಿಭಾಗ, ಧಾರವಾಡ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆ ವರ್ಗದ ಗುತ್ತಿಗೆದಾರರಿಂದ ಕಾಮಗಾರಿವಾರು ಹಾಗೂ ಜಿಲ್ಲಾವಾರು ಸಂಬಂಧಿಸಿದ ಈ ವಿಭಾಗದಡಿಯಲ್ಲಿಯ ಪಿ.ಎಮ್. ಅಭಿಮ್: ಬೆಳಗಾವಿ ಜಿಲ್ಲೆಯ : 9 ಸಂಖ್ಯೆ ಕಾಮಗಾರಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿರುವಂತೆ ಕಾಮಗಾರಿವಾರು **Double cover system,** ಐಟಂವಾರು ದರದ ಟೆಂಡರ್‌ಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ದಿ : **04.03.2026** ರಿಂದ **10.03.2026** ರ ಸಾಯಂಕಾಲ 4.00 ಘಂಟೆಯವರೆಗೆ **www.kppp.karnataka.gov.in** ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ, ಹಾಗೂ ಸದರಿ ಕಾಮಗಾರಿಯ ಬಿಡ್‌ಗಳನ್ನು ದಿ : **11.03.2026** ರಂದು ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಒಂದು ವೇಳೆ ಮಾಹಿತಿ ಹಾಗೂ ದಿನಾಂಕಗಳಲ್ಲಿ ಬದಲಾವಣೆಯಾದಲ್ಲಿ, ನಿಖರವಾದ ಮಾಹಿತಿ ಹಾಗೂ ದಿನಾಂಕಗಳನ್ನು ಕೆ.ಪಿ.ಪಿ.ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ನಲ್ಲಿ ಬಿಡ್‌ಗಳನ್ನು ಪಡೆದು, ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಇನ್ನೂ ಹೆಚ್ಚಿನ ಮಾಹಿತಿಯನ್ನು **www.kppp.karnataka.gov.in** ನಲ್ಲಿ ವೀಕ್ಷಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಆ&ಕು.ಕ.ಇ. ಇಂಜಿನೀಯರಿಂಗ್ ವಿಭಾಗ, ಧಾರವಾಡ.

ವಾಸಾಸಂಇ/ಧಾ/ಕೆಎಸ್‌ಎಂಸಿಎ/1304/2025–26

ಜಲ ಸಂಪನ್ಮೂಲ ಇಲಾಖೆ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ)

ಬೇಲೂರು ಕೈಗಾರಿಕಾ ವಸಾಹತು, ಧಾರವಾಡ – 580011.
ಫೋನ್/ಫ್ಯಾಕ್ಸ್ ಸಂಖ್ಯೆ: 0836–2486893/889 ಮೊಬೈಲ್ ಸಂಖ್ಯೆ: 9448386889
ಇ–ಮೇಲ್: directorwalmidharwad@gmail.com

ಸಂಖ್ಯೆ: ವಾಲ್ಮಿ/ನಿರ್ದೇಶಕರು/ಇ–ಆಕ್ಷನ್/2025–26 ದಿನಾಂಕ: 03–03–2026

ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ)

ಮಾನ್ಯ ನಿರ್ದೇಶಕರು, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ಬೇಲೂರು ಕೈಗಾರಿಕಾ ವಸಾಹತು, ಧಾರವಾಡ – 580011 ಕಚೇರಿ ಅಡಿಯಲ್ಲಿ ಕೆಳಗಿನ ಅರ್ಹ Nationalized Public Sector Banks and Private Scheduled Commercial Banks ರವರಿಂದ Competitive Interest Rates on Fixed Deposit ಪ್ರತಿಶತ ದರದ ಟೆಂಡರ್‌ನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಆಹ್ವಾನಿಸಲಾಗಿದೆ.

Sl. No.	Name of Work	Amount (Rs. in Lakhs)	Category	EMD (in Rs.)	Period	Category/ Class of Contractors
1	e-Tender invited from Private Scheduled Commercial Banks for Providing Competitive Interest Rates on Fixed Deposit. **No. WALMI/ 2025-26/SE0007**	**50.80**	Fixed Deposit	**10000.00**	365 Days	Private Scheduled Commercial Banks
2	e-Tender invited from Nationalized Public Sector Banks for Providing Competitive Interest Rates on Fixed Deposit. **No. WALMI/ 2025-26/SE0008**	**76.20**	Fixed Deposit	**10000.00**	365 Days	Nationalized Public Sector Banks

ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ನಿಗದಿತ ಇ.ಎಂ.ಡಿ ಶುಲ್ಕದೊಂದಿಗೆ **www.kppp.karnataka.gov.in** ಪೋರ್ಟಲ್‌ನಲ್ಲಿ, ಅರ್ಜಿಯನ್ನು ದಿನಾಂಕ: **04–03–2026** ರಿಂದ **20–03–2026 ರವರೆಗೆ** ಡೌನಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **20–03–2026 ರಂದು ಸಂಜೆ 4.00 ಗಂಟೆಯವರೆಗೆ.** ಬಿಡ್ ತೆರೆಯುವ ದಿನಾಂಕ: **23–03–2026 ರಂದು ಬೆಳಿಗ್ಗೆ 11.00 ಗಂಟೆಯ ನಂತರ.** ಇ.ಎಂ.ಡಿ. ವಿವರ, ಪೂರ್ವಾರ್ಹತೆ ಷರತ್ತುಗಳು, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ **(www.kppp.karnataka.gov.in)** ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: **0836–2486889** ಸಂಪರ್ಕಿಸುವುದು. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ನಿರ್ದೇಶಕರು
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ,
ಬೇಲೂರು ಕೈಗಾರಿಕಾ ವಸಾಹತು, ಧಾರವಾಡ– 580011

ವಾಸಾಸಂಇ/ಧಾರವಾಡ/1305/ಅಡ್ವರ್ಟೈಸರ್/2025–26

ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/ AE-2 /2025–26/3930 ದಿ:–24.02.2026

ಅಲ್ಪಾವದಿ ಇ–ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	PWD/2025-26/RD/WORK_INDENT33225	100.00	5	PWD/2025-26/RD/WORK_INDENT32491	500.00
2	PWD/2025-26/BD/WORK_INDENT32512	100.00	6	PWD/2025-26/BD/WORK_INDENT28245	150.00
3	PWD/2025-26/EL/WORK_INDENT33306	250.00	7	PWD/2025-26/BD/WORK_INDENT33944	100.00
4	PWD/2025-26/RD/WORK_INDENT32988	300.00	8	PWD/2025-26/RD/WORK_INDENT32385	25.00

		ಕ್ರಸಂ 1 ರಿಂದ 7	ಕ್ರಸಂ 8
1	ಗುತ್ತಿಗೆದಾರರ ಕ್ವಾರೀಸ್ ದಿನಾಂಕ:	KPP Portal ನಲ್ಲಿ ಇರುವಂತೆ	KPP Portal ನಲ್ಲಿ ಇರುವಂತೆ
2	ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:	12.03.2026 (16.00 ಗಂಟೆಗೆ)	07.03.2026 (16.00 ಗಂಟೆಗೆ)
3	ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ:	13.03.2026 (16.30 ಗಂಟೆಗೆ)	09.03.2026 (16.30 ಗಂಟೆಗೆ)
4	ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಆರ್ಥಿಕ ಬಿಡ್ ತೆರೆಯುವ ದಿನಾಂಕ:	KPP Portal ನಲ್ಲಿ ಇರುವಂತೆ	KPP Portal ನಲ್ಲಿ ಇರುವಂತೆ

ವಿಶೇಶ ಸೂಚನೆ:– ಎಲ್ಲಾ ಕಾಮಗಾರಿ ಟೆಂಡರ್‌ಗಳನ್ನು / ಒಪ್ಪಿಗೆ / ತಿರಸ್ಕರಿಸುವ ಅಥವಾ ಯಾವುದೇ ಕಾರಣ ನೀಡದೆ ಹಿಂತೆಗೆದುಕೊಳ್ಳುವ ಹಾಗೂ ಅನುಮೋದಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/563

ಪುರಸಭಾ ಕಾರ್ಯಾಲಯ, ಕುಂದಾಪುರ 576 201, ಉಡುಪಿ ಜಿಲ್ಲೆ

ದೂ: 08254-230410(o) E-Mail: itstaff_ulb_kundapur@yahoo.co.in

ಕುಂಪಸ/ಕಂ.ವಿ./ಸಿ.ಆರ್.:01/2024-25 ದಿ.: 23-02-2026

ಸಾರ್ವಜನಿಕ ಪ್ರಕಟಣೆ (ಇ–ಹರಾಜು/e-procurement Portal)

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕುಂದಾಪುರ ಪುರಸಭೆಗೆ ಸೇರಿದ ವಾಣಿಜ್ಯ ಕಟ್ಟಡಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ವಾಣಿಜ್ಯ ಮಳಿಗೆಗಳ ವಿವರಗಳು

ಕ್ರ. ಸಂ.	ವಿವರ	ಕೋಣೆಯ ನಂಬ್ರ ಮತ್ತು ವಿಸ್ತೀರ್ಣ (ಚ.ಅಡಿ ಗಳಲ್ಲಿ)		ನಿಗದಿಪಡಿಸಲಾದ ಮರು ಪಾವತಿ ಠೇವಣಿ	ನಿಗದಿಪಡಿಸಿದ ಮಾಸಿಕ ಬಾಡಿಗೆ ಮತ್ತು ಜಿ.ಎಸ್.ಟಿ.		ವಿನಾಯಿತಿ	ಇ–ಹರಾಜು ಇಡೆಂಟ್ ಹಾಗೂ ಲಾಟ್ ನಂಬರ್
		ಕೋಣೆ ನಂಬ್ರ	ಚ.ಅಡಿ.	ಮೊತ್ತ ರೂ.	ಬಾಡಿಗೆ	ಜಿ.ಎಸ್.ಟಿ		
1	ಮೊದಲ ಮಹಡಿ (ಐ.ಡಿ.ಎಸ್.ಎಂ.ಟಿ) ಹೊಸ ಬಸ್ ನಿಲ್ದಾಣ (ಪೂರ್ವ ದಿಕ್ಕು)	ಎಫ್–7	84.00	1,04,971.00	849.00	153.00	ಪರಿಶಿಷ್ಟ ಪಂಗಡ	DMA/2025-26/ AUCTION5429
2		ಎಫ್–11	84.00	1,04,971.00	849.00	153.00	ಪರಿಶಿಷ್ಟ ಜಾತಿ	DMA/2025-26/ AUCTION5462
3		ಎಫ್–12	84.00	1,04,971.00	849.00	153.00	ಸಾಮಾನ್ಯ	DMA/2025-26/ AUCTION5464
4		ಎಫ್–13	84.00	1,04,971.00	849.00	153.00	ಸಾಮಾನ್ಯ	DMA/2025-26/ AUCTION5466
5	ಕುಡ್ಸೆಂಪ್ ವತಿಯಿಂದ ನಿರ್ಮಿಸಿರುವ ಕಛೇರಿಯ ಕಟ್ಟಡ ನೆಲ ಅಂತಸ್ತು	ಜಿ–5	190.23	86,602.00	990.00	178.00	ವಿಶೇಷ ಚೇತನರು	DMA/2025-26/ AUCTION5472
6	ಕುಡ್ಸೆಂಪ್ ವತಿಯಿಂದ ನಿರ್ಮಿಸಿರುವ ಕಛೇರಿಯ ಕಟ್ಟಡ ಮೊದಲ ಅಂತಸ್ತು	ಎಫ್–3	229.83	1,04,630.00	1076.00	194.00	ಪರಿಶಿಷ್ಟ ಜಾತಿ	DMA/2025-26/ AUCTION5473
7		ಎಫ್–4&5	514.00	2,34,049.00	2408,00	433.00	ಪರಿಶಿಷ್ಟ ಜಾತಿ	DMA/2025-26/ AUCTION5474
8		ಎಫ್–13 ರಿಂದ ಎಫ್–17	1667.00	7,58,902,00	7808.00	1405.00	ಸಾಮಾನ್ಯ	DMA/2025-26/ AUCTION5475
9		ಎಫ್–21	240.86	1,09,652.00	1128.00	203.00	ಪರಿಶಿಷ್ಟ ಜಾತಿ	DMA/2025-26/ AUCTION5476
10		ಎಫ್–7ಬಿ	293.00	1,33,388.00	1373.00	247.00	ಪರಿಶಿಷ್ಟ ಜಾತಿ	DMA/2025-26/ AUCTION5477
11		ಎಫ್–8	309.00	1,40,672.00	1448.00	261.00	ಪರಿಶಿಷ್ಟ ಪಂಗಡ	DMA/2025-26/ AUCTION5478
12	ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ನಿರ್ಮಿಸಿರುವ ಹಳೆ ಬಸ್ಸು ನಿಲ್ದಾಣದಲ್ಲಿರುವ	ಎ	1395.78	8,00,061.00	7775.00	1400.00	ಪರಿಶಿಷ್ಟ ಪಂಗಡ	DMA/2025-26/ AUCTION5468
13	ಮೊದಲ ಮಹಡಿ ಕಟ್ಟಡ	ಬಿ	1951.75	11,18,743.00	10873.00	1957.00	ಸಾಮಾನ್ಯ	DMA/2025-26/ AUCTION5469

ಇ–ಹರಾಜು (E-Procurement) ಷೆಡ್ಯೂಲ್ ವಿವರಗಳು

ಕ್ರ.ಸಂ.	ವಿವರ	ದಿನಾಂಕ / ಸಮಯ
	ವಿಶೇಷ ಸೂಚನೆ: ಹರಾಜು ಠೇವಣಿ ಒಂದು ಮಳಿಗೆಗೆ ರೂ. 25,000/- ಹಾಗೂ ಹರಾಜು ಶುಲ್ಕ ರೂ. 500/- ಪಾವತಿಸಿ ಏಲಂನಲ್ಲಿ ಭಾಗವಹಿಸುವುದು.	
1	ಇ–ಪೋರ್ಟಲ್‌ನಲ್ಲಿ ಹರಾಜು ನೋಟೀಸ್‌ನ್ನು ಪಡೆಯುವ ದಿನಾಂಕ (Download) (Auction notice can be downloaded upto)	01.04.2026ರ ಅಪರಾಹ್ನ 15.00 (3.00 PM)ರವರೆಗೆ
2	ಇ–ಪೋರ್ಟಲ್‌ನಲ್ಲಿ ಆಸಕ್ತಿ ಹೊಂದಿದ ಏಲಂದಾರರು ಖಾತರಿಪಡಿಸಿಕೊಳ್ಳುವ ದಿನಾಂಕ/ಸಮಯ (Confirmation of participation of interest in auction)	01.04.2026ರ ಅಪರಾಹ್ನ 17.00 (5.00 PM)ರವರೆಗೆ
3	ಇ–ಹರಾಜಿನಲ್ಲಿ ಭಾಗವಹಿಸುವವರ ದಾಖಲೆಗಳ ಮೌಲ್ಯಮಾಪನ ಕೊನೆಯ ದಿನಾಂಕ/ಸಮಯ (Start date & time of evaluation)	02.04.2026ರ ಬೆಳಿಗ್ಗೆ 10.00ರಿಂದ
4	ಇ–ಪೋರ್ಟಲ್‌ನಲ್ಲಿ ಹರಾಜು ನಡೆಸುವ ಹಾಗೂ ಲೈವ್ ಬಿಡ್ಡಿಂಗ್ ದಿನಾಂಕ/ಸಮಯ: (Live Bidding / Auction for)	06.04.2026ರ ಬೆಳಿಗ್ಗೆ 10.00 ಗಂಟೆಯಿಂದ 07.04.2026ರ ಸಂಜೆ 5.00 ಗಂಟೆಯವರೆಗೆ ಇ–ಪೋರ್ಟಲ್‌ನಲ್ಲಿ ನಿಗದಿಪಡಿಸಿದ ಶೆಡ್ಯೂಲ್‌ನಂತೆ
5	Delta time bidding	2 Minutes
6	ಇ–ಟೆಂಡರ್‌ನಲ್ಲಿ ಸಲ್ಲಿಕೆಯಾಗಿರುವ ಬಿಡ್‌ಗಳನ್ನು ತೆರೆಯುವ ದಿನಾಂಕ/ಸಮಯ: (Opening of Auction)	10.04.2026ರ ಬೆಳಿಗ್ಗೆ 11.00 ಗಂಟೆಯಿಂದ

ಷರತ್ತು ಹಾಗೂ ಹೆಚ್ಚಿನ ವಿವರಗಳಿಗಾಗಿ ಪುರಸಭಾ ಕಚೇರಿಯ ಕೆಲಸದ ವೇಳೆಯಲ್ಲಿ ಕಚೇರಿಯ ಅಧಿಕಾರಿಗಳನ್ನು ಹಾಗೂ ಪುರಸಭೆಯ ವೆಬ್‌ಸೈಟ್ www.kundapurtown.mrc.in ಮತ್ತು https://kppp.karnataka.gov.in ನಲ್ಲಿ ಪರಿಶೀಲಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ ಎಂದು ಈ ಮೂಲಕ ತಿಳಿಸಿದೆ.

ಸಹಿ/– ಆಡಳಿತಾಧಿಕಾರಿ, ಪುರಸಭೆ, ಕುಂದಾಪುರ
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಕುಂದಾಪುರ

ಪುರಸಭೆ ಕಾರ್ಯಾಲಯ, ವಿರಾಜಪೇಟೆ, ಕೊಡಗು ಜಿಲ್ಲೆ–571218

ದೂರವಾಣಿ ಸಂಖ್ಯೆ : 08274-257332, ಇ-ಮೇಲ್: itstaff_ulb_virajpet@yahoo.com | :ವೆಬ್‌ಸೈಟ್: www.virajpettown.mrc.gov.in

ನಂ.ಪುಕಾವೀ/ಕ.ನಿ/ಹರಾಜು/01/2025-26 ದಿನಾಂಕ: 03.03.2026

ವಾರ್ಷಿಕ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಪ್ರಕಟಿಸುವುದೇನೆಂದರೆ, ವಿರಾಜಪೇಟೆ ಪುರಸಭೆಗೆ ಸೇರಿದ 2026–27ನೇ ಸಾಲಿಗೆ ಈ ಕೆಳಕಂಡ ಬಾಪ್ತುಗಳಿಗೆ ವಾರ್ಷಿಕ ಬಹಿರಂಗ ಹರಾಜು ಪ್ರಕ್ರಿಯೆಯನ್ನು **ದಿನಾಂಕ: 12-03-2026 ರಂದು ಪೂರ್ವಾಹ್ನ 11.00 ಗಂಟೆಗೆ ಪುರಸಭೆಯ ಕಛೇರಿಯ ಪುರಭವನದಲ್ಲಿ ಬಹಿರಂಗ ಹರಾಜು** ಮೂಲಕ ವಿಲೇ ಪಡಿಸಲಾಗುವುದು. ಹಾಗೂ ಮಳಿಗೆಗಳನ್ನು ಯಥಾ ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು ಇಚ್ಚೆಯುಳ್ಳವರು ಷರತ್ತಿಗೊಳಪಟ್ಟು **ದಿನಾಂಕ:11-03-2026 ರಂದು ಸಂಜೆ 5.00 ಗಂಟೆಯೊಳಗಾಗಿ** ಕಛೇರಿ ಸಮಯದಲ್ಲಿ ಇ.ಎಂ.ಡಿ. ಮೊತ್ತವನ್ನು ಡಿ.ಡಿ ಮೂಲಕ ಪಾವತಿಸಿ ಹರಾಜಿನಲ್ಲಿ ಭಾಗವಹಿಸಿ ಸವಾಲು ಮೂಲಕ ಹಕ್ಕನ್ನು ಪಡೆದುಕೊಳ್ಳಬಹುದಾಗಿದೆ.

ಹರಾಜಿಗೆ ಇಡಲಾದ ಮಳಿಗೆಗಳ ವಿವರಗಳು

ಕ್ರ. ಸಂ	ವಿವರ	ಮಳಿಗೆ ಸಂಖ್ಯೆ	ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ)
1	ಮೂರ್ನಾಡು ರಸ್ತೆ ಬದಿಯಲ್ಲಿರುವ ಹಂದಿ ಮಾಂಸ ಮಳಿಗೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲು)	01	50,000/–
2	ಮೂರ್ನಾಡು ರಸ್ತೆ ಬದಿಯಲ್ಲಿರುವ ಹಂದಿ ಮಾಂಸ ಮಳಿಗೆ	02	50,000/–
3	ಮೂರ್ನಾಡು ರಸ್ತೆ ಬದಿಯಲ್ಲಿರುವ ಹಂದಿ ಮಾಂಸ ಮಳಿಗೆ	03	50,000/–
4	ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಮೀನುಮಳಿಗೆ	01	50,000/–
5	ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಮೀನುಮಳಿಗೆ	02	50,000/–
6	ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಮೀನುಮಳಿಗೆ	03	50,000/–
7	ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಮೀನುಮಳಿಗೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲು)	04	50,000/–
8	ಟಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಕುರಿ ಮಾಂಸ ಮಳಿಗೆ	05	50,000/–
9	ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಕುರಿ ಮಾಂಸ ಮಳಿಗೆ	06	50,000/–
10	ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಕುರಿ ಮಾಂಸ ಮಳಿಗೆ	07	50,000/–
11	ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಕುರಿ ಮಾಂಸ ಮಳಿಗೆ	08	50,000/–
12	।ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಕುರಿ ಮಾಂಸ ಮಳಿಗೆ	12	50,000/–
13	ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಕೋಳಿ ಮಾಂಸ ಮಳಿಗೆ	9	50,000/–
14	ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಕೋಳಿ ಮಾಂಸ ಮಳಿಗೆ	10	50,000/–
15	ಮೀನು ಮಾರುಕಟ್ಟೆ ಒಳಭಾಗದಲ್ಲಿರುವ ಕೋಳಿ ಮಾಂಸ ಮಳಿಗೆ	11	50,000/–
16	ಸಂತೆ ಸುಂಕ ಎತ್ತಾವಳಿ		50,000/–
17	ಬದ್ರಿಯಾ ಜಂಕ್ಷನ್‌ನಿಂದ ಮೀನು ಮಾರುಕಟ್ಟೆ ಜಂಕ್ಷನ್‌ವರೆಗೆ (ಎ.ಪಿ.ಜೆ ಅಬ್ದುಲ್ ಕಲಾಂ ರಸ್ತೆ) ಖಾಸಗಿ ಬಸ್ಸು ನಿಲ್ದಾಣ, ಕಾರು ನಿಲ್ದಾಣ, ಇತರೆ ಎಲ್ಲಾ ವಾಹನಗಳಿಗೆ ಪೇ-ಪಾರ್ಕಿಂಗ್ ಶುಲ್ಕ ಎತ್ತಾವಳಿ		50,000/–

ಇ.ಎಂ.ಡಿ. ಮೊತ್ತವನ್ನು ಪಾವತಿಸಿರುವವರಿಗೆ ಮಾತ್ರ ಸಭಾಂಗಣಕ್ಕೆ ಪ್ರವೇಶವನ್ನು ನೀಡಲಾಗುವುದು. ಸಾರ್ವಜನಿಕರಿಗೆ ಅವಕಾಶವಿರುವುದಿಲ್ಲ. ಷರತ್ತುಗಳನ್ನು ಪುರಸಭೆ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳತಕ್ಕದ್ದು.

ಸಹಿ/- (ಶ್ರೀ ನಿತಿನ್ ಚಕ್ಕಿ (ಕೆ.ಎ.ಎಸ್.)
ಆಡಳಿತಾಧಿಕಾರಿ, ಪುರಸಭೆ ವಿರಾಜಪೇಟೆ

ಸಹಿ/- (ಶ್ರೀ ಪಿ.ಕೆ. ನಾಚಪ್ಪ
ಮುಖ್ಯಾಧಿಕಾರಿ, ಪುರಸಭೆ ವಿರಾಜಪೇಟೆ

ಜಾಲ್ಸೂರು ವಿನೋಬಾನಗರ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ಗೀತಾ ಜ್ಞಾನ ಯಜ್ಞ

ಮಕ್ಕಳಲ್ಲಿ ಧರ್ಮ ಜಾಗೃತಿಗೆ ಶ್ರೀಗಳ ಮೆಚ್ಚುಗೆ

ಸುಳ್ಯ: ಸಮಾಜದಲ್ಲಿ ಹೇಗೆ ನ್ಯಾಯಯುತವಾಗಿ ಬದುಕಬೇಕೆಂದು ತಿಳಿಸಿದ ಪಾಠ ಪುಸ್ತಕ ಭಗವದ್ಗೀತೆ. ಇದರ ಅಧ್ಯಯನ ವಿದ್ಯಾ ಸಂಸ್ಥೆಗಳಲ್ಲಿ ಆಗುತ್ತಿರುವುದು ಅತ್ಯಂತ ಸಂತೋಷದಾಯಕ. ಇದು ನಿರಂತರ ನಡೆಯುತ್ತಿರಲಿ ಎಂದು ಕಾಸರಗೋಡು ಎಡನೀರು ಮಠದ ಸಚ್ಚಿದಾನಂದ ಭಾರತೀ ತೀರ್ಥ ಸ್ವಾಮೀಜಿ ಹೇಳಿದರು.

ಜಾಲ್ಸೂರು ವಿನೋಬಾನಗರ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ಭಗವದ್ಗೀತೆ ಅಧ್ಯಯನ ನಡೆಯುತ್ತಿದ್ದು, ಅದರ 18 ಅಧ್ಯಾಯಗಳ ಒಂದು ಆವೃತ್ತಿ ಪೂರ್ಣಗೊಂಡ ಪ್ರಯುಕ್ತ ಆಯೋಜಿಸಲಾದ ಗೀತಾ ಜ್ಞಾನ ಯಜ್ಞದ ಸಂದರ್ಭದಲ್ಲಿ ಆಶೀರ್ವಚನಗೈದರು.

ಧರ್ಮ ಜಾಗೃತಿ ಉತ್ತಮವಾದ ಕಾರ್ಯ

ಭಗವದ್ಗೀತೆ ಅಧ್ಯಯನದ ಮೂಲಕ ಮಕ್ಕಳಲ್ಲಿ ಧರ್ಮ ಜಾಗೃತಿ ಮೂಡಿಸುತ್ತಿರುವುದು ಉತ್ತಮ ಕೆಲಸ. ಈ ರೀತಿಯ ಸಂಸ್ಕಾರಯುತ ಶಿಕ್ಷಣ ಇಂದು



ಆಗಬೇಕಾಗಿದೆ ಎಂದು ಹೇಳಿದರು. ಪುರೋಹಿತ ಶ್ರೀವರ ಪಾಂಗಣ್ಣಾಯರ ನೇತೃತ್ವದಲ್ಲಿ ಗೀತಾ ಜ್ಞಾನ ಯಜ್ಞ ಆರಂಭಗೊಂಡಿತು. ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಭಗವದ್ಗೀತೆ ಪಠಣ ಮಾಡಿದರು. ವಿದ್ಯಾರ್ಥಿಗಳ ಪೋಷಕರು ಭಾಗವಹಿಸಿದರು. ಗೀತಾ ಜ್ಞಾನ ಯಜ್ಞದ ಪೂರ್ಣಾಹುತಿಯಲ್ಲಿ ಶ್ರೀಗಳು ಭಾಗವಹಿಸಿದರು.

ಗೀತಾ ಜ್ಞಾನ ಯಜ್ಞ ನೆರವೇರಿಸಿದ ಶ್ರೀವರ ಪಾಂಗಣ್ಣಾಯ ಹಾಗೂ ಭಗವದ್ಗೀತೆ ಪಠಣದ ನೇತೃತ್ವ ವಹಿಸಿದ ಪ್ರೌಢ ಶಾಲಾ ವಿಭಾಗದ ಮುಖ್ಯೋಪಾಧ್ಯಾಯ ಗಿರೀಶ್ ಅವರನ್ನು ಗೌರವಿಸಲಾಯಿತು. ವಿವೇಕಾನಂದ ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷ ನ. ಸೀತಾರಾಮ ಸ್ವಾಗತಿಸಿ, ಸಂಸ್ಥೆಯ ಕೋಶಾಧಿಕಾರಿ ಸುಧಾಕರ ಕಾಮತ್ ವಂದಿಸಿದರು. ಶಿಕ್ಷಕಿ ಪಾವನಾ ಕಾರ್ಯಕ್ರಮ ನಿರ್ವಹಿಸಿದರು.

ಈ ಸಂದರ್ಭ ಸಂಸ್ಥೆಯ ಸಂಚಾಲಕ ಡಾ. ಗೋಪಾಲಕೃಷ್ಣ ಭಟ್ ಕಾಟೂರು, ಸದಸ್ಯರಾದ ಪುರುಷೋತ್ತಮ ಕಿರ್ಲಾಯ, ಶ್ಯಾಮ್ ಪ್ರಸಾದ್ ಅಡ್ಡಂತಡ್ಕ, ಶಿವಪ್ರಸಾದ್ ಉಗ್ರಾಣಿಮನೆ, ಹೇಮಂತ್ ಮಠ, ರಾಷ್ಟ್ರೋತ್ಥಾನ ಶಿಶು ಮಂದಿರದ ಸಮಿತಿಯ ಅಧ್ಯಕ್ಷ ಬಾಲಕೃಷ್ಣ ಬೊಳ್ಳುರು, ಪ್ರಾಥಮಿಕ ವಿಭಾಗದ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ರವಿರಾಜ್ ಗಬ್ಬಲಡ್ಕ, ಪ್ರೌಢ ವಿಭಾಗದ ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ಆಶೋಕ್ ಅಡ್ಕಾರ್, ಹಿರಿಯಾದ ಕೃಷ್ಣ ಕಾಮತ್ ಆರಂಬೂರು ಮತ್ತಿತರರು ಉಪಸ್ಥಿತರಿದ್ದರು.

ರೋಟರಿ ಜಿಲ್ಲೆ 3181ರ ಜಿಲ್ಲಾ ರೋಟರ್ಯಾಕ್ಟ್ ಪ್ರತಿನಿಧಿಯಾಗಿ ಶ್ರೀರಕ್ಷಾ ಪ್ರಭಾಕರ್ ಆಯ್ಕೆ

ಮಡಿಕೇರಿ: ರೋಟರಿ ಜಿಲ್ಲೆ 3181ರ ರೋಟರ್ಯಾಕ್ಟ್ ಕ್ಲಬ್ ಮುಂದಿನ ಸಾಲಿನ ಪ್ರತಿನಿಧಿಯಾಗಿ ಕೊಡಗಿನ ಶ್ರೀರಕ್ಷಾ ಪ್ರಭಾಕರ್ ಆಯ್ಕೆಯಾಗಿದ್ದಾರೆ.

ಮೈಸೂರಿನಲ್ಲಿ ನಡೆದ ರೋಟರ್ಯಾಕ್ಟ್‌ನ 56 ಕ್ಲಬ್‌ಗಳ ಪ್ರತಿನಿಧಿಯ ಚುನಾವಣೆಯಲ್ಲಿ ಶ್ರೀರಕ್ಷಾ ಅತ್ಯಧಿಕ ಮತ ಗಳಿಸಿ ಜಿಲ್ಲಾ ರೋಟರ್ಯಾಕ್ಟ್ 11 ನೇ ಪ್ರತಿನಿಧಿಯಾಗಿ ವಿಜಯಿಯಾದರು.

ಮೂಲತಃ ನಾಪೋಕ್ಲು ಗ್ರಾಮದ ಪತ್ರಕರ್ತ ಪಿ.ವಿ. ಪ್ರಭಾಕರ್ - ಅಶ್ವಿನಿ ದಂಪತಿಯ ಪುತ್ರಿಯಾದ ಶ್ರೀರಕ್ಷಾ, ಮೂರ್ನಾಡುವಿನಲ್ಲಿ ಮಡಿಕೇರಿ ರೋಟರಿ ವುಡ್ಸ್ ಸಂಸ್ಥೆಯು 4 ವರ್ಷಗಳ ಹಿಂದೆ ಪ್ರಾರಂಭಿಸಿದ್ದ ರೋಟರ್ಯಾಕ್ಟ್ ಸಂಸ್ಥೆಯ ಅಧ್ಯಕ್ಷೆಯಾಗಿ ಅನೇಕ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಜಿಲ್ಲಾ ರೋಟರ್ಯಾಕ್ಟ್ ಪ್ರಶಸ್ತಿಯನ್ನೂ ಪಡೆದಿದ್ದರು.

ಪ್ರಸ್ತುತ, ಮೈಸೂರಿನ ಕಾವೇರಿ ಸ್ಕೂಲ್ ನಲ್ಲಿ ಉಪನ್ಯಾಸಕಿಯಾಗಿರುವ ಶ್ರೀರಕ್ಷಾ ಪ್ರಭಾಕರ್, 2026-27 ನೇ ಸಾಲಿಗೆ 4 ಕಂದಾಯ ಜಿಲ್ಲೆಗಳಿಗೆ ಸೇರಿದ 56 ರೋಟರ್ಯಾಕ್ಟ್ ಕ್ಲಬ್‌ಗಳ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.



ಇದೇ ಮೊದಲ ಬಾರಿಗೆ ಕೊಡಗು ಜಿಲ್ಲೆಯಿಂದ ಜಿಲ್ಲಾ ರೋಟರ್ಯಾಕ್ಟ್‌ಗೆ ಪ್ರತಿನಿಧಿಯೊಬ್ಬರು ಆಯ್ಕೆಯಾದ ಹಿರಿಮೆಗೆ ಶ್ರೀರಕ್ಷಾ ಕಾರಣರಾಗಿದ್ದಾರೆ.. ರೋಟರಿ ಜಿಲ್ಲೆ 3181 ರ ಚುನಾಯಿತ ಗವರ್ನರ್ ಯಶಸ್ವಿ ಸೋಮಶೇಖರ್ ಮತ್ತು ರೋಟರ್ಯಾಕ್ಟ್ ಉಸ್ತುವಾರಿ ಎಲಿಜಬೆತ್ ಶಕುಂತಲಾ ಅವರು ಮೈಸೂರಿನಲ್ಲಿ ಶ್ರೀರಕ್ಷಾ ಅವರಿಗೆ ಶುಭಹಾರೈಸಿದರು.

ಸಂಸದ ಯದುವೀರ್ ಮನವಿಗೆ ಸ್ಪಂದಿಸಿದ ವಿದೇಶಾಂಗ ಸಚಿವಾಲಯ

ಕೊಡಗಿನಲ್ಲಿ ಏ. 8ರಿಂದ ಪಾಸ್‌ಪೋರ್ಟ್ ಮೇಳ

ಮಡಿಕೇರಿ: ಕಿತ್ತಳೆ ನಾಡು ಕೊಡಗು ಜಿಲ್ಲೆಯ ನಾಗರಿಕರಿಗೆ ಸಂತಸದ ಸುದ್ದಿಯೊಂದು ಹೊರ ಬಿದ್ದಿದೆ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪರಿಶ್ರಮದ ಫಲವಾಗಿ ಕೊಡಗಿನಲ್ಲಿ ಏಪ್ರಿಲ್ 8ರಿಂದ ಮೂರು ದಿನಗಳ ಕಾಲ ಪಾಸ್‌ಪೋರ್ಟ್ ಮೇಳ ಆಯೋಜಿಸಲು ಬೆಂಗಳೂರು ವಿಭಾಗೀಯ ಪಾಸ್‌ಪೋರ್ಟ್ ಕಚೇರಿ ನಿರ್ಧರಿಸಿದೆ.



ಫೆಬ್ರವರಿ ತಿಂಗಳಿನಲ್ಲಿ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದ ಯದುವೀರ್ ಒಡೆಯರ್, ಕೊಡಗು ಜಿಲ್ಲೆಯಲ್ಲಿ ಪಾಸ್‌ಪೋರ್ಟ್ ಮೇಳ ಆಯೋಜಿಸುವಂತೆ ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿರುವ ಬೆಂಗಳೂರು ರೀಜನಲ್ ಪಾಸ್‌ಪೋರ್ಟ್ ಅಧಿಕಾರಿಗಳು ಸಂಸದರಿಗೆ ಪತ್ರ ಬರೆದು, ಏಪ್ರಿಲ್ 8, 9, 10ರಂದು ಮೇಳ ಆಯೋಜಿಸಲಾಗುವುದು ಹಾಗೂ 8 ರಂದು ಈ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲು ಆಗಮಿಸಬೇಕು ಎಂದು ಸಂಸದ ಯದುವೀರ್ ಒಡೆಯರ್ ಅವರಿಗೆ ಮನವಿ ಮಾಡಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಸಂಸದ ಯದುವೀರ್ ಒಡೆಯರ್, ಕೊಡಗು ಜಿಲ್ಲೆಯ ಹಲವಾರು ಮಂದಿ ಪಾಸ್‌ಪೋರ್ಟ್ ಬೇಕೆಂದು ಮನವಿ ಸಲ್ಲಿಸಿದ್ದರು. ಕೆಲವರು ಮೈಸೂರಿಗೆ ಅಥವಾ ಬೆಂಗಳೂರಿಗೆ ತೆರಳಬೇಕು. ಇದು ಹಿರಿಯ ನಾಗರಿಕರಿಗೆ ತೊಂದರೆ ಆಗುತ್ತದೆ ಎಂದು ಮನವಿಯಲ್ಲಿ ವಿವರಿಸಿದ್ದರು. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ಯದುವೀರ್ ವಿವರಿಸಿದ್ದಾರೆ.

ಕಳೆದ ಬಾರಿ ನವದೆಹಲಿಗೆ ತೆರಳಿದಾಗ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿಗಳಾದ ಶ್ರೀಪ್ರಿಯಾ ರಂಗನಾಥನ್ ಅವರನ್ನು ಭೇಟಿ ಮಾಡಿ, ಕೊಡಗು ಜಿಲ್ಲೆಯಲ್ಲಿ ಪಾಸ್‌ಪೋರ್ಟ್ ಮೇಳ ಆಯೋಜಿಸಲು ಮನವಿ ಸಲ್ಲಿಸಿದ್ದೆ ಇದಕ್ಕೆ ಸ್ಪಂದಿಸಿರುವ ಹಿರಿಯ ಅಧಿಕಾರಿಗಳು, ಬೆಂಗಳೂರು ಪಾಸ್‌ಪೋರ್ಟ್ ಕಚೇರಿಗೆ ಸೂಚನೆ ನೀಡಿ ಪಾಸ್‌ಪೋರ್ಟ್ ಮೇಳ ಆಯೋಜಿಸಲು ಕ್ರಮ ಕೈಗೊಂಡಿದ್ದಾರೆ. ಕೊಡಗು ಜಿಲ್ಲೆಯ ನಾಗರಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಂಸದ ಯದುವೀರ್ ಒಡೆಯರ್ ಹೇಳಿದ್ದಾರೆ.

ಕುಕ್ಕೆ ಶ್ರೀ ದೇವಳದಲ್ಲಿ ಶುದ್ಧೋದಕ ಸಂಪ್ರೋಕ್ಷಣೆ: ಬೋಳು ಪಲ್ಲಕಿ ಉತ್ಸವ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಂಗಳವಾರ ಚಂದ್ರಗ್ರಹಣದ ಹಿನ್ನೆಲೆಯಲ್ಲಿ ಶ್ರೀ ದೇವರ ದರುಶನದಲ್ಲಿ ವ್ಯತ್ಯಯ ಮಾಡಲಾಯಿತು. ಬೆಳಗ್ಗೆ 9 ಗಂಟೆಯಿಂದ ಶ್ರೀ ದೇವರ ದರುಶನವನ್ನು ನಿರ್ಬಂಧಿಸಲಾಯಿತು.

ಸರ್ಪ ಸಂಸ್ಕಾರ ಸೇರಿದಂತೆ ಇತರ ಯಾವುದೇ ಸೇವೆಗಳು ದೇವಳದಲ್ಲಿ ನಡೆಯಲಿಲ್ಲ. ಮಧ್ಯಾಹ್ನದ ಮಹಾಪೂಜೆ ಬೆಳಗ್ಗೆ 8 ಗಂಟೆಗೆ ನಡೆಯಿತು. ಬಳಿಕ ದೇವಳದ ಬಾಗಿಲು ಮುಚ್ಚಲಾಯಿತು. ಬೆಳಗ್ಗಿನ ಉಪಹಾರ 9 ಗಂಟೆ ತನಕ ವಿತರಿಸಲಾಯಿತು. ಮಧ್ಯಾಹ್ನ ಪ್ರಸಾದ ಭೋಜನ ವ್ಯವಸ್ಥೆ ಇರಲಿಲ್ಲ. ಗ್ರಹಣದ ಬಳಿಕ ಶ್ರೀ ದೇವಳದ ಒಳಾಂಗಣ ಮತ್ತು ಹೊರಾಂಗಣವನ್ನು ನೀರಿನಿಂದ ತೊಳೆದು ಸ್ವಚ್ಛ ಮಾಡಲಾಯಿತು. ಬಳಿಕ ಶ್ರೀ ದೇವಳದಲ್ಲಿ ಬೋಳು ಪಲ್ಲಕಿ ಉತ್ಸವ ನೆರವೇರಿತು. ನಂತರ ಅರ್ಚಕರ ಸ್ನಾನಾದಿ ಕಾರ್ಯಗಳು ನೆರವೇರಿತು.

ಬಳಿಕ ದೇವಳದ ಪ್ರಧಾನ ಅರ್ಚಕರಾದ ಸೀತಾರಾಮ ಎಡಪಡಿತ್ತಾಯರು ಶ್ರೀ ದೇವರ ಗರ್ಭಗುಡಿ, ಒಳಾಂಗಣ, ನೈವೇದ್ಯ ಕೊಠಡಿ ಇತ್ಯಾದಿ ಕಡೆ ಶುದ್ಧೋಧಕ ಸಂಪ್ರೋಕ್ಷಣೆ ಸೇರಿದಂತೆ ಇತರ ವೈದಿಕ ವಿಧಿ ವಿಧಾನಗಳ ಮೂಲಕ ಶುದ್ಧಿ ಕಾರ್ಯವನ್ನು ನೆರವೇರಿಸಿದರು.

ನಂತರ ಶ್ರೀ ದೇವರಿಗೆ ನೈವೇದ್ಯ ಸಮರ್ಪಣೆಯಾಗಿ ದೀಟಿಗೆ ಸಲಾಮು ನಡೆಯಿತು. ನಂತರ ರಾತ್ರಿ ಮಹಾಪೂಜೆ ನೆರವೇರಿ, ಹುಣ್ಣಿಮೆ ಪ್ರಯುಕ್ತ ಪಂಚಪರ್ವ ನಿಮಿತ್ತ ಶ್ರೀ ದೇವರ ಪಾಲಕಿ ಉತ್ಸವ ನಡೆಯಿತು.

ಶ್ರೀ ದೇವರ ದರುಶನ ಮತ್ತು ಸೇವಾದಿಗಳು ಹಗಲು ಹೊತ್ತು ಇಲ್ಲದ ಕಾರಣ ಶ್ರೀ ದೇವಳದಲ್ಲಿ ಭಕ್ತರ ಸಂಖ್ಯೆ ವಿರಳವಾಗಿತ್ತು. ಭಕ್ತರಿಲ್ಲದೆ ಶ್ರೀ ದೇವಳ, ರಥಬೀದಿ ಬಿಕೋ ಎನ್ನುತ್ತಿತ್ತು.

ಪುತ್ತೂರು ಮಾರುಕಟ್ಟೆ ಧಾರಣೆ

03-03-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 475
ಚೋಲ್ ಅಡಿಕೆ	505 - 530
ಡಬಲ್ ಚೋಲ್	505 - 530
ಹೊಸ ಪಠೋರ	365 - 415
ಹಳೆ ಪಠೋರ	400 - 430
ಹೊಸ ಉಳ್ಳಿ	115 - 300
ಹಳೆ ಉಳ್ಳಿ	105 - 305
ಹೊಸ ಕೋಕಾ	330 - 350
ಹಳೆ ಕೋಕಾ	355 - 375
ಹೊಸ ಕರಿಗೋಟು	240 - 270
ಹಳೆ ಕರಿಗೋಟು	240 - 270
ಹಸಿ ಕೊಕ್ಕೋ	80 - 110
ಒಣ ಕೊಕ್ಕೋ	350 - 380

ಕಾಳುಮೆಣಸು ಧಾರಣೆ

ಕಾಳುಮೆಣಸು	465 - 660

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	214.50
ಆರ್‌ಎಸ್‌ಎಸ್ 2	197.50
ಸ್ಕ್ರಾಪ್ 1	137.00
ಸ್ಕ್ರಾಪ್ 2	130.00

ಮಹಿಳಾ ದಿನಾಚರಣೆ ಪ್ರಯುಕ್ತ ಯಕ್ಷಗಾನ ತಾಳಮದ್ದಳೆ ಅಷ್ಟಾಹ ಸಂಭ್ರಮ

ಕಲೆಗೆ ಪ್ರೋತ್ಸಾಹ ಶ್ಲಾಘನಾರ್ಹ: ಶ್ರೀನಿವಾಸ ಭಟ್

ಮಂಗಳೂರು: ಮಹಿಳೆಯರೇ ಸೇರಿ ಆಯೋಜಿಸಿರುವ ತಾಳಮದ್ದಳೆ ಅಪರೂಪ. ಯಕ್ಷಗಾನ ಪ್ರೋತ್ಸಾಹಿಸಲು ಸಂಘಟಿಸಿರುವ ಈ ಕಾರ್ಯವು ಅನುಕರಣೀಯವಾಗಿದೆ ಎಂದು ಕಾವೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ವೇದಮೂರ್ತಿ ಶ್ರೀನಿವಾಸ ಭಟ್ ಹೇಳಿದರು.

ಶ್ರೀ ದುರ್ಗಾಪರಮೇಶ್ವರಿ ನಾಗಕನ್ನಿಕಾ ದೇವಸ್ಥಾನ ಕೊಂಚಾಡಿ, ಯಕ್ಷಸ್ನೇಹ ಕಲಾ ಪ್ರತಿಷ್ಠಾನ ಕೊಂಚಾಡಿ ಆಶ್ರಯದಲ್ಲಿ ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ಯಕ್ಷಮಂಜರಿ ಮಹಿಳಾ ಯಕ್ಷಗಾನ ತಾಳಮದ್ದಳೆ ಅಷ್ಟಾಹ ಸಂಭ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ದುರ್ಗಾಪರಮೇಶ್ವರಿ ನಾಗಕನ್ನಿಕ ದೇವಸ್ಥಾನದ ಟ್ರಸ್ಟಿ ಬಾಲಕೃಷ್ಣ ಕೊಟ್ಟಾರಿ ಅಧ್ಯಕ್ಷತೆ ವಹಿಸಿದ್ದರು. ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ ಮುಖ್ಯ ಅತಿಥಿಯಾಗಿದ್ದರು. ಸನಾತನ ನಾಟ್ಯನಿಲಯದ ನೃತ್ಯ ಗುರು ಶ್ರೀಲತಾ ನಾಗರಾಜ್, ಹಿರಿಯ ಯಕ್ಷಗಾನ ಕಲಾವಿದ ರವಿ ಅಲೆವೂರಾಯ ವರ್ಕಾಡಿ, ಯಕ್ಷ ಮಂಜುಳ ಕದ್ರಿ ಸಂಚಾಲಕಿ ಪೂರ್ಣಿಮ ಪ್ರಭಾಕರ ರಾವ್ ಪೇಜಾವರ, ಯಕ್ಷ ಸ್ನೇಹ ಕಲಾ ಪ್ರತಿಷ್ಠಾನದ ಗೌರವಾಧ್ಯಕ್ಷ ಮಧುಸೂದನ ಅಲೆವೂರಾಯ ಉಪಸ್ಥಿತರಿದ್ದರು.



ಇಂದ್ರಜಿತು ಕಾಳಗ ತಾಳಮದ್ದಳೆ

ಕಾರ್ಯಕ್ರಮದ ಪೂರ್ವದಲ್ಲಿ ಭಾರತಮಾತ ಪೂಜನ ಕಾರ್ಯಕ್ರಮ, ರಶ್ಮಿ ರವಿಕುಮಾರ್ ಶಿಷ್ಯ ವೃಂದದಿಂದ ವಂದೇ ಮಾತರಂ ಗೀತಾ ಗಾಯನ ಕಾರ್ಯಕ್ರಮ, ಮಹಿಳೆಯರಿಂದ ಸುದರ್ಶನ ಗರ್ವಭಂಗ ತಾಳಮದ್ದಳೆ, ಸಭಾಕಾರ್ಯಕ್ರಮದ ಬಳಿಕ ಇಂದ್ರಜಿತು ಕಾಳಗ ತಾಳಮದ್ದಳೆ ಜರುಗಿತು.

ವಿವಿಧಕ್ಷೇತ್ರದಸಾಧಕರಾದಸತೀಶ್ ಇರಾ ಹಾಗೂ ಗೀತಾ ಲಕ್ಷ್ಮೀಶ್ ಅವರನ್ನು ಸನ್ಮಾನಿಸಲಾಯಿತು. ಪ್ರಮುಖರಾದ ಮೋಹಿನಿ ಕೆ., ಅವನೀಶ್ ಭಟ್, ಹರೀಶ್ ಪಾಟಾಳಿ, ಶಿವಪ್ರಸಾದ ಕೊಕ್ಕಡ, ಪ್ರಜ್ಞಾ ವಸಂತ್, ಗಣೇಶ್ ಟಿ.ಜಿ., ಯೋಗೀಶ್ ದೇವಾಡಿಗ, ಸೀಮಾ ಅರುಣ್ ಉಪಸ್ಥಿತರಿದ್ದರು.

BEFORE THE HON'BLE CIVIL COURT (SENIOR DIVISION) OF KASARAGOD

O.S.No. 65/2025

Between,

Smt. Sharada M.
...Petitioner/Plaintiff

AND

Smt. Parvathi & Others
...Respondents/Defendants

NOTICE

D3- Smt.Vijayalaxmi (D3)
W/o Late Gopalakrishna Bhat Samriddhi Nilaya at Duggaladka, Duggaladka Village and Post, Sullia Taluk, D.K.District, Pin- 574 239.

D10- Parameshwara Bhat
S/o Late Sumathi & Narayana Bhat Residing at C.206, Confident Me Dose, Yamare, Sarjapura, Bengaluru, Pin- 562 125

Please take notice that the above Suit stands posted for your appearance on **11-03-2026 at 11AM** at the aforesaid Court. You are directed to appear in person or through an Advocate and if you fail to appear, the suit will be decided on merits, after setting you ex-parte.

(By order of the Court)

Sd/- Vittala.M
Advocate for Plaintiff
Kasaragod
26.02.2026

ವಂಡ್ಸೆ ಶಾಲೆಯಲ್ಲಿ 'ನಕ್ಷತ್ರ' ಆಕಾಶ ವೀಕ್ಷಣೆ

ಕುಂದಾಪುರ: ಭಾರತ ಜ್ಞಾನ ವಿಜ್ಞಾನ ಸಮಿತಿ ಬೈಂದೂರು ತಾಲೂಕು ಘಟಕ, ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ವಂಡ್ಸೆ ಆಶ್ರಯದಲ್ಲಿ ವಂಡ್ಸೆ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 'ನಕ್ಷತ್ರ' ಆಕಾಶ ವೀಕ್ಷಣೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಭಾರತ ಜ್ಞಾನವಿಜ್ಞಾನ ಸಮಿತಿ ಬೈಂದೂರು ತಾಲೂಕು ಘಟಕದ ಅಧ್ಯಕ್ಷ ಸತ್ಯನಾ ಕೊಡೇರಿ ಮಾತನಾಡಿ, ವಿದ್ಯಾರ್ಥಿಗಳಿಗೆ ಆಕಾಶ ಕಾಯಗಳ ಬಗ್ಗೆ ಆಸಕ್ತಿ ಮೂಡಿಸುವ ಕೆಲಸ ಆಗಬೇಕು. ಸೂರ್ಯ, ಚಂದ್ರ, ನಕ್ಷತ್ರಗಳ ಬಗ್ಗೆ ಇರುವ ಕುತೂಹಲ, ವಿಜ್ಞಾನದ ಅರಿವು ನೀಡುವ ಕೆಲಸ ಮಾಡಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಬೇಕು ಎಂದರು.

ಜ್ಞಾನಗಳಿಗೆ ತೆರೆದುಕೊಳ್ಳುತ್ತಾ ಸಾಗಬೇಕು

ಮೂಕಾಂಬಿಕಾ ಚಾರಿಟೆಬಲ್ ಟ್ರಸ್ಟ್ ಕಾರ್ಯದರ್ಶಿ ಉದಯಕುಮಾರ್ ಶೆಟ್ಟಿ, ಮಾತನಾಡಿ ವಿದ್ಯಾರ್ಥಿಗಳ ಕುತೂಹಲ ತಣಿಸುವಲ್ಲಿ ಇಂಥಹ ಪ್ರಾಯೋಗಿಕ ಜ್ಞಾನ ಅವಶ್ಯಕತೆ ಇದೆ. ಜ್ಞಾನಗಳಿಗೆ ತೆರೆದುಕೊಳ್ಳುತ್ತಾ ಸಾಗಬೇಕು ಎಂದರು.



ವಿಜ್ಞಾನ ಶಿಕ್ಷಕ ಉದಯ ಗಾಂವಕರ ನಕ್ಷತ್ರ, ಗ್ರಹ, ಚಂದ್ರಮಂಡಲ, ಆಕಾಶಕಾಯಗಳ ಸ್ವರೂಪಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ವಿದ್ಯಾರ್ಥಿಗಳ ಪ್ರಶ್ನೆಗೆ ಉತ್ತರಿಸಿದರು. ಬಳಿಕ ವಿದ್ಯಾರ್ಥಿಗಳು, ಸಾರ್ವಜನಿಕರು ಚಂದ್ರ, ಆಕಾಶ ವೀಕ್ಷಣೆ ಮಾಡಿದರು. ಆಕಾಶ ವೀಕ್ಷಣೆಯಲ್ಲಿ ರವಿ ಕಟ್ಟೆರೆ, ಸಂಧ್ಯಾ ನಾಯಕ, ರವೀಂದ್ರ ಕೋಡಿ, ಸಂದೇಶ ಕುಂದಾಪುರ ಹಾಗೂ ಶಾಲೆಯ ಶಿಕ್ಷಕ ವೃಂದದವರು ಸಹಕರಿಸಿದರು. ವಂಡ್ಸೆ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷೆ ಡಾ. ಪೂರ್ಣಿಮಾ, ಸಮೂಹ ಸಂಪನ್ಮೂಲ ವ್ಯಕ್ತಿ ಎಂ. ನಾಗರಾಜ ಶೆಟ್ಟಿ, ವಂಡ್ಸೆ ಶಾಲೆಯ ಮುಖ್ಯೋಪಾಧ್ಯಾಯ ಶಂಕರ, ರಾಜ್ಯ ಸರ್ಕಾರಿ ನೌಕರರ ಸಂಘದ ಕುಂದಾಪುರ ಶಾಖೆ ನಿರ್ದೇಶಕ ಪ್ರತಾಪ್ ಕುಮಾರ್ ಶೆಟ್ಟಿ, ಎಸ್.ಡಿ.ಎಂಸಿ ಸದಸ್ಯೆ ಸುಮತಿ, ಶಿಕ್ಷಕರು, ಎಸ್.ಡಿ.ಎಂ.ಸಿ ಸದಸ್ಯರು ಉಪಸ್ಥಿತರಿದ್ದರು.

ಶಿಕ್ಷಕರಾದ ಸುಧಾಕರ ಮರಕಾಲ ಸ್ವಾಗತಿಸಿ, ಶಿಕ್ಷಕ ಸದಾಶಿವ ಕೆಂಚನೂರು ವಂದಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ರಾಜು ಎನ್. ಕಾರ್ಯಕ್ರಮ ನಿರ್ವಹಿಸಿದರು.

ಜಾಗತಿಕ ಮಟ್ಟದ ಯುದ್ಧ ಘರ್ಷಣೆ ಶಮನಕ್ಕೆ ಕಾಪು ಅಮ್ಮನ ಸನ್ನಿಧಾನದಲ್ಲಿ ವಿಶೇಷ ಪ್ರಾರ್ಥನೆ

ಕಾಪು : ಮಧ್ಯಪ್ರಾಚ್ಯ ದೇಶದಲ್ಲಿ ನಡೆಯುತ್ತಿರುವ ಯುದ್ಧ ಘರ್ಷಣೆ ಶಮನವಾಗಲಿ, ದೇಶ ದೇಶಗಳ ಮಧ್ಯೆ ಐಕ್ಯತೆ ಪ್ರಾಪ್ತಿಯಾಗಲಿ ಎಂದು ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು.

ವಿಶೇಷವಾಗಿ 18 ದೇಶಗಳಲ್ಲಿ ಇರುವ ಸಮಿತಿಯ ಪದಾಧಿಕಾರಿಗಳು ಮತ್ತು ಕಾಪುವಿನ ಅಮ್ಮನ ಭಕ್ತರ ಒಳಿತಿಗಾಗಿ ಪ್ರಾರ್ಥಿಸಲಾಯಿತು.

ದೇವಳದ ಪ್ರಧಾನ ತಂತ್ರಿ ವಿದ್ವಾನ್ ಕೆ. ಪಿ. ಕುಮಾರಗುರು ತಂತ್ರಿ, ವೇದಮೂರ್ತಿ ಶ್ರೀನಿವಾಸತಂತ್ರಿ ಕಲ್ಯ, ಅಭಿವೃದ್ಧಿ ಸಮಿತಿ ಅಧ್ಯಕ್ಷ ರಾಜರ್ಷಿ



ಕೆ. ವಾಸುದೇವ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನಡಿಕೆರೆ ರತ್ನಾಕರ ಶೆಟ್ಟಿ, ಕಾರ್ಯನಿರ್ವಹಣಾಧಿಕಾರಿ ಅಭಿವೃದ್ಧಿ ಸಮಿತಿಯ ಆರ್ಥಿಕ ಸಮಿತಿ ಪ್ರಧಾನ ಸಂಚಾಲಕ ಉದಯ ಸುಂದರ್ ಶೆಟ್ಟಿ, ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮತ್ತು ವ್ಯವಸ್ಥಾಪನಾ ಸಮಿತಿ ಸದಸ್ಯ ಮಾಧವ ಆರ್. ಪಾಲನ್, ಅಭಿವೃದ್ಧಿ ಸಮಿತಿ ಪ್ರಧಾನ ಕಾರ್ಯದರ್ಶಿ ರಮೇಶ್ ಹೆಗ್ಡೆ ಕಲ್ಯ, ಪ್ರಚಾರ ಸಮಿತಿ ಪ್ರಧಾನ ಸಂಚಾಲಕ ಯೋಗೀಶ್ ವಿ. ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಸದಸ್ಯರುಗಳಾದ ಶೇಖರ ಸಾಲ್ಯಾನ್, ರವೀಂದ್ರ ಮಲ್ಲಾರ್, ಚರಿತ ದೇವಾಡಿಗ, ದೇವಿಪಾತ್ರಿ ಗುರುಮೂರ್ತಿ ಮತ್ತು ಸಚಿನ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕಿರು ಸುದ್ದಿ

ಬೇಕಲದಲ್ಲಿ ಬಂಧಿತರು ಕಳತ್ತೂರಿನ ಕಳವು ಪ್ರಕರಣದಲ್ಲೂ ಶಾಮೀಲು

ಕುಂಬಳೆ: ಬೇಕಲ ಪೊಲೀಸರು ಬಂಧಿಸಿ ಕುಖ್ಯಾತ ಕಳವು ಪ್ರಕರಣದ ಇಬ್ಬರು ಆರೋಪಿಗಳು ಕುಂಬಳೆ ಪೊಲೀಸ್ ಠಾಣೆ ವ್ಯಾಪ್ತಿಯ ಕಳತ್ತೂರು ಪಂಜಿಕಲ್ಲಿನ ಮನೆಯಿಂದ ನಗ ನಗದು ದೋಚಿದ ಪ್ರಕರಣದಲ್ಲೂ ಆರೋಪಿಗಳಾಗಿದ್ದಾರೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪಾಲಕ್ಕಾಡ್ ಚಿಟ್ಟೂರು ಆಯಿರೂರು ಕೊಳಕ್ಕರೆಪರಂಬಿಲ್ ನಿವಾಸಿ ಜಲೀಲ್ ಯಾನೆ ಶಟರ್ ಜಲೀಲ್ (36), ಕಾಸರಗೋಡು ಆಲಂಪಾಡಿಯ ಅಬ್ದುಲ್ ಲತೀಫ್ (46) ಎಂಬವರನ್ನು ಬೇಕಲ ಡಿವೈಎಸ್‌ಪಿ ಎಂ.ಪಿ.ಅಜಾದ್‌ರ ನೇತೃತ್ವದಲ್ಲಿ ಬಂಧಿಸಲಾಗಿದೆ. ಆರೋಪಿಗಳನ್ನು ತನಿಖೆಗೊಳಪಡಿಸಿದಾಗ ಫೆ.14ರಂದು ಕಳತ್ತೂರು ಪಂಜಿಕಲ್ಲಿನ ಯೂಸಫ್‌ರ ಮನೆಯಿಂದ 9 ಪವನ್ ಚಿನ್ನಾಭರಣ ಹಾಗೂ ಒಂದು ಲಕ್ಷ ರೂ. ಕಳವು ನಡೆಸಿರುವುದು ತಿಳಿದುಬಂದಿದೆ. ಅಲ್ಲದೆ ಫೆ.7ರಂದು ಬೇಕಲ ಪೊಲೀಸ್ ಠಾಣೆ ವ್ಯಾಪ್ತಿಯ ಪೆರಿಯ ನಾಲಕ್ಕರದ ಇ.ವಿ.ಗೋಪಾಲಕೃಷ್ಣನ್ ಅವರ ಮನೆಯಿಂದ 6 ಪವನ್ ಚಿನ್ನಾಭರಣ, ಒಂದು ಲಕ್ಷ ರೂ. ಕಳವು ನಡೆಸಿರುವುದು ಕೂಡಾ ಇದೇ ತಂಡ ಎಂದು ಪೊಲೀಸರು ತಿಳಿಸಿದರು. ಬಂಧಿತ ಆರೋಪಿಗಳನ್ನು ಸಮಗ್ರ ತನಿಖೆಗೊಳಪಡಿಸಿದರೆ ಇನ್ನಷ್ಟು ಕಳವು ಪ್ರಕರಣಗಳ ಮಾಹಿತಿ ಬೆಳಕಿಗೆ ಬರಲಿದೆ ಎಂದು ಪೊಲೀಸರು ನಿರೀಕ್ಷೆ ವ್ಯಕ್ತಪಡಿಸಿದ್ದಾರೆ.

ಕಯ್ಯಾರ್‌ನಲ್ಲಿ ಕೋಳಿ ಅಂಕಕ್ಕೆ ದಾಳಿ: 2 ಕೋಳಿ ಸಹಿತ ಇಬ್ಬರ ಸೆರೆ

ಕುಂಬಳೆ: ಕಯ್ಯಾರಿನ ಕೋಳಿ ಅಂಕಕ್ಕೆ ಪೊಲೀಸರು ದಾಳಿ ನಡೆಸಿ ಎರಡು ಕೋಳಿಗಳನ್ನು ಮತ್ತು ಇಬ್ಬರನ್ನು ಸೆರೆ ಹಿಡಿದಿದ್ದಾರೆ. ಕಯ್ಯಾರು ಕೊಕ್ಕೆಚ್ಚಾಲ್ ನಿವಾಸಿ ಹರೀಶ್ (37), ಕಯ್ಯಾರು ನಿವಾಸಿ ಸೋಮಯ್ಯ (48) ಎಂಬವರನ್ನು ಕುಂಬಳೆ ಎಸ್‌ಐ ಕೆ.ಶ್ರೀಜೇಶ್ ನೇತೃತ್ವದ ಪೊಲೀಸರ ತಂಡ ಸೆರೆ ಹಿಡಿದಿದೆ. ರಹಸ್ಯ ಮಾಹಿತಿ ಲಭಿಸಿದ ಹಿನ್ನೆಲೆಯಲ್ಲಿ ಮುಂಡತ್ತಾಯಿ ದೈವಸ್ಥಾನ ಸಮೀಪದ ಕೋಳಿ ಅಂಕ ಕೇಂದ್ರಕ್ಕೆ ಪೊಲೀಸರು ದಾಳಿ ನಡೆಸಿ ಸೆರೆ ಹಿಡಿದಿದ್ದಾರೆ.

ನಿಧನ ಸುದ್ದಿ

ಜೆ. ಶಂಕರ್



ಮಂಗಳೂರು: ನಗರದ ಬಿಜೈ ನಿವಾಸಿ, ಬೆಂಗಳೂರು ಮತ್ತು ಮಂಗಳೂರಿನ ಸೋಲಾರ್ ಆಟೋಮೊಬೈಲ್ಸ್ ಮಾಲೀಕ, ಮಾರುತಿ ಸುಜುಕಿಯ ಅಧಿಕೃತ ಡೀಲರ್ ಆಗಿದ್ದ ಜೆ. ಶಂಕರ್ (92) ವಯೋಸಹಜ ಅಸೌಖ್ಯದಿಂದ ಮಂಗಳವಾರ ನಿಧನರಾದರು. ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಅಭಿವೃದ್ಧಿ ಸಮಿತಿ ಸದಸ್ಯರು, ಹಿರಿಯ ರಾಜಕೀಯ ಮುತ್ಸದ್ದಿ ಬಿ. ಜನಾರ್ದನ ಪೂಜಾರಿಯವರ ಆಪ್ತರಾಗಿದ್ದರು. ಸಾಮಾಜಿಕ, ಧಾರ್ಮಿಕ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದರು. ಅವರು ಮೂವರು ಪುತ್ರರನ್ನು ಅಗಲಿದ್ದಾರೆ. ಮೃತರ ಅಂತಿಮ ವಿಧಿ ವಿಧಾನ ಬುಧವಾರ ಬೆಳಗ್ಗೆ 10 ಗಂಟೆಗೆ ಸ್ವಗೃಹದಲ್ಲಿ ನೆರವೇರಲಿದೆ.

ಲಲಿತಾ ಎನ್.ಭಟ್



ಪೆರ್ಲ: ಎಣ್ಮಕಜೆ ಪಂಚಾಯತ್ ವ್ಯಾಪ್ತಿಯ ಅಡ್ಕಸ್ಥಳ ಸನಿಹದ ನೇರೋಳು ನಿವಾಸಿ, ಆರ್‌ಎಸ್‌ಎಸ್ ಕಾರ್ಯಕರ್ತ, ಯಕ್ಷಗಾನ ಕಲಾವಿದ ದಿ.ರಾಮ ಭಟ್ ಅವರ ಪತ್ನಿ ಲಲಿತಾ ಎನ್.ಭಟ್ (74) ಅಲ್ಪಕಾಲದ ಅಸೌಖ್ಯದಿಂದ ಸೋಮವಾರ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪುತ್ರ ಪದ್ಮಶೇಖರ ಎನ್. (ಬಿಜೆಪಿ ಕುಂಬಳೆ ಮಂಡಲ ಸಮಿತಿ ಸದಸ್ಯ) ಹಾಗೂ ಪುತ್ರಿ ಮಮತಾ ಪುದುಕ್ಕೋಳಿ (ಸುರತ್ಕಲ್ ವಿದ್ಯಾದಾಯಿನಿ ಶಾಲೆ ಶಿಕ್ಷಕಿ) ಅವರನ್ನು ಅಗಲಿದ್ದಾರೆ.

ಸತ್ಯಭಾಮಾ



ನಿಡ್ಪಳ್ಳಿ: ಪಾಣಾಜೆ ರಣಮಂಗಲ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಮತ್ತು ಆರ್ಲಪದವು ಕಿನ್ನಿಮಾಣಿ ಪೂಮಾಣಿ ಪರಿವಾರ ದೈವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶ್ರೀಕೃಷ್ಣ ಬೊಳಿಲ್ಲಾಯ ಅವರ ತಾಯಿ, ಈ ಹಿಂದೆ ಆಡಳಿತ ಮೊಕ್ತೇಸರರಾಗಿದ್ದ ದಿವಂಗತ ವಾಸುದೇವ ಬೊಳಿಲ್ಲಾಯ ಕಡಮಾಜೆ ಅವರ ಪತ್ನಿ ಸತ್ಯಭಾಮಾ (88) ಅವರು ಮಾ.3ರಂದು ಅಲ್ಪಕಾಲದ ಅನಾರೋಗ್ಯದಿಂದ ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಪುತ್ರರಾದ ಶ್ರೀಕೃಷ್ಣ ಬೊಳಿಲ್ಲಾಯ, ನಿವೃತ್ತ ಶಿಕ್ಷಕ ಶ್ರೀಧರ ಬೊಳಿಲ್ಲಾಯ, ಹರೀಶ್ ಬೊಳಿಲ್ಲಾಯ, ಬೆಂಗಳೂರಿನ ಕಾಲೇಜೊಂದರಲ್ಲಿ ಪ್ರೊಫೆಸರ್ ಆಗಿರುವ ಶ್ರೀಕಾಂತ್ ಬೊಳಿಲ್ಲಾಯ, ಶ್ರೀನಿವಾಸ ಬೊಳಿಲ್ಲಾಯ, ಪುತ್ರಿಯರಾದ ಜಯಲಕ್ಷ್ಮಿ, ಸರೋಜ, ಕಲಾವತಿ, ಪ್ರೇಮ, ಶೋಭಾ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು ಸೇರಿದಂತೆ ಗ್ರಾಮದ ಹಲವಾರು ಗಣ್ಯರು, ಹಿತೈಷಿಗಳು, ಬಂಧು ಬಳಗದವರು ಮೃತರ ಮನೆಗೆ ಭೇಟಿ ನೀಡಿ ಅಂತಿಮ ನಮನ ಸಲ್ಲಿಸಿದರು.

ರಘು ರಾಂ ಕಾಮತ್



ಮಡಿಕೇರಿ: ಸುಂಟಿಕೊಪ್ಪ 1ನೇ ವಿಭಾಗದ ನಿವಾಸಿ, ಗಣೇಶ್ ಅಸೋಸಿಯೇಟ್ಸ್ ಮಾಲೀಕ, ಉದ್ಯಮಿ ಶಾಂತರಾಂ ಕಾಮತ್ ಅವರ ತಂದೆ ರಘು ರಾಂ ಕಾಮತ್ (92) ಅವರು ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಇಬ್ಬರು ಪುತ್ರಿಯರನ್ನು ಮತ್ತು ಓರ್ವ ಪುತ್ರನನ್ನು ಅಗಲಿದ್ದಾರೆ.

ಸಂಜೀವ

ಮಂಜೇಶ್ವರ: ಹೊಸಂಗಡಿ ಬಳಿಯ ಎರುಂಬುಡೇಲು ನಿವಾಸಿ ಸಂಜೀವ (68) ಸೋಮವಾರ ರಾತ್ರಿ ಸ್ವಗೃಹದಲ್ಲಿ ನಿಧನರಾದರು. ಕೂಲಿ ಕಾರ್ಮಿಕರಾಗಿದ್ದ ಅವರು ಅಲ್ಪಕಾಲದ ಅನಾರೋಗ್ಯದಿಂದಿದ್ದರು. ಮೃತರು ಪತ್ನಿ ಸುಂದರಿ, ಮಕ್ಕಳಾದ ಪುಷ್ಪಾವತಿ, ಶೀಲಾವತಿ, ಜಲಜಾ, ಮೀನಾಕ್ಷಿ ಅವರನ್ನು ಅಗಲಿದ್ದಾರೆ.







ಕೇರಳದ 'ಸ್ತ್ರೀಯರ ಶಬರಿಮಲೆ' ಖ್ಯಾತಿಯ ತಿರುವನಂತಪುರಂದ ಅಟ್ಟುಕಾಲ್ ಶ್ರೀಭಗವತಿ ದೇವಸ್ಥಾನದಲ್ಲಿ 2026ರ ಆಟ್ಟುಕಾಲ್ ಪೊಂಗಾಲ ಉತ್ಸವದಲ್ಲಿ ಲಕ್ಷಾಂತರ ಮಹಿಳೆಯರು ಭಾಗಿಯಾಗಿ ಪೊಂಗಲ್ ತಯಾರಿಸಿದರು. ಇದು 10 ದಿನಗಳ ಉತ್ಸವವಾಗಿದ್ದು, ಒಂಬತ್ತನೇ ದಿನ ಮಹಿಳಾ ಭಕ್ತರು ಬೃಹತ್ ಸಂಖ್ಯೆಯಲ್ಲಿ ಆಗಮಿಸಿ, ದೇವಸ್ಥಾನದಲ್ಲಿ ಅಕ್ಕಿ, ಬೆಲ್ಲ ಮತ್ತು ಬಾಳೆಹಣ್ಣಿನಿಂದ ಮಣ್ಣಿನ ಮಡಕೆಗಳಲ್ಲಿ ಪೊಂಗಲ್ ತಯಾರಿಸಿ, ಆಟ್ಟುಕಾಲ್ ಶ್ರೀ ಭಗವತಿ ಅಮ್ಮನವರಿಗೆ ಅರ್ಪಿಸುತ್ತಾರೆ. ಈ ವರ್ಷ ಪೊಂಗಲ್ ಆಚರಣೆಯಲ್ಲಿ 40 ಲಕ್ಷಕ್ಕೂ ಹೆಚ್ಚು ಭಕ್ತರು ಆಗಮಿಸುವ ನಿರೀಕ್ಷೆಯಿದೆ ಎನ್ನಲಾಗಿದೆ.

ಕ್ರೊಲ ಪಶು ವೈದ್ಯಕೀಯ ಕಾಲೇಜಿಗೆ ಸಚಿವ ವೆಂಕಟೇಶ್ ಭೇಟಿ | ಅಧಿಕಾರಿಗಳೊಂದಿಗೆ ಪರಿಶೀಲನೆ

ಮುಂದಿನ ಶೈಕ್ಷಣಿಕ ವರ್ಷ ತರಗತಿ ಶುರು

ಕಡಬ: ತಾಲೂಕಿನ ಕ್ರೊಲದಲ್ಲಿ ನಿರ್ಮಾಣಗೊಂಡಿರುವ ರಾಜ್ಯದ ಏಳನೇ ಪಶು ವೈದ್ಯಕೀಯ ಕಾಲೇಜಿನಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದಲೇ ತರಗತಿಗಳನ್ನು ಪ್ರಾರಂಭಿಸಲಾಗುವುದು ಎಂದು ಪಶುಸಂಗೋಪನಾ ಮತ್ತು ರೇಷ್ಮೆ ಇಲಾಖಾ ಸಚಿವ ಕೆ. ವೆಂಕಟೇಶ್ ಹೇಳಿದರು.

ಅವರು ಮಂಗಳವಾರ ಕ್ರೊಲ ಪಶು ವೈದ್ಯಕೀಯ ಕಾಲೇಜಿಗೆ ಭೇಟಿ ನೀಡಿ ಕಟ್ಟಡಗಳನ್ನು ಪರಿಶೀಲಿಸಿ ಅಧಿಕಾರಿಗಳೊಂದಿಗೆಸಮಾಲೋಚನೆಮಾಡಿದರು. ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಾಲೇಜಿನಲ್ಲಿ ತರಗತಿಗಳನ್ನು ಆರಂಭಿಸಲು ಬೇಕಾದ ಪ್ರಾಥಮಿಕ ಸಿದ್ಧತೆಗಳನ್ನು ಮಾಡಲಾಗಿದೆ. ಮುಖ್ಯವಾಗಿ ಪಶುವೈದ್ಯಕೀಯ ಕೌನ್ಸಿಲ್ ಆಫ್ ಇಂಡಿಯಾದಿಂದ ತರಗತಿ ಆರಂಭಿಸಲು ಅನುಮೋದನೆ ದೊರೆಯಬೇಕು. ಅದಕ್ಕಾಗಿ ಪ್ರಯತ್ನ ನಡೆಯುತ್ತಿದೆ ಎಂದರು.

ಕೊರತೆ ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ

ಕ್ರೊಲ ಪಶುವೈದ್ಯಕೀಯ ಕಾಲೇಜಿನಲ್ಲಿ ಮೊದಲ ವರ್ಷ ಮತ್ತು ಎರಡನೇ ವರ್ಷದ ತರಗತಿಗಳನ್ನು ನಡೆಸಲು ಯಾವುದೇ ಸಮಸ್ಯೆಗಳಿಲ್ಲ, ಏನೇನು ಕೊರತೆಗಳು ಇವೆಯೋ ಅವುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ತರಗತಿ ಆರಂಭವಾದ ಬಳಿಕ ಮುಂದಿನ ದಿನಗಳಲ್ಲಿ ಬೇಕಾದ ವ್ಯವಸ್ಥೆಗಳನ್ನು ಸರಕಾರ ಹಂತ ಹಂತವಾಗಿ ಮಾಡಲಿದೆ. ಅದಕ್ಕಾಗಿ ಅನುದಾನ ಬಿಡುಗಡೆ ಮಾಡಲು ಸರಕಾರ ಒಪ್ಪಿಕೊಂಡಿದೆ. ಉಪ ಕುಲಪತಿಗಳ ಜೊತೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಅನುದಾನಕ್ಕೆ ಮನವಿ ಮಾಡಲಾಗಿದೆ. ಮುಂದಿನ ಬಜೆಟ್‌ನಲ್ಲಿ ಹಣ ಕೊಡುತ್ತೇವೆ ಎಂದು ಭರವಸೆ ಸಿಕ್ಕಿದೆ. 136 ಕೋಟಿ ರೂ. ವೆಚ್ಚದಲ್ಲಿ ಎಲ್ಲಾ ಕೆಲಸಗಳು ಆಗಿವೆ. ಕೆಲವು ಮೂಲಭೂತ ವ್ಯವಸ್ಥೆಗಳಿಗೆ ಇನ್ನೂ 23 ಕೋಟಿ ರೂ. ಅಗತ್ಯವಿದೆ. ಅದನ್ನು ಒದಗಿಸಲಾಗುವುದು. ಆರಂಭದ ಹಂತದಲ್ಲಿ ಎಡರು ತೊಡರುಗಳು ಸಹಜ. ಅವುಗಳನ್ನು ನಿವಾರಿಸಿಕೊಳ್ಳಲಾಗುವುದು ಎಂದು ಅವರು ವಿವರಿಸಿದರು.

ಕಟ್ಟಡ ಕಾಮಗಾರಿ ಕಳಪೆಯಾಗಿದೆ

ಕಟ್ಟಡ ಕಾಮಗಾರಿ ತೀರಾ ಕಳಪೆಯಾಗಿದ್ದು, ಮಳೆಗಾಲದಲ್ಲಿ ಕಟ್ಟಡದ ಮೇಲಿನ ಸ್ಲಾಬ್‌ನಿಂದ ನೀರು ಸೋರಿಕೆಯಾಗುತ್ತಿದೆ. ಅದನ್ನು ತಡೆಯಲು ಮೇಲೆ ಲೋಹದ ಶೀಟ್ ಹಾಕಲಾಗಿದೆ. ಮಳೆಗೆ ಕೆಲವೊಂದು ಕಡೆಯಲ್ಲಿ ಇನ್ನೂ ಸೋರಿಕೆ ಆಗುತ್ತಿದೆ. ಕೆಲವು ಕಡೆ ಗೋಡೆ ಬಿರುಕು ಬಿಟ್ಟಿದೆ ಎಂದು ಗ್ರಾಮಸ್ಥರು ಸಚಿವರ ಗಮನಕ್ಕೆ ತಂದರು. ಅದಕ್ಕೆ ಪ್ರತಿಕ್ರಿಯಿಸಿದ ಆ ವಿಚಾರವನ್ನು ಅಧಿಕಾರಿಗಳು ನಮ್ಮ ಗಮನಕ್ಕೆ ತಂದಿದ್ದಾರೆ. ಕಾಮಗಾರಿ ನಿರ್ವಹಿಸಿದ ಹೌಸಿಂಗ್ ಬೋರ್ಡ್ ಇಂಜಿನಿಯರ್ ಕರೆಸಿಸರಿಪಡಿಸಲುಸೂಚಿಸಲಾಗುವುದು ಎಂದರು. ಶಾಸಕಿ ಭಾಗೀರಥಿ ಮುರುಳ್ಯ ಅಗತ್ಯ ಕ್ರಮ ಕೈಗೊಂಡು ಶೀಘ್ರ ಕಾಲೇಜು ಪ್ರಾರಂಭಿಸುವಂತೆ ಸಚಿವರಲ್ಲಿ ಇದೇ ಸಂದರ್ಭ ವಿನಂತಿಸಿದರು.

ಕ್ರೊಲ ಪಶು ವೈದ್ಯಕೀಯ ಕಾಲೇಜಿನ ಡೀನ್ ಡಾ. ಶಿವಕುಮಾರ್ ಸಚಿವರಿಗೆ ಪೂರಕ ಮಾಹಿತಿ ನೀಡಿದರು. ಪಶು ಸಂಗೋಪನೆ ಮತ್ತು ಮೀನುಗಾರಿಕಾ ಇಲಾಖಾ ಪ್ರಧಾನ ಕಾರ್ಯದರ್ಶಿ ವಿನೋತ್ ಪ್ರಿಯಾ, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖಾ ಆಯುಕ್ತೆ ಶಿಲ್ಪಾನಾಗ್ ಸಿ.ಟಿ., ಕರ್ನಾಟಕ ಪಶುವೈದ್ಯ ಮತ್ತು ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಕೆ.ಸಿ.ವೀರಣ್ಣ, ಭಾರತೀಯ ಪಶು ವೈದ್ಯಕೀಯ ಪರಿಷತ್‌ನ ಆಡಳಿತ ಮಂಡಳಿಯ ಸದಸ್ಯ ಡಾ. ಸುಶಾಂತ್ ರೈ ಬೆಳ್ಳಿಪ್ಪಾಡಿ, ಪಶುಪಾಲನೆ ಮತ್ತು ಪಶುವೈದ್ಯಕೀಯ ಇಲಾಖಾ ಜಂಟಿ ನಿರ್ದೇಶಕ ಡಾ.ನಾಗರಾಜು, ಮಂಗಳೂರು ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖಾ ಉಪ ನಿರ್ದೇಶಕ ಡಾ.ಅರುಣ್ ಕುಮಾರ್ ಶೆಟ್ಟಿ, ಕ್ರೊಲ ಫಾರ್ಮ್‌ನ ಉಪ ನಿರ್ದೇಶಕ ಡಾ. ಚಿದಾನಂದ ಕೆ.ಬಿ., ಮುಖ್ಯ ಪಶುವೈದ್ಯಾಧಿಕಾರಿಗಳಾದ ಡಾ. ಪ್ರಸನ್ ಹೆಬ್ಬಾರ್, ಡಾ.ಪುನೀತ್, ಕಡಬ ತಾಲೂಕು ಪಶು ವೈದ್ಯಾಧಿಕಾರಿ ಡಾ.ಅಜಿತ್ ಎಂ.ಸಿ., ಕಾಂಗ್ರೆಸ್ ಮುಖಂಡರಾದ ಕೃಷ್ಣಪ್ಪ ಜಿ. ರಾಮಕುಂಜ, ಪಿ.ಪಿ.ವರ್ಗೀಸ್, ಸರ್ವೋತ್ತಮ ಗೌಡ, ಅಭಿಲಾಷ್ ಪಿ.ಕೆ., ಆದಂ ಎಚ್., ಅಬ್ಬಾಸ್ ಕುಂತೂರು, ಯತೀಶ್ ಬಾನಡ್ಕ, ಅಶ್ರಫ್ ಶೇಡಿಗುಂಡಿ, ಕರುಣಾಕರ ಉರ್ಕ, ನಝೀರ್ ಪೂರಿಂಗ, ಎ.ಕೆ. ಬಶೀರ್, ಬಿಜೆಪಿ ಮುಖಂಡರಾದ ಲಕ್ಷ್ಮೀನಾರಾಯಣ ರಾವ್ ಆತೂರು, ಬಾಲಕೃಷ್ಣ ಗೌಡ ಬೇಂಗದಪಡ್ಪು, ಪ್ರಶಾಂತ್ ಆರ್.ಕೆ., ಶರತ್ ಕೆದಿಲ ಮತ್ತಿತರರು ಉಪಸ್ಥಿತರಿದ್ದರು.



ಸಚಿವ ಕೆ. ವೆಂಕಟೇಶ್ ಅವರು ಕ್ರೊಲ ಪಶು ವೈದ್ಯಕೀಯ ಕಾಲೇಜಿಗೆ ಭೇಟಿ ನೀಡಿದರು.

ನನ್ನದು ಕಾಂಗ್ರೆಸ್ ಬಣ!

ರಾಜ್ಯ ರಾಜಕರಣದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ನಾಯಕತ್ವ ಬದಲಾವಣೆ ಬಗ್ಗೆ ನನಗೆ ಗೊತ್ತಿಲ್ಲ. ನಾನು ಯಾವುದೇ ಬಣದಲ್ಲಿ ಗುರುತಿಸಿಕೊಂಡಿಲ್ಲ. ನನ್ನದೇನಿದ್ದರೂ ಕಾಂಗ್ರೆಸ್ ಬಣ, ಬಣ ಬಡಿದಾಟದಲ್ಲಿ ನಾನಿಲ್ಲ ಎಂದರು.

ಬೋಧಕರ ನೇಮಕವಾಗಿದೆ

ಕಾಲೇಜಿಗೆ 25 ಬೋಧಕ ಹುದ್ದೆಗಳಿಗೆ ನೋಟಿಫಿಕೇಶನ್ ಮಾಡಲಾಗಿದೆ. ಆ ಪೈಕಿ 13 ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಿಕೊಳ್ಳಲಾಗಿದೆ. ಉಳಿದಂತೆ 32 ಮಂದಿ ಸಿಬಂದಿಗಳ ಅಗತ್ಯವಿದೆ. ಸಿಬಂದಿ ನೇಮಕದ ಪ್ರಕ್ರಿಯೆಯೂ ನಡೆಯುತ್ತಿದೆ ಎಂದು ಹೇಳಿದ ಸಚಿವರು ಸ್ಥಳೀಯರಿಗೆ ಉದ್ಯೋಗ ನೀಡುವಂತೆ ಊರವರು ಮಾಡಿದ ಮನವಿಗೆ ಪ್ರತಿಕ್ರಿಯಿಸಿ ಹೊರ ಗುತ್ತಿಗೆಯಲ್ಲಿ ಸಿಬಂದಿ ನೇಮಕಾತಿ ಮಾಡಿಕೊಳ್ಳುವ ವೇಳೆ ಸ್ಥಳೀಯರಿಗೆ ಅವಕಾಶ ಮಾಡಿಕೊಡಲು ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು.

ಎನ್‌ಐಟಿಕೆ: ದಿವ್ಯಾಂಗ ವಿದ್ಯಾರ್ಥಿಗಳಿಗೆ ಸ್ಮಾರ್ಟ್ ಇ ಮೊಬಿಲಿಟಿ ವಾಹನ ಕೊಡುಗೆ

ಮಂಗಳೂರು: ಜಿಪಿಎಸ್‌ಟ್ರ್ಯಾಕಿಂಗ್ ಮತ್ತು ಸ್ಮಾರ್ಟ್ ಲಾಕ್ ತಂತ್ರ ಜ್ಞಾನ ಹೊಂದಿರುವ ಇ-ಮೊಬಿಲಿಟಿ ವಾಹನಗಳನ್ನು ಎನ್‌ಐಟಿಕೆ ಸುರತ್ಕಲ್‌ನ ದಿವ್ಯಾಂಗ ವಿದ್ಯಾರ್ಥಿಗಳಿಗೆ ಹಸ್ತಾಂತರಿಸಲಾಯಿತು.

ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ಇತ್ತೀಚೆಗೆ ಸಮಾರಂಭದಲ್ಲಿ ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ 1989ರ ಮೆಕ್ಯಾನಿಕಲ್ ಎಂಜಿನಿಯರಿಂಗ್ ಬ್ಯಾಚ್‌ನ ಹಳೆಯ ವಿದ್ಯಾರ್ಥಿ ಸುಧೀರ್ ಕುಮಾರ್ ಹಾಗೂ ಎನ್‌ಐಟಿಕೆ ಸುರತ್ಕಲ್ ನಿರ್ದೇಶಕ ಪ್ರೊ. ಬಿ. ರವಿ ಅವರು ಹಸ್ತಾಂತರಿಸಿದರು.

ಈ ವಾಹನಗಳನ್ನು ಎನ್‌ಐಟಿಕೆ ಸುರತ್ಕಲ್‌ನ ಸಹ ಪ್ರಾಧ್ಯಾಪಕ ಡಾ. ಪೃಥ್ವಿರಾಜ ಅವರು ಸಂಸ್ಥೆಯೊಳಗೆ ವಿನ್ಯಾಸಗೊಳಿಸಿ ತಯಾರಿಸಿದ್ದಾರೆ. ಎಲ್ಲಾ ವಾಹನಗಳು 1970ರ ಬ್ಯಾಚ್‌ನ ಹಳೆಯ ವಿದ್ಯಾರ್ಥಿಗಳ ಸಹಕಾರದಿಂದ 2022ರಲ್ಲಿ ಸ್ಥಾಪಿಸಲಾದ 'ಉರ್ಜಾ' ಸೌರಶಕ್ತಿ ಚಾರ್ಜಿಂಗ್ ಸ್ಟೇಷನ್‌ಗೆ ಹೊಂದಿಕೊಳ್ಳುವಂತಿವೆ. ಈ ಯೋಜನೆಗೆ ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್ 2025-26ನೇ ಸಾಲಿನ ಸಿಎಸ್‌ಆರ್ ಯೋಜನೆಯಡಿ ನಿಧಿ ಒದಗಿಸಿದೆ.

ಕಾರ್ಯಕ್ರಮದಲ್ಲಿ ಮಾತನಾಡಿದ ಸುಧೀರ್ ಕುಮಾರ್, ಎನ್‌ಐಟಿಕೆಗಳಲ್ಲಿ ಪ್ರವೇಶ ಪಡೆಯುವ ದಿವ್ಯಾಂಗ ವಿದ್ಯಾರ್ಥಿಗಳಿಗೆ ಸಂಚಾರವು ಮತ್ತೊಂದು ಸವಾಲಾಗಿದೆ. ಅದಕ್ಕಾಗಿ ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್ ಇ-ಮೊಬಿಲಿಟಿ ಸೈಕಲ್‌ಗಳು ಮತ್ತು ವೀಲ್‌ಚೇರ್‌ಗಳನ್ನು ಪ್ರಾಯೋಜಿಸಿದೆ. ಇವುಗಳನ್ನು ಎನ್‌ಐಟಿಕೆ ಸಂಸ್ಥೆಯೊಳಗೆ ಆಪ್ ಆಧಾರಿತ ನಿಯಂತ್ರಣ ಮತ್ತು ಸುಧಾರಿತ ವೈಶಿಷ್ಟ್ಯಗಳೊಂದಿಗೆ ತಯಾರಿಸಲಾಗಿದೆ ಎಂದರು.

ನಿರ್ದೇಶಕ ಪ್ರೊ. ರವಿ ಮಾತನಾಡಿ, ದಿವ್ಯಾಂಗ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಲು ಮತ್ತು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಕ್ಯಾಂಪಸ್‌ನಲ್ಲಿ ಈ ವಾಹನಗಳ ಮೂಲಕ ಸ್ವತಂತ್ರವಾಗಿ ಸಂಚರಿಸಬಹುದು ಎಂದರು.

ಪೆಟ್ರೋನೆಟ್‌ನ ಹಿರಿಯ ಅಧಿಕಾರಿಗಳಾದ ತಾಂತ್ರಿಕ ವಿಭಾಗದ ಮುಖ್ಯಸ್ಥೆ ಸೈಸುಧಮ್ಮೀ, ಕಾರ್ಯಾಚರಣೆ ವಿಭಾಗದ ಮುಖ್ಯಸ್ಥ ಉದಯ ಪೈ ಉಪಸ್ಥಿತರಿದ್ದರು. ಎನ್‌ಐಟಿಕೆ ಸಂಸ್ಥೆಯ ಕಾರ್ಯನಿರ್ವಹಣಾಧಿಕಾರಿಗಳಾದ ಪ್ರೊ. ಕುಮಾರ್ ಜಿ.ಎನ್. (ರಿಜಿಸ್ಟ್ರಾರ್ ಇನ್ ಚಾರ್ಜ್), ಪ್ರೊ. ವೆಂಕಟೇಶ ಪೆರುಮಲ್ (ಡೀನ್-ಯೋಜನೆ ಮತ್ತು ಅಭಿವೃದ್ಧಿ), ಪ್ರೊ. ಪ್ರಸನ್ನ ಬೆಳೂರು (ಡೀನ್- ಅಲ್ಯುಮ್ನಿ ಮತ್ತು ಕಾರ್ಪೊರೇಟ್ ಸಂಬಂಧಗಳು) ಸೇರಿದಂತೆ ಅನೇಕ ಅಧ್ಯಾಪಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳು ಹಾಜರಿದ್ದರು.



ಕಾಸರಗೋಡು ಐಸಿಎಆರ್-ಸಿಪಿಸಿಆರ್‌ಐ: ರಾಷ್ಟ್ರೀಯ ವಿಜ್ಞಾನ-ಕೈಗಾರಿಕಾ ದಿನಾಚರಣೆ

ಕಾಸರಗೋಡು: ಐಸಿಎಆರ್-ಸಿಪಿಸಿಆರ್‌ಐ ಕಾಸರಗೋಡಿನಲ್ಲಿ 2026ರ ರಾಷ್ಟ್ರೀಯ ವಿಜ್ಞಾನ ಮತ್ತು ಕೈಗಾರಿಕಾ ದಿನವನ್ನು ಆಚರಿಸಲಾಯಿತು.

ಸಿಪಿಸಿಆರ್‌ಐ ನಿರ್ದೇಶಕ ಡಾ.ಕೆ. ಬಾಲಚಂದ್ರ ಹೆಬ್ಬಾರ್ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಕೃಷಿ ಉತ್ಪಾದಕತೆ ಹೆಚ್ಚಿಸಿಕೊಳ್ಳಬೇಕಾದರೆ, ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅನಿವಾರ್ಯ ಎಂದು ತಿಳಿಸಿದರು. ಸಿಪಿಸಿಆರ್‌ಐ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ನೀಡಿದರು.

ಕಲ್ಪವರ್ಧಿನಿಯೊಂದಿಗೆ ಕೆವಿಕೆ ಕೋಯಿಕ್ಕೋಡ್ ಮುಖ್ಯಸ್ಥ ಡಾ. ರಾಧಾಕೃಷ್ಣನ್, ಸೌತ್ ಮಲಬಾರ್ ಎಂಟರ್‌ಪ್ರೈಸಸ್‌ನ ಸಜನ್ ಕೆ., ಮತ್ತು ಸುಷ್ಮಾ ಅವರು ತಳಿಪರಂಬ ಕಾರ್ಬೋನೇಟೆಡ್ ಎಳನೀರಿಗೆ ಸಂಬಂಧಿಸಿದ ಎಂಓಯು ವಿನಿಮಯ ನಡೆಸಿದರು.

ಈ ಸಂದರ್ಭ ನಡೆದ ತಾಂತ್ರಿಕ ಅಧಿವೇಶನದಲ್ಲಿ 'ಕಾಸರಗೋಡಿನಲ್ಲಿ ಕೃಷಿ ಸಂಶೋಧನಾ ಅವಕಾಶಗಳ' ಕುರಿತು ಕೆವಿಕೆ ಮುಖ್ಯಸ್ಥ ಡಾ.ಟಿ.ಎಸ್. ಮನೋಜ್‌ಕುಮಾರ್, ವಿವಿಧ ಪ್ರಭೇದಗಳು ಮತ್ತು ಆಹಾರೇತರ ತಂತ್ರಜ್ಞಾನಗಳನ್ನು ಒಳಗೊಂಡ ಸಿಪಿಸಿಆರ್‌ಐನ ತಂತ್ರಜ್ಞಾನ ಕುರಿತು ಡಾ. ಎಸ್. ಜಯಶೇಖರ್, ಸಿಪಿಸಿಆರ್‌ಐನ ಆಹಾರ ಉತ್ಪನ್ನಗಳು ಮತ್ತು ಸಂಬಂಧಿತ ನಾವೀನ್ಯತೆಗಳ ಕುರಿತು ಡಾ.ಹಿಮಾ ಜಾನ್, ಎಪಿಇಡಿಎಯ ಪಾತ್ರ ಮತ್ತು ರಫ್ತು ಸೌಲಭ್ಯಗಳ ಬಗ್ಗೆ ಕೊಚ್ಚಿಯ ಎಪಿಇಡಿಎಯ ವ್ಯವಹಾರ ಅಭಿವೃದ್ಧಿ ವ್ಯವಸ್ಥಾಪಕಿ ಅಲಿನ್ ಸಂತೋಷ್, ಕೃಷಿ ಆಧಾರಿತ ಉದ್ಯಮಗಳು ಮತ್ತು ನವೋದ್ಯಮಗಳಿಗೆ ಲಭ್ಯವಿರುವ ಸಾಲ ಬೆಂಬಲ ಕಾರ್ಯವಿಧಾನಗಳ ಕುರಿತು ನರಾ ಬ್ಯಾಂಕಿನ ಕೃಷಿ ಅಧಿಕಾರಿ ಅಪರ್ಣಾ ಕೆ., ಕೃಷಿ - ಉದ್ಯಮಿಗಳಿಗೆ ಬೆಂಬಲ ಯೋಜನೆಗಳು ಮತ್ತು ಸೌಲಭ್ಯ ಸೇವೆಗಳ ಬಗ್ಗೆ ಜಿಲ್ಲಾ ಕೈಗಾರಿಕಾ ಕೇಂದ್ರ (ಡಿಐಸಿ)ದ ಜನರಲ್ ಮೆನೇಜರ್ ಸಜಿತ್ ಕುಮಾರ್, ಉದ್ಯಮಶೀಲತೆಗಾಗಿ ಔಷಧೀಯ ಮತ್ತು ಸುಗಂಧ ದ್ರವ್ಯಗಳನ್ನು ಬೆಳೆಸುವ ಸಾಧ್ಯತೆಯ ಬಗ್ಗೆ ಬೆಂಗಳೂರಿನ ಪ್ರಾದೇಶಿಕ ಕಚೇರಿಯ ಸಿಎಸ್‌ಐಆರ್ - ಸಿಐಎಂಎಪಿಯ ಪ್ರಧಾನ ವಿಜ್ಞಾನಿ ಡಾ. ಯೋಗೇಂದ್ರ ಎನ್.ಡಿ. ವಿಷಯ ಮಂಡಿಸಿದರು. ಯಶಸ್ವಿ ಉದ್ಯಮಿ ಟಿ.ಕೆ. ಅನ್ನಮ್ಮ ಅವರು ತಮ್ಮ ಉದ್ದಿಮೆಯಲ್ಲಿನ ಅನುಭವ ಹಂಚಿಕೊಂಡರು.

ಈ ಸಂದರ್ಭದಲ್ಲಿ ಉದ್ಯಮಿಗಳ ವಿವಿಧ ಉತ್ಪನ್ನಗಳನ್ನು ಪ್ರದರ್ಶಿಸಲಾಯಿತು. ಈ ಸಂದರ್ಭ 'ತಂತ್ರಜ್ಞಾನ ಚಿಕಿತ್ಸಾಲಯ' ಅಧಿವೇಶನವನ್ನು ಆಯೋಜಿಸಲಾಗಿತ್ತು. ಸಮಾಜ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಕೆ. ಪೊನ್ನುಸ್ವಾಮಿ ಸ್ವಾಗತಿಸಿ, ಡಾ. ಕೆ.ಪಿ.ಚಂದ್ರನ್ ವಂದಿಸಿದರು.



ಪುದು ರಾಧಾಸುರಭಿ ಗೋಮಂದಿರ, ರಾಷ್ಟ್ರೀಯ ಗೋಸೇವಾ ಸಂಸ್ಥಾನ ಟ್ರಸ್ಟ್ ಸಾರಥ್ಯ | ನಾಳೆ ಅಡ್ಯಾರ್‌ನಲ್ಲಿ ಚಾಲನೆ

ಮೂರೂವರೆ ವರ್ಷ ರಾಜ್ಯದಲ್ಲಿ ಗೋ ನಂದಿ ಪರಿವಾರ ರಥಯಾತ್ರೆ

ಮಂಗಳೂರು: ಬಂಟ್ವಾಳ ತಾಲೂಕು ಪುದು ರಾಧಾಸುರಭಿ ಗೋಮಂದಿರ, ರಾಷ್ಟ್ರೀಯ ಗೋಸೇವಾ ಸಂಸ್ಥಾನ ಟ್ರಸ್ಟ್ ವತಿಯಿಂದ ಗೋ ನಂದಿ ಪರಿವಾರ ರಥಯಾತ್ರೆ ಮಾ.5ರಂದು ಅಡ್ಯಾರ್‌ನ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ ಉದ್ಘಾಟನೆಗೊಳ್ಳಲಿದ್ದು, ಮುಂದಿನ ಮೂರೂವರೆ ವರ್ಷಗಳ ಕಾಲ ರಾಜ್ಯಾದ್ಯಂತ ಸಂಚರಿಸಲಿದೆ ಎಂದು ರಾಷ್ಟ್ರೀಯ ಗೋಸೇವಾ ಸಂಸ್ಥಾನ ಟ್ರಸ್ಟ್ ಅಧ್ಯಕ್ಷರಾದ ಭಕ್ತಿ ಭೂಷಣ್‌ದಾಸ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ. 5ರಂದು ಬೆಳಗ್ಗೆ 10ಕ್ಕೆ ಪೊಳಲಿ ದೇವಸ್ಥಾನ, ಬಳಿಕ ಕಟೀಲು ದೇವಸ್ಥಾನಕ್ಕೆ ಗೋ ನಂದಿ ಪರಿವಾರ ರಥಯಾತ್ರೆ ಭೇಟಿ ನೀಡಲಿದೆ. ಸಂಜೆ 5ಕ್ಕೆ ಅಡ್ಯಾರು ಕಟ್ಟೆಯಿಂದ ಅಡ್ಯಾರ್‌ನ ಶ್ರೀ ವೀರಾಂಜನೇಯ ದೇವಸ್ಥಾನದವರೆಗೆ ಚೆಂಡೆ, ವಾದ್ಯ, ಕುಣಿತ ಭಜನೆಯೊಂದಿಗೆ ರಥಯಾತ್ರೆಯ ಮೆರವಣಿಗೆ ನಡೆಯಲಿದೆ. ಬಳಿಕ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಆಶೀರ್ವಚನ ನೀಡುವರು. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಮತ್ತಿತರ ಗಣ್ಯರು ಭಾಗವಹಿಸುವರು ಎಂದು ತಿಳಿಸಿದರು.

ರಥಯಾತ್ರೆ ಅಂಗವಾಗಿ ಮಾ.12ರವರೆಗೆ ಅಡ್ಯಾರ್‌ನ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ ಗೋ ಕಥಾ ಸಪ್ತಾಹ ನಡೆಯಲಿದೆ. ಪ್ರತಿದಿನ ಬೆಳಗ್ಗೆ 6ರಿಂದ ಮಧ್ಯಾಹ್ನ 12ರವರೆಗೆ ಉಜ್ಜಯಿನಿಯ ನರ್ಮದೇಶ್ವರ ಶಿವಲಿಂಗಕ್ಕೆ ಭಕ್ತರಿಂದ ಗಂಗಾಜಲದಿಂದ ಸಾಮೂಹಿಕ ಅಭಿಷೇಕ, ಗೋ ಸೂಕ್ತ ಹೋಮ, ಶ್ರೀ ಸೂಕ್ತ ಹೋಮ, ಗೋ ಪೂಜೆ, ಭಾಗವತ ಪಾರಾಯಣ, ಲೋಕಕಲ್ಯಾಣಾರ್ಥ ಸಾಮೂಹಿಕ ಜಪಯಜ್ಞ ಆಯೋಜಿಸಲಾಗಿದೆ. ಬೆಳಗ್ಗೆ 10ರಿಂದ 12ರವರೆಗೆ ಗೋ ಆಧಾರಿತ ಚಿಕಿತ್ಸೆ, ಕುಟುಂಬ ಪ್ರಬೋಧನ, ಗರ್ಭಸಂಸ್ಕಾರ, ನಾಟಿ ಚಿಕಿತ್ಸೆ, ದೇಶಿ ಆಹಾರ ಪದ್ಧತಿ, ಗೋ ಉತ್ಪನ್ನ ತಯಾರಿಕೆ, ಗೋ ಆಧಾರಿತ ಕೃಷಿ, ಮೇಲ್ಛಾವಣಿ ಕೃಷಿ ಸೇರಿದಂತೆ ವಿವಿಧ ರೀತಿಯ ಗೋ ಆಧಾರಿತ ಪ್ರಶಿಕ್ಷಣ ನಡೆಯಲಿದೆ. ಗೋವಿನ ಮಹತ್ವ ತಿಳಿಸುವ ಉದ್ದೇಶದಿಂದ ರಥಯಾತ್ರೆ ಅಂಗವಾಗಿ ಮುಂದಿನ ಮೂರುವರೆ ವರ್ಷಗಳ ಕಾಲ ರಾಜ್ಯದ 108 ಸ್ಥಳಗಳಲ್ಲಿ ಗೋ ಕಥಾ ಸಪ್ತಾಹ ಏರ್ಪಡಿಸಲಾಗಿದೆ ಎಂದು ವಿವರಿಸಿದರು. ಗೋ ಸೇವಾ ಗತಿವಿಧಿ ಕರ್ನಾಟಕ ದಕ್ಷಿಣ ಪ್ರಾಂತ ಸಂಯೋಜಕ ಪ್ರವೀಣ್ ಸರಳಾಯ, ಅಡ್ಯಾರ್ ಶ್ರೀ ವೀರಾಂಜನೇಯ ದೇವಸ್ಥಾನ ಅಧ್ಯಕ್ಷ ರಮೇಶ್ ತುಂಬೆ, ರಥಯಾತ್ರೆ ಪದಾಧಿಕಾರಿಗಳಾದ ರಮಿತಾ ಸೂರ್ಯವಂಶಿ, ನಿವೇದಿತಾ ಶೆಟ್ಟಿ ಉಪಸ್ಥಿತರಿದ್ದರು.



ಒಂದು ಲಕ್ಷ ಉಂಡೆಗಳ ತಯಾರಿ

ಭೂಮಿಯ ಫಲವತ್ತತೆ ಹೆಚ್ಚಿಸುವ ಉದ್ದೇಶದಿಂದ ರಾಧಾ ಸುರಭಿ ಗೋಮಂದಿರದಲ್ಲಿ ಭೂಮಿ ಸುಪೋಷಣ ಉಂಡೆಗಳನ್ನು ತಯಾರಿಸಲಾಗಿದ್ದು, ರಥಯಾತ್ರೆ ಸಂದರ್ಭ ಗೋಭಕ್ತರು, ಕೃಷಿಕರು ಇದನ್ನು ಪಡೆದುಕೊಳ್ಳಬಹುದು. ಗೋಮಯದಿಂದ ತಯಾರಿಸಿದ ಈ ಉಂಡೆ ಭೂಮಿಯ ಫಲವತ್ತತೆ ಹೆಚ್ಚಿಸಲಿದೆ, ಗಿಡಗಳು ಬೆಳೆಯಲು ಪೂರಕವಾಗಿದೆ. ಒಂದು ಉಂಡೆಗೆ ನಾಲ್ಕು ರೂ. ನಿಗದಿಪಡಿಸಲಾಗಿದ್ದು, ವಿವಿಧ ಸಂಖ್ಯೆಯ ಪ್ಯಾಕೆಟ್ ರೂಪದಲ್ಲಿ ಲಭ್ಯವಿದೆ. ಒಂದು ಲಕ್ಷ ಉಂಡೆಗಳನ್ನು ತಯಾರಿಸಲಾಗಿದೆ. ಈಗಾಗಲೇ ಈ ಉಂಡೆಗಳನ್ನು ಬಳಸಿದವರು ಉತ್ತಮ ಪರಿಣಾಮದ ಬಗ್ಗೆ ಹೇಳಿದ್ದಾರೆ ಎಂದು ಭಕ್ತಿ ಭೂಷಣ್‌ದಾಸ್ ತಿಳಿಸಿದರು.

ಕಿರುಸುದ್ದಿ

ಲಾರೆಸ್ ಕ್ರೀಡಾ ಪ್ರಶಸ್ತಿಗೆ ಭಾರತ ಮಹಿಳಾ ತಂಡ ನಾಮನಿರ್ದೇಶನ

ಹೊಸದಿಲ್ಲಿ: 2025ರ ಏಕದಿನ ವಿಶ್ವಕಪ್ ವಿಜೇತ ಭಾರತೀಯ ಮಹಿಳಾ ಕ್ರಿಕೆಟ್ ತಂಡವು ಲಾರೆಸ್ ವಿಶ್ವ ಕ್ರೀಡಾ ಪ್ರಶಸ್ತಿಗಳಿಗೆ 'ವರ್ಷದ ತಂಡ' ವಿಭಾಗದಲ್ಲಿ ನಾಮನಿರ್ದೇಶನಗೊಂಡಿದೆ. 2026 ರ ಲಾರೆಸ್ ವಿಶ್ವ ಕ್ರೀಡಾ ಪ್ರಶಸ್ತಿಗಳಿಗೆ ಮಂಗಳವಾರದಂದು ನಾಮನಿರ್ದೇಶನಗಳನ್ನು ಪ್ರಕಟಿಸಲಾಗಿದೆ. ಭಾರತೀಯ ಮಹಿಳಾ ಕ್ರಿಕೆಟ್ ತಂಡವನ್ನು ಲಾರೆಸ್ ವರ್ಷದ ತಂಡ ವಿಭಾಗದಲ್ಲಿ ನಾಮನಿರ್ದೇಶನ ಮಾಡಲಾಗಿದೆ. ಈ ವಿಭಾಗದಲ್ಲಿ ಭಾರತ ಮಹಿಳಾ ತಂಡವನ್ನು ಹೊರತುಪಡಿಸಿ ವಿವಿಧ ಕ್ರೀಡೆಗಳಲ್ಲಿ ತಮ್ಮ ಛಾಪು ಮೂಡಿಸಿರುವ ಪ್ರಪಂಚದಾದ್ಯಂತದ ಐದು ತಂಡಗಳನ್ನು ಆಯ್ಕೆ ಮಾಡಲಾಗಿದೆ. ಅಂದರೆ, ಒಟ್ಟು ಆರು ತಂಡಗಳನ್ನು ಲಾರೆಸ್ ವರ್ಷದ ತಂಡಕ್ಕೆ ನಾಮನಿರ್ದೇಶನ ಮಾಡಲಾಗಿದೆ. ಟೆನಿಸ್ ಲೋಕದ ದಿಗ್ಗಜ ಕಾರ್ಲೋಸ್ ಅಲ್ಕರಾಜ್, ಅರಿನಾ ಸಬಲೆಂಕಾ ಸೇರಿದಂತೆ ಅಂತರಾಷ್ಟ್ರೀಯ ಕ್ರೀಡಾ ತಾರೆಯರು ವಿವಿಧ ವೈಯಕ್ತಿಕ ಪ್ರಶಸ್ತಿಗಳಿಗೆ ನಾಮನಿರ್ದೇಶಿತರಾಗಿದ್ದಾರೆ. ವಿಜೇತರನ್ನು ಏಪ್ರಿಲ್ 20, 2026 ರಂದು ಮ್ಯಾಡ್ರಿಡ್‌ನಲ್ಲಿ ಪ್ರಕಟಿಸಲಾಗುವುದು.

ಫುಟ್‌ಬಾಲ್: ಭಾರತಕ್ಕೆ ವಿಯೆಟ್ನಾಂ ಸವಾಲು

ಪರ್ತ್: ಎಎಫ್‌ಸಿ ಮಹಿಳೆಯರ ಫುಟ್‌ಬಾಲ್ ಏಷ್ಯಾಕಪ್ ಪಂದ್ಯಾವಳಿಗಾಗಿ ನಿರೀಕ್ಷೆಗಳೊಂದಿಗೆ ಹೋಗಿರುವ ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ ವಿಯೆಟ್ನಾಂ ತಂಡವನ್ನು ಬುಧವಾರದಂದು ಎದುರಿಸಲಿದೆ. ಮೂರನೇ ಗುಂಪಿನಲ್ಲಿರುವ ಭಾರತ ತಂಡವು ಆಸ್ಟ್ರೇಲಿಯಾದ ಪರ್ತ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ಶುಭಾರಂಭ ಮಾಡುವ ನಿರೀಕ್ಷೆಯಲ್ಲಿದೆ. 2022ರ ಏಷ್ಯಾಕಪ್ ಪಂದ್ಯಾವಳಿಯಿಂದ ಹೊರಬಿದ್ದಿರುವ ಭಾರತ ಈ ಬಾರಿ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಮಿಂಚಿದ ನಂತರ ಆಡುವ ಅವಕಾಶ ಪಡೆದಿದೆ. ಕ್ವಾರ್ಟರ್‌ಗೇರುವ ತಂಡಗಳು ವಿಶ್ವಕಪ್‌ಗೇರಲಿದ್ದು ಭಾರತ ವಿಶ್ವಕಪ್ ಅರ್ಹತೆ ಎದುರು ನೋಡಲಿದೆ.



ಮೊದಲ ಸೆಮಿಫೈನಲ್ ಸೆಣಸಾಟ | ಆತ್ಮವಿಶ್ವಾಸದಲ್ಲಿ ಹರಿಣರು | ನ್ಯೂಜಿಲೆಂಡ್‌ಗೆ ಜಯದ ಹಂಬಲ

ಕಿವೀಸ್ vs ಆಫ್ರಿಕಾ ಸೆಮೀಸ್ ಇಂದು

▸▸ ಪ್ರಸ್ತುತ ಟೂರ್ನಿಯಲ್ಲಿ ಒಂದೂ ಪಂದ್ಯ ಸೋಲದ ದ.ಆಫ್ರಿಕಾ

ಕೋಲ್ಕತ್ತಾ: ಟೂರ್ನಿಯುದ್ದಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿರುವ ದ.ಆಫ್ರಿಕಾ ಹಾಗೂ ನ್ಯೂಜಿಲೆಂಡ್ ತಂಡಗಳು ಪ್ರತಿಷ್ಠಿತ ವಿಶ್ವಕಪ್ ಪಂದ್ಯಾವಳಿಯ ಸೆಮಿಫೈನಲ್ ಪಂದ್ಯದಲ್ಲಿ ಬುಧವಾರದಂದು ಮುಖಾಮುಖಿಯಾಗಲಿವೆ.

ಸೂಪರ್ ಕದನಗಳು ಮುಕ್ತಾಯವಾಗಿವೆ. ವಿಶ್ವಕಪ್ ನಿರ್ಣಾಯಕ ಹಂತಕ್ಕೆ ಬಂದಿದೆ. ಒಂದು ತಿಂಗಳ ಮಟ್ಟಿಗೆ ಆಡಿ ಪಡೆದ ಫಲಿತಾಂಶದ ಯಶಸ್ಸಿನೊಂದಿಗೆ ಎರಡೂ ತಂಡಗಳು ಕಣಕ್ಕಿಳಿಯಲಿರುವುದು ನೋಡುಗರಲ್ಲಿ ಕುತೂಹಲ ಮೂಡಿಸಿದೆ. ಬುಧವಾರದಿಂದು ಸೆಮಿ ಪಂದ್ಯಗಳು ಶುರುವಾಗುತ್ತಿವೆ. ಪ್ರತಿ ಪಂದ್ಯದಲ್ಲೂ ಕರಾರುವಾಕ್ ಪ್ರದರ್ಶನ ನೀಡಿರುವ ಭಾರತ, ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ದ.ಆಫ್ರಿಕಾ ತಂಡಗಳು ಸೆಮಿನಲ್ಲಿ ಸೆಣಸಾಡಲಿವೆ. ವಿಶ್ವಕಪ್ ವಿಜಯಕ್ಕೆ ಅಣಿಯಾಗುತ್ತಿವೆ.

ಪಾಕಿಸ್ತಾನ ತಂಡ ವಿಶ್ವಕಪ್‌ನಿಂದಲೇ ಹೊರಬಿದ್ದಿರುವ ನಂತರ ಎಲ್ಲ ನಾಕೌಟ್ ಪಂದ್ಯಗಳೂ ಭಾರತದಲ್ಲೇ ನಡೆಯುವುದು ಸ್ಪಷ್ಟವಾಗಿದೆ. ಬುಧವಾರದಂದು ಪ್ರಶಸ್ತಿ ಸುತ್ತಿನ ಪಂದ್ಯಕ್ಕಾಗಿ ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಈ ಪಂದ್ಯ ನಡೆಯಲಿದೆ. ಕಳೆದ ಬಾರಿ ರನ್ನರ್-ಅಪ್ ಸ್ಥಾನ ಪಡೆದಿದ್ದ ಆಫ್ರಿಕಾ ಮತ್ತೊಂದು ಫೈನಲ್‌ಗೇರುವ ಆಸೆಯಲ್ಲಿದ್ದರೆ, ನ್ಯೂಜಿಲೆಂಡ್ ಕೂಡ ಸೆಮಿಗಾಗಿ ಸಜ್ಜಾದಂತಿದೆ.

ಇಂದಿನಿಂದ ಸೆಮಿಫೈನಲ್ಸ್: ಬುಧವಾರದ ಪಂದ್ಯದ ಮೂಲಕ ಭಾರತದಲ್ಲಿ ಸೆಮಿಫೈನಲ್ ಮೊಳಗು ಶುರುವಾಗಲಿದೆ. ಸೂಪರ್ ಪಂದ್ಯಗಳ ನಂತರ ನಾಲ್ಕು ತಂಡಗಳು ನಮ್ಮೆದುರಿಗಿವೆ. ಮಾದರಿಯ ಪ್ರಕಾರ ಸೂಪರ್-8ರ ಮೊದಲ ಗುಂಪಿನಲ್ಲಿ ಮೊದಲ ಸ್ಥಾನ ಹೊಂದಿರುವ ಆಫ್ರಿಕಾ ಮತ್ತು ಎರಡನೇ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿರುವ ನ್ಯೂಜಿಲೆಂಡ್ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಎರಡನೇ ಸೆಮಿಫೈನಲ್ ಪಂದ್ಯ ಮೊದಲ ಗುಂಪಿನ ಎರಡನೇ ಸ್ಥಾನಿಯಾದ ಭಾರತ ಹಾಗೂ ಎರಡನೇ ಗುಂಪಿನ ಅಗ್ರಸ್ಥಾನಿಯಾದ ಇಂಗ್ಲೆಂಡ್ ನಡುವೆ ಗುರುವಾರದಂದು ನಡೆಯಲಿದೆ.



ಪಿಚ್ ವರದಿ

ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಈ ಪಂದ್ಯ ನಡೆಯಲಿದೆ. ಬ್ಯಾಟಿಂಗ್‌ಗೆ ಅಲ್ಪ ಲಾಭ ನೀಡಲಿದೆ. ಐಪಿಎಲ್ ಅಂತಹ ಕೂಟದಲ್ಲಿ ಬ್ಯಾಟಿಗರೇ ಅಬ್ಬಿಸಿದ್ದಾರೆ. ಪಿಚ್‌ನಲ್ಲಿ ಬೌನ್ಸ್ ಇರುವುದು ಇದಕ್ಕೆ ಪ್ರಮುಖ ಕಾರಣ. 190 ರನ್‌ಗೂ ಹೆಚ್ಚು ಮೊತ್ತ ದಾಖಲಾಗುವ ಸಾಧ್ಯತೆಗಳಿವೆ. ಇಲ್ಲಿ ನಡೆದಿರುವ ಕಳೆದ ಪಂದ್ಯದಲ್ಲೇ ಭಾರತ 197 ರನ್ ಗುರಿ ಬೆನ್ನತ್ತಿದೆ.

ಮುಖಾಮುಖಿ (ವಿಶ್ವಕಪ್‌ನಲ್ಲಿ)

ದ.ಆಫ್ರಿಕಾ ತಂಡವು ನ್ಯೂಜಿಲೆಂಡ್ ಮೇಲೆ ಏಕಪಕ್ಷೀಯವಾಗಿ ಮೇಲುಗೈ ಸಾಧಿಸಿದೆ. ವಿಶ್ವಕಪ್ ಪಂದ್ಯಾವಳಿಯಲ್ಲಿ ನ್ಯೂಜಿಲೆಂಡ್ ಹರೀಣರೆದುರು ಭಾರೀ ಹಿನ್ನಡೆ ಅನುಭವಿಸಿದೆ.

ಮುಖಾಮುಖಿ	6
ದ.ಆಫ್ರಿಕಾ ಗೆಲುವು	6
ನ್ಯೂಜಿಲೆಂಡ್ ಗೆಲುವು	0

ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾ

ಕಳೆದ ಕೂಟದ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಹಿನ್ನಡೆ ಅನುಭವಿಸಿ ಭಾರೀ ನಿರಾಸೆ ಅನುಭವಿಸಿದ್ದ ದ.ಆಫ್ರಿಕಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಒಂದೂ ಪಂದ್ಯ ಸೋಲದ ತಂಡವಾಗಿ ಹೆಡೆ ಎತ್ತಿದೆ. ಎದುರಾದ ತಂಡಗಳ ಮೇಲೆ ಹೀಗೆ ಸವಾರಿ ನಡೆಸುತ್ತಾ ಬಂದ ಆಫ್ರಿಕನ್ನರು ಮೊದಲ ಸಮತೋಲಿತ, ಶಿಸ್ತಿನ ಹಾಗೂ ಸಮಯೋಚಿತ ಪ್ರದರ್ಶನ ನೀಡಿ ಮಿಂಚಿದ್ದಾರೆ. ಲೀಗ್ ಹಂತದಲ್ಲಿ ಅಫ್ಘಾನಿಸ್ತಾನದೊಂದಿಗಿನ ಪಂದ್ಯದಲ್ಲಿ ಹೈರಾಣಾಗಿದ್ದ ಹರಿಣರು ಮುಂದಿನ ಪಂದ್ಯಗಳಲ್ಲಿ ಎದುರಾಳಿಗಳ ಬೆವರಿಳಿಸಿದ್ದಾರೆ. ಲೀಗ್ ಹಂತದಲ್ಲಿ ಅಜೇಯವಾಗಿದ್ದ ತಂಡವು ಸೂಪರ್-8ರ ಪಂದ್ಯಗಳಲ್ಲೂ ಭಾರೀ ಫಲಿತಾಂಶ ಪಡೆದಿದ್ದಾರೆ. ಅಲ್ಲಿ ನಾಲ್ಕು, ಇಲ್ಲಿ ಮೂರು. ಹೀಗೆ ಸತತ ಏಳು ಪಂದ್ಯಗಳನ್ನು ಗೆದ್ದು ವಿಶ್ವಾಸ ಹೆಚ್ಚಿಸಿಕೊಂಡಿದೆ ಆಫ್ರಿಕಾ. ಮಾರ್ಕ್ರಂ, ರಿಕಲ್ಟನ್, ಬ್ರೇವಿಸ್ ಸೇರಿದಂತೆ ಪ್ರಮುಖರು ಬ್ಯಾಟಿಂಗ್‌ನಲ್ಲಿ ಮಿಂಚಿದರೆ, ಯಾನ್ಸನ್, ಲುಂಗಿ ಸೇರಿದಂತೆ ವಿವಿಧ ಆಟಗಾರರು ಬೌಲಿಂಗ್‌ನಲ್ಲಿ ಮಿಂಚಿದ್ದಾರೆ.

ದಕ್ಷಿಣ ಆಫ್ರಿಕಾ ಪಂದ್ಯಗಳು

ಎದುರಾಳಿ	ಫಲಿತಾಂಶ
ಕೆನಡಾ	57 ರನ್ ಗೆಲುವು
ಅಫ್ಘಾನಿಸ್ತಾನ	ಸೂಪರ್ ಓವರ್‌ನಲ್ಲಿ 4 ರನ್ ಗೆಲುವು
ನ್ಯೂಜಿಲೆಂಡ್	7 ವಿಕೆಟ್ ಗೆಲುವು
ಯುಎಇ	6 ವಿಕೆಟ್ ಗೆಲುವು

ಸೂಪರ್-8

ಎದುರಾಳಿ	ಫಲಿತಾಂಶ
ಭಾರತ	76 ರನ್ ಗೆಲುವು
ವಿಂಡೀಸ್	9 ವಿಕೆಟ್ ಗೆಲುವು
ಜಿಂಬಾಬ್ವೆ	5 ವಿಕೆಟ್ ಗೆಲುವು

ಟೂರ್ನಿಯಲ್ಲಿ ನ್ಯೂಜಿಲೆಂಡ್

ಗೆಲುವಿನ ಆಸೆ, ಉತ್ತಮ ಪ್ರದರ್ಶನ, ಹೊಸ ನಾಯಕ ಮತ್ತು ಹೊಸ ಹುಮ್ಮಸ್ಸಿನಿಂದ ಭಾರತಕ್ಕೆ ಬಂದಿಳಿದಿದ್ದ ನ್ಯೂಜಿಲೆಂಡ್ ತಂಡವು, ವಿಶ್ವಕಪ್ ಪಂದ್ಯಾವಳಿಗೂ ಮುನ್ನ ಭಾರತದೊಂದಿಗೆ ಆಡಿದ್ದ ನಾಲ್ಕು ಪಂದ್ಯಗಳ ಸರಣಿಯಲ್ಲಿ ಸೋಲನುಭವಿಸಿತ್ತು. ಆದಾಗ್ಯೂ ಅಭ್ಯಾಸ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿರುವ ನ್ಯೂಜಿಲೆಂಡ್ ಲೀಗ್ ಹಂತದ ಪಂದ್ಯಗಳಲ್ಲಿ ಮಿಂಚಿ ಮೆರೆದಿತ್ತು. ಸೂಪರ್ ಕದನಗಳಲ್ಲೂ ಅದೇ ಫಲಿತಾಂಶ ನೀಡುವ ಹೊತ್ತಿಗಾಗಲೇ ಮೊದಲನೇ ಆಘಾತದಲ್ಲಿ ಪಾಕ್‌ನೊಂದಿಗಿನ ಪಂದ್ಯ ರದ್ದಾಗಿತ್ತು. ಅದರೊಂದಿಗೆ ತನ್ನ ಎರಡನೇ ಪಂದ್ಯವನ್ನು ಗೆದ್ದ ನ್ಯೂಜಿಲೆಂಡ್, ಮೂರನೇ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಸೋತರೂ ಪಾಕ್‌ನ ಕಳಪೆ ಪ್ರದರ್ಶನದಿಂದಾಗಿ ರನ್‌ರೇಟ್ ಮೂಲಕ ಸೆಮಿಗೇರಿದೆ. ತಂಡದಿಂದ ಅಲೆನ್, ಸೀಫರ್ಟ್, ಮಿಲ್ಲರ್, ಡಫಿ ಹಾಗೂ ಚಾಪ್ಮನ್ ಉತ್ತಮ ಪ್ರದ ರ್ಶನ ನೀಡಿ ಮಿಂಚಿದ್ದಾರೆ. ಬೌಲಿಂಗ್‌ನಲ್ಲಿ ಸ್ಯಾಂಟ್ನರ್, ಹೆನ್ರಿ, ಜೆಮಿಸನ್ ಉತ್ತಮ ಪ್ರದರ್ಶನ ನೀಡಿದ್ದಾರೆ.

ನ್ಯೂಜಿಲೆಂಡ್ ಪಂದ್ಯಗಳು

ಎದುರಾಳಿ	ಫಲಿತಾಂಶ
ಅಫ್ಘಾನ್	5 ವಿಕೆಟ್ ಜಯ
ಯುಎಇ	10 ವಿಕೆಟ್ ಜಯ
ಆಫ್ರಿಕಾ	7 ವಿಕೆಟ್ ಸೋಲು
ಕೆನಡಾ	8 ವಿಕೆಟ್ ಗೆಲುವು

ಸೂಪರ್-8ರಲ್ಲಿ

ಎದುರಾಳಿ	ಫಲಿತಾಂಶ
ಪಾಕಿಸ್ತಾನ	ರದ್ದು
ಶ್ರೀಲಂಕಾ	61 ರನ್ ಗೆಲುವು
ಇಂಗ್ಲೆಂಡ್	4 ವಿಕೆಟ್ ಸೋಲು

ತವರಲ್ಲೇ 5 ಲೀಗ್ ಪಂದ್ಯ: ಆರ್‌ಸಿಬಿ ಘೋಷಣೆ | ರಾಯ್ಪುರದಲ್ಲಿ 2 ಪಂದ್ಯ

ಬೆಂಗಳೂರಿನಲ್ಲೇ ಆರ್‌ಸಿಬಿ ಆಟ

ಬೆಂಗಳೂರು: ಕೋಟ್ಯಾಂತರ ಅಭಿಮಾನಿಗಳ ಬಯಕೆಯಂತೆ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಬೆಂಗಳೂರಲ್ಲೇ ಇಂಡಿಯನ್ ಪ್ರೀಮಿಯರ್ ಲೀಗ್‌ನ ತವರು ಪಂದ್ಯಗಳನ್ನು ಆಡುವುದಕ್ಕೆ ಒಪ್ಪಿಕೊಂಡಿದೆ. ಇದರೊಂದಿಗೆ ಐದು ಲೀಗ್ ಪಂದ್ಯ, ಒಂದು ಪ್ಲೇಆಫ್ ಮತ್ತು ಫೈನಲ್ ಪಂದ್ಯಕ್ಕೆ ಚಿನ್ನಸ್ವಾಮಿ ಆತಿಥ್ಯ ನೀಡಲಿದೆ.

ಹತ್ತಾರು ಅಡತಡೆಗಳನ್ನು ದಾಟಿಕೊಂಡು ಬಂದ ನಂತರ ಕೊನೆಗೂ ಸುಮಾರು ಒಂದು ವರ್ಷ ಬಳಿಕ ಬೆಂಗಳೂರಿನ ಕ್ರೀಡಾಂಗಣಕ್ಕೆ ಕ್ರಿಕೆಟ್ ಮರಳಿದೆ. ಬೆಂಗಳೂರು ಪಾಲಿನ 5 ತವರು ಪಂದ್ಯಗಳು ಬೆಂಗಳೂರಿನಲ್ಲಿ ನಡೆಯಲಿದ್ದರೆ, ಮಿಕ್ಕಿರುವ 2 ಪಂದ್ಯಗಳು ರಾಯ್ಪುರದಲ್ಲಿ ಆಡಲಿದೆ ಎಂದು ಬೆಂಗಳೂರು ತಂಡ ಅಧಿಕೃತ ಹೇಳಿಕೆ ನೀಡಿದೆ.

ಮಾಜಿ ವೇಗಿ ವೆಂಕಟೇಶ್ ಪ್ರಸಾದ್ ಅವರ ನೇತೃತ್ವದ ನೂತನ ಕೆಎಸ್‌ಸಿಎ ಆಡಳಿತ ಮಂಡಳಿ ಅಭಿಮಾನಿಗಳ ಸುರಕ್ಷತೆಗಾಗಿ ಕ್ರಮಗಳನ್ನು ತೆಗೆದುಕೊಳ್ಳುವ ಆಶ್ವಾಸನೆ ನೀಡಿದ ನಂತರ ಸರ್ಕಾರ ಕರ್ನಾಟಕ ಕ್ರಿಕೆಟ್ ಸಂಸ್ಥೆಗೆ ಷರತ್ತುಬದ್ಧ ಅನುಮತಿ ನೀಡಿತ್ತು. ಆದಾಗ್ಯೂ ಆರ್‌ಸಿಬಿ ಪಂದ್ಯಗಳನ್ನಾಡುವುದಕ್ಕೆ ಒಪ್ಪಿಕೊಂಡಿರಲಿಲ್ಲ. ಹೀಗಾಗಿ ವೇಳಾಪಟ್ಟಿ ಇನ್ನೂ ಪ್ರಕಟವಾಗಿರಲಿಲ್ಲ. ಆದರೆ ಮಂಗಳವಾರದಂದು ಅಧಿಕೃತ ಪ್ರಕಟಣೆ ಹೊರಡಿಸಿರುವ ಆರ್‌ಸಿಬಿ ಈ ಬಗ್ಗೆ ಮಾಹಿತಿ ನೀಡಿದೆ.

ಬೆಂಗಳೂರು ತಂಡ ಹೇಳಿದ್ದೇನು?: ಬೆಂಗಳೂರಿನಲ್ಲಿ ಪಂದ್ಯಗಳ ಆಯೋಜನೆಗೆ ಅನುಕೂಲ ಮಾಡಿಕೊಡುವಲ್ಲಿ ಅಚಲ ಮಾರ್ಗದರ್ಶನ, ಸಹಕಾರ ಮತ್ತು ಬೆಂಬಲಕ್ಕಾಗಿ ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮತ್ತು ಕರ್ನಾಟಕ ಪೊಲೀಸರಿಗೆ ಆರ್‌ಸಿಬಿ ತನ್ನ ಪ್ರಾಮಾಣಿಕ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಐಪಿಎಲ್ ಋತುವಿನಲ್ಲಿ ಮೂಲಸೌಕರ್ಯ ಮತ್ತು ಸುರಕ್ಷ ತಾ ಕ್ರಮಗಳನ್ನು ಸಮಯಕ್ಕೆ ಸರಿಯಾಗಿ ಹೆಚ್ಚಿಸುವ ಸಾಮೂಹಿಕ ಪ್ರಯತ್ನಗಳನ್ನು ಪರಿಗಣಿಸಿ ನಾವು ಈ ನಿರ್ಧಾರ ಮಾಡಿದ್ದೇವೆ ಎಂದಿದೆ.

ಬೆಂಗಳೂರು ನಮ್ಮ ತಂಡದ ಶಕ್ತಿ: ಮೆನನ್: ರಾಯಲ್ ಚಾಲೆಂಜರ್ಸ್ ಬೆಂಗಳೂರು ಸಿಇಒ ರಾಜೇಶ್ ಮೆನನ್ ಮಾತನಾಡಿ, ಎಂ.ಚಿನ್ನಸ್ವಾಮಿ ಕ್ರೀಡಾಂಗಣವು ಕೇವಲ ನಮ್ಮ ತವರು ಮೈದಾನಕ್ಕಿಂತ ಮಿಗಿಲಾಗಿದೆ. ನಮ್ಮ ಅಭಿಮಾನಿಗಳು ಬೆಂಗಳೂರಿಗೆ ತರುವ ಶಕ್ತಿಯು ಯಾವಾಗಲೂ ನಮ್ಮ ಆಟಗಾರರಿಗೆ ಶಕ್ತಿಯಾಗಿದೆ, ಆಟದ ಪ್ರತಿಯೊಂದು ಹಂತದಲ್ಲೂ ನಮಗೆ ಬೆಂಬಲ ನೀಡಿದ್ದಾರೆ. ನಮ್ಮ ಅಭಿಮಾನಿಗಳು ಬೇಷರತ್ತಾಗಿ ನಮ್ಮೊಂದಿಗೆ ನಿಂತಿದ್ದಾರೆ. ತಮ್ಮ ತಂಡವು ತವರಲ್ಲಿ ಸ್ಪರ್ಧಿಸುವುದನ್ನು ನೋಡುವ ಅವಕಾಶಕ್ಕೆ ಅವರು ಅರ್ಹರಾಗಿದ್ದಾರೆ ಎಂದು ಹೇಳಿದರು.



ಎಲ್ಲರ ಸಹಕಾರದಿಂದಲೇ ಸಾಧ್ಯವಾಗಿದ್ದು: ವೆಂಕಿ

ಸುದ್ದಿ ಹೊರಬೀಳುತ್ತಿದ್ದಂತೆ ಮಾಧ್ಯಮದೊಂದಿಗೆ ಮಾತನಾಡಿರುವ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ನಮ್ಮ ತಂಡ ಸಾಧಿಸಿ ತೋರಿಸಿದೆ. ಕ್ರಿಕೆಟ್ ಬೆಂಗಳೂರಿಗೆ ಮರಳಿದೆ. ನಮ್ಮ ಶ್ರಮಕ್ಕೆ ಹಾಗೂ ಸರ್ಕಾರ, ಪೋಲಿಸರ ಮತ್ತು ಆರ್‌ಸಿಬಿ ಫ್ರಾಂಚೈಸಿಯ ಸಾಥ್ ಸಿಕ್ಕ ನಂತರ ಸಾಧನೆ ಮಾಡುವುದಕ್ಕೆ ಸಾಧ್ಯವಾಗಿದೆ. ಎಲ್ಲರಿಗೂ ಧನ್ಯವಾದಗಳು ಎಂದರು.

ಬೆಂಗಳೂರಲ್ಲೇ ಫೈನಲ್

ಬಿಸಿಸಿಐನಿಂದ ಏಳು ಪಂದ್ಯಗಳು ನಮಗೆ ಸಿಗಲಿವೆ. ಲೀಗ್ ಹಂತದ 5 ಪಂದ್ಯಗಳು, ಒಂದು ಪ್ಲೇಆಫ್ ಹಾಗೂ ಫೈನಲ್ ಪಂದ್ಯ ಸಿಗಲಿದೆ ಎಂದು ವೆಂಕಟೇಶ್ ಪ್ರಸಾದ್ ಮಾಧ್ಯಮಗೋಷ್ಠಿಯಲ್ಲಿ ಘೋಷಿಸಿದ್ದಾರೆ. ಆರ್‌ಸಿಬಿಯ ಎರಡು ಪಂದ್ಯಗಳು ರಾಯ್ಪುರದಲ್ಲಿ ನಡೆಯಲಿವೆ. ಆದಾಗ್ಯೂ ನಮಗೆ ಏಳು ಪಂದ್ಯಗಳು ಸಿಗಲಿವೆ. 5 ಪಂದ್ಯದ ಹೊರತಾಗಿ ಒಂದು ಪ್ಲೇಆಫ್ ಮತ್ತು ಫೈನಲ್ ಪಂದ್ಯ ಕೂಡ ನಮಗೇ ಸಿಗಲಿದೆ ಎಂದು ವೆಂಕಿ ತಿಳಿಸಿದ್ದಾರೆ.

ಜಂಟಿ ಕಾರ್ಯ

ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಮಾತನಾಡಿ, ಎಲ್ಲಾ ಭದ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ. ಇನ್ನಷ್ಟು ಬಾಕಿಯಿವೆ ಅವುಗಳನ್ನು ನಾವು ಶೀಘ್ರದಲ್ಲೇ ಮುಗಿಸಿಕೊಳ್ಳುತ್ತೇವೆ. ಬಿಸಿಸಿಐ, ಫ್ರಾಂಚೈಸಿ ಹಾಗೂ ನಾವು ಜಂಟಿಯಾಗಿ ಕೆಲಸ ಮಾಡುತ್ತಿದ್ದೇವೆ. ಕೆಲವು ದಿನಗಳಲ್ಲಿ ನಾವು ಕ್ರೀಡಾಂಗಣವನ್ನು ಆರ್‌ಸಿಬಿಗೆ ಹಸ್ತಾಂತರಿಸುತ್ತೇವೆ. ಎಲ್ಲರೂ ಸೇರಿ ಭದ್ರತೆ ಖಚಿತ ಪಡಿಸುತ್ತೇವೆ ಎಂದರು.

15ಕ್ಕೆ ಬೆಂಗಳೂರಿಗೆ ಆರ್‌ಸಿಬಿ

ಮಾರ್ಚ್ 15ಕ್ಕೆ ಆರ್‌ಸಿಬಿ ಬೆಂಗಳೂರಿಗೆ ಬರಲಿದೆ. ಮುಂದಿನ ದಿನಗಳಲ್ಲಿ ಇಲ್ಲಿ ಜೆರ್ಸಿ ಅನಾವರಣ ಕಾರ್ಯಕ್ರಮ ನಡೆಯುತ್ತದೆ. ಕ್ರೀಡಾಂಗಣ ನೋಡಿದ ನಂತರ ಆರ್‌ಸಿಬಿ ಭದ್ರತಾ ವಿಚಾರಕ್ಕೆ ಸಂಬಂಧಿಸಿದಂತೆ ಕ್ರಮಗಳನ್ನು ತೆಗೆದುಕೊಳ್ಳಲಿದೆ.

ಚುನಾವಣೆ, ಐಪಿಎಲ್ ವೇಳಾಪಟ್ಟಿ ಪ್ರಕಟಣೆಗೆ ಅಡ್ಡಿ

ತಮಿಳುನಾಡು ಹಾಗೂ ಬಂಗಾಳದಲ್ಲಿ ರಾಜ್ಯ ಚುನಾವಣೆಗಳು ನಡೆಯಲಿರುವ ನಿಟ್ಟಿನಲ್ಲಿ ಐಪಿಎಲ್ ಪಂದ್ಯಾವಳಿಗೆ ಅಡ್ಡಿಯಾಗಲಿದೆ. ಹೀಗಾಗಿಯೇ ಈವರೆಗೆ ವೇಳಾಪಟ್ಟಿ ಬಿಡುಗಡೆಯಾಗಿಲ್ಲ. ಒಟ್ಟು ಐದು ರಾಜ್ಯಗಳ ಚುನಾವಣೆ ಐಪಿಎಲ್ ವೇಳೆ ನಡೆಯಲಿವೆ. ಹೀಗಾಗಿ ಸಮಯೋಚಿತ ವೇಳಾಪಟ್ಟಿ ಸಿದ್ಧತೆಗೆ ತಡವಾಗುತ್ತಿದೆ. 48 ತಾಸಿನ ಒಳಗವೇಳಾಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಐಟಿಎಫ್ ಡಬ್ಲ್ಯು 35 ಮಹಿಳಾ ಓಪನ್ ಟೆನಿಸ್ ಟೂರ್ನಿ

ವೈಷ್ಣವಿ ಅಡ್ಕರ್‌ಗೆ ಭರ್ಜರಿ ಜಯ

▸ ರಾಚಪ್ಪಾ ಜಂಬಗಿ

ಕಲಬುರಗಿ: ಬಿಸಿಲಿನ ಶಾಖಗಳಿಗಿಂತ ಬಿರುಸಾದ ಹೊಡೆತಗಳಿಂದ ಪ್ರೇಕ್ಷಕರಲ್ಲಿ ಗೆಲುವಿನ ನಗೆ ತರುಸುವಲ್ಲಿ ಭಾರತದ 3ನೇ ಅಗ್ರ ಶ್ರೇಯಾಂಕದ ವೈಷ್ಣವಿ ಅಡ್ಕರ್ ಯಶಸ್ವಿಯಾಗಿದರು.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಐಟಿಎಫ್ ಡಬ್ಲ್ಯೂ 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನ ಸಿಂಗಲ್ಸ್ ಪಂದ್ಯದಲ್ಲಿ ಸ್ವದೇಶದ ಚೆವಿಕಾ ಸಮಾ ಅವರನ್ನು ಎದುರಿಸಿದ್ದ ಅವರು, ಅದ್ಭುತ ಪ್ರದರ್ಶನದಿಂದ ಬಿಸಿಲಿನ ಅಂಗಳದಲ್ಲಿ ಮಿಂಚಿದ ಅವರು ಗೆದ್ದು ಬೀಗಿ ಪ್ರೇಕ್ಷಕರ ಮನಗೆದ್ದರು.

ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ವೈಷ್ಣವಿ, ತಮ್ಮ ಶಕ್ತಿಶಾಲಿ ಸರ್ವ್ ಹಾಗೂ ನಿಖರ ರಿಟರ್ನ್‌ಗಳ ಮೂಲಕ ಪಂದ್ಯವನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿ ಇಟ್ಟುಕೊಂಡು, ಕೋರ್ಟ್‌ನಲ್ಲಿನ ಆತ್ಮವಿಶ್ವಾಸ ಮತ್ತು ಚುರುಕಿನ ಚಲನವಲನಗಳಿಂದ ಪ್ರೇಕ್ಷಕರ ಭಾರೀ ಚಪ್ಪಾಳೆ ಗಿಟಿಸಿಕೊಳ್ಳುವ ಮುಖೇನ ಎದುರಾಳಿಯಾದ ಭಾರತದ ಚೆವಿಕಾ ರೆಡ್ಡಿ ಸಾಮಾ ವಿರುದ್ಧ 6-0,6-3 ಅಂತರದ ಗೆಲುವು ಸಾಧಿಸಿದ ವೈಷ್ಣವಿ ಅಡ್ಕರ್, ಮೊದಲ ಸೆಟ್‌ನಲ್ಲಿ ಎದುರಾಳಿಗೆ ಒಂದೇ ಗೇಮ್‌ಗೂ ಅವಕಾಶ ನೀಡದೆ ಸಂಪೂರ್ಣ ಮೇಲುಗೈ ಸಾಧಿಸಿದರು.ಎರಡನೇ ಸೆಟ್‌ನಲ್ಲಿ ಸ್ವಲ್ಪ ಪ್ರತಿರೋಧ ಎದುರಾದರೂ ತನ್ನ ಅನುಭವ ಮತ್ತು ತಂತ್ರಜ್ಞಾನಿ ಆಟದ ಮೂಲಕ ಪಂದ್ಯವನ್ನು ಮುಕ್ತಾಯಗೊಳಿಸಿ, ವೈಷ್ಣವಿ ಟೂರ್ನಿಯಲ್ಲಿ ತನ್ನ ಬಲಿಷ್ಠ ಹಾಜರಾತಿ ದಾಖಲಿಸಿ, 16ನೇ ಸುತ್ತಿಗೆ ಪ್ರವೇಸಿಸುವ ಮೂಲಕ ಪ್ರಶಸ್ತಿಯತ್ತ ದೃಢ ಹೆಜ್ಜೆ ಇಟ್ಟಿದ್ದಾರೆ.

ಇನ್ನಷ್ಟು ಪಂದ್ಯಗಳು: ಮಂಗಳವಾರ ನಡೆದ ಹಲವು ಸಿಂಗಲ್ಸ್ ಪಂದ್ಯಗಳಲ್ಲಿ ಥೈಲ್ಯಾಂಡ್‌ನ ಅಂಚಿಸಾ ಚಾಂಟಾ ಅಲ್ಲಿಗ್ರಾ ಖಾರಫೆನ್ಸ್ ವಿರುದ್ಧ 6-2,6-0ದಿಂದ ಜಯ ಸಾಧಿಸಿದರು. ಭಾರತದ ಅಮೋಧಿನಿ ನಾಯಕ್ ವಿರುದ್ಧ ಮಾಯನ್ ಲಾರೋನ್ 6-0,6-1 ಅಂತರದಲ್ಲಿ ಗೆಲುವು ಪಡೆದರು. ಯೆಕಾತ್ರಿನಾ ಯಶೀನಾ ವಿರುದ್ಧ ಸೋಫಿಯಾ ಸಸ್ಲೋವಾ 6-4,6-7(3),6-3 ಅಂತರದಲ್ಲಿ ಗೆಲುವು ಪಡೆದಿದ್ದು, ಅದರಂತೆ ಮಿಲಾನಾ ಮಸ್ಲೆಂಕೋವಾ ಅನಸ್ಥಾಷಿಯಾ ಕೂಪ್ರೇವ್ ವಿರುದ್ಧ 6-2,7-5 ಅಂತರದಲ್ಲಿ ಗೆಲುವಿನ ನಗೆ ಬೀರಿದರು. ಇದರ ಮಧ್ಯೆ ದಿನದ ಕೊನೆಯ ಸಿಂಗಲ್ಸ್ ಪಂದ್ಯದಲ್ಲಿ ಜಪಾನಿನ ಅಗ್ರ 7ನೇ ಶ್ರೇಯಾಂಕದ ಮಿಚಿಕಾ ವೋರ್ಝೋಕಿ ವಿರುದ್ಧ ಭಾರತದ ಲಕ್ಷ್ಮೀಸಿರಿ ದಂಡು ಪ್ರಭಲ ಪೈಪೋಟಿ ನೀಡಿ ಮೊದಲ ಸೆಟ್‌ನಲ್ಲಿ ಗೆಲುವು ಸಾಧಿಸಿದರು. ನಂತರದಲ್ಲಿ 4-6,6-1,6-1ಅಂತರದಿಂದ ಗೆಲುವು ಸಾಧಿಸಲು ಸಾಧ್ಯವಾಗದೇ ನಿರಾಸೆಗೊಂಡರು.



ರಷ್ಯಾ ವಿರುದ್ಧ ನಿರಾಸೆ ಮೂಡಿಸಿದ ಲಕ್ಷ್ಮೀಪ್ರಭಾ!

ಕೋರ್ಟ್ 3ರಲ್ಲಿ ನಡೆದ ರಷ್ಯಾದ ಸೋಫಿಯಾ ಮಾರ್ಟಿಯಾನೋವಾ ವಿರುದ್ಧದ ಪಂದ್ಯದಲ್ಲಿ ಭಾರತದ ಲಕ್ಷ್ಮೀ ಪ್ರಭಾ ಅರುಣಕುಮಾರ ಪ್ರಬಲವಾಗಿ ಪೈಪೋಟಿ ನೀಡಿದ್ದರು. ಅಂತಿಮವಾಗಿ 6-4,6-2 ಅಂತರದಿಂದ ಸೋಲನುಭವಿಸಿದರು. ಸೋಮವಾರ ಮಾರಿಯಾ ಮಿಖೈಲೋವಾ ವಿರುದ್ಧ ರೋಚಕ ಟೈಬ್ರೇಕ್ ಜಯ ಸಾಧಿಸಿದ ಲಕ್ಷ್ಮೀಪ್ರಭಾ ಮಂಗಳವಾರ ಸೋಲನುಭವಿಸಿದ್ದು,ಟೆನಿಸ್ ಪ್ರೇಯರಿಗೆ ಕೊಂಚ ನಿರಾಸೆ ಮೂಡಿಸಿತು.

2 ಗಂಟೆ 50 ನಿಮಿಷ ನಡೆದ ಪಂದ್ಯ

ಚಂಪಾದ ಟೆನಿಸ್ ಪ್ರಾಂಗಣದ ಕೋರ್ಟ್ 2ರಲ್ಲಿ ನಡೆದ ಯೇಕಾತೆರಿನಾ ಯಾಷೀನಾ ಹಾಗೂ ಸೋಫಿಯಾ ಸಸ್ಲೋವಾ ನಡುವಿನ ಪಂದ್ಯ ರೋಚಕ ಹಂತಕ್ಕೆ ತಲುಪಿ ಸುಮಾರು ಎರಡು ಗಂಟೆ 50 ನಿಮಿಷಗಳ ಕಾಲ ಪಂದ್ಯ ನಡೆಯಿತು. ಟೆನಿಸ್ ದಿಗ್ಗಜರೆಂದೆ ಖ್ಯಾತಿ ಪಡೆದ ಇಬ್ಬರ ನಡುವೆ ಪ್ರಭಲ ಪೈಪೋಟಿ ನಡೆದು, ಕೊನೆಗೆ 6-4,6-7(3),6-3 ಅಂತರದಲ್ಲಿ ಸಸ್ಲೋವಾ ವಿಜಯಿಯಾದರು.

ಡಬಲ್ಸ್‌ನಲ್ಲೂ ಪೈಪೋಟಿ

ಡಬಲ್ಸ್ ವಿಭಾಗದಲ್ಲೂ ಪೈಪೋಟಿ ನೀಡಿದ ಭಾರತದ ಶ್ರೀವಲ್ಲಿ ರಶ್ಮಿಕಾ ಭಾಮಿದಿಪಾಟಿ ಮತ್ತು ನೆದರ್ಲ್ಯಾಂಡ್ಸ್‌ನ ಜಾಸ್ಮಿನ್ ಗಿಂಬ್ರೆರೆ ಜೋಡಿ 6-4, 6-4ರಿಂದ ಅಂಚಿಸಾ ಚಾಂಟಾ, ತಸಾಪೋರ್ನ್ ನಕ್ಲೋ ಜೋಡಿಯನ್ನು ಮಣಿಸಿತು. ಆಕಾಂಕ್ಷಾ ದಿಲೀಪ್ ನಿಟ್ಟೂರು-ಸೋಹಾ ಸಾದಿಕ್ ಜೋಡಿ 6-2, 5-7, ?11-9 ಅಂತರದ ತೀವ್ರ ಟೈಬ್ರೇಕ್ ಜಯ ಸಾಧಿಸಿದರು.

ಸಿಲಂಬಮ್: ಕರ್ನಾಟಕ ಪ್ರಾಬಲ್ಯ



ಬೆಂಗಳೂರು: ರಾಷ್ಟ್ರೀಯ ಸಿಲಂಬಮ್ ಶಾಲಾ ಒಕ್ಕೂಟ, ವರ್ಲ್ಡ್ ಯೂನಿಕ್ ಸ್ಪೋರ್ಟ್ಸ್ ಆನ್ಸೆಸ್ಟ್ ಯುನೈಟೆಡ್ ಮತ್ತು ಯೂತ್ ಸ್ಪೋರ್ಟ್ಸ್ ಪ್ರಮೋಷನ್ ಅಸೋಸಿಯೇಷನ್ ತಮಿಳುನಾಡು ಆಯೋಜಿಸಿದ ಯೆರ್ಕಾಡ್ ಅಂತಾರಾಷ್ಟ್ರೀಯ ಮುಕ್ತ ಸಿಲಂಬಮ್ ಸ್ಪರ್ಧೆ-2026ರಲ್ಲಿ ಬೆಂಗಳೂರಿನ ಕುಟ್ಟಮ್ಮ ಮಾರ್ಷಲ್ ಆರ್ಟ್ಸ್‌ನ ವಿದ್ಯಾರ್ಥಿಗಳು ಹಲವು ಪದಕಗಳನ್ನು ಗೆದ್ದಿದ್ದಾರೆ.

ಯಾರ್‍ಯಾರಿಗೆ ಯಾವ್ಯಾವ ಪದಕ?: ಸಿಂಗಲ್ ಸ್ಟಿಕ್ ಸ್ಪರ್ಧೆಯಲ್ಲಿ 9 ವರ್ಷ ವಯಸ್ಸಿನ ವಿಭಾಗದಲ್ಲಿ ತರುಷ್ ನಾಯ್ಕ್ ಚಿನ್ನದ ಪದಕ, ಹೆತ್ವಿಕ್ ರಜತ ಪದಕ; 10 ವರ್ಷ ವಯಸ್ಸಿನ ವಿಭಾಗದಲ್ಲಿ ಶ್ರೀಹಾನ್ ರಜತ ಪದಕ; 12 ವರ್ಷ ವಯಸ್ಸಿನ ವಿಭಾಗದಲ್ಲಿ ರಿಜುಲ್ ಚಿನ್ನದ ಪದಕ, ಭಗತ್ ರಜತ ಪದಕ; 13 ವರ್ಷ ವಯಸ್ಸಿನ ವಿಭಾಗದಲ್ಲಿ ಯೋಜಿತ್ ಚಿನ್ನದ ಪದಕ ಮತ್ತು ಆರ್ಯನ್ ರಜತ ಪದಕ ಗೆದ್ದುಕೊಂಡಿದ್ದಾರೆ. ಟಚ್ ಪಾಯಿಂಟ್ ಸ್ಪರ್ಧೆಯಲ್ಲಿ 10 ವರ್ಷ ವಯಸ್ಸಿನ ವಿಭಾಗದಲ್ಲಿ ಶ್ರೀಹಾನ್ ಚಿನ್ನದ ಪದಕ ಮತ್ತು 12 ವರ್ಷ ವಯಸ್ಸಿನ ವಿಭಾಗದಲ್ಲಿ ರಿಜುಲ್ ರಜತ ಪದಕ ಗಳಿಸಿದ್ದಾರೆ. ಡಬಲ್ ಸ್ಟಿಕ್ ಸ್ಪರ್ಧೆಯಲ್ಲಿ 10 ವರ್ಷ ವಯಸ್ಸಿನ ವಿಭಾಗದಲ್ಲಿ ಶ್ರೀಹಾನ್ ಚಿನ್ನದ ಪದಕ ಪಡೆದಿದ್ದಾರೆ.


ಶ್ರೇಯಾಂಕ: ಮೊದಲನೇ ಸ್ಥಾನಕ್ಕೆ ಸ್ಮೃತಿ ಮಂಧಾನ

ಮುಂಬೈ: ಭಾರತ ತಂಡದ ಪ್ರಮುಖ ಆಟಗಾರ್ತಿ, ಉಪನಾಯಕಿ ಸ್ಮೃತಿ ಮಂಧಾನ ಅವರು ಏಕದಿನ ಐಸಿಸಿ ಶ್ರೇಯಾಂಕದಲ್ಲಿ ತಮ್ಮ ಮೊದಲನೇ ಸ್ಥಾನಕ್ಕೆ ಮರಳಿದ್ದಾರೆ.

ಆಸ್ಟ್ರೇಲಿಯಾ ವಿರುದ್ಧ ಮುಕ್ತಾಯಗೊಂಡಿರುವ ಸರಣಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದ ಅವರು, ತಂಡದ ಪರ ಹೋರಾಟ ಮಾಡಿದ ಏಕೈಕ ಆಟಗಾರ್ತಿ ಎನಿಸಿಕೊಂಡಿದ್ದರು. ಏಕದಿನ ವಿಶ್ವಕಪ್ ಪಂದ್ಯಾವಳಿಯಲ್ಲಿ ಭರ್ಜರಿ ಪ್ರದರ್ಶನ ನೀಡಿ ಮೊದಲ ಸ್ಥಾನಕ್ಕೇರಿದ್ದ ಲೌರಾ ವಾಲ್ವಾರ್ಡ್ತ್ ಅವರನ್ನು ಮಂಧಾನ ಹಿಂದಿಕ್ಕಿದ್ದಾರೆ. 790 ಅಂಕಗಳನ್ನು ಹೊಂದಿರುವ ಮಂಧಾನ ಮತ್ತೊಮ್ಮೆ ತಮ್ಮ ಸಾಮರ್ಥ್ಯ ಪ್ರದರ್ಶಿಸುವಲ್ಲಿ ಸಫಲರಾಗಿದ್ದಾರೆ. ನಾಲ್ಕನೇ ಸ್ಥಾನದೊಂದಿಗೆ ನಿವೃತ್ತರಾದ ಅಲ್ಸಾ ಹೀಲೀ ತಮ್ಮ ಸ್ಥಾನ ಬಿಟ್ಟುಕೊಟ್ಟಿರುವ ನಂತರ, ಗಾರ್ಡನರ್ ಮತ್ತು ಮೂನಿ ಕೂಡ ಟಾಪ್ ಐದರಲ್ಲಿ ಕಾಣಿಸಿಕೊಂಡಿರುವ ಆಸ್ಟ್ರೇಲಿಯಾ ಆಟಗಾರ್ತಿಯರಾಗಿದ್ದಾರೆ. ಭಾರತದ ನಾಯಕಿ ಹರ್ಮನ್ ಪ್ರೀತ್ ಕೌರ್ 9ನೇ ಸ್ಥಾನದಲ್ಲಿ ಕಾಣಿಸಿಕೊಂಡರೆ, ರಾಡ್ರಿಗ್ಸ್ 12ನೇ ಸ್ಥಾನದಲ್ಲಿದ್ದಾರೆ.

ಪ ದ ಬಂ ಧ

▸▸ ರಾಜಾ ಸಂಗಮೇಶ ಹಿರೇಮಠ



5913

ಎಡದಿಂದ ಬಲಕ್ಕೆ
2.ತಂದೆಯನ್ನು ಪ್ರೀತಿಯಿಂದ ಹೀಗೂ ಕರೆಯುತ್ತೇವೆ (3)
4.ಪಕ್ಷದ ಹತ್ತನೆಯ ದಿವಸ (3)
5.ಒದಗಿ ಬಂದ ತೊಂದರೆ (3)
6.ಮಂದಿರ-ಮಠದರ ಮೇಲಿನ ಕಳಸ (5)
8.ಇದು ಮುರಿಯದ್ದು-ಮುಕ್ಕಾಗದ್ದು (3)
9.ಆ ವನಿತಳು ಇರುವ ಭೂಮಿ (3)
10.ಪಟ್ಟಣದಲ್ಲಿ ನೆಲೆಸಿರುವ ವ್ಯಕ್ತಿ (5)
13.ಪಡೆದ ಕಡ ಹಿಂದಿರುಗಿಸದ ಚಾಲಾಕಿ (3)
15.ಕೆಲಸ ಮಾಡಿದ ನಂತರದ ಬಳಲಿಕೆ (3)
16.ಕನ್ನ ಕೊರೆದು ಕದ್ದ ಚಿನ್ನ (3)

ಮೇಲಿನಿಂದ ಕೆಳಕ್ಕೆ
1. ಮುಂದೆ ಆಗಬಹುದಾದದ್ದು ತಲೆಕೆಳಗಾಗಿದೆ (3)
2.ಭಾಗ್ಯಶಾಲಿಯನ್ನು ಹೀಗೂ ಕರೆಯಬಹುದು (5)
3.ನೀರು ನಿಧಾನವಾಗಿ ಒಸರುವಿಕೆ (3)
4.ತಿರುಪತಿಯ ಒಡೆಯ ತಲೆಕೆಳಗಾಗಿದ್ದಾನೆ (3)
7.ರಜೆಯಾದರೂ ಬೇಗ ಕತ್ತಲಾಯಿತು (3)
8.ಅಭಿಮನ್ಯುವಿನ ಪಿತ (3)
9.ಒಡೆಯನನ್ನು ಕಾಪಾಡುವವನು-ಅಂಗರಕ್ಷಕ (5)
11.ವೇಗ-ಜೋರು ಎಂಬರ್ಥ ಕೊಡುವ ಶಬ್ದ (3)
12.ಕಡುಕೋಪಿಷ್ಟನನ್ನು ಹೀಗೂ ಕರೆಯುತ್ತೇವೆ (3)
14.ಇದು ಚಿಕ್ಕ ಎತ್ತಿನ ಗಾಡಿ (3)

5912 ಉತ್ತರ

ಎಡದಿಂದ ಬಲಕ್ಕೆ:
1.ನಿಸ್ಸೀಮ 3.ಕನಿಕರ
5.ಪಡುವಣ 6.ಗಿಡಮಂಗ
8.ನವನಿಧಿ 11.ಕಸರತ್ತು
14.ದನಗಾಹಿ
15.ಪಾರಿಜಾತ 16.ಗತಕಾಲ
17.ಮಗ್ಗುಲು

ಮೇಲಿನಿಂದ ಕೆಳಕ್ಕೆ :
1.ನಿದರ್ಶನ 2.ನಿರುಪಮ
3.ಕಣಗಿಲೆ 4.ಗಗ್ಗರ
7.ಮಂದಹಾಸ 9.ವರಮಾನ
10.ಮಹಿಪಾಲ
12.ಮತದಾರ
13.ಕಳ್ಳಮಾಲು
14.ದರೋಗ

ಕಿರುಸುದ್ದಿ

ಪಡುಪಣಂಬೂರು: ಬಸ್ ಡಿಕ್ಕಿಯಾಗಿ ಅಪ್ರಾಪ್ತ ವಯಸ್ಕ ಬಾಲಕ ಸಾವು

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಪಡುಪಣಂಬೂರು ಗ್ರ್ಯಾನೈಟ್ ಅಂಗಡಿ ಬಳಿ ಹೆದ್ದಾರಿ ದಾಟುತ್ತಿದ್ದ ಅಪ್ರಾಪ್ತ ಬಾಲಕನೊಬ್ಬ ಬಸ್ ಡಿಕ್ಕಿ ಹೊಡೆದು ಮೃತಪಟ್ಟಿದ್ದಾನೆ. ಮೃತ ಬಾಲಕನನ್ನು ಬಿಹಾರ ಮೂಲಕ ರವಿಕುಮಾರ್ (16) ಎಂದು ಗುರುತಿಸಲಾಗಿದೆ. ರವಿಕುಮಾರ್‌ನ ತಂದೆ ಗ್ರ್ಯಾನೈಟ್ ಅಂಗಡಿಯಲ್ಲಿ ವಾಚ್ ಮ್ಯಾನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು ಸೋಮವಾರ ರಾತ್ರಿ 10.15ಕ್ಕೆ ಈತ ಅಂಗಡಿಗೆ ಹೋಗಿ ವಾಪಸ್ ಮನೆ ಕಡೆ ಹೋಗಲು ರಾಷ್ಟ್ರೀಯ ಹೆದ್ದಾರಿ ದಾಟುತ್ತಿದ್ದ ವೇಳೆ ಬೈಂದೂರು ಕಡೆಯಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಬಸ್ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಈತನಿಗೆ ಗಂಭೀರ ಗಾಯಗಳಾಗಿದ್ದು ಸ್ಥಳದಲ್ಲಿ ಮೃತಪಟ್ಟಿದ್ದಾನೆ. ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದು ಬಸ್ ಚಾಲಕ ನಾಗರಾಜ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ತೊಕ್ಕೊಟ್ಟಿನಲ್ಲಿ ರೈಲು ಡಿಕ್ಕಿ ಹೊಡೆದು ವ್ಯಕ್ತಿ ಸಾವು

ಉಳ್ಳಾಲ: ರೈಲು ಡಿಕ್ಕಿ ಹೊಡೆದು ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ತೊಕ್ಕೊಟ್ಟು ಓವರ್ ಬ್ರಿಡ್ಜ್ ಬಳಿ ಮಂಗಳವಾರ ಸಂಜೆ ನಡೆದಿದೆ. ಮೃತ ಪಟ್ಟ ವ್ಯಕ್ತಿಯನ್ನು ಕುಂಪಲ ಲಕ್ಷ್ಮೀ ಗುಡ್ಡೆ ನಿವಾಸಿ ಕಿರಣ (47) ಎಂದು ಗುರುತಿಸಲಾಗಿದೆ. ಕಿರಣ ಅವರು ರೈಲು ಹಳಿ ಬಳಿ ಕುಳಿತಿದ್ದ ವೇಳೆ ರೈಲು ಡಿಕ್ಕಿಯಾಗಿ ಈ ದುರ್ಘಟನೆ ಸಂಭವಿಸಿದೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ರೈಲ್ವೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಈ ವೇಳೆ ಮೃತ ವ್ಯಕ್ತಿಯ ಕಿಸೆಯಲ್ಲಿ ಮೊಬೈಲ್ ಪತ್ತೆ ಆಗಿದೆ. ಮೊಬೈಲ್ ಆಧಾರದಲ್ಲಿ ಮೃತರ ಗುರುತು ಪತ್ತೆ ಹಚ್ಚಿದ ಪೊಲೀಸರು ಕುಟುಂಬಸ್ಥರಿಗೆ ಮಾಹಿತಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮನೆಗೆ ನುಗ್ಗಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ದೋಚಿ ಪರಾರಿ

ಬಂಟ್ವಾಳ: ಕಾವಳಮೂಡೂರು ಗ್ರಾಮದಲ್ಲಿ ಮನೆಮಂದಿ ಬೆಂಗಳೂರಿಗೆ ತೆರಳಿದ್ದಾಗ, ಮನೆಗೆ ನುಗ್ಗಿದ ಕಳ್ಳರು ಲಕ್ಷಾಂತರ ರೂ ಮೌಲ್ಯದ ಚಿನ್ನಾಭರಣ ಹಾಗೂ ನಗದನ್ನು ದೋಚಿ ಪರಾರಿಯಾಗಿದ್ದಾರೆ. ಇಲ್ಲಿನ ನಿವಾಸಿ ಇಬ್ರಾಹಿಂ ಖಲೀಲ್ (50) ಎಂಬವರ ಮನೆಯಲ್ಲಿ ಈ ಕಳವು ಕೃತ್ಯ ನಡೆದಿದೆ. ಇಬ್ರಾಹಿಂ ಅವರು ಫೆ. 24ರಂದು ಬೆಳಗ್ಗೆ ಮಗಳ ಮನೆಗೆಂದು ಬೆಂಗಳೂರಿಗೆ ತೆರಳಿದ್ದರು. ಈ ವೇಳೆ ಬೆ ಸುಮಾರು 10 ಪವನ ಚಿನ್ನದ ಹಾರ ಮತ್ತು ಸುಮಾರು 5 ಮಕ್ಕಳು ಪವನ್ ತೂಕದ ಚಿನ್ನದ ನೆಕ್ಲೇಸ್‌ಗಳನ್ನು ಮನೆಯ ಬೆಡ್ ರೂಮಿನಲ್ಲಿರುವ ಕಪಾಟಿನಲ್ಲಿಟ್ಟಿದ್ದರೆ, ಇನ್ನೊಂದು ಬೆಡ್ ರೂಮಿನ ಕಪಾಟಿನಲ್ಲಿ ಪತ್ನಿಯ ಹ್ಯಾಂಡ್‌ಬ್ಯಾಗಿನಲ್ಲಿ 60 ಸಾವಿರ ರೂ.ನಗದು ಹಣವನ್ನು ಇರಿಸಿ ಮನೆಗೆ ಬೀಗ ಹಾಕಿ ಹೋಗಿದ್ದರು. ಫೆ. 28ರಂದು ಬೆಳಗ್ಗೆ 11 ಗಂಟೆಗೆ ಕಾವಳಕಟ್ಟೆ ಅಂಚೆ ಕಚೇರಿಯ ಪೋಸ್ಟ್ ಮ್ಯಾನ್ ಆನಂದ ಅವರು ಮನೆಗೆ ಪತ್ರ ನೀಡಲು ಬಂದಾಗ ಮನೆಯ ಬಾಗಿಲು ಸ್ವಲ್ಪ ತೆರೆದಿದ್ದರಿಂದ ಇಬ್ರಾಹಿಂ ಅವರಿಗೆ ಕರೆ ಮಾಡಿ ವಿಚಾರ ತಿಳಿಸಿದ್ದಾರೆ. ತಕ್ಷಣ ಇಬ್ರಾಹಿಂ ಅವರ ಸೂಚನೆಯ ಮೇರೆಗೆ ಪಕ್ಕದ ಮನೆಯವರು ಆಗಮಿಸಿ ಪರಿಶೀಲಿಸಿದಾಗ ಮನೆಯ ಮುಂಬಾಗಿಲ ಸೆಂಟರ್ ಲಾಕ್ ಮುರಿದಿದ್ದು ಪತ್ತೆಯಾಗಿದೆ. ಇಬ್ರಾಹಿಂ ಅವರು ಸಂಜೆ ಮನೆಗೆ ಬಂದು ನೋಡಿದಾಗ ಚಿನ್ನದ ಒಡವೆಗಳು ಮತ್ತು ನಗದು ಕಳವಾಗಿರುವುದು ಬೆಳಕಿಗೆ ಬಂದಿದೆ. ಕಳವಾದ ಚಿನ್ನಾಭರಣದ ಮೌಲ್ಯ 11 ಲಕ್ಷ ರೂ. ಎಂದು ಅಂದಾಜಿಸಲಾಗಿದೆ ಹಾಗೂ 60 ಸಾವಿರ ರೂ. ಹಣ ಕಳವುಗೈಯಲಾಗಿದೆ. ಈ ಬಗ್ಗೆ ಇಬ್ರಾಹಿಂ ಅವರು ನೀಡಿದ ದೂರಿನಂತೆ ಪುಂಜಾಲಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ನಡೆಯುತ್ತಿದೆ.

ಕಾರು ಡಿಕ್ಕಿಯಾಗಿ ಗಾಯಗೊಂಡಿದ್ದ ವ್ಯಕ್ತಿ ಮೃತ್ಯು

ಬಂಟ್ವಾಳ: ಕಾರು ಡಿಕ್ಕಿಯಾಗಿ ಗಂಭೀರ ಸ್ವರೂಪದ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಸ್ಕೂಟರ್ ಸವಾರರೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಮಂಗಳೂರು ಖಾಸಗಿ ಆಸ್ಪತ್ರೆಯೊಂದರಲ್ಲಿ ಮಂಗಳವಾರ ಮೃತಪಟ್ಟಿದ್ದಾರೆ. ಮಂಗಳೂರು ತಾಲೂಕಿನ ಅಡ್ಯಾರು ನಿವಾಸಿ ಜಯರಾಮ (65) ಮೃತಪಟ್ಟವರೆಂದು ಗುರುತಿಸಲಾಗಿದೆ. ಎರಡು ದಿನಗಳ ಹಿಂದೆ ಬಂಟ್ವಾಳಕ್ಕೆ ಸಮೀಪದ ಬಡಗುಂಡಿ ಎಂಬಲ್ಲಿ ಧರ್ಮಸ್ಥಳ ಕಡೆಯಿಂದ ಬರುತ್ತಿದ್ದ ಕಾರೊಂದು ಓವರ್ ಟೇಕ್ ಮಾಡುವ ಭರದಲ್ಲಿ ಸ್ಕೂಟರ್ ಸವಾರನಿಗೆ ಡಿಕ್ಕಿಯಾಗಿತ್ತೆನ್ನಲಾಗಿದೆ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡ ಸ್ಕೂಟರ್ ಸವಾರನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇದೀಗ ಅವರು ಚಿಕಿತ್ಸೆ ಸ್ಪಂದಿಸದೆ ಕೊನೆಯುಸಿರೆಳೆದಿದ್ದಾರೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಬಂಟ್ವಾಳ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಲವೆಡೆ 150 ಮೀಟರ್‌ಗಿಂತ ಕೆಳಮಟ್ಟದಲ್ಲಿ ಹಾರಟ | ಆತಂಕ ಬೇಡ, ಇದು ಸರ್ವೇ ಎಂದ ಇಲಾಖೆಗಳು

ಅಲ್ಲಲ್ಲಿ ಭಯ ಹುಟ್ಟಿಸಿದ ಮಿನಿ ವಿಮಾನ!



ಪುತ್ತೂರು: ಒಂದೆಡೆ ಅಮೆರಿಕಾ-ಇಸ್ರೇಲ್ ನೊಂದಿಗೆ ಇರಾನ್, ಇನ್ನೊಂದೆಡೆ ಅಫ್ಘಾನಿಸ್ಥಾನ-ಪಾಕಿಸ್ಥಾನ ನಡುವಣ ನಡೆಯುತ್ತಿರುವ ಭೀಕರ ಯುದ್ಧದ ಸನ್ನಿವೇಶಗಳನ್ನು ವೀಕ್ಷಿಸುತ್ತಿದ್ದ ಪುತ್ತೂರಿನ ಮಂದಿಗೆ ಇದ್ದಕ್ಕಿದ್ದಂತೆಯೇ ತಮ್ಮ ತಲೆ ಮೇಲೆಯೇ ವಿಮಾನ ಹಾರಾಡುವುದನ್ನು ಕಂಡು ಹೌಹಾರಿದ ಘಟನೆ ಮಂಗಳವಾರ ನಡೆದಿದೆ.

ಇರಾನ್, ಗಲ್ಫ್ ರಾಷ್ಟ್ರಗಳು, ಅಫ್ಘಾನಿಸ್ಥಾನ, ಪಾಕಿಸ್ಥಾನ ಮತ್ತಿತರ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಇಂಟರ್‌ಸೆಪ್ಟರ್ ಕ್ಷಿಪಣಿಗಳ, ಡ್ರೋನ್‌ಗಳ ದಾಳಿಗಳನ್ನು ಟಿವಿ., ಸಾಮಾಜಿಕ ಜಾಲತಾಣಗಳಲ್ಲಿ, ಟಿ.ವಿ.ಗಳಲ್ಲಿ ವೀಕ್ಷಿಸುತ್ತಿದ್ದ ಪುತ್ತೂರಿನ ಮಂದಿ ಮಂಗಳವಾರ ನಗರ ಪ್ರದೇಶದಲ್ಲಿ ಅತ್ಯಂತ ಕೆಳ ಮಟ್ಟದಲ್ಲಿ ವಿಮಾನ ಹಾರಾಡುವುದನ್ನು ಕಂಡು ಒಂದು ಬಾರಿ ದಂಗಾಗಿ ಹೋದರು. ಇದರಿಂದ ಆತಂಕಗೊಂಡ ಮಂದಿ ಇದ್ದ ಬದ್ದವರಿಗೆಲ್ಲಾ ಫೋನಾಯಿಸಲು ಆರಂಭಿಸಿದರು. ಪರಸ್ಪರ ಚರ್ಚೆ ಶುರುವಾಯಿತು. ಮನೆಯಲ್ಲಿದ್ದವರು ವಿಮಾನ ನೋಡಲು ಹೊರಗಡೆ ಓಡಿ ಬಂದರು. ಎಲ್ಲಾ ಗಲಿಬಿಲಿ...!

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ವಠಾರದ ಗದ್ದೆ ಮೇಲ್ಭಾಗದಲ್ಲಿ ಮಾತ್ರವಲ್ಲದೆ ನಗರದ ವಿವಿಧ ಭಾಗದಲ್ಲಿ ನೆಲ ಮಟ್ಟಕ್ಕೆ ಅತೀ ಸಮೀಪದಲ್ಲಿ ವಿಮಾನ ಹಾರಾಡುತ್ತಿದ್ದ ದೃಶ್ಯವನ್ನು ಕಂಡು ಜನ ಒಂದು ಬಾರಿ ದಂಗಾಗಿ ಹೋದರು. ತಮ್ಮ ಮೊಬೈಲ್‌ಗಳಲ್ಲಿ ವೀಡಿಯೋ ಸೆರೆ ಹಿಡಿದರು. ಇದೇ ರೀತಿ ವಿಮಾನ ಸುಮಾರು 10ರಿಂದ 15 ಸುತ್ತು ಹಾರಾಟ ನಡೆಸಿತು. ವಿಮಾನ ಕೆಳ ಭಾಗದಲ್ಲಿ ಹಾರಾಟ ಮಾಡುತ್ತಿರುವ ವಿಚಾರವನ್ನು ಪೊಲೀಸರಿಗೆ, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ತಲುಪಿಸಲಾಯಿತು. ಎಲ್ಲೆಡೆಯೂ ವಿಮಾನ ಹಾರಾಟದ್ದೇ ಸುದ್ದಿ. ಕೊನೆಗೂ ಅಧಿಕಾರಿಗಳಿಂದ, ಪೊಲೀಸರಿಂದ ಈ ಕುರಿತು ಸ್ಪಷ್ಟೀಕರಣ ಹೊರ ಬಿತ್ತು. ಕೆಲ ಕಾಲ ಆತಂಕ ಮೂಡಿದ ವಿಮಾನ ಇದು ಭೂ ವಿಜ್ಞಾನಕ್ಕೆ ಸಂಬಂಧಿಸಿದ ಸರ್ವೇ ಕಾರ್ಯ ಎಂದು ತಿಳಿದು ಜನರು ನಿಟ್ಟುಸಿರು ಬಿಡುವಂತಾಯಿತು.

ವಿಮಾನ ಹಾರಾಟ ನಡೆಸಲಿರುವ ಕುರಿತು ಮುಂಚಿತವಾಗಿ ಮಾಹಿತಿ ನೀಡದೇ ಇದ್ದುದು ಇಷ್ಟೆಲ್ಲಾ ಗೊಂದಲಕ್ಕೆ ಕಾರಣವಾಯಿತು. ಕೊನೆಗೂ ಇದು ಭೂಮಿಯ ರಚನೆ, ಅಧ್ಯಯನಕ್ಕೆ ಸಂಬಂಧಿಸಿದಂತೆ ನಡೆದ ಸರ್ವೆಯಾಗಿದೆ ಎಂಬ ಮಾಹಿತಿ ಲಭಿಸಿತು. ಈ ವಿಮಾನ ಭೂ ಭೌತಿಕ ಸಮೀಕ್ಷೆಯು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ನಡೆದಿದ್ದು, ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಾರಾಟ ನಡೆಸಿತ್ತು.

ಇದು ಖನಿಜ ಸಂಪತ್ತು, ಭೂಗರ್ಭ ಜಲ ಸಂಪನ್ಮೂಲ, ಚುಂಬಕ ಕ್ಷೇತ್ರದ ಬದಲಾವಣೆಗಳು ಬಗ್ಗೆ ಮಾಹಿತಿ ಸಂಗ್ರಹಿಸಲಿದೆ. ಇದನ್ನು ಕ್ಯಾಲಿಬರ್ ಏರ್ ರ್ಬೋನ್ ಜಿಯೋ ಫಿಸಿಕ್ಸ್ ಭೂಮಿಯ ಅಡಿ ಭಾಗವನ್ನು ಗಾಳಿಯಿಂದ ಮ್ಯಾಪಿಂಗ್ ಮಾಡುವ ಕಂಪೆನಿಗೆ ಸೇರಿದ ವಿಮಾನವಾಗಿದೆ ಎಂದು ಮಾಹಿತಿ ಲಭ್ಯವಾಯಿತು.





ಉಡುಪಿಯ ಆಕಾಶದಲ್ಲಿ ಲೋಹ ಶೋಧಕ ವಿಮಾನದ ಹಾರಾಟ

ಉಡುಪಿ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಹಾಗೂ ಇತ್ತೀಚಿನ ವಿಮಾನ ದುರಂತ ಪ್ರಕರಣಗಳು ನಡೆಯುತ್ತಿರುವ ಬೆನ್ನಲ್ಲೇ ಉಡುಪಿ, ಮಲ್ಪೆ, ಕಟಪಾಡಿ ಭಾಗದಲ್ಲಿ ಪ್ರತಿನಿತ್ಯ 150 ಮೀಟರ್‌ಗಿಂತ ಕೆಳಮಟ್ಟದಲ್ಲಿ ವಿಮಾನ ಸಂಚರಿಸುತ್ತಿದೆ. ಇದರಿಂದ ಜನ ಸಾಮಾನ್ಯರು ಆತಂಕಕ್ಕೊಳಗಾಗಿದ್ದಾರೆ. ವಾಸ್ತವವಾಗಿ ಇದು ಯಾವುದೇ ತುರ್ತು ಪರಿಸ್ಥಿತಿಯ ಸಂಕೇತವಲ್ಲ. ಇದು ಕರಾವಳಿ ತೀರದ ಭೂಮಿಯ ಅಂತರಾಳದಲ್ಲಿ ಅಡಗಿರುವ ಅಮೂಲ್ಯವಾದ ಅಪರೂಪದ ಖನಿಜಗಳನ್ನು ('ರೇರ್ ಅರ್ಥ್ ಮಿನರಲ್') ಪತ್ತೆ ಹಚ್ಚುವ ವೈಜ್ಞಾನಿಕ ಸಮೀಕ್ಷೆಯಾಗಿದೆ. ಕೇಂದ್ರ ಸರ್ಕಾರದ ಗಣಿ ಇಲಾಖೆಯ ನಿರ್ದೇಶನದಂತೆ ಈ ಬೃಹತ್ ಜವಾಬ್ದಾರಿಯನ್ನು ಸೆಸ್ನಾ ಏರ್ ಕ್ರಾಫ್ಟ್ 'ಹಿಮಾಲಯನ್ ಹೆಲಿ ಸರ್ವಿಸಸ್' ಎಂಬ ಖಾಸಗಿ ಸಂಸ್ಥೆಯು ವಹಿಸಿಕೊಂಡಿದೆ. ಈ ವಿಮಾನವು ಸುಧಾರಿತ ಸಂವೇದಕಗಳ ಮೂಲಕ ಭೂಮಿಯ ಮೇಲ್ಮೈ ಅಡಿಯಲ್ಲಿರುವ ಲೋಹಗಳ ಸಾಂದ್ರತೆ ಹಾಗೂ ಖನಿಜ ನಿಕ್ಷೇಪಗಳ ಬಗ್ಗೆ ಅಂಕಿ-ಅಂಶಗಳನ್ನು ಸಂಗ್ರಹಿಸುತ್ತಿದೆ. ಮಾರ್ಚ್ ಅಂತ್ಯದವರೆಗೂ ಜಿಲ್ಲೆಯ ವಿವಿಧ ಭಾಗಗಳಲ್ಲಿ ಮುಂದುವರಿಯಲಿದ್ದು, ಜಿಲ್ಲಾಡಳಿತದ ಅನುಮತಿಯೊಂದಿಗೆ ಈ ಕಾರ್ಯಾಚರಣೆ ನಡೆಯುತ್ತಿದೆ. ಕರಾವಳಿ ತೀರದ ಮರಳಿನಲ್ಲಿ ಮತ್ತು ಭೂಮಿಯ ಆಳದಲ್ಲಿ ತಾಂತ್ರಿಕವಾಗಿ ಅತ್ಯಂತ ಪ್ರಮುಖವಾದ ಖನಿಜಗಳು ದೊರೆಯುವ ಸಾಧ್ಯತೆಗಳಿದ್ದು, ಅವುಗಳ ನಿಖರ ಸ್ಥಾನ ಗುರುತಿಸಲು ಈ ಹಾರಾಟ ನಡೆಸಲಾಗುತ್ತಿದೆ. ವಿಮಾನವು ಕೆಲವೊಮ್ಮೆ ತೀರಾ ಕೆಳಮಟ್ಟದಲ್ಲಿ ಹಾರಾಡುವುದರಿಂದ ಜನರು ಆತಂಕಪಡುವ ಅಗತ್ಯವಿಲ್ಲ ಎಂದು ಸಂಬಂಧಪಟ್ಟ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ರಾಷ್ಟ್ರೀಯ ಸಂಪತ್ತಿನ ಶೋಧದ ಭಾಗವಾಗಿ ನಡೆಯುತ್ತಿರುವ ಈ ಪ್ರಕ್ರಿಯೆಗೆ ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.





> ಇದು ಮಂಗಳೂರು ವಿಮಾನ ನಿಲ್ದಾಣದಿಂದ ವಿಮಾನ ನಿರ್ವಹಿಸಲಾಗುತ್ತಿದೆ. ಜನವರಿಯಿಂದ ಕರಾವಳಿ ತೀರದಲ್ಲಿ ಈ ಸಮೀಕ್ಷೆ ನಡೆಸಲು ಅನುಮತಿ ನೀಡಲಾಗಿದೆ. ಇದು ಸಾಮಾನ್ಯ ಪ್ರಕ್ರಿಯೆಯಾಗಿದ್ದು ಜನರು ಆತಂಕಪಡಬೇಕಿಲ್ಲ.
> ■ **ಜೈದೀಪ್ ಶೆಟ್ಟಿ**, ಏರ್‌ಪೋರ್ಟ್ ಅಧಿಕಾರಿ, ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ವಿಮಾನದ ವಿಶೇಷ

ಈ ವಿಮಾನ ಸಾಮಾನ್ಯವಾಗಿ ಭೂಮಿಯಿಂದ ಸುಮಾರು 60 ರಿಂದ 150 ಮೀಟರ್ ಎತ್ತರದಲ್ಲಿ ಹಾರುತ್ತವೆ. ಗಂಟೆಗೆ ಸುಮಾರು 150 ರಿಂದ 200 ಕಿಲೋಮೀಟರ್ ನಿಧಾನಗತಿಯ ವೇಗದಲ್ಲಿ ಸಂಚರಿಸುತ್ತಿದೆ.

ಕಾಸರಗೋಡು ನೂತನ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧಿಕಾರ ಸ್ವೀಕಾರ

ಕಾಸರಗೋಡು: ಕಾಸರಗೋಡಿನ ನೂತನ ಜಿಲ್ಲಾಧಿಕಾರಿಯಾಗಿ ಅರ್ಜುನ್ ಪಾಂಡ್ಯನ್ ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ಮಂಗಳವಾರ ಬೆಳಗ್ಗೆ ವಿದ್ಯಾನಗರ ಸಿವಿಲ್ ಸ್ಟೇಷನ್‌ನ ಕಲೆಕ್ಟರೇಟ್‌ಗೆ ಆಗಮಿಸಿ ಇದುವರೆಗೆ ಜಿಲ್ಲಾಧಿಕಾರಿಯಾಗಿದ್ದ ಕೆ.ಇನ್ಬಶೇಖರ್ ಅವರಿಂದ ಅಧಿಕಾರ ಸ್ವೀಕರಿಸಿದರು. ಅರ್ಜುನ್ ಪಾಂಡ್ಯನ್ ಅವರು ಇಲ್ಲಿಯತನಕ ತೃಶೂರು ಜಿಲ್ಲಾಧಿಕಾರಿಯಾಗಿದ್ದರು. ಅವರು ಮುಖ್ಯ ಕಾರ್ಯದರ್ಶಿಗಳ ಸಿಬ್ಬಂದಿ ಅಧಿಕಾರಿ ಮತ್ತು ಕಾರ್ಮಿಕ ಆಯುಕ್ತ ಹುದ್ದೆಗಳನ್ನು ಅಲಂಕರಿಸಿದ್ದರು. 2017ರ ಬ್ಯಾಚ್ ಕೇರಳ ಕೇಡರ್ ಐಎಎಸ್ ಅಧಿಕಾರಿಯಾಗಿರುವ ಅರ್ಜುನ್ ಪಾಂಡ್ಯನ್ ಅವರು ಕಾಸರಗೋಡಿನ 25ನೇ ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಐಸಿಡಿಎಸ್ ಅತ್ಯುತ್ತಮ ಜಿಲ್ಲಾಧಿಕಾರಿ ಪ್ರಶಸ್ತಿ ಮತ್ತು ಕಂದಾಯ ಇಲಾಖೆಯಲ್ಲಿ ರಾಜ್ಯದ ಅತ್ಯುತ್ತಮ ಜಿಲ್ಲಾಧಿಕಾರಿ ಪ್ರಶಸ್ತಿಯನ್ನು ಗಳಿಸಿದ್ದರು. ತೃಶೂರು ಜಿಲ್ಲೆಯಲ್ಲಿ ಒಂದೂವರೆ ವರ್ಷಕ್ಕೂ ಹೆಚ್ಚು ಕಾಲ ಅತ್ಯುತ್ತಮ ಸೇವೆ ಸಲ್ಲಿಸಿದ ನಂತರ ಅವರು ಅಭಿವೃದ್ಧಿಯ ಹೊಸ ಮಾದರಿಗಳನ್ನು ಕಾಸರಗೋಡು ಜಿಲ್ಲೆಯಲ್ಲಿ ಜಾರಿಗೊಳಿಸುವ ಆಶಯ ಹೊಂದಿದ್ದಾರೆ.

ಕೊಲ್ಲಂನ ಟಿಕೆಎಂ ಇಂಜಿನಿಯರಿಂಗ್ ಕಾಲೇಜಿನಿಂದ ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಬಿ.ಟೆಕ್ ಪದವಿ ಪಡೆದ ಅವರು, ಇಡುಕ್ಕಿಯ ಎಳಪ್ಪಾರ ಮೂಲದವರು. ಪಾಂಡ್ಯನ್ ಮತ್ತು ಉಷಾಕುಮಾರಿ ದಂಪತಿಯ ಪುತ್ರನಾದ ಅವರು ಪತ್ನಿ ಡಾ.ಅನು ಅವರನ್ನು ಹೊಂದಿದ್ದಾರೆ.



ಹೆಚ್ಚಿನ ನಿರೀಕ್ಷೆಗಳೊಂದಿಗೆ ಅಧಿಕಾರ ಸ್ವೀಕಾರ

ಕಾಸರಗೋಡು ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳುತ್ತಿರುವುದು ಬಹಳ ಸಂತೋಷ ಮತ್ತು ಹೆಚ್ಚಿನ ನಿರೀಕ್ಷೆಗಳೊಂದಿಗೆ ಆಗಿದೆ ಎಂದು ನೂತನ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಹೇಳಿದ್ದಾರೆ. ಕಾಸರಗೋಡು ಸಾಕಷ್ಟು ಸಾಮರ್ಥ್ಯವಿರುವ ಜಿಲ್ಲೆಯಾಗಿದ್ದು, ಚುನಾವಣೆಯನ್ನು ಉತ್ತಮ ರೀತಿಯಲ್ಲಿ ನಡೆಸಲು ಪ್ರಯತ್ನಿಸಲಾಗುವುದು ಎಂದರು.

ಸರಳತೆ, ಪರೋಪಕಾರಗಳಿಂದ ಜನಾದರಣೀಯರು ಬಿಜೆಪಿ ಜಿಲ್ಲಾ ವಕ್ತಾರ ಸತೀಶ್ ಪ್ರಭು ಇನ್ನಿಲ್ಲ

ಮಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಸ್ವಯಂಸೇವಕ, ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ವಕ್ತಾರ ಸತೀಶ್ ಎಂ.ಪ್ರಭು (60) ಅವರು ಮಾ.3ರಂದು ನಿಧನ ಹೊಂದಿದರು.

ನಗರದ ರಥಬೀದಿ ಬಳಿಯ ನಿವಾಸಿಯಾಗಿದ್ದ ಅವರು ಬಾಲ್ಯದಿಂದಲೇ ಆರ್‌ಎಸ್‌ಎಸ್ ಸ್ವಯಂಸೇವಕರಾಗಿದ್ದರು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಪ್ರಮುಖರಾಗಿ ಸಮಾಜಿಕ ಕಾರ್ಯ ಕೈಗೊಂಡಿದ್ದರು. 25 ವರ್ಷಗಳ ಕಾಲ ಸಂಘನಿಕೇತನ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದು, ಪ್ರಸ್ತುತ ಉಪಾಧ್ಯಕ್ಷರಾಗಿದ್ದಾರೆ.

ಬಿಜೆಪಿಯ ಜಿಲ್ಲಾ ವಕ್ತಾರ, ರಥಬೀದಿ ಶ್ರೀ ವೆಂಕಟರಮಣ ದೇವಸ್ಥಾನದ ಮೊಕ್ತೇಸರ, ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲದ ಮಾಜಿ ಅಧ್ಯಕ್ಷ, ಸಂಘನಿಕೇತನ ಸಾರ್ವಜನಿಕ ಗಣೇಶೋತ್ಸವ ಸಮಿತಿಯ ಉಪಾಧ್ಯಕ್ಷ, ಬಿಜೆಪಿ ಯುವ ಮೋರ್ಚಾ ಪದಾಧಿಕಾರಿ ಹಾಗೂ ಹತ್ತು ಹಲವು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿ ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದರು. ಬಿ.ಕಾಂ., ಎಲ್‌ಎಲ್‌ಬಿ ಪದವೀಧರರಾಗಿದ್ದರು. ಇವರು ತಾಯಿ, ಸಹೋದರರು, ಪತ್ನಿ ಮತ್ತು ಪುತ್ರನನ್ನು ಅಗಲಿದ್ದಾರೆ.

ಬಿಜೆಪಿ ತೀವ್ರ ಸಂತಾಪ

ಸತೀಶ್ ಪ್ರಭು ಅವರ ಅಕಾಲಿಕ ನಿಧನ ಬಿಜೆಪಿಗೆ ತುಂಬಲಾರದ ನಷ್ಟ ಎಂದು ಬಿಜೆಪಿ ದ.ಕ. ಜಿಲ್ಲಾ ಘಟಕ ಸಂತಾಪ ವ್ಯಕ್ತಪಡಿಸಿದೆ.

ಇವರ ನಿಧನಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಸಹಕಾರ್ಯವಾಹ ಪಿ.ಎಸ್.ಪ್ರಕಾಶ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಕ್ಯಾ. ಬ್ರಿಜೇಶ್ ಚೌಟ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಶಾಸಕರಾದ ಡಿ. ವೇದವ್ಯಾಸ ಕಾಮತ್, ಡಾ.ವೈ. ಭರತ್ ಶೆಟ್ಟಿ, ಪ್ರತಾಪಸಿಂಹ ನಾಯಕ್, ಉಮಾನಾಥ್ ಕೋಟ್ಯಾನ್, ರಾಜೇಶ್ ನ್ಯಾಕ್, ಹರೀಶ್ ಪೂಂಜ, ಭಾಗೀರಥಿ ಮುರುಳ್ಯ, ಕಿಶೋರ್ ಕುಮಾರ್ ಪುತ್ತೂರು, ಮಾಜಿ ಸಚಿವರಾದ ಕೃಷ್ಣ ಜೆ. ಪಾಲೆಮಾರ್, ನಾಗರಾಜ್ ಶೆಟ್ಟಿ, ಎಸ್. ಅಂಗಾರ, ಮಾಜಿ ಶಾಸಕರಾದ ಎನ್. ಯೋಗೀಶ್ ಭಟ್, ಕ್ಯಾ. ಗಣೇಶ್ ಕಾರ್ಣಿಕ್, ಕೆ. ಮೋನಪ್ಪ ಭಂಡಾರಿ, ಮಾಜಿ ಜಿಲ್ಲಾಧ್ಯಕ್ಷ ಸುದರ್ಶನ ಎಂ., ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪ್ರೇಮಾನಂದ ಶೆಟ್ಟಿ, ಯತೀಶ್ ಆರ್ವಾರ್, ಪ್ರಮುಖರಾದ ಸಂಜಯ ಪ್ರಭು, ನಿತಿನ್ ಕುಮಾರ್, ರವಿಶಂಕರ್ ಮಿಜಾರ್, ಸಿ.ಟಿ.ಕಾಮತ್ ಮೊದಲಾದ ಪ್ರಮುಖರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.



ಪರೋಪಕಾರಿ

ತಮ್ಮವರನ್ನು ಕಳೆದುಕೊಂಡ ಮಂದಿ ಅಂತ್ಯಸಂಸ್ಕಾರ ಸಂದರ್ಭ ಸಂಕಷ್ಟ ಎದುರಿಸುತ್ತಿದ್ದ ಸಂದರ್ಭದಲ್ಲಿ ಸತೀಶ್ ಪ್ರಭು ಅವರನ್ನು ಸಂಪರ್ಕಿಸಿದಾಗ ಅವರು ತಮ್ಮೆಲ್ಲ ಕೆಲಸ ಕಾರ್ಯಗಳನ್ನು ಬಿಟ್ಟು ನೆರವಾಗುತ್ತಿದ್ದರು. ಜಾತಿ ಭೇದವಿಲ್ಲದೆ ನೂರಾರು ಮಂದಿ ಅವರಿಂದ ಈ ರೀತಿ ಉಪಕೃತರಾಗಿದ್ದಾರೆ. ಸರಳತೆ, ಪ್ರಾಮಾಣಿಕತೆ ಮತ್ತು ಪರೋಪಕಾರ ಗುಣಗಳಿಂದ ಅವರು ಎಲ್ಲರ ಪ್ರೀತ್ಯಾದರಗಳಿಗೆ ಭಾಜನರಾಗಿದ್ದರು. ಅವರು ನಿಧನರಾದ ಸುದ್ದಿ ತಿಳಿಯುತ್ತಿದ್ದಂತೆ ನೂರಾರು ಮಂದಿ ಗಣ್ಯರು, ಕಾರ್ಯಕರ್ತರು ,ಜನಸಾಮಾನ್ಯರು ಅವರ ಮನೆಯತ್ತ ಧಾವಿಸಿ ಬಂದು ಅಂತಿಮ ನಮನ ಸಲ್ಲಿಸಿದರು.

ಒಮನ್‌ನಲ್ಲಿ ನೇಣು ಬಿಗಿದುಕೊಂಡು ಸೋಮೇಶ್ವರ ನಿವಾಸಿ ಯುವಕ ಆತ್ಮಹತ್ಯೆ

ಉಳ್ಳಾಲ: ಒಮನ್‌ನಲ್ಲಿ ಉದ್ಯೋಗದಲ್ಲಿದ್ದ ಇಲ್ಲಿನ ಸೋಮೇಶ್ವರ ನಿವಾಸಿ ಯುವಕನೋರ್ವ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸೋಮವಾರ ಬೆಳಗ್ಗೆ ನಡೆದಿದೆ.



ಸೋಮೇಶ್ವರ ನಿವಾಸಿಗಳಾದ ಚಂದ್ರ, ದೀಪಾ ದಂಪತಿಯ ಹಿರಿಯ ಪುತ್ರ ಪುನೀತ್ ಪೂಜಾರಿ (32) ಮೃತ ಯುವಕ.

ತನ್ನ ಪ್ರೇಯಸಿಯು ನಾಲ್ಕು ವರ್ಷಗಳ ಕಾಲದ ಪ್ರೀತಿಯನ್ನು ನಿರಾಕರಿಸಿದ ಪರಿಣಾಮ ಈ ಕೃತ್ಯ ನಡೆಸಿದ್ದಾರೆ ಎನ್ನಲಾಗಿದೆ.

ಇತ್ತೀಚೆಗಷ್ಟೇ ಊರಿಗೆ ಬಂದಿದ್ದರು

ಪುನೀತ್ ಕಳೆದ ಒಂದೂವರೆ ವರ್ಷಗಳಿಂದ ಒಮನ್ ದೇಶದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕಳೆದ ಒಂದೂವರೆ ತಿಂಗಳ ಹಿಂದಷ್ಟೆ ಊರಿಗೆ ಬಂದಿದ್ದ ಪುನೀತ್ ಮತ್ತೆ ಒಮನ್‌ಗೆ ಮರಳಿದ್ದರು.

ಪುನೀತ್ ಕಳೆದ ನಾಲ್ಕು ವರ್ಷಗಳಿಂದ ಯುವತಿಯೋರ್ವಳನ್ನು ಪ್ರೀತಿಸುತ್ತಿದ್ದರು ಎನ್ನಲಾಗಿದ್ದು, ಅನ್ಯೋನ್ಯವಾಗಿದ್ದ ಜೋಡಿ ಹಲವೆಡೆ ಜತೆಯಾಗಿ ಸುತ್ತಾಡಿದ ಫೋಟೋಗಳನ್ನು ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಇತ್ತೀಚಿನ ದಿನಗಳಲ್ಲಿ ಯುವತಿಯು ಪುನೀತ್‌ನ ಫೋನ್ ಕರೆಗಳನ್ನು ಸ್ವೀಕರಿಸದೇ, ಸಂದೇಶಗಳಿಗೂ ಪ್ರತಿಕ್ರಿಯೆ ನೀಡದೇ ಪ್ರೀತಿ ನಿರಾಕರಿಸುತ್ತಿದ್ದಳೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರೇಯಸಿಯೊಂದಿಗೆ ವಿರಸ ತಾಳಲಾರದೆ ಪುನೀತ್ ಮನನೊಂದಿದ್ದು, ಈ ವಿಚಾರವನ್ನು ತನ್ನ ಆಪ್ತ ಗೆಳೆಯರಲ್ಲೂ ಪ್ರಸ್ತಾಪಿಸಿದ್ದರು. ಪ್ರೇಮ ವೈಫಲ್ಯದ ಸಂಕಟದಲ್ಲಿ ನರಳುತ್ತಿದ್ದ ಪುನೀತ್ ಸಾಮಾಜಿಕ ಜಾಲತಾಣದಲ್ಲಿ ಲೈವ್ ವಿಡಿಯೋ ನಡೆಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ತಿಳಿದುಬಂದಿದೆ. ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಅಶಾಂತಿಯ ಪರಿಸ್ಥಿತಿಯ ಹಿನ್ನೆಲೆ ಒಮನ್ ದೇಶದ ಕಾನೂನು ಪ್ರಕ್ರಿಯೆ ಪೂರ್ಣಗೊಳ್ಳಲು ಸಮಯ ಬೇಕಾಗುವ ಸಾಧ್ಯತೆ ಇದ್ದು, ಮೃತ ದೇಹವನ್ನು ಭಾರತಕ್ಕೆ ತರಲು ವಿಳಂಬವಾಗಬಹುದೆಂದು ಕುಟುಂಬದ ಆಪ್ತರು ಬೇಸರ ವ್ಯಕ್ತಪಡಿಸಿದ್ದಾರೆ.

ಮೃತ ಪುನೀತ್ ತಂದೆ-ತಾಯಿ, ಸಹೋದರ ಹಾಗೂ ಸಹೋದರಿಯನ್ನು ಅಗಲಿದ್ದಾರೆ.

ನಾಳೆ ಮುಖ್ಯಮಂತ್ರಿ ಹಸ್ತದಲ್ಲಿ ಉಪ್ಪಳ ಅಗ್ನಿ ಶಾಮಕ ಕೇಂದ್ರ, ನೂತನ ಕಟ್ಟಡ ಉದ್ಘಾಟನೆ

▸▸ **ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಮಾ.5ರಂದು ಅಪರಾಹ್ಣ 3.30ಕ್ಕೆ ಜರಗಲಿದೆ.**

ಉಪ್ಪಳ: ಮಂಗಲ್ಪಾಡಿ ಪಂಚಾಯತ್‌ನ 7ನೇ ವಾರ್ಡ್ ಪ್ರತಾಪನಗರದಲ್ಲಿ 2023-24ನೇ ಸಾಲಿನ ಬಜೆಟ್‌ನಲ್ಲಿ 1.5 ಕೋಟಿ ರೂಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಉಪ್ಪಳ ಅಗ್ನಿ ಶಾಮಕ ಮತ್ತು ರಕ್ಷಣಾ ಕೇಂದ್ರದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಮಾ.5ರಂದು ಅಪರಾಹ್ಣ 3.30ಕ್ಕೆ ಜರಗಲಿದೆ.

ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಆನ್‌ಲೈನ್‌ನಲ್ಲಿ ಕಟ್ಟಡವನ್ನು ಉದ್ಘಾಟಿಸಲಿದ್ದಾರೆ.



ವೇದಿಕೆಯಲ್ಲಿ ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ಸಮಾರಂಭದಲ್ಲಿ ಅಗ್ನಿ ಶಾಮಕದಳ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಸಾಮಾಜಿಕ, ರಾಜಕೀಯ ಕ್ಷೇತ್ರದ ಪ್ರಮುಖ ವ್ಯಕ್ತಿಗಳು ಭಾಗವಹಿಸುವರು.

ಬಾನಂಗಳದಲ್ಲಿ ಗ್ರಸ್ತೋದಿತ ಚಂದ್ರಗ್ರಹಣ | ದೋಷ ನಿವಾರಣೆಗಾಗಿ ಕ್ಷೇತ್ರಗಳತ್ತ ಭಕ್ತರ ದಂಡು | ಶುದ್ಧ ತೈಲ, ಶುದ್ಧ ತುಪ್ಪ, ದೇವರ ಸನ್ನಿಧಾನಕ್ಕೆ ಕಾಣಿಕೆ

ಕರಾವಳಿ ಭಾಗದ ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ವಿಶೇಷ ಪೂಜೆ ಸಮರ್ಪಣೆ

ಮಂಗಳೂರು: ಚಂದ್ರಗ್ರಹಣದ ಹಿನ್ನೆಲೆಯಲ್ಲಿ ಮಂಗಳವಾರ ಕರಾವಳಿಯ ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಗ್ರಹಣ ಬಳಿಕದ ವಿಶೇಷ ಪೂಜೆಗಳು ನಡೆದವು. ಜನತೆ ಕೂಡ ಗ್ರಹಣ ಕಾಲದ ನಿಯಮಗಳನ್ನು ಪಾಲಿಸುವುದರೊಂದಿಗೆ ಅರ್ಘ ತುಂಬಿದರು.

ಮಂಗಳೂರಿನ ಮಹತೋಭಾರ ಶ್ರೀ ಮಂಗಳಾದೇವಿ ದೇವಸ್ಥಾನದಲ್ಲಿ ಅಮ್ಮನವರಿಗೆ ಚಂದ್ರ ಗ್ರಹಣ ಕಾಲದಲ್ಲಿ ವೇದೋಕ್ತ ಮಂತ್ರ ಪಠಣ ಪೂರ್ವಕ ನಿರಂತರ ಶುದ್ಧ ಜಲಾಭಿಷೇಕ ನೆರವೇರಿತು. ಶ್ರೀಕ್ಷೇತ್ರ ಮಂಗಳಾದೇವಿ ದೇವಸ್ಥಾನದಲ್ಲಿ ಚಂದ್ರಗ್ರಹಣ ಸ್ಪರ್ಶ ಕಾಲದಿಂದ ಪ್ರಾರಂಭವಾಗಿ ಮೋಕ್ಷ ಕಾಲದವರೆಗೂ ಶ್ರೀ ದೇವಿಗೆ ಧಾರಾಪಾತ್ರೆಯಲ್ಲಿ ನಿರಂತರ ಅಭಿಷೇಕವು ನೆರವೇರಿತು.

ವಿಶ್ವಾವಸು ನಾಮ ಸಂವತ್ಸರದ ಫಾಲ್ಗುಣ ಮಾಸ ಶುಕ್ಲಪಕ್ಷ ಪೌರ್ಣಮಿಯ ಮಂಗಳವಾರ ಹುಬ್ಬಾ ನಕ್ಷತ್ರ ಸಿಂಹ ರಾಶಿಯಲ್ಲಿ ವರ್ಷದ ಕೊನೆಯ ಕೇತುಗ್ರಸ್ತ ಪೂರ್ಣಗ್ರಾಸ ಗ್ರಸ್ತೋದಿತ ಖಗ್ರಾಸ ಚಂದ್ರ ಗ್ರಹಣ ಸಂಭವಿಸಿದ್ದರಿಂದ ಜನತೆ ಕೂಡ ಭಕ್ತಿಭಾವದಿಂದ ತಮ್ಮನ್ನು ತೊಡಗಿಸಿಕೊಂಡರು.

ವಾಡಿಕೆಯಂತೆ ಆಗಮ ನಿಯಮಾನುಸಾರ ಸೂರ್ಯ ಅಥವಾ ಚಂದ್ರ ಗ್ರಹಣಾದಿಗಳು ಸಂಭವಿಸಲಿರುವಾಗ ಗ್ರಹಣಾರಂಭದಿಂದ ಮೋಕ್ಷದ ವರೆಗೂ ಮಂಗಳಾದೇವಿಯಲ್ಲಿ ಶ್ರೀದೇವಿಯ ಲಿಂಗ ರೂಪದ ಬಿಂಬದ ಮೇಲೆ ವೇದೋಕ್ತ ಮಂತ್ರ ಪಠಣ ಸಹಿತ ಶುದ್ಧ ನೀರಿನ ಅಭಿಷೇಕವು ನಡೆಯುತ್ತಿರ ಬೇಕೆಂಬುದು ದೇವಳದ ಪೂರ್ವ ಶಿಷ್ಟಾ ಪ್ರಾಚೀನ ಸತ್ಸಂಪ್ರದಾಯ. ಅದೇ ಪ್ರಕಾರವಾಗಿ ಕೇತುಗ್ರಸ್ಥ ಖಗ್ರಾಸ ಗ್ರಸ್ತೋದಯ ಚಂದ್ರಗ್ರಹಣವು ನಡೆಯುತ್ತಿರುವ ಹಿನ್ನೆಲೆಯಲ್ಲಿ ಶ್ರೀ ದೇವಿಗೆ ಇದೀಗ ವೇದೋಕ್ತ ಮಂತ್ರ ಪಠಣ ಸಹಿತ ಅರ್ಚಕರಿಂದ ದೇವಳದ ತೀರ್ಥಬಾವಿ ಶುದ್ಧ ಸಲಿಲ ಧಾರೆಯಿಂದ ಜಲಾಭಿಷೇಕವು ನೆರವೇರುತ್ತಿದೆ. ಅಪರಾಹ್ಣ 3.18ರ ಗ್ರಹಣ ಸ್ಪರ್ಶಕಾಲದಿಂದ ಮೊದಲ್ಗೊಂಡು ಸಾಯಂಕಾಲ 6.48ರ ಮೋಕ್ಷ ಕಾಲದವರೆಗೆ ಶ್ರೀ ಮಾತೆಗೆ ನಿರಂತರ ಅಭಿಷೇಕವು ನೆರವೇರಿತು.



ಶ್ರೀಕೃಷ್ಣ ಮಠ ಪರ್ಯಾಯ ಶ್ರೀ ಶೀರೂರು ಮಠ ಪರ್ಯಾಯ ಪೀಠಾಧೀಶರಾದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಹಾಗೂ ಪುತ್ತಿಗೆ ಮಠಾಧೀಶರಾದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಭಕ್ತರೊಂದಿಗೆ ಗ್ರಹಣ ಮೋಕ್ಷ ಕಾಲದಲ್ಲಿ ಕೃಷ್ಣ ಮಠದ ಮಧ್ವ ಸರೋವರದಲ್ಲಿ ಸ್ನಾನ ಮಾಡಿ ರಾತ್ರಿ ಪೂಜೆ ನೆರವೇರಿಸಿದರು.

ದರ್ಶನ ಸಮಯ ವ್ಯತ್ಯಯ

ಚಂದ್ರಗ್ರಹಣದ ಹಿನ್ನೆಲೆಯಲ್ಲಿ ಕರಾವಳಿಯ ದೇವಳಗಳಲ್ಲಿ ದರ್ಶನ ಸಮಯ ವ್ಯತ್ಯಯವಾಗಿತ್ತು. ಸಂಜೆ 6.39ರಿಂದ 6.47ರವರೆಗೆ 8 ನಿಮಿಷ ಮಾತ್ರ ಗ್ರಹಣ ಭಾರತದಲ್ಲಿ ಗೋಚರಿಸಿದ್ದು, ಪಿಲಿಕುಳದ ಖಗೋಲ ವೀಕ್ಷಣಾಲಯದಲ್ಲಿ ಪೂರ್ಣಗ್ರಾಸ ಚಂದ್ರಗ್ರಹಣವನ್ನು ಹಲವರು ವೀಕ್ಷಿಸಿದರು. ಚಂದ್ರಗ್ರಹಣದ ದಿನ ಕರಾವಳಿಯ ಹಲವು ದೇವಾಲಯಗಳಲ್ಲಿ ಏಕಾದಶಿಯ ದಿನದಂತೆ ಯಾವುದೇ ಅನ್ನಸಂತರ್ಪಣಾ ಕಾರ್ಯ ನಡೆದಿಲ್ಲ. ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸರ್ಪಸಂಸ್ಕಾರ ಸೇವೆ ಸಹಿತ ಯಾವುದೇ ಸೇವೆಗಳು ಇರಲಿಲ್ಲ. ಮಧ್ಯಾಹ್ನದ ಮಹಾಪೂಜೆ ಬೆಳಗ್ಗೆ 8 ಗಂಟೆಗೆ ನಡೆದ ಬಳಿಕ ಬೆಳಗ್ಗೆ 9 ಗಂಟೆಯ ಬಳಿಕ ದೇವರ ದರ್ಶನಕ್ಕೆ ಅವಕಾಶ ಇರಲಿಲ್ಲ. ರಾತ್ರಿ 7ರ ನಂತರ ದೇವರ ಬಾಗಿಲು ತೆರೆದ ಬಳಿಕ ಮಹಾಪೂಜೆ ಸಂಪನ್ನಗೊಂಡಿತು. ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವರ ಸನ್ನಿಧಾನದಲ್ಲಿ ದೇವರ ಮೂಲಬಿಂಬ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಆದರೆ ತೀರ್ಥ ಪ್ರಸಾದ ಸೇವಾದಿಗಳು ಇರಲಿಲ್ಲ.

ದೋಷ ನಿವಾರಣೆಗಾಗಿ ಭಕ್ತರ ದಂಡು

ಗ್ರಹಣ ಅವಧಿಯಲ್ಲಿ ಮಂಗಳೂರಿನ ಕುದ್ರೋಳಿ ಶ್ರೀಗೋಕರ್ಣನಾಥ ಕ್ಷೇತ್ರ, ಕದ್ರಿ ಶ್ರೀಮಂಜುನಾಥನ ಸನ್ನಿಧಿ ಸೇರಿದಂತೆ ಹಲವು ಪುಣ್ಯ ಕ್ಷೇತ್ರದಲ್ಲಿ ಸಂಬಂಧಿತ ನಕ್ಷತ್ರ ರಾಶಿಯವರು ಹಾಗೂ ಭಕ್ತರು ದೋಷ ನಿವಾರಣೆಗಾಗಿ ಶುದ್ಧ ತೈಲ, ಶುದ್ಧ ತುಪ್ಪ, ದೇವರ ಸನ್ನಿಧಾನಕ್ಕೆ ಕಾಣಿಕೆಯಾಗಿ ನೀಡುವ ಭಕ್ತರ ಸಂಖ್ಯೆ ಹೆಚ್ಚಾಗಿತ್ತು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 35° 23° | ಉಡುಪಿ 31° 24°

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 04, ಮಾರ್ಚ್ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಶಾಸಕರ ಅಧಿಕಾರದ ದರ್ಪಕ್ಕೆ ಮಹಿಳಾ ಅಧಿಕಾರಿಗಳು ಬಲಿಪಶು



ಪುಟ 6

ಮುದೂರು ಕೊರಗರ ಭವನ ಅಕ್ರಮ ಚಟುವಟಿಕೆಗಳ ತಾಣ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸತ್ಯ ನೇತ್ರೇ ಮಹಾದೇವಿ ।
ಸರ್ವಲೋಕ ಶುಭಂಕರಿ ॥
ಜ್ಯೋತಿರ್ಮಯಿ ಜಗದ್ವಂದ್ಯೇ ।
ಧರ್ಮರೂಪೇ ನಮೋಸ್ತುತೇ ॥

ಶ್ರೀ ಉಳ್ಳಾಲ್ತಿ ಧರ್ಮಅರಸರ ಕ್ಷೇತ್ರ

ಉಳಿಯ, ಉಳ್ಳಾಲ, ಉಳ್ಳಾಲ ತಾಲೂಕು, ದಕ್ಷಿಣ ಕನ್ನಡ.
ದೂರವಾಣಿ: 2466060, 6364003560







ವರ್ಷಾವಧಿ ಉತ್ಸವ

ದಿನಾಂಕ 02-03-2026 ಸೋಮವಾರದಿಂದ 08-03-2026 ಆದಿತ್ಯವಾರದ ವರೆಗೆ

ಭಕ್ತ ಮಹಾಶಯರೇ,

ಸ್ವಸ್ತಿ। ಶ್ರೀ ವಿಶ್ವಾವಸು ನಾಮ ಸಂವತ್ಸರದ ಕುಂಭ ಮಾಸ ದಿನ ೧೮ ಸಲುವ ದಿನಾಂಕ 02-03-2026ನೇ ಸೋಮವಾರದಿಂದ 08-03-2026ನೇ ಆದಿತ್ಯವಾರದವರೆಗೆ ಉಳ್ಳಾಲ ಉಳಿಯ ಶ್ರೀ ಉಳ್ಳಾಲ್ತಿ ಧರ್ಮಅರಸರ ಕ್ಷೇತ್ರದಲ್ಲಿ ನಡೆಯುವ ವರ್ಷಾವಧಿ ಉತ್ಸವಕ್ಕೆ ತಾವೆಲ್ಲರೂ ತಮ್ಮ ಬಂಧುಬಳಗ ಇಷ್ಟಮಿತ್ರರೊಡಗೂಡಿ ಆಗಮಿಸಿ,ತನು-ಮನ-ಧನಗಳಿಂದ ಸಹಕರಿಸಿ, ಶ್ರೀ ಕ್ಷೇತ್ರದ ಸಿರಿಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಉಳ್ಳಾಲ್ತಿ ಧರ್ಮಅರಸರ,ನಾಗದೇವರ ಹಾಗೂ ಪರಿವಾರ ದೈವಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

ವೇದಮೂರ್ತಿ ಶ್ರೀ ಅನಂತ ಉಪಾಧ್ಯಾಯರು (ಕ್ಷೇತ್ರದ ತಂತ್ರಿವರ್ಯರು) | ದೇವು ಮೂಲ್ಯಣ್ಣನವರು (ಧರ್ಮದರ್ಶಿಗಳು/ದರ್ಶನ ಪಾತ್ರಿ) | ಶ್ರೀ ಹರೀಶ್ ಭಟ್ ಅರಳ (ಉಪತಂತ್ರಿಗಳು) | ಶ್ರೀ ಅರುಣ್ ಭಟ್ (ಉಳ್ಳಾಲ ಚಾವಡಿ ಮಠ) | ಶ್ರೀ ಶ್ರೀರಂಗ ಐತಾಳ, ಕದ್ರಿ ಕ್ಷೇತ್ರದ ದೈವಜ್ಞರು | ಶ್ರೀ ಅನ್ಮಲ್ ರಾವ್ ದೊಡ್ಡಮನೆ ಉಳ್ಳಾಲ ಶ್ಯಾನುಭೋಗರು

ಗುರಿಕಾರರು, ಚಾಕರಿಯವರು ಮತ್ತು ಹತ್ತು ಸಮಸ್ತರು

ಕ್ಷೇತ್ರದ ವ್ಯವಸ್ಥಾಪನಾ ಸಮಿತಿ, ಕ್ಷೇತ್ರದ ಜೀರ್ಣೋದ್ಧಾರ ಸಮಿತಿ ಉಳ್ಳಾಲ ಗಾಣಿಗರ ಸಂಘ (ರಿ.), ಶ್ರೀ ಉಳಿಯತ್ತಾಯ ಸೇವಾ ಸಮಿತಿ ಶ್ರೀ ಉಳಿಯತ್ತಾಯ ಮಹಿಳಾ ವೇದಿಕೆ

800 ವರ್ಷಗಳ ದೈವಿಕ ಪರಂಪರೆಯ ಪರಮ ಪವಿತ್ರ ಕ್ಷೇತ್ರ

ಕ್ಷೇತ್ರ ಪರಿಚಯ;

ತುಳುನಾಡಿನ ಪುರಾತನ ಧಾರ್ಮಿಕ ಕ್ಷೇತ್ರಗಳಲ್ಲಿ ಪ್ರಕೃತಿದತ್ತ ಸೌಂದರ್ಯದಿಂದ ಕಂಗೊಳಿಸುತ್ತಿರುವ ಮಂಗಳೂರು ಹೊರವಲಯದ ಉಳ್ಳಾಲ ತಾಲೂಕಿನ ಉಳಿಯ ಎಂಬಲ್ಲಿ ಸುತ್ತಲೂ ನೇತ್ರಾವತಿ ನದಿಯ ಹಿನ್ನೀರಿನಿಂದ ಆವೃತ್ತವಾಗಿರುವ ಶ್ರೀ ಉಳ್ಳಾಲ್ತಿ ಧರ್ಮ ಅರಸರ ಕ್ಷೇತ್ರಕ್ಕೆ ಸುಮಾರು 800 ವರ್ಷಗಳ ದೈವಿಕ ಪರಂಪರೆ ಇದ್ದು,ಊರ ಪರವೂರ ಭಕ್ತರು ಭಕ್ತಿ,ವಿಶ್ವಾಸದಿಂದ ಆರಾಧನೆ ಮಾಡಿಕೊಂಡು ಬರುತ್ತಿರುವ ಕಾರಣೀಕದ ಕ್ಷೇತ್ರವಾಗಿದೆ. ಈ ಮಾಗಣೆಯ ಪ್ರಧಾನ ದೇವರಾದ ಸೋಮನಾಥೇಶ್ವರ ನೆಲೆಯಾದ ಸ್ಥಳಕ್ಕೆ ಸೋಮೇಶ್ವರ ಎಂಬ ಹೆಸರು ಬಂದಂತೆ, ಉಳ್ಳಾಲ್ತಿ ಅಮ್ಮನವರು ನೆಲೆಯಾದ ಸ್ಥಳಕ್ಕೆ ಉಳಿಯ-ಉಳ್ಳಾಲ ಎಂಬ ಹೆಸರು ಬಂತೆಂಬ ಪ್ರತೀತಿ ಇದೆ.

ಮಡಿತ ಮಾಯೆಗಳಾಗಿ ನಂಬಿದ ಭಕ್ತರಿಗೆ ಇಂಬು ಕೊಟ್ಟು ಸದಾ ಕಾಪಾಡುವ, ಊರಿಗೆ ಸುಭಿಕ್ಷೆ ನೀಡುವ ಧರ್ಮ ದೈವಗಳ ಕಾರಣೀಕದ ಕ್ಷೇತ್ರವಾಗಿದೆ. "ಎಂಕ್ಲೆ ಸ್ಥಳತ ಒಂಜಿ ಉಂಡೆ ಶ್ರೀ ಗಂಧೊನು ಸಂಜೀವನಿಗು ಸಮ ಮಲ್ಪಾದ್ ಕೊರ್ದ್ ನಂಬಿನಕ್ಲೆಗು ಇಂಬು ಕೊರ್ದ್ ರಕ್ಷಣೆ ಮನ್ಪುವೆ" ಎನ್ನುವ ಶ್ರೀ ಉಳ್ಳಾಲ್ತಿ ಅಮ್ಮನವರ ಅಭಯ ನುಡಿಯಿಂದ ಕೂಡಿದ ಕ್ಷೇತ್ರದ ಶ್ರೀಗಂಧ ಪ್ರಸಾದವು ಭಕ್ತ ಸಮೂಹಕ್ಕೆ ಶ್ರೀ ರಕ್ಷೆಯಾಗಿದೆ.

2022-24ರ ಜೀರ್ಣೋದ್ಧಾರ ಪುನರ್ ನಿರ್ಮಾಣ ಸಂಕಲ್ಪ;

ಊರ ಪರವೂರ ಭಕ್ತಾದಿಗಳ ತ್ರಿಕರಣ ಪೂರ್ವಕ ಸಹಕಾರದಿಂದ ಕ್ಷೇತ್ರದ ಪಡುಮಾಡ, ಮೂಡುಮಾಡ, ನಾಗಾಲಯ, ಕೆರೆ, ಮೂಡುಮಾಡದ ಗೋಪುರದ ಕೆಲಸಗಳನ್ನು ಸುಮಾರು 3.5 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಪೂರ್ಣಗೊಳಿಸಿ 2023 ಡಿ. 29ರಿಂದ2024ಜ.07ರವರೆಗೆಬ್ರಹ್ಮಕಲಶೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲಾಗಿದೆ.

ಮುಂದಿನ ಹಂತದ ಕಾಮಗಾರಿಗಳಲ್ಲಿ ಪಡುಮಾಡದ ಉತ್ತರ ಧಿಕ್ಕಿನ ಗೋಪುರ ಮುಕ್ತಾಯದ ಹಂತದಲ್ಲಿದ್ದು,ಅದರ ನೆಲಕ್ಕೆ ಗ್ರಾನೈಟ್ ಹಾಸುವ ಕಾಮಗಾರಿ ಉತ್ಸವದ ನಂತರ ಪ್ರಾರಂಭಿಸಲಾಗುವುದು. ಸುಮಾರು 30 ಲಕ್ಷ ರೂ.ಅಂದಾಜು ವೆಚ್ಚದ ಮೂಡುಮಾಡ ಮತ್ತು ಪಡುಮಾಡ ಅಂಗಣಗಳಿಗೆ ಶಿಲೆಕಲ್ಲಿನ ಚಪ್ಪಡಿ ಹಾಗೂ ಮುಖ್ಯ ದ್ವಾರ ನಿರ್ಮಾಣ ಕಾಮಗಾರಿಯು ಅಂತಿಮ ಹಂತದಲ್ಲಿದೆ.

ಮುಂದಿನ ಹಂತಗಳಲ್ಲಿ ಅಶ್ವತ್ಥ, ಮೂಡುಮಾಡ, ಪಡುಮಾಡದ ಭಂಡಾರ ಮನೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಕ್ಷೇತ್ರದ ಜೀರ್ಣೋದ್ಧಾರ ಕಾರ್ಯಗಳಿಗೆ ಸಹಕಾರ ನೀಡುತ್ತಿರುವ ದಾನಿಗಳು, ಭಕ್ತಾದಿಗಳಿಗೆ ಕ್ಷೇತ್ರದ ಪರವಾಗಿ ಆದರ ಪೂರ್ವಕ ವಂದನೆಗಳು.

ಕ್ಷೇತ್ರಾಭಿವೃದ್ಧಿಯ ಪಕ್ಷಿನೋಟ

- 1977ರಲ್ಲಿ ಕ್ಷೇತ್ರದ ಕೆರೆ(ಪುಷ್ಕರಿಣಿ) ಜೀರ್ಣೋದ್ಧಾರ.
- 1982ರಲ್ಲಿ ಶ್ರೀ ಉಳ್ಳಾಲ್ತಿ ಅಮ್ಮನವರ ಮೂಡು ಮಾಡ ಮತ್ತು ಗೋಪುರ ತುರ್ತು ಜೀರ್ಣೋದ್ಧಾರ.
- 1989 ರಲ್ಲಿ ಶ್ರೀ ಧರ್ಮ ಅರಸರ ಪಡುಮಾಡ ಮತ್ತು ಗೋಪುರದ ತುರ್ತು ಜೀರ್ಣೋದ್ಧಾರ.
- 2007ರಲ್ಲಿ ಶ್ರೀಉಳ್ಳಾಲ್ತಿ ಧರ್ಮ ಅರಸರ ಪಟ್ಟ ಸಿಂಹಾಸನ ಗರ್ಭಗೃಹ ಮತ್ತು ಪೂರ್ವ ಧಿಕ್ಕಿನ ರಾಜಗೋಪುರ ಸುತ್ತುಪೌಳಿ ನಿರ್ಮಾಣ.
- 2010 ರಲ್ಲಿ ಕ್ಷೇತ್ರದ ಶ್ರೀ ಧೂಮವತಿ ಬಂಟ ದೈವಸ್ಥಾನದ ಜೀರ್ಣೋದ್ಧಾರ ಪುನರ್ ನಿರ್ಮಾಣ ಬ್ರಹ್ಮಕಲಶೋತ್ಸವ.
- 2017ರಲ್ಲಿ ಶ್ರೀ ಉಳ್ಳಾಲ್ತಿ ಅಮ್ಮನವರಿಗೆ ಸ್ವರ್ಣ ಬಿಂಬ ಹಾಗೂ ಕಂಚಿನ ಬಿಂಬಗಳ ನಿರ್ಮಾಣ ಪುನರ್ ಪ್ರತಿಷ್ಠೆ-ಬ್ರಹ್ಮಕಲಶೋತ್ಸವ ಮತ್ತು ಧರ್ಮ ನಡಾವಳಿ ಮಹೋತ್ಸವ.

ಪ್ರಸಕ್ತ ಪ್ರಗತಿಯಲ್ಲಿರುವ ಕಾಮಗಾರಿಗಳಾದ ಪಡುಮಾಡ ಮತ್ತು ಮೂಡು ಮಾಡದ ಅಂಗಣಗಳಿಗೆ ಶಿಲೆಕಲ್ಲಿನ ಚಪ್ಪಡಿ ಹಾಸುವ ಸೇವೆ ಹಾಗೂ ಪಡುಮಾಡದ ಗೋಪುರಕ್ಕೆ ಗ್ರಾನೈಟ್ ಹಾಸುವ ಸೇವೆಗಳು ಲಭ್ಯವಿದ್ದು,ಭಕ್ತಾದಿಗಳು ತಮ್ಮ ಶಕ್ತ್ಯಾನುಸಾರ ಈ ಕೆಳಗಿನಂತೆ ಸೇವೆ ಸಲ್ಲಿಸಬಹುದಾಗಿದೆ.

ಪಡುಮಾಡದ ಗೋಪುರಕ್ಕೆ ಗ್ರಾನೈಟ್ ಹಾಕುವ ಸೇವೆ	
10 ಚದರ ಅಡಿ ಸೇವೆ	ರೂ.2,500
20 ಚದರ ಅಡಿ ಸೇವೆ	ರೂ.5,000
50 ಚದರ ಅಡಿ ಸೇವೆ	ರೂ.12,500
100 ಚದರ ಅಡಿ ಸೇವೆ	ರೂ.25,000

ಪಡುಮಾಡ, ಮೂಡುಮಾಡದ ಅಂಗಣಕ್ಕೆ ಶಿಲೆಕಲ್ಲು ಹಾಸುವ ಸೇವೆ.	
10 ಚದರ ಅಡಿ ಸೇವೆ	ರೂ.2,000
25 ಚದರ ಅಡಿ ಸೇವೆ	ರೂ.5,000
50 ಚದರ ಅಡಿ ಸೇವೆ	ರೂ.10,000
100 ಚದರ ಅಡಿ ಸೇವೆ	ರೂ.20,000

ಬ್ಯಾಂಕ್ ಖಾತೆ ವಿವರ:
Jeernodhara Committee Account No.10116586920. State Bank of India, Ullal Branch. IFSC Code: SBIN0003669

Temple Account No.10116587209. State Bank of India, Ullal Branch. IFSC Code: SBIN0003669.

ಕಾರ್ಯಕ್ರಮಗಳು

ತಾ.04-03-2026 ಬುಧವಾರ: ರಾತ್ರಿ 9 ಗಂಟೆಗೆ ಮೂಡುಮಾಡದಲ್ಲಿ ಶ್ರೀ ಧರ್ಮಅರಸರ ವಲಸರಿ ಉತ್ಸವ.

ತಾ.05-03-2026 ಗುರುವಾರ: (ನಡು ಉತ್ಸವ), ರಾತ್ರಿ 8 ಗಂಟೆಗೆ ಶ್ರೀ ಧೂಮಾವತಿ, ಬಂಟ ದೈವದ ಕಟ್ಟು ಕಟ್ಟಲೆ ನೇಮ ಸೇವೆ, ರಾತ್ರಿ 9.30 ಕ್ಕೆ ಮೂಡುಮಾಡದಿಂದ ಪಡುಮಾಡಕ್ಕೆ "ಕಿರೋಳ್ ಉತ್ಸವ".

ರಾತ್ರಿ 2 ಗಂಟೆಗೆ ಶ್ರೀ ಧರ್ಮಅರಸರ ಕೆರೆ ದೀಪೋತ್ಸವ ಮುಂಜಾನೆ 6.30 ಗಂಟೆಗೆ ಶ್ರೀ ಉಳ್ಳಾಲ್ತಿ ಅಮ್ಮನವರ ಉತ್ಸವ. (ಚಿನ್ನದ ಮೊಗದಲ್ಲಿ)

ತಾ.06-03-2026 ಶುಕ್ರವಾರ: ರಾತ್ರಿ ಗಂಟೆ 9ಕ್ಕೆ ಪಡುಮಾಡದಲ್ಲಿ ಶ್ರೀ ಧರ್ಮಅರಸರ ದೊಡ್ಡ ವಲಸರಿ ಉತ್ಸವ

ತಾ.07-03-2026 ಶನಿವಾರ:ರಾತ್ರಿ ಗಂಟೆ 9ಕ್ಕೆ ಪಡುಮಾಡದಲ್ಲಿ ಶ್ರೀ ಉಳ್ಳಾಲ್ತಿ ಅಮ್ಮನವರ ವಲಸರಿ ಮತ್ತು "ಕೆರೆ ದೀಪೋತ್ಸವ" (ಚಿನ್ನದ ಮೊಗದಲ್ಲಿ)

ತಾ.08-03-2026 ಆದಿತ್ಯವಾರ: ರಾತ್ರಿ ಗಂಟೆ 8ಕ್ಕೆ ಶ್ರೀ ಧೂಮಾವತಿ, ಬಂಟ ದೈವದ ಕಟ್ಟುಕಟ್ಟಲೆ ನೇಮ ಸೇವೆ. ರಾತ್ರಿ ಗಂಟೆ 9-30ಕ್ಕೆ ಪಡುಮಾಡದಿಂದ ಪಟ್ಟ ಸಿಂಹಾಸನಕ್ಕೆ "ಕಿರೋಳ್ ಉತ್ಸವ" ನಂತರ ಬಟ್ಟಲು ಕಾಣಿಕೆ, ಶ್ರೀಗಂಧ-ಬೂಲ್ಯ ಪ್ರಸಾದ.

ತಾ.09-03-2026 ಸೋಮವಾರ: ರಾತ್ರಿ ಗಂಟೆ 8ಕ್ಕೆ ಶ್ರೀ ಕ್ಷೇತ್ರದ ಉಳಿಯ ನಡುಬೆಟ್ಟು ಶ್ರೀ ಧೂಮಾವತಿ ಬಂಟ ದೈವದ ನೇಮ

ತಾ.16-03-2026 ಸೋಮವಾರ: ಕ್ಷೇತ್ರದ ಹೊರಾಂಗಣ ದೈವಗಳಿಗೆ ಕಟ್ಟುಕಟ್ಟಳೆ ಕೋಲ

ಸಾಂಸ್ಕೃತಿಕ ಕಾರ್ಯಕ್ರಮಗಳು

ತಾ. 5-3-2026 ಗುರುವಾರ : ರಾತ್ರಿ ಗಂಟೆ 9ರಿಂದ ಟೀಮ್ ಬನ್ವಾರಿ ಪ್ರಸ್ತುತ ಪಡಿಸುವ ಸುಗಮ ಸಂಗೀತ

ತಾ.06-03-2026 ಶುಕ್ರವಾರ : ರಾತ್ರಿ ಗಂಟೆ 7ರಿಂದ 9ರ ವರೆಗೆ ಶ್ರೀ ಶ್ರೀ ರವಿಶಂಕರ ಗುರೂಜಿಯವರ 'ಆರ್ಟ್ ಆಫ್ ಲಿವಿಂಗ್' ಮಂಗಳೂರು ಇವರ ತಂಡದವರಿಂದ ಭಜನಾ ಸಂಕೀರ್ತನೆ

ತಾ.07-03-2026 ಶನಿವಾರ: ರಾತ್ರಿ ಗಂಟೆ 7ರಿಂದ ಶ್ರೀ ಜಗದೀಶ್ ಆಚಾರ್ಯ ತೊಕ್ಕೊಟ್ಟು ಮತ್ತು ಬಳಗದವರಿಂದ ಭಕ್ತಿ ಭಾವಗಾನ

ಪುಟ ವಿನ್ಯಾಸಕ್ಕೆ ಸಹಕಾರ: ಸುಂದರ ಉಳಿಯ, ಪ್ರ.ಕಾ.ಜೀರ್ಣೋದ್ಧಾರ ಸಮಿತಿ ಹಾಗೂ ಪ್ರಭಾಕರ ಟಿ.ಸಿ ರೋಡ್.

ವರ್ಷಾವಧಿ ಉತ್ಸವಕ್ಕೆ ಶುಭ ಕೋರುವ


ಹರೀಶ್ ಕುಮಾರ್ ಕುತ್ತಾರು ಕಾರ್ಯಾಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ	**ಕದ್ರಿ ನವನೀತ ಶೆಟ್ಟಿ** ಅಧ್ಯಕ್ಷರು ಬ್ರಹ್ಮಕಲಶೋತ್ಸವ ಸಮಿತಿ	**ಶ್ರೀನಿವಾಸ ಸಫಲ್ಯ, ಮುಂಬೈ** ಕಾರ್ಯಾಧ್ಯಕ್ಷರು ಜೀರ್ಣೋದ್ಧಾರ ಸಮಿತಿ	**ರಮೇಶ್ ಮೆಂಡನ್** ಅಧ್ಯಕ್ಷರು ಜೀರ್ಣೋದ್ಧಾರ ಸಮಿತಿ	**ಸ್ಥಳದ ಗುರಿಕಾರರು** ಕೋಟೆ, ಅಂತೋನಿ, ಅಂತ ಗುರಿಕಾರರು, ದೇವು ಗುರಿಕಾರರು, ರಾಮ ಗುರಿಕಾರರು, ವೆಂಕ ಗುರಿಕಾರರು, ತನಿಯ ಗುರಿಕಾರರು, ಬಸ ಗುರಿಕಾರರು ಮತ್ತು ಕ್ಷೇತ್ರದ ಚಾಕರಿವರ್ಗದವರು
ರಾಜೇಶ್ ಉಳಿಯ ಅಧ್ಯಕ್ಷರು ವ್ಯವಸ್ಥಾಪನ ಸಮಿತಿ	**ನವೀನ್ ಕುಮಾರ್ ಮುಗ್ರೋಡಿ** ಸದಸ್ಯ ಕಾರ್ಯದರ್ಶಿ	**ಯು.ಎಸ್. ಪ್ರಕಾಶ್** ಕ್ಷೇತ್ರದ ಮಾಜಿ ಆಡಳಿತ ಮೊಕ್ತೇಸರರು	**ರವಿಶಂಕರ್ ಸೋಮೇಶ್ವರ** ಪ್ರಧಾನ ಕಾರ್ಯದರ್ಶಿ ಬ್ರಹ್ಮಕಲಶೋತ್ಸವ ಸಮಿತಿ	**ಸುಂದರ ಉಳಿಯ** ಪ್ರಧಾನ ಕಾರ್ಯದರ್ಶಿ ಜೀರ್ಣೋದ್ಧಾರ ಸಮಿತಿ
ಎಚ್. ಪ್ರಕಾಶ್ ಕೊಲ್ಯ ಅಧ್ಯಕ್ಷರು ಉಳ್ಳಾಲ ಗಾಣಿಗರ ಸಂಘ	**ಸುಧಾಕರ್ ಗೋಕುಲ** ಸ್ವಾತಿ ಡ್ರಿಂಕ್ಸ್ ಉಳ್ಳಾಲ	**ನಿತಿನ್ ರಾಜ್** ನಿತಿನ್ ರಾಜ್ ಅಸೋಸಿಯೇಟ್ಸ್ ತೊಕ್ಕೊಟ್ಟು ಉಳ್ಳಾಲ	**ಕಾಂಚನ್ ಕೆ. ಶಿಲ್ಪ** ಶಿಲ್ಪ ವುಡ್ ಇಂಡಸ್ಟ್ರೀಸ್ ಉಳ್ಳಾಲ	**ಶ್ರೀಕಾಂತ್ ಅರಸು ಹಿತ್ಲು** ಅಧ್ಯಕ್ಷರು ವಲಚ್ಚಿಲ್ತಾಯ ದೈವಸ್ಥಾನ ಉಳ್ಳಾಲ
ವರದರಾಜ್ ಅಧ್ಯಕ್ಷರು ಬಾಲ ಮಾರುತಿ ವ್ಯಾಯಾಮ ಶಾಲೆ ಉಳಿಯ	**ಯೋಗೀಶ್ ಉಳ್ಳಾಲ್** ಕೊಪ್ಪಳ ಮನೆ ಉಳಿಯ	**ದಿವಾಕರ್ ಜಯಶ್ರೀ ಮತ್ತು ತ್ರಿನೇಶ್** ಶೇಷ ಕಲ್ಯಾಣಿ ಉಳಿಯ	**ಸಂಜೀವ ಪಡುಮನೆ** ಸದಸ್ಯರು ವ್ಯವಸ್ಥಾಪನ ಸಮಿತಿ	**ಲಕ್ಷ್ಮಣ ಹೊಯ್ಗೆ** ಸದಸ್ಯರು ವ್ಯವಸ್ಥಾಪನ ಸಮಿತಿ
ಗಣೇಶ್ ಅರಸು ಹಿತ್ತಲು ಸದಸ್ಯರು ವ್ಯವಸ್ಥಾಪನ ಸಮಿತಿ	**ಪ್ರಕಾಶ್ ಗಂಧಕಾಡು** ಸದಸ್ಯರು ವ್ಯವಸ್ಥಾಪನ ಸಮಿತಿ	**ಯು.ರಮೇಶ್** ಸದಸ್ಯರು ವ್ಯವಸ್ಥಾಪನ ಸಮಿತಿ	**ರೂಪ ಆನಂದ್** ಸದಸ್ಯರು ವ್ಯವಸ್ಥಾಪನ ಸಮಿತಿ	**ಕಾಂಚನ ಯೋಗೀಶ್** ಸದಸ್ಯರು ವ್ಯವಸ್ಥಾಪನ ಸಮಿತಿ
ಶಿವಪ್ರಸಾದ್ ಮುಡಿಪು ಇಂಜಿನಿಯರ್ ಉಳ್ಳಾಲ	**ಪುಷ್ಪಾ ದಿನೇಶ್** ಸಾಯಿ-ಕುಶಿಲ್ ನಿಲಯ ನೆಹರು ನಗರ, ಸೋಮೇಶ್ವರ	**ಪ್ರವೀಣ್ ಮತ್ತು ಶ್ರೀಮತಿ ಪವಿತ್ರ** ಉಳಿಯ ಉಳ್ಳಾಲ	**ಜ್ಯೋತಿ ರತ್ನಾಕರ್ ಮತ್ತು ಮಕ್ಕಳು** ಹೊಯ್ಗೆ ಗದ್ದೆ, ಉಳ್ಳಾಲ	**ಶೇಖರ್ ಸೋಮೇಶ್ವರ** ಕಪ್ಪು ಕಲ್ಲಿನ ಶಿಲ್ಪಿಗಳು
ಪ್ರಭಾಕರ್ ಮನ್ವಿತಾ ಟಿ.ಸಿ ರೋಡ್ ಉಳ್ಳಾಲ	**ಅಶೋಕ್ ಶಶಿಕಲಾ** ಪಡುಮನೆ ಉಳಿಯ	**ಶಿಯಾಂಶಿ ಉಪ್ಪುಗುಡ್ಡೆ ಶಿವಾಂಶ್** ಉಪ್ಪುಗುಡ್ಡೆ, ಉಳ್ಳಾಲ	**ರತ್ನಾಕರ ಹೊಯ್ಗೆ** ಕೇಬಲ್ ನೆಟ್ವರ್ಕ್ಸ್ ಉಳ್ಳಾಲ ಹೊಯ್ಗೆ	**ರವೀಂದ್ರ ಎಸ್.** ಪ್ರಿಶಿತಾ ಆಯಿಲ್ ಮಿಲ್ ಶುದ್ಧ ತೆಂಗಿನ ಎಣ್ಣೆಗಾಗಿ,ಅಬ್ಬಕ್ಕ ಸರ್ಕಲ್ ಉಳ್ಳಾಲ
ಶ್ರೀ ಉಳಿಯತ್ತಾಯ ಎಲೆಕ್ಟ್ರಿಕಲ್ಸ್ ಉಳ್ಳಾಲ ಉಳಿಯ	**ಅವಿನಾಶ್ ತೊಕ್ಕೊಟ್ಟು** A1 ಫ್ಲವರ್ ಡೆಕೋರೇಟರ್ಸ್	**ಕೀರ್ತಿ ಎಲೆಕ್ಟ್ರಿಕಲ್ಸ್** ಮಂಜೇಶ್ವರ	**ಭಾಸ್ಕರ್ ಗಟ್ಟಿ** ಶ್ರೀ ಕಟೀಲ್ , S.K. ಕ್ಯಾಟರರ್ಸ್ ಮತ್ತು ಎರೇಂಜರ್ಸ್ ಕುಂಪಲ ಬೈಪಾಸ್	**ತಶ್ವಿನ್** ಅಧ್ಯಕ್ಷರು, ಮಲರಾಯ ಬಂಟ ದೈವಗಳ ಉತ್ಸವ ಸಮಿತಿ ಸೇನರ ಬೈಲು ಉಳ್ಳಾಲ
ದಿನೇಶ್ ಬಸ್ತಿ ಪಡ್ಪು ಅಧ್ಯಕ್ಷರು, ಅಯ್ಯಪ್ಪ ಮಂದಿರ (ರಿ.) ಉಳ್ಳಾಲ	**ಹರ್ಷಿತ್ ಗೋಳಿಯಡಿ** ಪ್ರಿಯ ಚಿಕನ್, ಗೋಳಿಯಡಿ ಉಳ್ಳಾಲ	**ಓಂ ಸಾಯಿ ಟ್ರೇಡರ್ಸ್** ಮಂಗಳೂರು	**ಆನಂದ ಮೆಂಡನ್** ಅಧ್ಯಕ್ಷರು, ಉಳಿಯತ್ತಾಯ ಸೇವಾ ಸಮಿತಿ	**ಸುನಿಲ್ ಕುಮಾರ್ ತೊಕ್ಕೊಟ್ಟು** ಅಧ್ಯಕ್ಷರು ಗಾಣಿಗರ ಸೇವಾ ಟ್ರಸ್ಟ್ ತೊಕ್ಕೊಟ್ಟು ಉಳ್ಳಾಲ
ಭರತ್ ಕುಮಾರ್ ಅಧ್ಯಕ್ಷರು, ಗಾಣಿಗರ ಸಂಘ ತೊಕ್ಕೊಟ್ಟು ವಲಯ	**ರಾಮದಾಸ್ ಸೋಮೇಶ್ವರ** ಅಧ್ಯಕ್ಷರು, ಗಾಣಿಗರ ಸಂಘ ಸೋಮೇಶ್ವರ	**ಚಂದ್ರಹಾಸ ಶ್ರೀಯಾನ್** ಬಿಲ್ಡಿಂಗ್ ಕಂಟ್ರಾಕ್ಟರ್ ಉಳ್ಳಾಲ	**ಶ್ರೀಮತಿ ಅಮಿತಾ ಅಶ್ವಿನ್ ಮತ್ತು ಆರೂಷ್** ಬಂಡಿಕೊಟ್ಯ ಉಳ್ಳಾಲ	**ಮೀನಾಕ್ಷಿ ದಾಮೋದರ** ಅಕ್ಕರೆಕೆರೆ, ಉಳ್ಳಾಲ
ಪ್ರಣಾಮ್ ತೊಕ್ಕೊಟ್ಟು	**ಪ್ರೀತಮ್ ಪಡುಮನೆ** ಉಳಿಯ	**ಶ್ರೀ ಉಳಿಯತ್ತಾಯ ಸೇವಾ ಸಮಿತಿ** ಉಳಿಯ	**ಶ್ರೀ ಬಾಲಮಾರುತಿ ವ್ಯಾಯಾಮ ಶಾಲೆ** ಉಳಿಯ, ಮಂಜನ ಕುದುರು	**ಶ್ರೀ ಉಳಿಯತ್ತಾಯ ಮಹಿಳಾ ವೇದಿಕೆ** ಉಳಿಯ

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಬುಧವಾರ 04, ಮಾರ್ಚ್ 2026

ಸುತ್ತ ಮುತ್ತ

ಸಸಿಹಿತ್ಲು ಬ್ರಹ್ಮಕಲಶದ ಸಿದ್ಧತೆಗಳು ಪೂರ್ಣ: ನಳಿನ್ ಕುಮಾರ್

ಮುಲ್ಕಿ: ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಮಾ.40ರಂದ 8ರವರೆಗೆ ನಡೆಯಲಿರುವ ಬ್ರಹ್ಮಕಲಶೋತ್ಸವದ ಸಿದ್ಧತೆಗಳು ಪೂರ್ಣಗೊಂಡಿದೆ ಎಂದು ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.



ಅವರು ಮಂಗಳವಾರ ಮಾಧ್ಯಮದೊಂದಿಗೆ ಮಾತನಾಡಿ, ಸಾವಿರಾರು ಮಂದಿ ಕರಸೇವಕರ ನೇತೃತ್ವದಲ್ಲಿ ದೇವಸ್ಥಾನದಲ್ಲಿ ಸ್ವಚ್ಛತೆ ಸಹಿತ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿದೆ. ಮಾ.4ರಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ ಎಂದರು. ಈ ಸಂದರ್ಭ ಕ್ಷೇತ್ರದ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಆಡಳಿತ ಸಮಿತಿ ಅಧ್ಯಕ್ಷ ವಾಮನ್ ಇಡ್ಯಾ , ಆಡಳಿತ ಮೊಕ್ತೇಸರ ಚಂದ್ರಶೇಖರ್ ಬೆಲ್ಚಡ,ಬ್ರಹ್ಮಕಲಶೋತ್ಸವ ಸಮಿತಿಯ ಪದಾಧಿಕಾರಿಗಳಾದ ಕಸ್ತೂರಿ ಪಂಜ, ಈಶ್ವರ ಕಟೀಲ್,ವಿನೋದ್ ಸಾಲ್ಯಾನ್ ಬೆಳ್ಳಾಯರು, ರಮೇಶ್ ಬಂಗೇರ, ದಿವಾಕರ ಸಾಮಾನಿ,ಮತ್ತಿತರರು ಉಪಸ್ಥಿತರಿದ್ದರು

ಮಾ.7: ಮಾರಣ ಗುಳಿಗ ವರ್ಷಾವಧಿ ಕೋಲ

ಬಂಟ್ವಾಳ: ಮೆಲ್ಕಾರ್ ಸಮೀಪದ ಮಾರ್ನಬೈಲು ಶ್ರೀ ಮಾರಣ ಗುಳಿಗ ಸಾಂಸ್ಕೃತಿಕ ಸೇವಾ ಸಮಿತಿ ಆಶ್ರಯದಲ್ಲಿ ಮಾ.7ರಂದು ರಾತ್ರಿ 9ರಿಂದ ಮಾರಣ ಗುಳಿಗ ವರ್ಷಾವಧಿ ಕೋಲ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಅಂದು ಸಂಜೆ ತುಳು ನಾಟಕ, ರಾತ್ರಿ ಗಂಟೆ 8.30ರಿಂದ ಅನ್ನಸಂತರ್ಪಣೆ ಇರಲಿದೆ ಎಂದು ಶ್ರೀ ಮಾರಣ ಗುಳಿಗ ಸಾಂಸ್ಕೃತಿಕ ಸೇವಾ ಸಮಿತಿಯ ಪ್ರಕಟಣೆ ತಿಳಿಸಿದೆ.

ಪದವು ಶ್ರೀಕ್ಷೇತ್ರ: ಇಂದಿನಿಂದ ವರ್ಷಾವಧಿ ಜಾತ್ರಾ ಮಹೋತ್ಸವ

ಬಂಟ್ವಾಳ: ತಾಲೂಕಿನ ಅಜ್ಜಿಬೆಟ್ಟು ಗ್ರಾಮದ ಪದವು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರಾ ಮಹೋತ್ಸವ ಮತ್ತು ಮಹಾರಥೋತ್ಸವ ಕ್ಷೇತ್ರದ ತಂತ್ರಿ ವೇ.ಮೂ. ಬ್ರಹ್ಮಶ್ರೀ ಶ್ರೀಪಾದ ಪಾಂಗಣ್ಣಾಯ ಅವರ ನೇತೃತ್ವದಲ್ಲಿ ಪ್ರ.ಅರ್ಚಕ ಅನಂತ ಮಹಿಮ ಮುಚ್ಚಿಂತಾಯ ಅವರ ಪೌರೋಹಿತ್ಯದಲ್ಲಿ ಮಾ.4, 9ರಂದು ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮಾ.4ಕ್ಕೆ ಬೆಳಗ್ಗೆ ದೇವತಾ ಪ್ರಾರ್ಥನೆ, ಧ್ವಜಾರೋಹಣ, ಭಜನೆ, ಸಂಜೆ ಯಕ್ಷಗಾನ ನಡೆಯಲಿದೆ. ಮಾ.5ಕ್ಕೆ ತ್ರಿಕಾಲ ಉತ್ಸವ, ರಾತ್ರಿ ಬಲಿ ಉತ್ಸವ, ಭಜನೆ, ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮಾ.6ರಂದು ಉತ್ಸವಗಳು, ಭಜನೆ, ರಾತ್ರಿ 'ಎಲ್ಲೆ ದಾದ ಏರೆಗ್ ಗೊತ್ತು' ತುಳು ನಾಟಕ ನಡೆಯಲಿದೆ. ಮಾ.7ರಂದು ದರ್ಶನ ಬಲಿ, ಭಜನೆ, ಕವಾಟ ಬಂಧನ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮಾ.8ಕ್ಕೆ ಚಂಡಿಕಾ ಯಾಗ, ತುಲಾಭಾರ ಸೇವೆ, ರಾತ್ರಿ ದೈವಗಳಿಗೆ ನೇಮ, ಮಹಾರಥೋತ್ಸವ, ಕಟೀಲು ಮೇಳದವರಿಂದ ಯಕ್ಷಗಾನ ಬಯಲಾಟ, ಧ್ವಜಾವರೋಹಣ, ಪಾವಂಜೆ ಮೇಳದವರಿಂದ ಶ್ರೀ ದೇವೀ ಮಹಾತ್ಮೆ ಯಕ್ಷಗಾನ ಪ್ರದರ್ಶನ ನಡೆಯಲಿದೆ. ಮಾ.9ರಂದು ರಂಗ ಪೂಜೆ, ಸಂಪ್ರೋಕ್ಷಣೆ ನಡೆಯಲಿದೆ ಎಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವಿವೇಕಾನಂದ ಪೂಜಾರಿ ಕೌಡೋಡಿ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಶಿಮಂತೂರು: ಉತ್ಸವ ಬಲಿ, ಚಂದ್ರಮಂಡಲ ರಥೋತ್ಸವ

ಮುಲ್ಕಿ: ಶಿಮಂತೂರು ಶ್ರೀ ಆದಿಜನಾರ್ದನ ದೇವಸ್ಥಾನದ ವರ್ಷಾವಧಿ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ದೇವರ ಧ್ವಜಾರೋಹಣದ ಉತ್ಸವ ಬಲಿ, ಚಂದ್ರಮಂಡಲ ರಥೋತ್ಸವ ಪಲ್ಲಕಿ ಉತ್ಸವ ನಡೆಯಿತು. ಈ ಸಂದರ್ಭ ದೇವಸ್ಥಾನದ ಆಡಳಿತ ಮೊಕ್ತೇಸರ ಉದಯಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿಯ ಸದಸ್ಯ ರೂಪಾ ವಿಷ್ಣುಮೂರ್ತಿ ಭಟ್, ಶಶಿಕಲಾ ಎನ್. ಕುಂದರ್, ಶಾಂತಾರಾಮ ಹೆಗ್ಡೆ ತೆಂಗಾಳಿ, ನಂದನಾ ಶೆಟ್ಟಿ ಕುಬೆವೂರು,ಅರುಣ್ ಕುಮಾರ್ ಕಟ್ಟಪುಣಿ, ಶಂಕರ್ ಮಾಸ್ಟರ್, ಮೋಹನ್ ಕೋಟ್ಯಾನ್ ಶಿಮಂತೂರು, ಬಾಲಕೃಷ್ಣ ಶೆಟ್ಟಿ ಅಂಬೆಲಬೀಡು, ಚಂದ್ರಹಾಸ ಸುವರ್ಣ, ಉದಯ ಕುಮಾರ್ ಶೆಟ್ಟಿ ಅಧಿಧನ್, ಹರೀಶ್ ಶೆಟ್ಟಿ, ದಿನೇಶ್ಚಂದ್ರ ಅಜಿಲ, ಸುರೇಶ್ ಶೆಟ್ಟಿ ಗೋಪಾಲ, ಸುದೀರ್ ಶೆಟ್ಟಿ ಶಿಮಂತೂರು ಯುವಕ ಮಂಡಲ ಮಹಿಳಾ ಭಜನಾ ಮಂಡಳಿಯ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು. ಕ್ಷೇತ್ರದಲ್ಲಿ ಮಾ.6ಕ್ಕೆ ಹಗಲು ರಥೋತ್ಸವ, ಮಾ.7 ರಾತ್ರಿ ಮಹಾ ರಥೋತ್ಸವ ನಡೆಯಲಿದೆ.

ಪುತ್ತೂರು ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ | ಪ್ರಾಂಶುಪಾಲರ ಅಮಾನತು, ಶಾಸಕರ ವರ್ತನೆಗೆ ಖಂಡನೆ

ಅಧಿಕಾರದ ದರ್ಪಕ್ಕೆ ಮಹಿಳಾ ಅಧಿಕಾರಿಗಳು ಬಲಿಪಶು: ಭಟ್

ಪುತ್ತೂರು: ಪುತ್ತೂರು ಶಾಸಕ ಅಶೋಕ್ ರೈ ಅವರು ಪ್ರಾಮಾಣಿಕ ಅಧಿಕಾರಿಗಳ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಅದರಲ್ಲೂ ಮಹಿಳಾ ಅಧಿಕಾರಿಗಳ ವಿರುದ್ಧ ಅಧಿಕಾರದ ದರ್ಪ ತೋರಿಸುವುದು, ಅಮಾನತುಗೊಳಿಸುವ ಕಾರ್ಯ ಮಾಡುತ್ತಿದ್ದಾರೆ. ಈ ಧೋರಣೆ ಇದೇ ರೀತಿ ಮುಂದುವರಿದರೆ ಶಾಸಕರ ಮನೆ, ಕಚೇರಿಯ ಮುಂದೆ ಮಹಿಳೆಯರನ್ನು ಸೇರಿಸಿ ಪ್ರತಿಭಟನೆ ಮಾಡಲು ಹಿಂಜರಿಯುವುದಿಲ್ಲ ಎಂದು ಬಿಜೆಪಿ ಮಹಿಳಾ ಮೋರ್ಚಾ ಎಚ್ಚರಿಸಿದೆ.

ಪುತ್ತೂರು ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಮಂಗಳವಾರ ಪುತ್ತೂರು ತಾಲೂಕು ಆಡಳಿತ ಸೌಧದ ಅಮರ್ ಜವಾನ್ ಜ್ಯೋತಿ ಸ್ಮಾರಕದ ಎದುರು ಶಾಸಕರ ವರ್ತನೆ ಖಂಡಿಸಿ ಪ್ರತಿಭಟನಾ ಸಭೆ ನಡೆಯಿತು.

ಮಹಿಳೆಯರಿಗೆ ಅಮಾನತು ಗ್ಯಾರಂಟಿ

ಮಹಿಳಾ ಮೋರ್ಚಾದ ರಾಜ್ಯ ಉಪಾಧ್ಯಕ್ಷೆ ಸುಲೋಚನಾ ಭಟ್ ಮಾತನಾಡಿ, ಅಲ್ಪಾವಧಿಯಲ್ಲೇ ಬಂದರೂ ಆಗದಂತಹ ಪುತ್ತೂರು ಶಾಸಕರ ಅವಧಿಯಲ್ಲಿ ಅಭಿವೃದ್ಧಿ ಇಲ್ಲದ ಪುತ್ತೂರು 80ರ ದಶಕಕ್ಕೆ ಮರಳಿದೆ. ಶಾಸಕರ ಒಣ ಜಂಭ, ಗೂಂಡಾಗಿರಿ ಸಂಸ್ಕೃತಿ ಮಾತ್ರ ಕಾಣುತ್ತಿದ್ದು ಇದಕ್ಕೆ ಮಹಿಳಾ ಅಧಿಕಾರಿಗಳು



ಬಲಿಯಾಗುತ್ತಿದ್ದಾರೆ. ಪುತ್ತೂರು ಶಾಸಕ ಮೂಲಕ ಮಹಿಳಾ ಅಧಿಕಾರಿಗಳಿಗೆ ಅಮಾನತು ಗ್ಯಾರಂಟಿ ನೀಡಲಾಗುತ್ತಿದೆ ಎಂದು ವ್ಯಂಗ್ಯವಾಡಿದರು.

ಕಾಲೇಜು ಪ್ರಾಂಶುಪಾಲರನ್ನು ಅಮಾನತು ಮಾಡಿದ್ದು, ಮಹಿಳಾ ವೈದ್ಯಾಧಿಕಾರಿ ವರ್ಗಾವಣೆ ಮಾಡಿದ್ದು ಸರಕಾರಿ ಶಾಲೆಯೊಂದರ ಮುಖ್ಯ ಶಿಕ್ಷಕಿಯನ್ನು ಕಚೇರಿಗೆ ಕರೆದು ಕಾಂಗ್ರೆಸ್ ಕಾರ್ಯಕರ್ತರ ಎದುರು ಬೈದಿರುವುದು ಇವೆಲ್ಲ ಶಾಸಕರ ಮಹಿಳಾ ವಿರೋಧಿ ನೀತಿಗೆ ಸಾಕ್ಷಿಯಾಗಿದೆ ಎಂದು ಪ್ರಶ್ನಿಸಿದರು.

ಜಾಲತಾಣದಲ್ಲಿ ಪ್ರಚಾರದ ಭ್ರಮೆ

ದರ್ಪದ ಮಾತುಗಳನ್ನು ಆಡಿ ಸಾಮಾಜಿಕ ಜಾಲತಾಣದಲ್ಲಿ ಹಾಕಿದರೆ ಪ್ರಚಾರ ಸಿಗುತ್ತದೆ ಎನ್ನುವ ಭ್ರಮೆಯಲ್ಲಿ ಇದ್ದಾರೆ. ಫಿಶ್ರೂಲ್ ಹಿಡಿದು ಗಲಾಟೆ ಮಾಡಿದಂತೆ ಶಾಸಕರಾಗಿ ಗುಂಡಾಗಿರಿ ಮಾಡಬಹುದು ಎಂದುಕೊಂಡಿದ್ದಾರೆ. ಮಹಿಳಾ ಕಾಲೇಜು ಹೊಸ ಕಟ್ಟಡ ಯಾವಾಗ ಆಗುತ್ತದೆ ಎಂಬುದನ್ನು ಸುದ್ದಿಗೋಷ್ಠಿ ನಡೆಸಿ ತಿಳಿಸಲಿ. ಯಾವುದೇ ತಪ್ಪು ಮಾಡದ ಮಹಿಳಾ ಕಾಲೇಜು ಪ್ರಾಂಶುಪಾಲರನ್ನು ಅಮಾನತು ಮಾಡಿರುವುದು ತಪ್ಪು. ಅವರ ಅಮಾನತು ರದ್ದುಪಡಿಸುವವರೆಗೆ ಹೋರಾಟ ಮಾಡಲು ನಾವು ಸಿದ್ಧ ಎಂದವರು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಡಾ. ಮಂಜುಳಾ ರಾವ್ ಮಾತನಾಡಿ, ಮಹಿಳಾ ಅಧಿಕಾರಿಗಳು ಪುತ್ತೂರಿನಲ್ಲಿ ಇರಬಾರದು ಎಂಬ ರೀತಿಯಲ್ಲಿ ಶಾಸಕರು ವರ್ತಿಸುತ್ತಿದ್ದಾರೆ. ಮಹಿಳೆಯರ ಬಗ್ಗೆ ತುಚ್ಛ ಭಾವನೆ, ತುಳಿಯುವ ಮನೋಭಾವ ಇವರಲ್ಲಿದೆ ಎಂದು ಹೇಳಿದರು.

> ಪುತ್ತೂರು ಸರಕಾರಿ ಮಹಿಳಾ ಕಾಲೇಜಿಗೆ ರೂ.6 ಕೋಟಿ ಅನುದಾನ ನೀಡಿದ್ದು ಸಂಜೀವ ಮಠಂದೂರು ಶಾಸಕರಾಗಿದ್ದಾಗ. ಈಗಿನ ಶಾಸಕರ ಕೊಡುಗೆ ಏನೂ ಇಲ್ಲ. ರಾಜ್ಯ ಕಾಂಗ್ರೆಸ್ ಸರಕಾರ, ಹಿಂದೂ ಸಂಘಟನೆಗಳನ್ನು ಮಟ್ಟ ಹಾಕಲು ಕಸರತ್ತು ಮಾಡುತ್ತಿದೆ. ಅಭಿವೃದ್ಧಿಯ ಕುರಿತು ನಾವು ಹಾಕಿರುವ ಸವಾಲುಗಳಿಗೆ ಅವರ ಉತ್ತರಿಸಲಿ. ತಪ್ಪು ಸರಿಪಡಿಸಿಕೊಂಡು ಪ್ರಾಂಶುಪಾಲರ ಅಮಾನತು ಹಿಂಪಡೆಯಲಿ.
> ● ದಯಾನಂದ ಶೆಟ್ಟಿ ಉಜಿರೆಮಾರು, ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ

ದ.ಕ.ಜಿ.ಪಂ. ಮಾಜಿ ಉಪಾಧ್ಯಕ್ಷೆ ಕಸ್ತೂರಿ ಪಂಜ ಮಾತನಾಡಿ, ಸಂಜೀವ ಮಠಂದೂರು ಶಾಸಕರಾಗಿದ್ದಾಗ ಅನೇಕ ಅಭಿವೃದ್ಧಿ ಆಗಿತ್ತು. ಈಗ ಅಭಿವೃದ್ಧಿ ಶೂನ್ಯ ಎಂದರು.

ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ದಯಾನಂದ ಶೆಟ್ಟಿ ಉಜಿರೆಮಾರು, ನಗರ ಮಂಡಲ ಅಧ್ಯಕ್ಷ ಶಿವಕುಮಾರ್ ಪಿ.ಬಿ., ಮಾಜಿ ಶಾಸಕಿ ಮಲ್ಲಿಕಾ ಪ್ರಸಾದ್, ನಗರಸಭೆ ನಿಕಟಪೂರ್ವ ಅಧ್ಯಕ್ಷೆ ಲೀಲಾವತಿ ಅಣ್ಣು ನಾಯ್ಕ, ಜಿಲ್ಲಾ ಕಾರ್ಯದರ್ಶಿ ವಿದ್ಯಾ ಗೌರಿ, ಗ್ರಾಮಾಂತರ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಯಶೋಧಾ, ಜಿ.ಪಂ. ಮಾಜಿ ಅಧ್ಯಕ್ಷೆ ಆಶಾ ತಿಮ್ಮಪ್ಪ ಗೌಡ, ಲಲಿತಾ ಶೆಟ್ಟಿ ಇದ್ದರು. ಮಾಜಿ ಶಾಸಕ ಸಂಜೀವ ಮಠಂದೂರು, ಜಿಲ್ಲಾ ಉಪಾಧ್ಯಕ್ಷ ಪ್ರಶಾಂತ್ ಮಾರ್ಲಾ, ಸುಳ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಇಂದಿರಾ ಬಿ.ಕೆ. ಸೇರಿದಂತೆ ನೂರಾರು ಮಂದಿ ಪಾಲ್ಗೊಂಡರು. ಉಪ ವಿಭಾಗಾಧಿಕಾರಿ ಮೂಲಕ ಸರಕಾರಕ್ಕೆ ಕಳುಹಿಸುವ ಮನವಿಯನ್ನು ಜಯಲಕ್ಷ್ಮೀ ಶಗ್ರಿತ್ತಾಯ ಓದಿದರು. ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ಸ್ವರ್ಣಲತಾ ಹೆಗ್ಡೆ ಸ್ವಾಗತಿಸಿದರು. ಗೌರಿ ಬನ್ನೂರು ಕಾರ್ಯಕ್ರಮ ನಿರ್ವಹಿಸಿದರು.

ಮಾ.29ರಿಂದ ಬ್ರಹ್ಮಕಲಶೋತ್ಸವ | ಕ್ಷೇತ್ರದ ಅಭಿವೃದ್ಧಿ ಕಾರ್ಯ ಚುರುಕು

ಬಳ್ಳಮಂಜ ಶ್ರೀದೇವರಿಗೆ ನೂತನ ಬ್ರಹ್ಮರಥ, ಸ್ವಾಗತ

ಮಡಂತ್ಯಾರು: ಮಚ್ಚಿನ ಬಳ್ಳಮಂಜ ಮಹತೋಭಾರ ಶ್ರೀ ಅನಂತೇಶ್ವರ ಸ್ವಾಮಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಕಾರ್ಯಕ್ರಮಗಳು ಮಾ.29ರಿಂದ ನಡೆಯಲಿದ್ದು, ಈ ಹಿನ್ನಲೆಯಲ್ಲಿ ಇಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದೆ. ಮಾ.1ರಂದು ನೂತನ ಭವ್ಯವಾದ ಬ್ರಹ್ಮರಥದ ಮೆರವಣಿಗೆಯು ನಡೆಯಿತು.



ರಥದ ಶಿಲ್ಪಿ ಹರೀಶ್ ಆಚಾರ್ಯ ಬೋಳಿಯಾರು ಇವರ ವಾಸ್ತುಶಾಸ್ತ್ರ ಪ್ರಕಾರ ದಾರು ಶಿಲ್ಪ ವೈಭವದಿಂದ ಕೂಡಿ, ನಿರ್ಮಿಸಲ್ಪಟ್ಟ ಶ್ರೀ ಕ್ಷೇತ್ರದ ಷಷ್ಠಿ ಮಹೋತ್ಸವದ ಭವ್ಯವಾದ ನೂತನ ಬ್ರಹ್ಮರಥದ ಮೆರವಣಿಗೆಯು ಪಂಚಕಟ್ಟೆ ಬಸವೇಶ್ವರ ದೇವಸ್ಥಾನ ಬಸವನಗುಡಿ ಯಿಂದ ಪ್ರಾರಂಭವಾಗಿ ಸಾಯಂಕಾಲ ಸಿಂಹ ಲಗ್ನ ಸುಮೂರ್ತದಲ್ಲಿ ನೂತನ ಬ್ರಹ್ಮರಥವನ್ನು ಶ್ರೀ ಕ್ಷೇತ್ರ ಬಳ್ಳಮಂಜದಲ್ಲಿ ಸ್ವಾಗತಿಸಲಾಯಿತು. ದೇರೆಬೈಲು ಡಾ. ಶಿವಪ್ರಸಾದ ತಂತ್ರಿ ಅವರ ಮಾರ್ಗದರ್ಶನದಲ್ಲಿ ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಸ್ವಾಗತಿಸಲಾಯಿತು.

ಮೆರವಣಿಗೆಗೆ ಚಾಲನೆ

ಶ್ರೀ ಬಸವೇಶ್ವರ ದೇವಸ್ಥಾನ ಬಸವನಗುಡಿ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪ್ರಶಾಂತ್ ಎಂ. ಮೆರವಣಿಗೆಗೆ ಚಾಲನೆ ನೀಡಿದರು.

ಬಳ್ಳಮಂಜ ದೇವಸ್ಥಾನದ ಅನುವಂಶೀಯ ಆಡಳಿತ ಮೊಕ್ತೇಸರ ಡಾ. ಎಂ. ಹರ್ಷ ಸಂಪಿಗೆತ್ತಾಯ, ಬೆಳ್ತಂಗಡಿ ಉಪ ತಹಶೀಲ್ದಾರ ಜಯ ಪ್ರವೀಣ್, ಪುಂಜಾಲಕಟ್ಟೆ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಆಡಳಿತ ಧರ್ಮದರ್ಶಿ ನಾಗೇಶ್ ಪ್ರಭು, ಶ್ರೀ ಕ್ಷೇತ್ರ ಪಾರೆಂಕಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪುನಿತ್ ಕುಮಾರ್, ಮಡಂತ್ಯಾರು ಉದ್ಯಮಿ ವಿಠಲ ಶೆಟ್ಟಿ ಮೂಡಯೂರು, ಮಂಗಳೂರು ಉದ್ಯಮಿ ವಾಸುದೇವಾ ಭಟ್, ತಣ್ಣೀರುಪಂತ ಸಹಕಾರಿ ಸಂಘದ ಉಪಾಧ್ಯಕ್ಷ ಸುನೀಲ್, ಜೋಗಿತ್ತಾಯರು, ವಿಶು ಸಂಪಿಗೆತ್ತಾಯ, ಯೋಗೀಶ್ ಪೂಜಾರಿ ಕಡ್ತಿಲ, ಚಂದ್ರಕಾಂತ ನಿಡ್ಡಾಜೆ, ಸತೀಶ್ ಕಾರಂದೂರು, ಪ್ರಶಾಂತ್ ಶೆಟ್ಟಿ ಮೂಡಯೂರ್, ಪ್ರಮೋದ್ ಕುಮಾರ್, ನಾರಾಯಣ ಪೂಜಾರಿ, ದುಗ್ಗಪ್ಪ ಗೌಡ, ಪದ್ಮನಾಭ ಶೆಟ್ಟಿ ಅರ್ಕಜೆ,ವಸಂತಪದ್ಮನಾಭ, ವಿದ್ಯಾಸಾಗರ ಶಾಲಾ ಸಂಚಾಲಕ ಕೆ. ಕೆ. ರೆಡ್ಡಿ, ತಿಲಕ್, ವಸಂತ ಮರಕಡ, ಕುಮಾರಯ್ಯ, ಕುಮಾರ ನಾಯ್ಕ ದೇವಾಲಯದ ಪ್ರಬಂಧಕ ಬಾಲಕೃಷ್ಣ ಬಿ. ಉಪಹಾರದ ಸೇವಕರ್ತರು, ಸುಪದ್ಮ ನಿತ್ಯಾನಂದ ಹೆಗ್ಡೆ ಮಡಂತ್ಯಾರು, ಸುಧಾ ಯಶವಂತ ಗೌಡ ಕುದುಂಗು,ಜಯಪ್ರಕಾಶ್, ಅಶ್ವಿನಿ ಎಂಟರ್ ಪ್ರೈಸಸ್ ಪುಂಜಾಲಕಟ್ಟೆ ಗಂಗಾಧರ, ಮಿತ್ರ ವೀಲ್ ಮೊದಲಾದ ಗಣ್ಯರು, ಭಕ್ತಾದಿಗಳು ಸಾವಿರಾರು ಸಂಖ್ಯೆಯಲ್ಲಿ ಉಪಸ್ಥಿದ್ದರು.

ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸಂಭ್ರಮ

ಇಂದು ವಿಜಯಗೋಪುರ, ಕೃತಿ ಲೋಕಾರ್ಪಣೆ

ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಅಂಗವಾಗಿ ನೂತನವಾಗಿ ನಿರ್ಮಾಣಗೊಂಡ 'ವಿಜಯಗೋಪುರ'ವನ್ನು ಫೆ.4ರಂದು ಬೆಳಿಗ್ಗೆ ಬ್ರಹ್ಮಶ್ರೀ ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿಗಳವರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದು ಬೆಳಿಗ್ಗೆ 9.30ಕ್ಕೆ ನೂತನ ವಿಜಯ ಗೋಪುರ ಲೋಕಾರ್ಪಣೆಗೊಳ್ಳಲಿದೆ.



ಸುದರ್ಶನ ಸಭಾಭವನದಲ್ಲಿ ನಡೆಯ ಲಿರುವ ಕಾರ್ಯಕ್ರಮದಲ್ಲಿ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಶ್ರೀಗಳವರು ದೀಪ ಪ್ರಜ್ವಲಿಸಿ,ಆಶೀರ್ವಚನ ನೀಡಲಿರುವರು. ಧರ್ಮಸ್ಥಳ ಧರ್ಮಾಧಿಕಾರಿ ಡಾ!ಡಿ. ವೀರೇಂದ್ರ ಹೆಗ್ಗಡೆಯವರು ವಿಜಯ ಗೋಪುರ ಲೋಕಾರ್ಪಣೆಗೊಳಿಸಲಿದ್ದಾರೆ. ವಿಜಯಗೋಪುರ ನಿರ್ಮಾಣ ಸಮಿತಿ ಅಧ್ಯಕ್ಷ ಶಶಿಧರ ಶೆಟ್ಟಿ ನವಶಕ್ತಿ ಬರೋಡ ಅಧ್ಯಕ್ಷತೆ ವಹಿಸಲಿದ್ದು ಸಂಸ್ಕೃತಿ ಚಿಂತಕ ದಾಮೋದರ ಶರ್ಮ ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅಭ್ಯಾಗತರಾಗಿ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಧರ್ಮಸ್ಥಳದ ಡಿ. ಹರ್ಷೇಂದ್ರ ಕುಮಾರ್,ಶಾಸಕ ಹರೀಶ್ ಪೂಂಜ, ವಿಧಾನ ಪರಿಷತ್ ಶಾಸಕ ಪ್ರತಾಪ ಸಿಂಹ ನಾಯಕ್, ಮೆಸ್ಕಾಂ ಅಧ್ಯಕ್ಷ ಕೆ. ಹರೀಶ್ ಕುಮಾರ್,ಉದ್ಯಮಿ ಶ್ರೀಪತಿ ಭಟ್, ಕಾಂಗ್ರೆಸ್ ಮುಖಂಡ ಎಂ. ಶ್ರೀಕಾಂತ್, ಮಾಜಿ ಶಾಸಕ ಎಚ್. ಎಂ. ರಮೇಶ್ ಗೌಡ, ಪ್ರತಾಪ್ ಆರ್. ಗೌಡ, ಕರವೇ ರಾಮಮೂರ್ತಿ, ವಾಸ್ತು ತಜ್ಞ ರಮೇಶ್ ಕಾರಂತ್ ಬೆದ್ರಡ್ಕ ಭಾಗವಹಿಸಲಿರುವರು. ಇದೇ ಸಂದರ್ಭದಲ್ಲಿ ವಾಸ್ತುತಜ್ಞ ರಮೇಶ್ ಕಾರಂತ,ಬೆನಕ ಕನ್ಸ್ಟ್ರಕ್ಷನ್ಸ್ ನ ಗಣೇಶ್ ಗೌಡ, ಶಿಲ್ಪಿ ಗಳಾದ ರಮೇಶ್ ಲಾಯಿಲ, ಕೃಷ್ಣಪ್ಪ ಕಾಷ್ಠ ಶಿಲ್ಪಿ ಶಶಿಧರ ಆಚಾರ್ಯ, ಶೇಖರ ಸೋಮೇಶ್ವರ, ಉಜಿರೆಯ ಮಾತೃಶಕ್ತಿ ಶಿಲಾ ಸಂಚಯನ ಸಮಿತಿ, ವಿದ್ಯುತ್ ಗುತ್ತಿಗೆದಾರ ಲೋಕೇಶ್ ರೈ ಮತ್ತು ಬಿ. ರಾಜ ಹೆಗ್ಡೆ ಅವರಿಗೆ ಗೌರವಾರ್ಪಣೆ ನಡೆಯಲಿದೆ. ಕೀರ್ತಿಶೇಷ ವಿಜಯರಾಘವ ಪಡುವೆಟ್ನಾಯರ ಕುರಿತಾದ ಅನುಭವಗಳ ಸಂಗ್ರಹ ಕೃತಿ ಉಜಿರೆ ಅಶೋಕ ಭಟ್ ಸಂಪಾದಕತ್ವದ 'ವಿಜಯ ಪರ್ವ' ಮತ್ತು ಲೇಖಕ ಸಾಂತೂರು ಶ್ರೀನಿವಾಸ ತಂತ್ರಿಯವರ 'ಉಜಿರೆ ಶ್ರೀ ಜನಾರ್ದನ ದೇವಸ್ಥಾನ' ಕ್ಷೇತ್ರ ಪರಿಚಯ ಕೃತಿ ಯನ್ನು ಡಾ. ಹೆಗ್ಗಡೆ ಅನಾವರಣಗೊಳಿಸಲಿದ್ದಾರೆ. ಸಂಜೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮೂಡಬಿದ್ರಿಯ ಡಾ. ಮೋಹನ ಆಳ್ವ ಉದ್ಘಾಟಿಸಲಿದ್ದು, ಜೈನ ಮಠದ ಡಾ. ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾ ಸ್ವಾಮಿಗಳು ಆಶೀರ್ವಚನ ನೀಡಲಿದ್ದಾರೆ. ಬಳಿಕ ಪುತ್ತೂರು ನರಸಿಂಹ ನಾಯಕರಿಂದ ದಾಸಾಮೃತ ಭಕ್ತಿಗಾಯನ, ಶ್ರೇಯಾ ಕೊಳತ್ತಾಯ ಸುರತ್ಕಲ್ ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಕೊಡವೂರು ನೃತ್ಯನಿಕೇತನದ ಮಾನಸಿ ಸುಧೀರ್ ಮತ್ತು ವೃಂದದವರಿಂದ 'ನಾರಸಿಂಹ' ನೃತ್ಯ ರೂಪಕ ನಡೆಯಲಿದೆ. ಶ್ರೀಕೃಷ್ಣಾನುಗ್ರಹ ಸಭಾಭವನದಲ್ಲಿ ಭಗವದ್ಗೀತಾ ಪಾರಾಯಣ, ಉಜಿರೆ ಎಸ್‌ಡಿಎಂ ಸೆಕೆಂಡರಿ ಶಾಲಾ ವಿದ್ಯಾರ್ಥಿ ಗಳಿಂದ 'ಶಶಿಪ್ರಭಾ ಪರಿಣಯ' ಪ್ರಸಂಗದ ಯಕ್ಷಗಾನ ಮತ್ತು ಮಂದಾರ ಕಲಾವಿದರಿಂದ 'ಮಾಯದ ತುಡರ್' ತುಳು ನಾಟಕ ಪ್ರದರ್ಶಿಸಲ್ಪಡಲಿದೆ.

ಇರುವೈಲು ಶ್ರೀ ಕ್ಷೇತ್ರದಲ್ಲಿ ಜಾತ್ರಾ ಮಹೋತ್ಸವ ಆರಂಭ, ಧ್ವಜಾರೋಹಣ



ಕೈಕಂಬ: ಇರುವೈಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಬ್ರಹ್ಮಶ್ರೀ ಶಿಬರೂರು ಗೋಪಾಲಕೃಷ್ಣ ತಂತ್ರಿಗಳ ನೇತೃತ್ವದಲ್ಲಿ ನಡೆಯುವ ವರ್ಷಾವಧಿ ಜಾತ್ರಾ ಮಹೋತ್ಸವ ಹಾಗೂ ಮಹಾ ರಥೋತ್ಸವದ ಧ್ವಜಾರೋಹಣ ಮಂಗಳವಾರ ನಡೆಯಿತು.

ಬೆಳಿಗ್ಗೆ ಧ್ವಜಾರೋಹಣ ನೆರವೇರಿದ ಬಳಿಕ ಚಂದ್ರಗ್ರಹಣ ನಿಮಿತ್ತವಾಗಿ ಗ್ರಹಣ ಸ್ಪರ್ಶಕ್ಕಿಂತ ಮುನ್ನ ಧ್ವಜಾವರೋಹಣ ಮಾಡಿ ಸಂಜೆ 6.48ಕ್ಕೆ ಗ್ರಹಣ ಅಂತ್ಯಗೊಂಡ ಬಳಿಕ ಮತ್ತೊಮ್ಮೆ ಧ್ವಜಾರೋಹಣ ಪೂರ್ವದ ವಿಧಿವಿಧಾನಗಳನ್ನು ನೆರವೇರಿಸಿ ರಾತ್ರಿ 7:35ರ ಬಳಿಕ ಧ್ವಜಾರೋಹಣ ನೆರವೇರಿಸಲಾಯಿತು. ದೇವಸ್ಥಾನದ ಅರ್ಚಕ ಐ.ರಾಘವೇಂದ್ರ ಭಟ್, ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷೆ ಸುಜಾತ ಜೆ. ಶೆಟ್ಟಿ ಕಿಟ್ಟುಬೆಟ್ಟು, ಸದಸ್ಯರಾದ ಪೂವಪ್ಪ ಸಾಲ್ಯಾನ್, ತಂಗಿಲ, ಶುಭಕರ ಕಾಜವ, ಕುವೆಸ್ಥಳ ಬಾಳಿಕೆ, ಪದ್ಮನಾಭ ಪೂಜಾರಿ ಕನದ್ರಕೋಡಿ, ದೀಪಾ ದಿನೇಶ್ ಬಟಾರ, ಮೋಹನ್ ನಾಯಕ್ ಪಂಜ, ಪ್ರದೀಪ್ ಶೆಟ್ಟಿ ಕುತ್ಯಾಡಿ, ಶಿವಾನಂದ ನಾಯ್ಕ ಕೊಡಂಗೆ, ಮತ್ತು ಗುತ್ತು ಬಾಳಿಕೆ ಮನೆತನದವರು, ಸ್ಥಳೀಯ ಸಂಘಟನೆಗಳ ಪ್ರಮುಖರು, ಧಾರ್ಮಿಕ ಮತ್ತು ಸಾಮಾಜಿಕ ಮುಂದಾಳುಗಳು, ದೇವಸ್ಥಾನದ ಅರ್ಚಕ ವೃಂದ, ಸಿಬ್ಬಂದಿಗಳು ಹಾಗೂ ಪುಚ್ಚಮೊಗರು, ಹೊಸಬೆಟ್ಟು ತೋಡಾರು, ತೆಂಕ ಮಿಜಾರು, ಬಡಗ ಮಿಜಾರು, ಎಡಪದವು, ಬಡಗಎಡಪದವು, ಕಿಲೆಂಜಾರು, ಕರ್ಪೆ, ಗ್ರಾಮಗಳ ಭಕ್ತರು ಇದ್ದರು.

ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಸ್ಥಾನ 2ನೇ ಹುಣ್ಣಿಮೆ ಮಖೆಕೂಟ

ಉಪ್ಪಿನಂಗಡಿ: ಇತಿಹಾಸ ಪ್ರಸಿದ್ಧ ಇಲ್ಲಿನ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಸ್ಥಾನ ದಲ್ಲಿ ಸೋಮವಾರದಂದು ಹುಣ್ಣಿಮೆ 2ನೇ ಮಖೆ ಕೂಟ ಹಾಗೂ ರಥೋತ್ಸವ ನಡೆಯಿತು.



ಮಖೆ ಜಾತ್ರೆಯ ಪ್ರಯುಕ್ತ ಸೋಮವಾರ ರಾತ್ರಿ ಶ್ರೀ ದೇವರ ಬಲಿ ಹೊರಟು ಉತ್ಸವ ನಡೆಯಿತು. ಬಳಿಕ ದೇವರು ರಥಾರೂಢರಾಗಿ ಭಕ್ತಾದಿಗಳಿಂದ ಬ್ರಹ್ಮರಥ ಸೇವೆ ನಡೆದು ರಥಬೀದಿಯಲ್ಲಿ ರಥೋತ್ಸವವು ಜರುಗಿತು. ಬಳಿಕ ಬಲಿಯಾಗಿ ಮಹಾಪೂಜೆ ನಡೆಯಿತು. ಇದೇವೇಳೆಕೈಗೊಂಡ ಆಕರ್ಷಕ ಸುಡುಮದ್ದು ಪ್ರದರ್ಶನವೂ ಕಣ್ಮನ ಸೆಳೆಯಿತು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಉಪ್ಪಿನಂಗಡಿಯ ಯಕ್ಷ ಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ವತಿಯಿಂದ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ಕೃಪಾಪೋಷಿತ ಯಕ್ಷಗಾನ ಮಂಡಳಿ ನಾಗವೃಜ ಕ್ಷೇತ್ರ ಇವರಿಂದ ಶ್ರೀ ತುಳಸಿ ಯಕ್ಷಗಾನ ಪ್ರದರ್ಶನ ನಡೆಯಿತು. ಕಾರ್ಯಕ್ರಮದಲ್ಲಿ ಸಾಧಕರಿಗೆ ಸನ್ಮಾನದ ಗೌರವ ಸಲ್ಲಿಸಲಾಯಿತು.

ಮಂಗಳವಾರ ಪ್ರಾತಃಕಾಲ ನದಿಯಲ್ಲಿ ಪವಿತ್ರ ಮಖೆ ತೀರ್ಥಸ್ನಾನ ನಡೆದು, ಬೆಳಗ್ಗೆ ಬಲಿ ಹೊರಟು ಉತ್ಸವ, ದರ್ಶನ ಬಲಿ, ಬಟ್ಟಲು ಕಾಣಿಕೆ, ಮಹಾಕಾಳಿ ಅಮ್ಮನವರ ನೇಮಕ್ಕೆ ಪಡಿಯಕ್ಕಿ ಕೊಟ್ಟು, ಮಹಾಪೂಜೆ ನಡೆಯಿತು. ಬಳಿಕ ಚಂದ್ರಗ್ರಹಣದ ಕಾರಣಕ್ಕೆ ದೇವಳದ ಧ್ವಜ ಸ್ತಂಭದಿಂದ ಧ್ವಜವನ್ನು ಅವರೋಹಣಗೊಳಿಸಿ ಗ್ರಹಣ ಮೋಕ್ಷಗೊಂಡ ಬಳಿಕ ಪುನರಪಿ ಧ್ವಜಾರೋಹಣ ಮಾಡಲಾಯಿತು.

ಈ ಸಂದರ್ಭ ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್, ಸಮಿತಿಯ ಸದಸ್ಯ ಹರೀಶ್ ಉಪಾಧ್ಯಾಯ, ಬಿ. ಗೋಪಾಲಕೃಷ್ಣರೈ, ಸೋಮನಾಥ, ಡಾ. ರಮ್ಯಾ ರಾಜಾರಾಮ್, ಅನಿತಾ ಕೇಶವ ಗೌಡ, ಕೃಷ್ಣ ರಾವ್ ಅರ್ತಿಲ, ದೇವಿದಾಸ್ ರೈ ಬಿ., ಎಂ. ವೆಂಕಪ್ಪ ಪೂಜಾರಿ, ಕಾರ್ಯ ನಿರ್ವಹಣಾಧಿಕಾರಿ ಕವಿತ ಎಂ., ಪ್ರಮುಖರಾದ ಚಂದಪ್ಪ ಮೂಲ್ಯ, ವೆಂಕಟರಮಣ ರಾವ್, ಪಟ್ಲ ಸತೀಶ್ ಶೆಟ್ಟಿ ಡಾ. ರಾಜಾರಾಮ ಕೆ.ಬಿ., ಕರುಣಾಕರ ಸುವರ್ಣ, ಸುಂದರ ಗೌಡ, ಸುದರ್ಶನ ಎಂ., ಯು. ರಾಮ, ಹರಿರಾಮಚಂದ್ರ, ಮಹೇಶ್ ಬಜತ್ತೂರು ಮತ್ತಿತರರಿದ್ದರು.

ಸಿದ್ದಕಟ್ಟೆ ಜನೌಷಧಿ ಕೇಂದ್ರದಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ



ಬಂಟ್ವಾಳ: ಜನೌಷಧಿ ದಿವಸ್ ಇದರ ಪ್ರಯುಕ್ತ ಸಿದ್ಧಕಟ್ಟೆ ಜನೌಷಧಿ ಕೇಂದ್ರ ದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮ ನಡೆಯಿತು.

ಪೂಂಜಾ ಶ್ರೀ ಪಂಚ ದುರ್ಗಾ ಪರಮೇಶ್ವರಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ರತ್ನ ಕುಮಾರ್ ಚೌಟ, ಸಿದ್ಧಕಟ್ಟೆ ಸಿ.ಎ ಬ್ಯಾಂಕ್ ಅಧ್ಯಕ್ಷ ಪ್ರಭಾಕರ ಪ್ರಭು, ಸಂಗಬೆಟ್ಟು ಗ್ರಾ.ಪಂ. ಮಾಜಿ ಅಧ್ಯಕ್ಷ ಸತೀಶ್ ಕುಮಾರ್ ಅಳಿಕೆ, ಗಾಡಿಪಲ್ಕೆ ಕುಲಾಲ ಸಂಘದ ಗೌರವಾಧ್ಯಕ್ಷ ರಾಮಯ್ಯ ಕುಲಾಲ್, ಡಾ. ಮೂರ್ತಿ ಮತ್ತು ಡಾ.ದೀಕ್ಷಿತ್ ಇದ್ದರು. ಈ ಸಂದರ್ಭ ಸ್ಥಳೀಯ ಅಂಗನವಾಡಿ ಕೇಂದ್ರಕ್ಕೆ ಪೌಷ್ಟಿಕ ಆಹಾರವನ್ನು ಸಂಸ್ಥೆಯ ವತಿಯಿಂದ ವಿತರಿಸಲಾಯಿತು. ಸಿದ್ಧಕಟ್ಟೆ ಜನೌಷಧಿ ಕೇಂದ್ರ ಮಾಲಕ ಮನೋಜ್ ಕುಲಾಲ್ ಬಸಬೈಲು ಸ್ವಾಗತಿಸಿದರು. ಸಂಸ್ಥೆಯ ಉದ್ಯೋಗಿ ಮುಶೀನ ನಿರೂಪಿಸಿ, ಧನುಶ್ ವಂದಿಸಿದರು

> **250ಕ್ಕೂ ಹೆಚ್ಚು ಮಂದಿಯ ತಪಾಸಣೆ**
> ಆರೋಗ್ಯ ಶಿಬಿರದಲ್ಲಿ ಉಚಿತ ಬಿ.ಪಿ ಪರೀಕ್ಷೆ , ಮಧುಮೇಹ ಪರೀಕ್ಷೆ ಮತ್ತು ಇಸಿಜಿ ತಪಾಸಣೆ ನಡೆಸಲಾಯಿತು. 250ಕ್ಕೂ ಹೆಚ್ಚುಮಂದಿ ಶಿಬಿರದ ಸದುಪಯೋಗ ಪಡೆದರು.

ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ | ಎರಡನೇ ದಿನದ ಧಾರ್ಮಿಕ ಸಭಾ ಕಾರ್ಯಕ್ರಮ

ಊರಿನ ದೇವಸ್ಥಾನ ಜೀರ್ಣೋದ್ಧಾರದಿಂದ ಗ್ರಾಮಸ್ಥರ ಶ್ರೇಯಸ್ಸು ಸಾಧ್ಯ: ಸುಬ್ರಹ್ಮಣ್ಯ ಶ್ರೀ

ಬೆಳ್ತಂಗಡಿ: ದೇವರ ವ್ಯಾಪ್ತಿ ಎಲ್ಲಾ ಕಡೆಯಲ್ಲಿದೆ. ಭಗವಂತನ ಎಲ್ಲಾ ಕಡೆಯಲ್ಲಿ ಇದ್ದಾನೆ ಎಂಬ ಬಲವಾದ ನಂಬಿಕೆಯಿಂದ ನಾವು ಆರಾಧಿಸುತ್ತೇವೆ. ಊರಿನ ದೇವಸ್ಥಾನ ಜೀರ್ಣೋದ್ಧಾರಗೊಂಡಲ್ಲಿ ದೇವರ ಪರಮಾನುಗ್ರಹ ಗ್ರಾಮಸ್ಥರಿಗೆ ಪ್ರಾಪ್ತಿಯಾಗುತ್ತದೆ. ದೇವರಿಗೆ ಬ್ರಹ್ಮಕಲಾಶಭಿಷೇಕ ಆಗುವ ಮೂಲಕ ನಮ್ಮ ಶ್ರೇಯೋಭಿವೃದ್ಧಿಗೆ ಬ್ರಹ್ಮಕಲಶವಾಗುತ್ತದೆ. ರುದ್ರ ದೇವರು ಮನಶಕ್ತಿಗೆ ಬಲ ತುಂಬುವ ದೇವರು. ಹಾಗಾಗಿ ಅವರು ಮನಸ್ಸಿಗೆ ಶಕ್ತಿ ನೀಡಿದಲ್ಲಿ ಭಕ್ತಿ ಬೆಳಕು ಅರಳುತ್ತದೆ. ದೇವರಲ್ಲಿ ಸ್ವಯಂ ಶಕ್ತಿ ಇರುವುದರಿಂದ ಶ್ರದ್ಧಾ ಭಕ್ತಿಯಿಂದ ಭಗವಂತನನ್ನು ಆರಾಧಿಸಬೇಕು ಎಂದು ಸುಬ್ರಹ್ಮಣ್ಯ ಮಠದ ಶ್ರೀ ಡಾ. ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು ಆಶೀರ್ವಚನ ನೀಡಿದರು.



ಅವರು ಪದ್ಮುಂಜ ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ ಪ್ರಯುಕ್ತ ಮಾ.2ರಂದು ನಡೆದ ಎರಡನೇ ದಿನದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಧಾರ್ಮಿಕ ಚಿಂತಕ ದಾಮೋದರ್ ಶರ್ಮ ಕಾರ್ಕಳ ಮಾತನಾಡಿ, ಉತ್ಸವದಲ್ಲಿ ಚಿಕ್ಕಪುಟ್ಟ ಕೆಲಸಗೈದವರನ್ನು ಗುರುತಿಸುವುದೇ ನಿಜವಾದ ಬ್ರಹ್ಮಕಲಶೋತ್ಸವ ಇದಕ್ಕೆ ಮಲೆಂಗಲ್ಲು ಸಾಕ್ಷಿಯಾಗಿದೆ. ಬೆಟ್ಟದ ತುತ್ತ ತುದಿಯಲ್ಲಿ ವಿರಾಜಮಾನರಾಗಿ ಶಿವ-ಪಾರ್ವತಿಯರು ಲೋಕಾನುಗ್ರಹ ಮಾಡುವ ಪುಣ್ಯ ಭೂಮಿ. ದೇವರ ಸೇವೆಯಲ್ಲಿ ತಾರತಮ್ಯ ರಹಿತವಾಗಿ ಸೇವೆ ಮಾಡಬೇಕು. ಬಿಸಿಲು, ಹಗಲು, ರಾತ್ರಿ ಎನ್ನದೇ ದೇವರು ಸೇವೆ ಎಂದು ಮಾಡುವ ಸ್ವಯಂ ಸೇವಕರು ನಿಜವಾಗಿ ದೇವರು ಭಕ್ತರು ಎಂದರು.

ಮತ-ಧರ್ಮಗಳಲ್ಲಿ ಸಂಘರ್ಷ ನಡೆಸದೆ ಮಾನವೀಯತೆಯಿಂದ ನಮ್ಮ ಧರ್ಮದಲ್ಲಿ ಬದುಕಿ ಇನ್ನೊಬ್ಬರ ಧರ್ಮವನ್ನು ಗೌರವಿಸಿ ಜೀವಿಸಿದಲ್ಲಿ ಬದುಕು ಸಾರ್ಥಕತೆ ಆಗುತ್ತದೆ. ಪರಸ್ಪರ ಪ್ರೀತಿ, ವಿಶ್ವಾಸ, ಅನ್ಯೋನ್ಯತೆಯಿಂದ ಸಮಾಜದಲ್ಲಿ ಬದುಕುಬೇಕು. ಈಶ ಸೇವೆ ಹಾಗೂ ದೇಶ ಸೇವೆ ಒಟ್ಟಾಗಿ ನಡೆದಲ್ಲಿ ಬದುಕು ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ವಿದೇಶಿ ಸಂಸ್ಕಾರವನ್ನು ಅವರ ದೃಷ್ಟಿಯಿಂದ ಕಂಡು ಗೌರವಿಸಿ ಸಂತೋಷ ಪಡಿ ಆದರೆ ನಮ್ಮದಾಗಿಸುವುದು ಬೇಡ, ನಾವು ಭಾರತೀಯರು ಎನ್ನುವುದು ಜಾಗೃತವಾಗಲಿ ಎಂದು ಧಾರ್ಮಿಕ ಉಪನ್ಯಾಸ ನೀಡಿದರು.

ಆರಿಕೋಡಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಧರ್ಮದರ್ಶಿ ಹರೀಶ್ ಆರಿಕೋಡಿ ಮಾತನಾಡಿ ದರು. ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಶಿವಶಂಕರ್ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಿಠ್ಠಲ ಶೆಟ್ಟಿ ಕೊಲ್ಲೊಟ್ಟು, ಆಡಳಿತ ಮಂಡಳಿ ಅಧ್ಯಕ್ಷ ಸದಾನಂದ ಮೇಲಾಂಟ ಮೊಗರೋಡಿ, ಪ್ರಮುಖರಾದ ಡಾ. ಆಶಾಲತಾ ಪಿ., ಕೆ. ಎನ್. ಸುಧೀರ್ ಕುಮಾರ್ ಹಲೇಜಿ, ಸಂಪತ್ ಸುವರ್ಣ, ಯೋಗೀಶ್ ಪೂಜಾರಿ ಕಡ್ತಿಲ, ಪದ್ಮನಾಭ ಶಿಲ್ಪಿ ಪುರುಷೋತ್ತಮ ಗೌಡ ಮುಗೆರೋಡಿ, ರವಿ. ಎಸ್., ಇದ್ದರು. ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಪ್ರಫುಲ್ಲಚಂದ್ರ ಆಡ್ಯಂತಾಯ ಮೊಗರೋಡಿ ವರದಿ ವಾಚಿಸಿದರು. ಜಯರಾಮ್ ಶೆಟ್ಟಿ ಸ್ವಾಗತಿಸಿ, ಆಡಳಿತ ಮಂಡಳಿ ಕಾರ್ಯದರ್ಶಿ ಜಿತೇಶ್ ಜೈನ್ ವಂದಿಸಿ, ಮಾಧವ ಗೌಡ ಹಾಗೂ ಶೋಭಾ ಪಿ.ಎಸ್. ನಿರೂಪಿಸಿದರು. ಅನುವಂಶೀಯ ಮೊಕ್ತೇಸ ಚಿದಾನಂದ ರಾವ್ ಕೊಲ್ಲಾಜೆ 'ಮಲೆಂಗಲ್ಲುದ ಮೂರ್ತಿ' ಧ್ವನಿ ಸುರಳಿ ಬಿಡುಗಡೆ ಗೊಳಿಸಿದರು. ವಿವಿಧ ವೈದಿಕ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

> **ಆಚರಣೆ ಪಾಲಿಸಿ**
> ದೇವಸ್ಥಾನಗಳು ಧಾರ್ಮಿಕ ಪ್ರಜ್ಞೆ ಮೂಡಿಸುದರ ಜೊತೆಗೆ ಸಂಸ್ಕಾರಯುತ ಬದುಕನ್ನು ಕಟ್ಟಿಕೊಡುತ್ತದೆ. ಜಗತ್ತಿನಲ್ಲಿ ಯಾರೂ ಸೋಲು ಕಂಡರು ಬದುಕುಲ ಅನ್ನ ನೀಡಿದ ಪುಣ್ಯ ಭೂಮಿ ಭಾರತ. ಆದರೆ ಭಾರತವನ್ನು ಸೋಲುವಂತೆ ನಾವು ಮಾಡದೇ ಭಾರತೀಯ ಪರಂಪರೆ, ಸಂಸ್ಕೃತಿಯನ್ನು ಉಳಿಸಬೇಕು. ಪರದೇಶದ ಸಂಸ್ಕೃತಿಯನ್ನು ಪ್ರತಿಪಾದಿಸುವ ಬದಲು ನಮ್ಮ ಹಿರಿಯರಿಂದ ಬಂದ ಆಚರಣೆಗಳನ್ನು ಜೀವಂತರಾಗಿಸಿ ಮುಂದೆ ಸಾಗಿಸಬೇಕು.
> ● ದಾಮೋದರ್ ಶರ್ಮ ಕಾರ್ಕಳ

ಸುತ್ತ ಮುತ್ತ

ಪೈಚಾರು ದೇವಸ್ಥಾನದ ಬ್ರಹ್ಮಕಲಶ: ಸಿದ್ಧತೆ ಕುರಿತು ಪೂರ್ವಭಾವಿ ಸಭೆ

ಸುಳ್ಯ: ಪೈಚಾರು ಜೀರ್ಣೋದ್ಧಾರಗೊಳ್ಳುತ್ತಿರುವ ಶ್ರೀ ಮಾರಿಯಮ್ಮ ವೀರಭದ್ರ ಸ್ವಾಮಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಕುರಿತ ಪೂರ್ವಭಾವಿ ಸಭೆಯು ಓಡಬಾಯಿ ಖಾಸಗಿ ರಂಗಮಂದಿರದಲ್ಲಿ ನಡೆಯಿತು. ಶಾಂತಿನಗರ, ಹಳೆಗೇಟು, ಸೋಣಂಗೇರಿ, ಪಿಲಿಕೋಡಿ, ಕುಕ್ಕುಂದೂರು ಪರಿಸರದ ಧಾರ್ಮಿಕ ಸಾಮಾಜಿಕ ರಾಜಕೀಯ ಮತ್ತು ವಿವಿಧ ಸಂಘಟನೆಯ ಪ್ರಮುಖರ ಸಭೆಯಲ್ಲಿ ಏ.21 ರಿಂದ 23 ರ ತನಕ ಜರುಗುವ ಬ್ರಹ್ಮಕಲಶೋತ್ಸವದ ಈ ಕುರಿತಾಗಿ ಆಮಂತ್ರಣ ಪತ್ರಿಕೆ ಹಾಗೂ ವಿವಿಧ ಜವಾಬ್ದಾರಿಗಳ ಕುರಿತಾಗಿ ಚರ್ಚೆ ನಡೆಸಲಾಯಿತು. ಈ ಸಂದರ್ಭದಲ್ಲಿ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಎಂ.ಸುಂದರ ರಾವ್, ಕಾರ್ಯಾಧ್ಯಕ್ಷ ದೇವಿ ಪ್ರಸಾದ್ ಇಂಜಿನಿಯರ್, ಪ್ರಧಾನ ಕಾರ್ಯದರ್ಶಿ ಯಶವಂತ ಪಟ್ರಕೋಡಿ, ಕೋಶಾಧಿಕಾರಿ ಕೇಶವ ಮಾಸ್ತರ್ ಹೊಸಗದ್ದೆ, ಸಂಚಾಲಕ ರಾಜೇಶ್ ಶೆಟ್ಟಿ ಮೇನಾಲ, ಉಪಾಧ್ಯಕ್ಷ ಚಿದಾನಂದ ವಿದ್ಯಾನಗರ, ಸಹ ಸಂಚಾಲಕ ನಾರಾಯಣ ಎಸ್. ಎಂ. ಶಾಂತಿನಗರ, ಕಾರ್ಯದರ್ಶಿ ರಾಘವ ಪೆರಾಜೆ, ಜಗದೀಶ್ ಎನ್.ಆರ್, ಗೌರವ ಸಲಹೆಗಾರರಾದ ಚಂದ್ರರಾವ್, ಆನಂದ ಬೆಟ್ಟಂಪಾಡಿ, ದಾಮೋದರ ಮಂಚಿ, ಬಾಲಗೋಪಾಲ ಸೇರ್ಕಜೆ, ಮಲ್ಲೇಶ್ ಬೆಟ್ಟಂಪಾಡಿ, ಸೇವಾ ಸಮಿತಿಯ ಅಧ್ಯಕ್ಷ ವೇಣುಗೋಪಾಲ ಎಸ್., ಮೊಕ್ತೇಸರ ಸಂಜೀವ, ಹರ್ಷ ಕರುಣಾಕರ, ಸಿಂಧೂರ ಶೇಟ್, ಸಂಧ್ಯಾ ರಾವ್ ಹಳೆಗೇಟ್, ಚಂದ್ರಶೇಖರ, ರಾಧಾಕೃಷ್ಣ ಕೃಷ್ಣ ರಾಜು, ಪ್ರೇಮ, ಲೀಲಾವತಿ, ಶ್ರೀನಿವಾಸ ರಾವ್, ಮಿಥುನ್ ನಾಯ್ಕ್ ಮೊದಲಾದವರು ಉಪಸ್ಥಿತರಿದ್ದರು.

ಶಿಕ್ಷಕ ಕೆ.ಎಂ.ಕೆ ಮಂಜನಾಡಿಗೆ ಸಂಘಟನಾ ಸ್ಫೂರ್ತಿ ಪ್ರಶಸ್ತಿ

ಉಳ್ಳಾಲ: ಸೈಯದ್ ಮದನಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಹಳೆಕೋಟೆಯಲ್ಲಿ ನಡೆಸಲ್ಪಡುತ್ತಿರುವ ಸೈಯದ್ ಮದನಿ ವಿದ್ಯಾಸಂಸ್ಥೆಗಳ ಮುಖ್ಯ ಶಿಕ್ಷಕರಾದ



ಕೆ.ಎಂ.ಕೆ ಮಂಜನಾಡಿಯವರು ಕಳೆದ 35 ವರ್ಷಗಳಿಂದ ಶಿಕ್ಷಕರ ಸಂಘಟನೆ ಸೇರಿದಂತೆ ತಾಲೂಕು ಜಿಲ್ಲೆ ರಾಜ್ಯದ ವಿವಿಧ ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದು ಅವರ ಸಂಘಟನಾ ಚಾತುರ್ಯವನ್ನು ಪರಿಗಣಿಸಿದ ಬೆಂಗಳೂರಿನ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘವು 'ಸಂಘಟನಾ ಸ್ಫೂರ್ತಿ 2026' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ಮಹಾಸಮ್ಮೇಳನ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಉಪಸ್ಥಿತಿಯಲ್ಲಿ ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.ಈ ಸಂದರ್ಭದಲ್ಲಿ ವಿಧಾನ ಪರಿಷತ್ ಶಿಕ್ಷಕರ ಕ್ಷೇತ್ರದ ಶಾಸಕರುಗಳು ಹಾಗೂ ರಾಜ್ಯದ ವಿವಿಧ ಶಿಕ್ಷಣ ಸಂಘಟನೆಗಳ ಪದಾಧಿಕಾರಿಗಳು ಮತ್ತು ಸದಸ್ಯರುಗಳು ಉಪಸ್ಥಿತರಿದ್ದರು.

ಕಲ್ಲಾಪು ದೇವಸ್ಥಾನದಲ್ಲಿ ಜಾತ್ರೆ: ಧ್ವಜಾರೋಹಣ

ಮುಲ್ಕಿ: ಪಡುಪಣಂಬೂರು ಸಮೀಪದ ಕಲ್ಲಾಪು ಶ್ರೀ ವೀರಭದ್ರ ಮಹಮ್ಮಾಯಿ ದೇವಸ್ಥಾನದಲ್ಲಿ ಶ್ರೀ ವೀರಭದ್ರ ಮಹಾಗಣಪತಿ ದೇವರ ವಾರ್ಷಿಕ ಜಾತ್ರಾ



ಮಹೋತ್ಸವ ಮತ್ತು ಶ್ರೀ ಮಹಮ್ಮಾಯಿ ಅಮ್ಮನವರ ಮಾರಿಪೂಜಾ ಮಹೋತ್ಸವಕ್ಕೆ ದೇವಸ್ಥಾನದ ತಂತ್ರಿಗಳಾದ ಬ್ರಹ್ಮಶ್ರೀ ಶಿಬರೂರು ಶ್ರೀ ವೇದವ್ಯಾಸ ತಂತ್ರಿ ಹಾಗೂ ಅರ್ಚಕ ಶ್ರೀಕೃಷ್ಣ ಭಟ್ ನೇತೃತ್ವದಲ್ಲಿ ಚಾಲನೆ ನೀಡಲಾಯಿತು. ಮಂಗಳವಾರ ಬೆಳಿಗ್ಗೆ ವಿಶೇಷ ಪ್ರಾರ್ಥನೆ ನಡೆದು ಗಣಹೋಮ,, ಶ್ರೀ ದೇವರ ಧ್ವಜಾರೋಹಣ, ಉತ್ಸವ ಬಲಿ, ಮಹಾಪೂಜೆ, ಪ್ರಸಾದ ವಿತರಣೆ ನಡೆಯಿತು ರಾತ್ರಿ ಮಹಾಪೂಜೆ, ರಂಗಪೂಜೆ, ಉತ್ಸವ ಬಲಿ ಚಂದ್ರಗ್ರಹಣ ನಿಮಿತ್ತ ರಾತ್ರಿ ಅನ್ನಸಂತರ್ಪಣೆ ನಡೆಯಿತು. ಈ ಸಂದರ್ಭ ದೇವಸ್ಥಾನದ ಗುರಿಕಾರರಾದ ಬಿರತ್ನಾಕರ ಶೆಟ್ಟಿಗಾರ್, ಅಪ್ಪು ಗುರಿಕಾರ್, ಲಕ್ಷ್ಮಣ ಗುರಿಕಾರ್,ಅಧ್ಯಕ್ಷ ಉಮಾನಾಥ ಜೆ. ಶೆಟ್ಟಿಗಾರ್, ಉಪಾಧ್ಯಕ್ಷ ಪ್ರೇಮಾನಂದ ಶೆಟ್ಟಿಗಾರ್ ಉಡುಪಿ, ಶಂಕರ್ ಶೆಟ್ಟಿಗಾರ್ ಬೆಳ್ಳಾಯರು, ಕೃಷ್ಣ ಎಸ್. ಕಲ್ಲಾಪು, ಪ್ರಧಾನ ಕಾರ್ಯದರ್ಶಿ ಸತೀಶ್ ಎಸ್. ಕಲ್ಲಾಪು ಮತ್ತಿತರರು ಉಪಸ್ಥಿತರಿದ್ದರು ಕ್ಷೇತ್ರದಲ್ಲಿ ಮಾ.6 ಶುಕ್ರವಾರ ಚಂಡಿಕಾಯಾಗ, ಮಹಾ ಅನ್ನಸಂತರ್ಪಣೆ, ರಾತ್ರಿ ಶ್ರೀ ಧೂಮಾವತಿ ಬಂಟ ದೈವಗಳ ನೇಮ ನಡೆಯಲಿದೆ.

ಶ್ರೀ ಜನಾರ್ದನ ಸ್ವಾಮಿ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ ಸಂಭ್ರಮ | ಕ್ರೈಸ್ತ, ಮುಸ್ಲಿಂ ಬಾಂಧವರಿಂದಲೂ ಸಮರ್ಪಣೆ

'ಸಮೃದ್ಧಿ ಉಗ್ರಾಣ' ಹೊರೆಕಾಣಿಕೆಯಿಂದ ಈಗ ಸಮೃದ್ಧ!

ಬೆಳ್ತಂಗಡಿ: ಎರಡು ದಿನಗಳ ಹಿಂದೆ ಆರಂಭವಾದ ಉಜಿರೆಯ ಬ್ರಹ್ಮಕಲಶೋತ್ಸವಕ್ಕಾಗಿ ಹಸಿರು ವಾಣಿ–ಹೊರೆಕಾಣಿಕೆ ಸಂಗ್ರಹ ಕಾರ್ಯವು ಮೊದಲನೇ ದಿನವೇ 'ಸಮೃದ್ಧಿ ಉಗ್ರಾಣ'ವನ್ನು ಸಂಪೂರ್ಣವಾಗಿ ಸಮೃದ್ಧಿಗೊಳಿಸುವಷ್ಟು ಭರ್ತಿಗೊಳಿಸುವಷ್ಟು ಸ್ಪಂದನೆ ಪಡೆದಿದೆ.

ಬ್ರಹ್ಮಕಲಶೋತ್ಸವದ ಅವಧಿಯಲ್ಲಿ ನಡೆಯುವ ಅನ್ನಸಂತರ್ಪಣೆಗೆ ಬಳಸಲಾಗುವ ಹೊರೆಕಾಣಿಕೆ ವಸ್ತುಗಳನ್ನು ಸಂಗ್ರಹಿಸಲು ಸಜ್ಜಾಗಿರುವ ಉಗ್ರಾಣ ಇದೀಗ ವಿವಿಧ ಧಾನ್ಯಗಳು, ತರಕಾರಿ ಹಾಗೂ ಇತರ ಆಹಾರ ಸಾಮಗ್ರಿಗಳಿಂದ ತುಂಬಿತುಳುಕುತ್ತಿದೆ.

ಸೌಹಾರ್ದತೆಗೆ ಸಾಕ್ಷಿಯಾದ ಬ್ರಹ್ಮಕಲಶ!

ಮಾರ್ಚ್ 11ರವರೆಗೆ ನಡೆಯುತ್ತಿರುವ ಬ್ರಹ್ಮಕಲಶೋತ್ಸವದ ನಿಮಿತ್ತ ಹೊರೆಕಾಣಿಕೆ ಸಂಗ್ರಹ ಕಾರ್ಯವನ್ನು ಮಾರ್ಚ್ 2ರಿಂದ 10ರವರೆಗೆ ಹಮ್ಮಿಕೊಳ್ಳಲಾಗಿದೆ. ಮಾರ್ಚ್ 3ಕ್ಕೆ ಚಂದ್ರಗ್ರಹಣ ಇರುವ ಕಾರಣ ಆ ದಿನ ಹೊರೆಕಾಣಿಕೆ ಸ್ವೀಕಾರ ಇರುವುದಿಲ್ಲ ಎಂದು ಸಮಿತಿ ತಿಳಿಸಿದೆ. ಮೊದಲ ದಿನವೇ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ





ಯೋಜನೆಯ ವತಿಯಿಂದ ದೊಡ್ಡ ಮಟ್ಟದಲ್ಲಿ ಹೊರೆಕಾಣಿಕೆ ಆಗಮಿಸಿತು. ಇದರೊಂದಿಗೆ ಉಜಿರೆ, ಲಾಯಿಲ ಅಳದಂಗಡಿ ಸೇರಿದಂತೆ ತಾಲೂಕಿನ ವಿವಿಧ ಭಾಗಗಳಿಂದ ಹಾಗೂ ಹಳ್ಳಿಗಳಿಂದಲೂ ಹೊರೆಕಾಣಿಕೆ ಹರಿದು ಬಂತು. ಉಜಿರೆಯ ಸುತ್ತಮುತ್ತಲಿನ ಪ್ರತಿ ಮನೆಮನೆಯಿಂದ ತರಕಾರಿ ಇತ್ಯಾದಿ ಉತ್ಪನ್ನಗಳು ಬಂದವು. ಕೇವಲ ಹಿಂದೂ ಬಾಂಧವರಷ್ಟೇ ಅಲ್ಲದೆ, ಕ್ರೈಸ್ತ ಮತ್ತು ಮುಸ್ಲಿಂ ಬಾಂಧವರು ಕೂಡ ಟ್ರ್ಯಾಕ್ಟರ್‌ಗಳಲ್ಲಿ ತರಕಾರಿ ಹಾಗೂ ಸ್ವತಃ ಬೆಳೆದ ಆಹಾರ ಧಾನ್ಯಗಳನ್ನು ಹೊತ್ತು ತಂದು ಸೌಹಾರ್ದತೆಗೆ ಸಾಕ್ಷಿಯಾದರು. ವಿಶೇಷವಾಗಿ ರೈತರು ತಮ್ಮ ಸ್ವಂತ ಜಮೀನಿನಲ್ಲಿ ಬೆಳೆದ ಭತ್ತ, ಇತರ ಧಾನ್ಯಗಳು ಹಾಗೂ ಅಡಿಕೆಗಳನ್ನು ಕಾಣಿಕೆಯಾಗಿಸಿದ್ದರು.ಕೃಷಿ ಭೂಮಿ ಇಲ್ಲದವರು ಅಥವಾ ಕೃಷಿ ಮಾಡದವರು ತಮ್ಮ ಶಕ್ತಿಗೆ ಅನುಗುಣವಾಗಿ ವಸ್ತುಗಳನ್ನು ಖರೀದಿಸಿ ಸಮರ್ಪಿಸಿದರು. ಈ ಮೂಲಕ ಸಮಾಜದ ಎಲ್ಲಾ ವರ್ಗದವರೂ ಉತ್ಸವದಲ್ಲಿ ಪಾಲ್ಗೊಂಡಿರುವುದು ಗಮನಾರ್ಹವಾಗಿದೆ. ಬೆಳಿಗ್ಗೆ 10 ಗಂಟೆಗೆ ಭಕ್ತಾದಿಗಳು ಒಂದೇ ಸ್ಥಳದಲ್ಲಿ ಸೇರಿ, ಸಮಿತಿಯ ಸದಸ್ಯರ ಸಮ್ಮುಖದಲ್ಲಿ ಮೆರವಣಿಗೆಯ ಮೂಲಕ ಸ್ವಾಗತಿಸಲ್ಪಟ್ಟು, ಮೊದಲು ದೇವರಿಗೆ ಸಮರ್ಪಣೆ ಸಲ್ಲಿಸಿ ಬಳಿಕ ಸಮೃದ್ಧಿ ಹಸಿರುವಾಣಿ ಉಗ್ರಾಣಕ್ಕೆ ಸಾಗಿಸಲಾಯಿತು. ಭಜನಾ ತಂಡಗಳು, ಚಂಡೆ ವಾದನ ಹಾಗೂ ಸಾಂಪ್ರದಾಯಿಕ ವೇಷ ಭೂಷಣಗಳೊಂದಿಗೆ ನಡೆದ ಹೊರೆಕಾಣಿಕೆ ಮೆರವಣಿಗೆ ಹಬ್ಬದ ವಾತಾವರಣ ಮೂಡಿಸಿತು.

> **ಹೊರೆಕಾಣಿಕೆ ಸಮರ್ಪಣೆ ಭಕ್ತಾದಿಗಳಿಗೆ ಆತ್ಮತೃಪ್ತಿಯನ್ನು ನೀಡುತ್ತದೆ. ಕೆಲವರಿಗೆ ದೇವರಿಗೆ ಏನಾದರೂ ಅರ್ಪಿಸಬೇಕೆಂಬ ಆಸೆ ಇರುತ್ತದೆ. ಈ ರೀತಿಯಾಗಿ ಸಮರ್ಪಿಸುವುದರಿಂದ ನಾವು ಸಮಾಜಕ್ಕೂ ಏನೋ ಒಳ್ಳೆಯದು ಮಾಡಿದ್ದೇವೆ ಹಾಗೂ ದೇವರ ನಂಬಿಕೆಯಿಂದ ಸತ್ಕಾರ್ಯ ನಿರ್ವಹಿಸಿದ್ದೇವೆ ಎಂಬ ಸಂತೃಪ್ತಿ ಅವರಿಗೆ ದೊರೆಯುತ್ತದೆ.**
> ● **ರವಿಕುಮಾರ್ ಬರೆಮೇಲು, ಹೊರೆಕಾಣಿಕೆ ಸಮಿತಿ ಪ್ರಧಾನ ಸಂಚಾಲಕ**

ವಿಶೇಷ ಕೊಪ್ಪರಿಗೆ ಸೇವೆ

ಈ ಬಾರಿ ಬ್ರಹ್ಮಕಲಶೋತ್ಸವದ ವಿಶೇಷವಾಗಿ ಕೊಪ್ಪರಿಗೆ ಸೇವೆ ಹಮ್ಮಿಕೊಳ್ಳಲಾಗಿದೆ. ಅನ್ನಸಂತರ್ಪಣೆಗೆ ದೇಣಿಗೆ ನೀಡುವ ಭಕ್ತರಿಗೆ ಸಮಿತಿಯಿಂದ ರಶೀದಿ ನೀಡಲಾಗುತ್ತದೆ. ಬಳಿಕ ಅರ್ಚಕರು ಸಂಕಲ್ಪ ಮಾಡಿ, ಹರಿವಾಣದಲ್ಲಿನ ಅಕ್ಕಿಯನ್ನು ಭಕ್ತರ ಹೆಸರಿನಲ್ಲಿ ಕೊಪ್ಪರಿಗೆಯಲ್ಲಿ ಅರ್ಪಿಸುತ್ತಾರೆ. ಇದರಿಂದ ಭಕ್ತರು ಅನ್ನಸೇವೆಯಲ್ಲಿ ಭಾಗಿಯಾದ ತೃಪ್ತಿಯನ್ನು ಅನುಭವಿಸುತ್ತಾರೆ. ಈ ಕಾರ್ಯದ ಪ್ರಧಾನ ಸಂಚಾಲಕರಾಗಿ ರವಿಕುಮಾರ್ ಬರೆಮೇಲು ಕಾರ್ಯ ನಿರ್ವಹಿಸುತ್ತಿದ್ದಾರೆ. ಮಾ.10ರವರೆಗೆ ಹೊರೆಕಾಣಿಕೆ ನಿರಂತರವಾಗಿ ಆಗಮಿಸುವ ನಿರೀಕ್ಷೆಯಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಭಕ್ತಿಭಾವ, ಸೌಹಾರ್ದತೆ ಹಾಗೂ ಸ್ಥಳೀಯ ಜನರ ಸಮೂಹ ಸಹಭಾಗಿತ್ವ ಪ್ರತಿಬಿಂಬಿಸುವ ಈ ಹೊರೆಕಾಣಿಕೆ ಸಂಪ್ರದಾಯವು ಬ್ರಹ್ಮಕಲಶೋತ್ಸವದ ಮೆರುಗು ಹೆಚ್ಚಿಸಿದೆ.

■ **ಮೇಘಾ ಗಲಗಲಿ,** ಪತ್ರಿಕೋದ್ಯಮ ವಿದ್ಯಾರ್ಥಿನಿ, ಎಸ್‌ಡಿಎಂ ಕಾಲೇಜು, ಉಜಿರೆ.

ಕುಂದಾಪುರ ಕ್ಷೇತ್ರದ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರೊಂದಿಗೆ ಸಭೆ

ಶೇ.100 ಫಲಿತಾಂಶವೇ ಗುರಿ: ಶಾಸಕ ಕೊಡ್ಗಿ

ಕುಂದಾಪುರ: ಎಸೆಸೆಲ್ಸಿ ಪರೀಕ್ಷೆಗೆ ಇನ್ನು 15 ದಿನಗಳಷ್ಟೇ ಬಾಕಿಯಿದೆ. ಈಗಾಗಲೇ ಅದಕ್ಕೆ ಬೇಕಾದ ಪೂರ್ವ ತಯಾರಿ ನಡೆಯುತ್ತಿದೆ. ಮುಂಬರುವ ಪರೀಕ್ಷೆಯಲ್ಲಿ ಕುಂದಾಪುರ ಕ್ಷೇತ್ರದ ಎಲ್ಲ ಮಕ್ಕಳು ಉತ್ತೀರ್ಣರಾಗುವಂತೆ ಅಧಿಕಾರಿಗಳು, ಶಾಲಾ ಶಿಕ್ಷಕರು, ಪೋಷಕರು ಪ್ರಯತ್ನಿಸಬೇಕು. ಹೆಚ್ಚಿನ ರ‍್ಯಾಂಕ್ ಬರುವಂತಾಗಲಿ ಎಂದು ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ಕುಂದಾಪುರದ ತಾ.ಪಂ. ಸಭಾಂಗಣದಲ್ಲಿ ಮಂಗಳವಾರ ನಡೆದ ಕುಂದಾಪುರ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರೊಂದಿಗೆ ಎಸೆಸೆಲ್ಸಿ ಪರೀಕ್ಷೆ ಹಾಗೂ ಇನ್ನಿತರ ಶೈಕ್ಷಣಿಕ ವಿಚಾರಗಳ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರಕಾರಿ ಶಾಲೆ, ಅದರಲ್ಲೂ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಫಲಿತಾಂಶ ಕಡಿಮೆ ಬರುತ್ತಿದ್ದು, ಈ ಬಗ್ಗೆ ಶಿಕ್ಷಕರು, ಇಲಾಖೆ ಗಂಭೀರವಾಗಿ ಪರಿಗಣಿಸಿ, ಫಲಿತಾಂಶ ಹೆಚ್ಚಿಸಲು ಪ್ರಯತ್ನಿಸಬೇಕಿದೆ ಎಂದ ಅವರು, ಹಾಸ್ಟೆಲ್‌ಗಳಲ್ಲಿ ಜೂನ್‌ನಿಂದಲೇ ದಾಖಲಾತಿ ಮಾಡಬೇಕು ಅನ್ನುವ ಬಗ್ಗೆ ನಾನು 3 ವರ್ಷದಿಂದ ಅಧಿವೇಶನದಲ್ಲಿ ಪ್ರಸ್ತಾಪಿಸುತ್ತಲೇ ಇದ್ದೇನೆ. ಆದರೆ ಸರಕಾರ ಯಾಕೆ ಈ ಧೋರಣೆ ಅನುಸರಿಸುತ್ತಿದೆ ಗೊತ್ತಿಲ್ಲ, ಮತ್ತೆ ಈ ಬಗ್ಗೆ ಗಮನ ಸೆಳೆಯಲಾಗುವುದು ಎಂದವರು



ತಿಳಿಸಿದರು.

ಕುಂದಾಪುರ ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ ಶೆಟ್ಟಿ ಮಾತನಾಡಿ, ವಲಯದಲ್ಲಿ 16 ಸರಕಾರಿ, 1 ವಸತಿ, 4 ಅನುದಾನಿತ, 9 ಅನುದಾನ ರಹಿತ ಒಟ್ಟು 30 ಪ್ರೌಢ ಶಾಲೆಗಳಿವೆ. 1,938 ಮಕ್ಕಳು ಎಸೆಸೆಲ್ಸಿ ಪರೀಕ್ಷೆ ಬರೆಯಲಿದ್ದು 3 ಪೂರ್ವ ಸಿದ್ಧತಾ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ಬಂದಿದೆ ಎಂದರು.

ಬ್ರಹ್ಮಾವರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಉಮಾ ಮಾತನಾಡಿ, ವಲಯದಲ್ಲಿ 60 ಪ್ರೌಢಶಾಲೆಗಳಿದ್ದು, ಈ ಪೈಕಿ ಕುಂದಾಪುರ ಕ್ಷೇತ್ರದಲ್ಲಿ 10 ಸರಕಾರಿ ಹಾಗೂ 11 ಅನುದಾನ ರಹಿತ ಪ್ರೌಢಶಾಲೆಗಳಿವೆ. 1,058 ಮಕ್ಕಳು ಪರೀಕ್ಷೆ ಬರೆಯಲಿದ್ದಾರೆ ಎಂದವರು ಹೇಳಿದರು.

ಎಸೆಸೆಲ್ಸಿ ಪಿಯುಸಿ ಪರೀಕ್ಷೆ ಬರೆಯುವ ಮಕ್ಕಳಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣವಿದ್ದು, ಕರಾವಳಿಯ ಬಹುತೇಕ ಕಡೆ ಖಾಸಗಿ ಬಸ್ ಮಾತ್ರ ಇದ್ದು, ಮಕ್ಕಳಿಗೆ ಅನುಕೂಲವಾಗುವಂತೆ ಖಾಸಗಿ ಬಸ್‌ಗಳಲ್ಲಿಯೂ ಉಚಿತ ಪ್ರಯಾಣಕ್ಕೆ ವ್ಯವಸ್ಥೆ ಮಾಡಿ ಎಂದು ಶಾಸಕರಿಗೆ ಮುಖ್ಯ ಶಿಕ್ಷಕರೊಬ್ಬರು ಕೋರಿದರು. ವಿವಿಧ ಶಾಲೆಗಳ ಮುಖ್ಯ ಶಿಕ್ಷಕರಾದ ಕಿರಣ್ ಹೆಗ್ಡೆ, ಜಯಶೀಲ್, ಚಂದ್ರಶೇಖರ್ ಶೆಟ್ಟಿ ಉದಯ ಗಾಂವ್ಕರ್ ಮತ್ತಿತರರು ಮಾತನಾಡಿದರು.

ಗುಣಮಟ್ಟದ ಆಹಾರ ಸಾಮಗ್ರಿ ಪೂರೈಸಿ ಶಾಲೆಗಳಿಗೆ ಕೆಲ ತಿಂಗಳಿಂದ ಬಿಸಿಯೂಟಕ್ಕೆ ಕಳಪೆ ಗುಣಮಟ್ಟದ ಆಹಾರಸಾಮಗ್ರಿಗಳನ್ನು ಪೂರೈಸಲಾಗುತ್ತಿದೆ ಅನ್ನುವ ಮಾಹಿತಿಯಿದೆ. ಅದರಲ್ಲೂ ಬೇಳೆ ತೀರಾ ಕಳಪೆಯಾಗಿದೆ ಎನ್ನಲಾಗುತ್ತಿದೆ. ಈ ಬಗ್ಗೆ ಒಬ್ಬ ಶಿಕ್ಷಕರು ಕೂಡ ನನ್ನ ಗಮನಕ್ಕೆ ತಂದಿಲ್ಲ, ಯಾಕೆ ಹೀಗೆ ಮಕ್ಕಳ ವಿಷಯದಲ್ಲಿ ನಿರ್ಲಕ್ಷ್ಯ ವಹಿಸುತ್ತೀರಿ? ಪೂರೈಕೆ ಮಾಡುವವರು ಕೂಡ ಗುಣಮಟ್ಟಕ್ಕೆ ಆದ್ಯತೆ ಕೊಡಿ. ಇದು ಮಕ್ಕಳು ತಿನ್ನುವ ಆಹಾರ ಅನ್ನುವುದು ನೆನಪಿರಲಿ. 3 ತಿಂಗಳ ಬದಲು ತಿಂಗಳಿಗೊಮ್ಮೆ ಆಹಾರ ಸಾಮಗ್ರಿ ಪೂರೈಕೆ ಮಾಡಲು ಪ್ರಯತ್ನಿಸಿ ಎಂದು ಶಾಸಕರು ಸೂಚಿಸಿದರು.

ಮಾ.9ರವರೆಗೆ ನಾರಾವಿ ಶ್ರೀ ಕ್ಷೇತ್ರದ ಬ್ರಹ್ಮಕಲಶ | ಧಾರ್ಮಿಕ ಸಭೆ

ಒಳಿತು ಬಯಸುವ ಜೀವನ ನಮ್ಮದಾಗಲಿ: ಈಡಿಗ ಶ್ರೀ

ಬೆಳ್ತಂಗಡಿ: ಜೀವಿತದ ಪ್ರತಿಹಂತದಲ್ಲೂ ಒಳಿತನ್ನೇ ಬಯಸುವ ಗುಣ ನಮ್ಮದಾಗಬೇಕು ಎಂದು ಸೋಲೂರು ಮಠದ ಆರ್ಯ ಈಡಿಗ ಮಹಾಸಂಸ್ಥಾನದ ಪೀಠಾಧಿಪತಿ ಶ್ರೀ ವಿಖ್ಯಾತಾನಂದ ಸ್ವಾಮೀಜಿ ನುಡಿದರು.

ಮಾ. 1ರಿಂದ 9ರವರೆಗೆ ನಾರಾವಿ ಶ್ರೀ ಸೂರ್ಯನಾರಾಯಣನಿಗೆ ನೆರವೇರಲಿರುವ ಬ್ರಹ್ಮಕಲಶೋತ್ಸವ ಸಮಾರಂಭದ ಎರಡನೇ ದಿನವಾದ ಸೋಮವಾರ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವದಿಸಿದರು.

ಮಕ್ಕಳ ಪ್ರತಿಭೆಗಳನ್ನು ಬಾಲ್ಯದಲ್ಲೇ ಗುರುತಿಸಿ ಪೋಷಿಸಿದರೆ ಪ್ರಜ್ಞಾವಂತ, ಧಾರ್ಮಿಕ ಮನೋಭಾವದ ಸಮಾಜ ನಿರ್ಮಿಸಲು ಸಾಧ್ಯ. ಯಾವತ್ತೂ ಯಾರದ್ದನ್ನೂ ಬಯಸಬೇಡ ಎಂಬ ತತ್ವ ನಮ್ಮದಾಗಬೇಕು. ಕ್ಷೇತ್ರಗಳಲ್ಲಿ ಅನ್ನದಾನ ಸೇವೆ ನಿರಂತರವಾಗಿ ನಡೆದರೆ ಅಲ್ಲಿ ದೇವ ಸಾನಿಧ್ಯ ವೃದ್ಧಿಯಾಗುತ್ತದೆ ಎಂದರು.

ನಾರಾವಿ ಸಂತ ಅಂತೋನಿ ಚರ್ಚ್‌ನ ಧರ್ಮಗುರು ಜೆರೋಮ್ ಡ'ಸೋಜ ಅವರು ವಿಶ್ವದಲ್ಲಿ ಶಾಂತಿ ನೆಲೆಸುವಂತೆ ಪ್ರಾರ್ಥಿಸುವ ಕಾಲ ಇದಾಗಿದೆ. ಎಲ್ಲಾ ಮತ ಧರ್ಮಗಳ ಗ್ರಂಥಗಳ ಅಧ್ಯಯನ ಸಾಮರಸ್ಯ ಜೀವನಕ್ಕೆ ಕಾರಣವಾಗಬಲ್ಲುದು ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ



ಜಗದೀಶ್ ಅಂಚನ್ ಅಧ್ಯಕ್ಷತೆ ವಹಿಸಿದ್ದರು. ಮುನಿಯಾಲು ಉದಯ ಕೃಷ್ಣಯ್ಯ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಉದಯಕುಮಾರ್ ಶೆಟ್ಟಿ ಸಿವಿಲ್ ಇಂಜಿನಿಯರ್ ದಿವಾಕರ ಶೆಟ್ಟಿ ಕಾರ್ಕಳ, ಬೆಳ್ತಂಗಡಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ತುಕಾರಾಮ, ಸರಕಾರದ ಅಪರ ವಕೀಲ ಮನೋಹರ ಕುಮಾರ್, ವಲಯ ಅರಣ್ಯಾಧಿಕಾರಿ ಭರತ್ ಯು.ಜಿ., ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಪದ್ಮನಾಭ ಸಾಲಿಯಾನ್, ಡೊಂಕಬೆಟ್ಟು ನೀಲಮ್ಮ ಸಾಲಿಯಾನ್, ವೇಣೂರು ಸೂರ್ಯಚಂದ್ರ ಜೋಡುಕರೆ ಕಂಬಳ ಸಮಿತಿ ಅಧ್ಯಕ್ಷ ನಿತೀಶ್ ಎಚ್. ಕೋಟ್ಯಾನ್, ಶೀನಪೂಜಾರಿ ಕಂದಟ್ಟು ವೇಣೂರು ಮಹಾಲಿಂಗೇಶ್ವರ ದೇವಸ್ಥಾನ, ದೇಲಂಪುರಿ ಶ್ರೀ ಮಹಾದೇವ ಮಹಾಗಣಪತಿ ದೇವಸ್ಥಾನ, ಪುದುವೆಟ್ಟು ಶ್ರೀ ವನದುರ್ಗಾ ಪರಮೇಶ್ವರಿ ದೇವಸ್ಥಾನ, ಬೈಲಂಗಡಿ ಶ್ರೀ ಸೋಮನಾಥೇಶ್ವರ ದೇವಸ್ಥಾನ, ಕಕ್ಕಿಂಜೆ ಶ್ರೀ ಇಷ್ಟದೇವತಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಗಳ ಅಧ್ಯಕ್ಷರಾದ ಜಯರಾಮ ಶೆಟ್ಟಿ ಸತೀಶ್ ಚಿಗುರು, ಬೊಮ್ಮಣ್ಣ ಗೌಡ, ದಿವಾಕರ ಪೂಜಾರಿ, ಜಯಪ್ರಸಾದ್ ಗೌಡ, ಉದ್ಯಮಿ ಸುರೇಶ್ ಪೂಜಾರಿ, ಶೀನ ಪೂಜಾರಿ, ಸಿವಿಲ್ ಇಂಜಿನಿಯರ್ ರಾಕೇಶ್ ಅಮೀನ್, ಸಾವ್ಯ ಸಿ.ಎ.ಬ್ಯಾಂಕ್ ನಿರ್ದೇಶಕ ವಿಠಲ ಪೂಜಾರಿ, ಪೂವಪ್ಪ ಪೂಜಾರಿ ಹರೋಲ್ಡಡ್ಕ, ನಾರಾವಿ ಶ್ರೀ ಸೂರ್ಯನಾರಾಯಣ ದೇವಸ್ಥಾನದ ಆಡಳಿತ ಮೊಕ್ತೇಸರ ರವೀಂದ್ರ ಪೂಜಾರಿ ಬಾಂದೊಟ್ಟು, ಪ್ರಧಾನ ಕಾರ್ಯದರ್ಶಿ ವಿನಯ ಹೆಗ್ಡೆ ಕಾರ್ಯಾಧ್ಯಕ್ಷ ಮಹಾವೀರ ಜೈನ್, ಶ್ರೀನಿವಾಸ ಕಿಣಿ, ವ್ಯವಸ್ಥಾಪನಾ ಸಮಿತಿ ಸದಸ್ಯ ಜಗದೀಶ್ ಹೆಗ್ಡೆ, ದಿವಾಕರ ಭಂಡಾರಿ, ಲಕ್ಷ್ಮಣ ಬಂಗೇರ, ಶಂಕರ್ ತುಂಬೆಗುಡ್ಡೆ ಯಶೋಧ, ರಶ್ಮಿ ಇದ್ದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ರಕ್ಷಿತ್ ಶಿವರಾಂ ಸ್ವಾಗತಿಸಿ, ಚಂದ್ರಹಾಸ ಬಳಂಜ ನಿರ್ವಹಿಸಿದರು. ದೇವಾಲಯದಲ್ಲಿ ವೃಷಭ ಲಗ್ನದಲ್ಲಿ ಅಷ್ಟಬಂಧ ಪ್ರತಿಷ್ಠೆ, ಸಂಜೆ ದೊಡ್ಡ ಶ್ರೀರಂಗಪೂಜೆ ನೆರವೇರಿತು.

ನಿಟ್ಟೆ ನರ್ಸಿಂಗ್ ವಿಭಾಗದಿಂದ ಶಿಶು, ತಾಯಿ ಆರೈಕೆಯ ಬಗ್ಗೆ ಕಾರ್ಯಾಗಾರ



ಉಳ್ಳಾಲ: ನಿಟ್ಟೆ ಪರಿಗಣಿತ ವಿವಿಯ ನಿಟ್ಟೆ ಉಷಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್‌ನ ಪ್ರಸೂತಿ ಹಾಗೂ ಸ್ತ್ರೀರೋಗ ನರ್ಸಿಂಗ್ ವಿಭಾಗದ ವತಿಯಿಂದ 'ತಾಯಂದಿರ ರಕ್ಷಣೆ, ನವಜಾತ ಶಿಶುಗಳ ಪೋಷಣೆ' ವಿಷಯದ ಮೇಲೆ ಕಾರ್ಯನಿರ್ವಹಣಾ ಅಭಿವೃದ್ಧಿ ಕಾರ್ಯಾಗಾರ ನಡೆಯಿತು.

ಕಾರ್ಯಾಗಾರವು ಎಸ್ ಡಿಜಿ 3(ಉತ್ತಮ ಆರೋಗ್ಯ ಮತ್ತು ಕಲ್ಯಾಣ) ಹಾಗೂ ಎಸ್ ಡಿಜಿ 4(ಗುಣಮಟ್ಟದ ಶಿಕ್ಷಣ) ಗುರಿಗಳಿಗೆ ಹೊಂದಿಕೊಂಡಿದ್ದು ವರ್ಲ್ಡ್ ಹೆಲ್ತ್ ಆರ್ಗನೈಸೇಷನ್ 2025–26ರ ಥೀಮ್ 'ಹೆಲ್ದಿ ಬಿಗಿನಿಂಗ್ಸ್, ಹೋಪ್ ಫುಲ್ ಫ್ಯೂಚರ್' ಅನ್ನು ಪ್ರತಿಬಿಂಬಿಸಿತು.

ತಜ್ಞರಿಂದ ಮಾಹಿತಿ

ಮುಖ್ಯ ಅತಿಥಿಯಾಗಿದ್ದ ಡಾ.ವಿಜಯ ಎಂ. ರೇವಣ್ಕರ್ ಅವರು ಪ್ರಸವೋತ್ತರ ರಕ್ತಸ್ರಾವ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಪ್ರೊ. ಡಾ. ಸಬಿತಾ ನಾಯಕ್ ಅವರು ತಾಯಿಯ ಹಾಲಿನ ಮಹತ್ವ ಹಾಗೂ ಹಾಲುಣಿಸುವ ತಂತ್ರಗಳ ಕುರಿತು ವಿವರಿಸಿದರು.

ಸಿಮ್ಯುಲೇಶನ್ ಹಾಗೂ ಮರು ಪ್ರದರ್ಶನಗಳ ಮೂಲಕ ಭಾಗವಹಿಸಿದವರಿಗೆ ಕೈಪಿಡಿ ತರಬೇತಿ ನೀಡಲಾಯಿತು. ಓಬಿಜಿ ನರ್ಸಿಂಗ್ ವಿಭಾಗದ ಉಪನ್ಯಾಸಕಿ ಕೀರ್ತಿಮಾಲ ಕೆ. ಅವರು 'ಪ್ರಸವೋತ್ತರ ರಕ್ತಸ್ರಾವ ನಿರ್ವಹಣೆಯಲ್ಲಿ ಸಿಮ್ಯುಲೇಶನ್ ಆಧಾರಿತ ತರಬೇತಿ' ವಿಷಯದ ಕುರಿತು ಅಧಿವೇಶನ ನಡೆಸಿ, ಸಿಮ್ಯುಲೇಶನ್ ಆಧಾರಿತ ಅಧ್ಯಯನದ ಮೂಲಕ ಕೌಶಲಾಭಿವೃದ್ಧಿ, ತೀರ್ಮಾನ ಕೈಗೊಳ್ಳುವಿಕೆ ಹಾಗೂ ತುರ್ತು ಪರಿಸ್ಥಿತಿ ಸಿದ್ಧತೆ ಕುರಿತು ವಿವರಿಸಿದರು. ಓಬಿಜಿ ನರ್ಸಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಸುನಂದಾ ಕಾರ್ಯಕ್ರಮ ವಂದಿಸಿದರು.

ಮಾಹಿತಿ ಕೊರತೆಯಿಂದ ರೈತರು ಕೃಷಿ ಸವಲತ್ತುಗಳಿಂದ ವಂಚಿತ: ಶ್ರೀಧರ ಶೆಟ್ಟಿ



ಕಿನ್ನಿಗೋಳಿ: ಕಿನ್ನಿಗೋಳಿ ಭಾಗದ ಕೃಷಿಕರು ಹಾಗೂ ರೈತರು ಕೆಲವೊಂದು ಇಲಾಖೆಯಿಂದ ಸಿಗುವ ಸವಲತ್ತು ಹಾಗೂ ಮಾಹಿತಿಯ ಕೊರತೆಯಿಂದ ವಂಚಿತರಾಗುತ್ತಿದ್ದು ಈ ಬಗ್ಗೆ ನಾವು ಸಂಘಟಿತರಾಗಿ ಇರಬೇಕು ಎಂದು ಕಿನ್ನಿಗೋಳಿ ರೈತ ಹಿತರಕ್ಷಣಾ ವೇದಿಕೆಯ ಅಧ್ಯಕ್ಷ ಶ್ರೀಧರ ಶೆಟ್ಟಿ ಮುಕ್ಕ ಹೇಳಿದರು.

ಅವರು ಕಿನ್ನಿಗೋಳಿ ಯುಗಪುರುಷ ಸಭಾಭವನದಲ್ಲಿ ಕಿನ್ನಿಗೋಳಿ ಭಾಗದ ರೈತ ಹಿತರಕ್ಷಣ ವೇದಿಕೆಯ ಆಶ್ರಯದಲ್ಲಿ ರೈತರ ಹಾಗೂ ಕೃಷಿಕರ ಸಮಾಲೋಚನಾ ಸಭೆಯಲ್ಲಿ ಮಾಹಿತಿ ನೀಡಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ರೈತರು ಬೆಳೆದ ತರಕಾರಿ ಇತರ ಉತ್ಪನ್ನಗಳಿಗೆ ಮಾರಾಟ ಮಾಡಲು ಅವಕಾಶ ಸಿಗುತ್ತಿಲ್ಲ, ಈ ಹಿಂದೆ ವಿವಿಧ ದಾನಿಗಳ ಸಹಕಾರದಲ್ಲಿ ಮಾರಾಟಕ್ಕೆ ಅನುಕೂಲವಾಗಲಿ ಎಂದು ಗ್ರಾಮ ಪಂಚಾಯತ್ ಇರುವಾಗ ಮಾರುಕಟ್ಟೆ ಕಬ್ಬಿಣದ ಸ್ಟಾಲ್ ನೀಡಲಾಗಿತ್ತು ಆದರೇ ಗ್ರಾಮ ಪಂಚಾಯತ್ ಹೊಸ ಕಟ್ಟಡ ಮಾಡುವಾಗ ಅದನ್ನು ಮೂಲೆಗುಂಪು ಮಾಡಿ ಗುಜರಿಗೆ ಕೊಡಲಾಗಿದೆ ಎಂಬ ಗುಮಾನಿ ಇದೆ ಎಂದು ಹೇಳಿದರು.

ಇಲಾಖೆಯ ಅಧಿಕಾರಿ ಎಲ್ಲಣ್ಣ ಗೌಡ ಕೃಷಿ ಮಾಹಿತಿ ಕಾರ್ಯಕ್ರಮ ಹಮ್ಮಿಕೊಂಡು ಬಿತ್ತನೆ ಬೀಜದ ಬಗ್ಗೆ ಮಾಹಿತಿ ನೀಡಲಾಗುವುದು ಎಂದರು. ಕಾರ್ಯದರ್ಶಿ ಭುವನಾಭಿರಾಮ ಉಡುಪ ಪ್ರಸ್ತಾವಿಕ ನುಡಿಗಳನ್ನಾಡಿದರು. ಪ.ಪಂ. ಸದಸ್ಯ ದಾಮೋದರ ಶೆಟ್ಟಿ ಮಾರುಕಟ್ಟೆಯ ಸ್ಟಾಲ್ ಬಗ್ಗೆ ಪಂಚಾಯತ್ ಸಭೆಯಲ್ಲಿ ಚರ್ಚಿಸಲಾಗುವುದು ಎಂದರು. ಪ್ರಮುಖರಾದ ರಾಯಿಸ್ಟನ್ ಆಳ್ವ ಕೃಷಿಕ ಪುರುಷೋತ್ತಮ ಶೆಟ್ಟಿ ಕೊಡೆತ್ತೂರು, ಪುರುಷೋತ್ತಮ ಕೋಟ್ಯಾನ್ ಕಟೀಲು, ಕೆ.ಪಿ. ಎಸ್‌ಎಸ್ ಬ್ಯಾಂಕ್ ಮಾಜಿ ಅಧ್ಯಕ್ಷ ಲವ ಶೆಟ್ಟಿ ಎಳತ್ತೂರು ಜಯ ಶೆಟ್ಟಿ ಪುರಂದರ ಶೆಟ್ಟಿ ನಡುಗೋಡು , ಪ್ರಕಾಶ್ ಶೆಟ್ಟಿ ಸಂಕಯ್ಯ ಬೆನ್ನಿ ಕೃಷಿಕರು ಉಪಸ್ಥಿತರಿದ್ದರು.

ಮಕ್ಕಳಿಗೆ ಆದರ್ಶ ವ್ಯಕ್ತಿಗಳ ಜೀವನ ಸಾಧನೆ ತಿಳಿಸಿ: ಬಿ.ಕೆ. ಕುಮಾರ್ ಸಲಹೆ



ಮಂಗಳೂರು: ಪೋಷಕರು ತಮ್ಮ ಮಕ್ಕಳಲ್ಲಿ ಉತ್ತಮ ಜೀವನ ಮೌಲ್ಯಗಳನ್ನು ತುಂಬುವುದರೊಂದಿಗೆ ಅವರನ್ನು ಸತ್ಪ್ರಜೆಗಳನ್ನಾಗಿ ರೂಪಿಸಬೇಕು ಎಂದು ಇಂಡಿಯನ್ ಓವರ್ ಸೀಸ್ ಬ್ಯಾಂಕ್‌ನ ನಿವೃತ್ತ ಮ್ಯಾನೇಜರ್ ಬಿ.ಕೆ. ಕುಮಾರ್ ಹೇಳಿದರು.

ಕೂಳೂರು ಶ್ರೀ ನಾರಾಯಣಗುರು ಭಜನಾ ಮಂದಿರ ಸಭಾಂಗಣದಲ್ಲಿ ನಡೆದ ಶ್ರೀ ಅಮೃತ ನರ್ಸರಿ ಸ್ಕೂಲ್‌ನ 14ನೇ ವರ್ಷದ ವಾರ್ಷಿಕೋತ್ಸವದ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಾಧಕರ ಪರಿಚಯಿಸಿ

ಸ್ವಾತಂತ್ರ್ಯ ಹೋರಾಟಗಾರರು, ಮಹಾ ಪುರುಷರು ಸೇರಿದಂತೆ ಸಮಾಜಕ್ಕೆ ಆದರ್ಶಪ್ರಾಯರಾದವರ ಯಶೋಗಾಥೆಯನ್ನು ಮಕ್ಕಳಿಗೆ ಹೇಳಿಕೊಡಬೇಕು. ಇಂದಿನ ಮಕ್ಕಳಿಗೆ ಸಿನೆಮಾ ತಾರೆಯರ ಹೆಸರುಗಳು ಗೊತ್ತಿದ್ದರೂ ರಾಣಿ ಅಬ್ಬಕ್ಕ, ಅಬ್ದುಲ್ ಕಲಾಂ, ಫೀಲ್ಡ್ ಮಾರ್ಷಲ್ ಕಾರ್ಯಪ್ಪರಂತಹ ಮಹಾಪುರುಷರ ಬಗ್ಗೆ ಗೊತ್ತಿಲ್ಲ ಎಂದರು.

ಶಿಕ್ಷಕಿಯರಿಗೆ ಸನ್ಮಾನ

ಇದೇ ಸಂದರ್ಭ ಶಿಕ್ಷಕಿಯರನ್ನು ಗೌರವಿಸಲಾಯಿತು. ಮಹಾನಗರ ಪಾಲಿಕೆ ನಿಕಟಪೂರ್ವ ಪ್ರತಿಪಕ್ಷ ನಾಯಕ ಅನಿಲ್ ಕುಮಾರ್, ಮುಖ್ಯ ಶಿಕ್ಷಕಿ ಸಪ್ನಾ, ಗುರುನಾರಾಯಣ ಮಂದಿರ ಅಧ್ಯಕ್ಷ ಪ್ರಕಾಶ್ ಬಂಗೇರ, ಟ್ರಸ್ಟಿ ಸಿ.ಕೆ.ಪದ್ಮನಾಭ ಸಹಿತ ಮೊದಲಾದವರು ಉಪಸ್ಥಿತರಿದ್ದರು.

ಶಿಕ್ಷಕಿ ಅನಿತಾ ಶಾಂತಕುಮಾರ್ ಸ್ವಾಗತಿಸಿದರು. ಶಿಲ್ಪಾ ವಿಜೇತರ ಪಟ್ಟಿ ವಾಚಿಸಿದರು. ವೈಶಾಲಿ ವಂದಿಸಿದರು.

ಬ್ರಹ್ಮರಕೂಟ್ಲು ಟೋಲ್ ಸುಲಿಗೆಯ ಕೇಂದ್ರವಾಗಿ ಮಾರ್ಪಾಡು: ಮಾಜಿ ಸಚಿವ ರಮಾನಾಥ ರೈ

ಬಂಟ್ವಾಳ: ಬ್ರಹ್ಮರಕೂಟ್ಲು ಟೋಲ್‌ಗೇಟ್ ಮುಚ್ಚಿಬಿಡಿ.. ಹೀಗೆಂದು ಬ್ರಹ್ಮರಕೂಟ್ಲು ಟೋಲ್ ಗೇಟ್ ಮುಂಭಾಗ ಮಂಗಳವಾರ ಬೆಳಗ್ಗಿನಿಂದ ಮಧ್ಯಾಹ್ನದವರೆಗೆ ಧರಣಿ ಕುಳಿತ ಸಮಾನ ಮನಸ್ಕ ಸಮನ್ವಯ ಸಮಿತಿ ಹಾಗೂ ಟೋಲ್ ವಿರೋಧಿ ಹೋರಾಟ ಸಮಿತಿಯ ಸದಸ್ಯರು, ಟೋಲ್ ವಿರೋದಿ ಸಾರ್ವಜನಿಕರು ಮನವಿ ಮಾಡಿದ್ದಾರೆ.

ಈ ಕುರಿತು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಯೋಜನಾ ನಿರ್ದೇಶಕರಿಗೆ ಲಿಖಿತ ಪತ್ರ ಬರೆದಿದ್ದು ಪ್ರತಿಯನ್ನು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಸಂಸದ ಕ್ಯಾ. ಬ್ರಿಜೇಶ್ ಚೌಟ ಹಾಗೂ ಜಿಲ್ಲಾಧಿಕಾರಿಗಳಿಗೆ ರವಾನಿಸಿದ್ದಾರೆ.

ನಂತೂರು – ಬಿ.ಸಿ. ರೋಡ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಬ್ರಹ್ಮರಕೂಟ್ಲು ಬಳಿ ಕಳೆದ 23 ವರ್ಷಗಳಿಂದ ಕಾರ್ಯಾಚರಿಸುತ್ತಿರುವ ಟೋಲ್ ಗೇಟ್ ಅನ್ನು ಮುಚ್ಚಬೇಕು ಎಂದು ಒತ್ತಾಯಿಸಲಾಗುತ್ತಿದ್ದು,



ಬಿ.ಒ.ಟಿ ಮಾದರಿಯಲ್ಲಿ ನಿರ್ಮಾಣಗೊಂಡಿರುವ ಬಿ.ಸಿ.ರೋಡ್ ನಂತೂರು ಹೆದ್ದಾರಿಯಲ್ಲಿ 23 ವರ್ಷಗಳ ಕಾಲ ನಿರಂತರ ಸುಂಕ ಸಂಗ್ರಹಿಸಿದ ತರುವಾಯವೂ ಟೋಲ್ ಗೇಟ್ ಮುಚ್ಚದಿರುವುದು ಒಪ್ಪಲು ಸಾಧ್ಯವಿಲ್ಲದ ಸಂಗತಿ. ಯಾವುದೇ ಬೈಪಾಸ್, ಮೇಲ್ಸೇತುವೆ, ಅಂಡರ್ ಪಾಸ್‌ಗಳಿಲ್ಲದ, ಸಮರ್ಪಕವಾದ ಸರ್ವಿಸ್ ರಸ್ತೆಗಳನ್ನು ಹೊಂದಿರದ, ಗುಣಮಟ್ಟದ ನಿರ್ವಹಣೆ ಇಲ್ಲದ ನಾಲ್ಕು ಪಥಗಳ ಸಾಮಾನ್ಯ ರಸ್ತೆಗೆ 23 ವರ್ಷಗಳಿಗೂ ದೀರ್ಘ ಕಾಲ ಟೋಲ್ ಸಂಗ್ರಹಿಸಿಯೂ 'ಹೂಡಿದ ಹಣ ಮರು ಸಂಗ್ರಹ ಆಗಿಲ್ಲ' ಎಂದರೆ ನಂಬಲು ಸಾಧ್ಯವಿಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಬ್ರಹ್ಮರಕೂಟ್ಲು ಟೋಲ್ ಗೇಟ್‌ಗೆ 32 ಕಿ.ಮೀ. ದೂರದ ತಲಪಾಡಿ, 44 ಕಿ.ಮೀ. ದೂರದ ಹೆಜಮಾಡಿಯಲ್ಲಿ ಎಳೆಂಟು ವರ್ಷಗಳ ಈಚೆಗೆ ಹೊಸ ಟೋಲ್ ಸಂಗ್ರಹ ಕೇಂದ್ರಗಳು ಕಾರ್ಯ ನಿರ್ವಹಿಸತೊಡಗಿವೆ. ಇದು ಎರಡು ಟೋಲ್ ಗೇಟ್‌ಗಳ ನಡುವೆ ಇರಬೇಕಾದ ಕನಿಷ್ಠ ಅಂತರವಾದ 60 ಕಿ ಮೀ ನಿಯಮದ ನೇರ ಉಲ್ಲಂಘನೆ ಆಗಿದೆ. ಅಲ್ಲದೆ, ಬ್ರಹ್ಮರಕೂಟ್ಲು ಟೋಲ್ ಗೇಟ್ ನಿಂದ ಬೆಂಗಳೂರು ಕಡೆಗೆ 31 ಕಿ ಮೀ ದೂರದ ಉಪ್ಪಿನಂಗಡಿಯ ವಳಾಲು, ಬೆಳ್ತಂಗಡಿ ತಾಲೂಕಿನ ಪಣಕಜೆ ಎಂಬಲ್ಲಿ 28 ಕಿ ಮೀ ದೂರದಲ್ಲಿ ಸಾಣೂರು– ಬಿಕರ್ನಕಟ್ಟೆ ಹೆದ್ದಾರಿಯಲ್ಲಿ ಗಂಜಿಮಠ ಎಂಬಲ್ಲಿ 32 ಕೀ ಮೀ ದೂರದಲ್ಲಿ ಹೀಗೆ ಹೊಸದಾಗಿ ಮೂರು ಟೋಲ್ ಸಂಗ್ರಹ ಕೇಂದ್ರಗಳು ನಿರ್ಮಾಣ ಹಂತದಲ್ಲಿದೆ. ಇದೆಲ್ಲವೂ ಅಂತರದ ನಿಯಮಗಳ ಉಲ್ಲಂಘನೆ ಮಾತ್ರವಲ್ಲದೆ, ಈ ಭಾಗದಲ್ಲಿ ಹೆದ್ದಾರಿ ಪ್ರಯಾಣವೇ ತೀರಾ ದುಬಾರಿಯಾಗಿ ಅಸಹನೀಯ ಸಂದರ್ಭ ಸೃಷ್ಟಿಯಾಗಲಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಈ ಕುರಿತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪುನರ್ ಪರಿಶೀಲನೆ ನಡೆಸಬೇಕು. ನಿಯಮಗಳನ್ನು ನ್ಯಾಯಯುತವಾಗಿ ಅನುಷ್ಠಾನಗೊಳಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಸಾಮೂಹಿಕ ಧರಣಿ ಉದ್ಘಾಟನೆ

ಸಾಮೂಹಿಕ ಧರಣಿಯನ್ನು ಮಾಜಿ ಸಚಿವ ರಮಾನಾಥ ರೈ ಉದ್ಘಾಟಿಸಿ, ಬ್ರಹ್ಮರಕೊಟ್ಲು ಟೋಲ್ ಸುಲಿಗೆಯ ಕೇಂದ್ರವಾದ ಟೋಲ್ ಗೇಟ್ ಆಗಿದೆ ಎಂದು ಅಭಿಪ್ರಾಯಪಟ್ಟರು. ಈ ಟೋಲ್ ಗೇಟ್ ಅವೈಜ್ಞಾನಿಕ ಮತ್ತು ಕಾನೂನು ಬಾಹಿರವಾಗಿ ಕಾರ್ಯಾಚರಿಸುತ್ತಿದ್ದು, ಬ್ರಹ್ಮರಕೂಟ್ಲು ಟೋಲ್ ಗೇಟ್ ಅನ್ನು ತೆರವು ಮಾಡಬೇಕಾದದ್ದು ನ್ಯಾಯಯುತವಾಗಿದೆಯಲ್ಲದೆ, ನಮ್ಮ ಹೋರಾಟವು ಪೂರ್ಣ ಪ್ರಮಾಣದಲ್ಲಿ ನ್ಯಾಯಯುತವಾಗಿದೆ ಎಂದರು.

ಬ್ರಹ್ಮರಕೂಟ್ಲು ಟೋಲ್ ತೆರವು ಸಮಿತಿ ಸಂಚಾಲಕ ಮೋಹನ್ ಕುಮಾರ್ ಶೆಟ್ಟಿ ಮಾತನಾಡಿದರು. ಮುಖಂಡರಾದ ಮುನೀರ್ ಕಾಟಿಪಳ್ಳ ಹೋರಾಟಗಾರ ಎಂ.ಜಿ.ಹೆಗಡೆ, ನ್ಯಾಯವಾದಿ ಅಶ್ವನಿಕುಮಾರ್ ರೈ, ಮಾಜಿ ಜಿಪಂ ಸದಸ್ಯರಾದ ಎಂ.ಎಸ್. ಮಹಮ್ಮದ್, ಚಂದ್ರಪ್ರಕಾಶ್ ಶೆಟ್ಟಿ ತುಂಬೆ, ಸದಾಶಿವ ಮೊದಲಾದವರು ಮಾತನಾಡಿದರು. ಪ್ರಮುಖರಾದ ಬೇಬಿ ಕುಂದರ್, ಸುಹೈಲ್ ಕಂದಕ್, ಮಮತಾ ಗಟ್ಟಿ ಪಿಯೂಸ್ ಎಲ್. ರೋಡ್ರಿಗಸ್, ಬಿ.ಎಂ. ಅಬ್ಬಾಸ್ ಅಲಿ ಬೋಳಂತೂರು, ಚಂದ್ರಶೇಖರ ಭಂಡಾರಿ, ಬಾಲಕೃಷ್ಣ ಅಂಚನ್, ಸುದೀಪ್ ಕುಮಾರ್ ಶೆಟ್ಟಿ, ಸುರೇಶ್ ಕುಮಾರ್, ಧರಣೇಂದ್ರ ಕುಮಾರ್, ಇಸ್ಮಾಯಿಲ್ ಕೆ., ಇಕ್ಬಾಲ್ ಬೆಳ್ಳಾರೆ, ಎ.ಎಸ್. ಬೇರಿಂಜ, ಶೇಖರ್ ಲಾಯಿಲ, ಬಿ.ಎಂ. ಭಟ್, ಉಮೇಶ್ ಕುಮಾರ್ ವೈ, ಧನರಾಜ್, ಹನೀಫ್ ಖಾನ್ ಕೊಡಾಜೆ, ಅನ್ವರ್ ಸಾದತ್, ವಾಸುಪೂಜಾರಿ, ಮಹಮ್ಮದ್ ನಂದಾವರ, ಮೊನಿಶ್ ಅಲಿ, ಕಾವು ಹೇಮನಾಥ ಶೆಟ್ಟಿ ಹಾಗೂ ವಾಹನ ಚಾಲಕ, ಮಾಲಕರ ಸಂಘಟನೆಯ ಪದಾಧಿಕಾರಿಗಳು, ಸಾರ್ವಜನಿಕರು ಭಾಗವಹಿಸಿದ್ದರು. ಸಂಚಾಲಕ ಶೇಖರ್ ಬಿ. ಕಾರ್ಯಕ್ರಮ ನಿರೂಪಿಸಿದರು.

ಸುತ್ತಮುತ್ತ

ಜೈನ ಸಂಸ್ಕೃತಿಯನ್ನು ಉಳಿಸಿ ಬೆಳೆಸಿ: ಮೂಡುಬಿದ್ರೆ ಶ್ರೀ ಕರೆ

ಮೂಡುಬಿದ್ರೆ: ಸಂಕುಚಿತ ಭಾವನೆಗಳು ಇಂದು ಸಮಾಜವು ಛಿದ್ರವಾಗುವ ಸನ್ನಿವೇಶದಲ್ಲಿ ತೌಳವ ಇಂದ್ರ ಸಮಾಜವು ಅತ್ಯಂತ ಶ್ರೇಷ್ಠ ಕಾರ್ಯ ಮಾಡಿದೆ. ಯಾವುದೇ ಭೇದ ಭಾವ ಮಾಡದೆ



ಜೈನ ಬಾಲಕ ಬಾಲಕಿಯರನ್ನು ಒಟ್ಟುಗೂಡಿಸಿ ಧರ್ಮ ಮಾರ್ಗದಲ್ಲಿ ಬದುಕನ್ನು ಸಾಗಿಸಲು ಪ್ರೇರೇಪಣೆ ನೀಡುವ ಸ್ತುತ್ಯಾರ್ಹ ಕಾರ್ಯಕ್ರಮ ಮುಂದುವರಿಸಿಕೊಂಡು ಹೋಗುವ ಅವಶ್ಯಕತೆ ಇದೆ. ಜೈನ ಸಮಾಜದ ಏಳಿಗೆಗೆ ಇದು ಹೊಸ ನಾಂದಿಯಾಗಬೇಕು. ಜೈನ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಇಂತಹ ಕಾರ್ಯಕ್ರಮಗಳ ತುರ್ತು ಅವಶ್ಯಕತೆ ಇದೆ ಎಂದು ಮೂಡಬಿದ್ರೆ ಜೈನ ಮಠದ ಸ್ವಸ್ತಿ ಶ್ರೀ ಭಾರತ ಭೂಷಣ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿಯವರು ನುಡಿದರು.

ಅವರು ಫೆ.22ರಂದು ಮೂಡುಬಿದ್ರೆಯ ಶ್ರೀ ಮಹಾವೀರ ಭವನದಲ್ಲಿ ನಡೆದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲಾ ತೌಳವ ಇಂದ್ರ ಸಮಾಜ ಆಯೋಜಿಸಿದ ಇಂದ್ರ ಸಮಾಜದ ವಟುಗಳಿಗೆ ಸಾಮೂಹಿಕ ಉಪನಯನ ಸಂಸ್ಕಾರ ಮತ್ತು ಜೈನ ಸಮಾಜದ ಮಕ್ಕಳಿಗೆ ವ್ರತೋಪದೇಶ ಕಾರ್ಯಕ್ರಮದಲ್ಲಿ ತೌಳವ ಇಂದ್ರ ಸಮಾಜದ ಅಧ್ಯಕ್ಷ ಧರಣೇಂದ್ರ ಇಂದ್ರ ಪಾಣೇರು ಮತ್ತು ಕಾರ್ಯದರ್ಶಿ ವೃಷಭರಾಜ ಇಂದ್ರ ಅಜ್ಜಿಬೆಟ್ಟು ಇವರ ನೇತೃತ್ವದಲ್ಲಿ ಪದಾಧಿಕಾರಿಗಳ ಸಹಕಾರದೊಂದಿಗೆ ಜರುಗಿತು. ಅವಿಭಜಿತ ದ.ಕ.ಜಿಲ್ಲೆಯ ಇಂದ್ರರು ಹಾಗೂ ಜೈನ ಶ್ರಾವಕರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ದಾನಿಗಳನ್ನು ಶಾಲು ಹೊದಿಸಿ ಗೌರವಿಸಲಾಯಿತು. ಪ್ರಮೋದ್ ಕುಮಾರ್ ಉಜಿರೆ ಕಾರ್ಯಕ್ರಮ ವಂದಿಸಿದರು.

ಕುಕ್ಕೆಶ್ರೀ ಆಟೋ ಚಾಲಕ ಸಂಘದ ವಾರ್ಷಿಕೋತ್ಸವ

ಸುಬ್ರಹ್ಮಣ್ಯ: ಸುಬ್ರಹ್ಮಣ್ಯದ ಕುಕ್ಕೆಶ್ರೀ ಆಟೋ ಚಾಲಕ–ಮಾಲಕರ ಸಂಘದ 15ನೇ ವರ್ಷದ ಅಂಗವಾಗಿ ನಡೆದ ಸಭಾ ಕಾರ್ಯಕ್ರಮ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ನಡೆಯಿತು. ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ ಭಾಗವಹಿಸಿ, ಮಾತನಾಡಿದರು. ಸಂಘದ ಗೌರವಾಧ್ಯಕ್ಷ ಉಮೇಶ್. ಕೆ.ಎನ್. ಅಧ್ಯಕ್ಷತೆ ವಹಿಸಿದ್ದರು. ಸುಬ್ರಹ್ಮಣ್ಯ ಠಾಣಾಧಿಕಾರಿ ಆಂಜನೇಯ ರೆಡ್ಡಿ, ಸಂಘದ ಕಾನೂನು ಸಲಹೆಗಾರ ನ್ಯಾಯವಾದಿ ಎಂ. ವೆಂಕಪ್ಪ ಗೌಡ, ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ಅಶೋಕ್ ನೆಕ್ರಾಜೆ, ಗ್ರಾ.ಪಂ. ನಿಕಟಪೂರ್ವಾಧ್ಯಕ್ಷೆ ಸುಜಾತಾ ಕಲ್ಲಾಜೆ ಮುಖ್ಯ ಅತಿಥಿಗಳಾಗಿದ್ದರು. ಸಂಘದ ಅಧ್ಯಕ್ಷ. ಸಂತೋಷ್ ಕುಲ್ಕುಂದ, ಕಾರ್ಯದರ್ಶಿ ರಮಾಕಾಂತ್ ಕಾಮತ್ ಇದ್ದರು. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ಅಕ್ಷರಿ ಆರ್.ಎಸ್., ಭವಿಷ್ ಕುಮಾರ್ ಎಸ್. ಹಾಗೂ ರಿಕ್ಷಾ ಚಾಲಕರ ಪುತ್ರ ಆತ್ಮಿಕ್ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕುಕ್ಕೆ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ, ವ್ಯವಸ್ಥಾಪನಾ ಸಮಿತಿ ಸದಸ್ಯ ಅಶೋಕ್ ನೆಕ್ರಾಜೆ ಅವರನ್ನು ಸನ್ಮಾನಿಸಲಾಯಿತು. ಸ್ಥಾಪಕ ಕಾರ್ಯದರ್ಶಿ ನವೀನ್ ಕುಮಾರ್ ಕೆ.ವಿ. ಪ್ರಸ್ತಾವಿಸಿದರು. ಸಂಘದ ಸದಸ್ಯ ಉಮೇಶ್ ಜೆ., ಆದರ್ಶ ಕೆ.ಆರ್., ವಿಘ್ನೇಶ್ ದೇವರಗದ್ದೆ, ಪ್ರಶಾಂತ್ ಮೂಜೂರು, ಕಾರ್ತಿಕ್ ನೂಚಿಲ ಸನ್ಮಾನ ಪತ್ರ ವಾಚಿಸಿದರು. ಸಂಘದ ಪೂರ್ವ ಕಾರ್ಯದರ್ಶಿ ಜಯಂತ್ ಸ್ವಾಗತಿಸಿ, ಸಂಘದ ಗೌರವ ಸದಸ್ಯರಾದ ರಾಜೇಶ್ ಎನ್.ಎಸ್., ರತ್ನಾಕರ ಸುಬ್ರಹ್ಮಣ್ಯ, ದೀಪಕ್ ನಂಬಿಯಾರ್ ನಿರ್ವಹಿಸಿದರು. ಇದೇ ಸಂದರ್ಭ ನಿವೃತ್ತ ಸೈನಿಕ ನವೀನ್ ಕುಮಾರ್ ಕೆ., ರಾಷ್ಟ್ರ ಮಟ್ಟದ ನೆಟ್‌ಬಾಲ್‌ನಲ್ಲಿ ಚಿನ್ನದ ಪದಕ ವಿಜೇತೆ ತಪಸ್ಯಾ ಎಸ್. ನಾಯಕ್, ರಾಷ್ಟ್ರ ಮಟ್ಟದ ವೈಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿದ ಪ್ರತಿಭೆ ಗಣೇಶ್ ಕಕ್ಕೆಪದವು ಪರವಾಗಿ ಅವರ ತಾಯಿಯನ್ನು ಸನ್ಮಾನಿಸಲಾಯಿತು. ಸಂಘದ 'ಅಕ್ಷರ ನಿಧಿ' ಯೋಜನೆಯಡಿ ಮಂಗಳಾ ಕಿಣಿ ಅವರಿಗೆ ಸಹಾಯಧನ ವಿತರಣೆ ಮಾಡಲಾಯಿತು.

ಪರಪ್ಪ ಬ್ಲಾಕ್ ಪಂಚಾಯತ್: ಬಜೆಟ್ ಮಂಡನೆ

ಕಾಸರಗೋಡು: ಪರಪ್ಪ ಬ್ಲಾಕ್ ಪಂಚಾಯತ್‌ನ ಮುಂಗಡಪತ್ರವನ್ನು ಮಂಡಿಸಲಾಗಿದೆ. ಬಜೆಟ್‌ನಲ್ಲಿ ವಸತಿ ನಿರ್ಮಾಣ, ಕೃಷಿ ಮತ್ತು ಹೈನುಗಾರಿಕಾ



ಕ್ಷೇತ್ರಗಳು ಹಾಗೂ ಪ್ರಕೃತಿ ಸಂರಕ್ಷಣೆಗೆ ಒತ್ತು ನೀಡಲಾಗಿದೆ. ಉತ್ಪಾದನಾ ವಲಯಗಳಿಗೆ ಬಜೆಟ್‌ನಲ್ಲಿ ವಿಶೇಷ ಆದ್ಯತೆ ಒದಗಿಸಲಾಗಿದೆ. 2026–27ನೇ ಹಣಕಾಸು ವರ್ಷದ ಈ ಬಜೆಟ್‌ನಲ್ಲಿ 26.54 ಕೋಟಿ ರೂ. ಆದಾಯ, 25.62 ಕೋಟಿ ರೂ. ವೆಚ್ಚ ಮತ್ತು 92,07,227 ರೂ. ಉಳಿತಾಯ ಉಲ್ಲೇಖಿಸಲಾಗಿದೆ. ಬ್ಲಾಕ್ ಪಂಚಾಯತ್ ಉಪಾಧ್ಯಕ್ಷೆ ಟಿ.ಕೆ.ದೀಪಾ ಮುಂಗಡಪತ್ರ ಮಂಡಿಸಿದರು. ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಸಿ.ಬಿಂದು ಅಧ್ಯಕ್ಷತೆ ವಹಿಸಿದ್ದರು. ಜಿ.ಪಂ.ನ ಸ್ಥಾಯೀ ಸಮಿತಿ ಅಧ್ಯಕ್ಷರಾದ ಒಕ್ಲಾವ್ ಕೃಷ್ಣನ್, ರೀನಾ ಥೋಮಸ್, ಗ್ರಾಮ ಪಂಚಾಯತ್ ಅಧ್ಯಕ್ಷರಾದ ಪಿ.ವಿ.ಅನು, ಟಿ.ವಿ.ಜಯಚಂದ್ರನ್, ಪಿ.ರಘುನಾಥ್, ಕೆ.ರಜಿತಾ, ಬ್ಲಾಕ್ ಸ್ಥಾಯೀ ಸಮಿತಿ ಅಧ್ಯಕ್ಷರಾದ ಪರಕೋಲ್ ರಾಜನ್, ಕೆ.ಪಿ.ಚಿತ್ರಲೇಖಾ, ಜೆಸ್ಸಿ ಚಾಕೋ, ಬ್ಲಾಕ್ ಪಂಚಾಯತ್ ಸದಸ್ಯ ಇ.ಟಿ.ಜೋಸ್, ಪಿ.ಗಂಗಾಧರನ್ ನಾಯರ್, ಎ.ವಿ.ಭಾಸ್ಕರನ್, ಯೋಜನಾ ಸಮಿತಿ ಉಪಾಧ್ಯಕ್ಷ ಎ.ಕೃಷ್ಣರಾಜ್ ಮುಂತಾದವರು ಭಾಗವಹಿಸಿದ್ದರು. ಬ್ಲಾಕ್ ಪಂ. ಕಾರ್ಯದರ್ಶಿ ಕೆ.ಸುನೀಲ್ ಕುಮಾರ್ ಸ್ವಾಗತಿಸಿ, ಮುಖ್ಯ ಲೆಕ್ಕಾಧಿಕಾರಿ ಟಿ.ಅನೀಶ್ ವಂದಿಸಿದರು.

ಒಟ್ಟು 125 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ | ಹಾರಂಗಿ ಮುಂಭಾಗದ ನೂತನ ಸೇತುವೆ ಉದ್ಘಾಟನೆ

ಹಾರಂಗಿ ಎಡದಂಡೆ ಆಧುನೀಕರಣ ಕಾಮಗಾರಿಗೆ ಚಾಲನೆ

ಕುಶಾಲನಗರ: ಕಾವೇರಿ ನೀರಾವರಿ ನಿಗಮದ ವತಿಯಿಂದ ಹಾರಂಗಿ ಎಡದಂಡೆ ನಾಲೆ ಮುಖ್ಯ ನಾಲಾ ಸರಪಳಿ ಹಾಗೂ ವಿತರಣಾ ನಾಲೆಯ ಆಯ್ದ ಭಾಗಗಳಲ್ಲಿ ಆಧುನೀಕರಣ ಕಾಮಗಾರಿಗೆ ಶಾಸಕ ಡಾ. ಮಂಥರ್ ಗೌಡ ಭೂಮಿಪೂಜೆ ನೆರವೇರಿಸಿದರು.

ಒಟ್ಟು 125 ಕೋಟಿ ರೂ. ವೆಚ್ಚದ ಆಧುನೀಕರಣ ಕಾಮಗಾರಿಗೆ (ಎಡದಂಡೆ ನಾಲೆಯ ಮುಖ್ಯ ನಾಲಾ ಸರಪಳಿ 6.875 ರಿಂದ 14.750 ಕಿ.ಮೀ. ವರೆಗೆ, ವಿತರಣಾ ನಾಲೆ 1 ರಿಂದ 18 ರವರೆಗೆ) ತೊರೆನೂರು ಮತ್ತು ಹುದುಗೂರಿನಲ್ಲಿ ಶಾಸಕರು ಚಾಲನೆ ನೀಡಿದರು.

ಹಾರಂಗಿ ಮುಂಭಾಗ ಅಭಿವೃದ್ದಿಪಡಿಸಿದ ಸೇತುವೆಯನ್ನು ಅವರು ಉದ್ಘಾಟಿಸಿದರು. ಈ ಸಂದರ್ಭ ಮಾತನಾಡಿದ ಶಾಸಕರು, ಅಭಿವೃದ್ಧಿ ಕಾರ್ಯಗಳ ಮೂಲಕ ಟೀಕೆಗಳು, ತೆಗಳಿಕೆಗಳಿಗೆ ಪ್ರತ್ಯುತ್ತರ ನೀಡುವ ಮೂಲಕ ಜನರ ವಿಶ್ವಾಸ ಗಳಿಸುವುದು ನಮ್ಮ ಮುಖ್ಯ ಉದ್ದೇಶ ಎಂದು ತಿಳಿಸಿದರು.

ರೈತರಿಗೆ ಅನುಕೂಲ

ಕ್ಷೇತ್ರ ವ್ಯಾಪ್ತಿಯ ಅಭಿವೃದ್ಧಿಗೆ ಉಪ



ಮುಖ್ಯಮಂತ್ರಿಗಳೂ ಆದ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರು ಸಂಪೂರ್ಣ ಸಹಕಾರ ನೀಡುತ್ತಿರುವುದು ನಮ್ಮ ಭಾಗ್ಯ. ನಾಲೆ ಅಭಿವೃದ್ಧಿ ಸೇತುವೆ ನಿರ್ಮಾಣ ಕಾಮಗಾರಿಗಳಿಗೆ ದೊಡ್ಡ ಮಟ್ಟದಲ್ಲಿ ಅನುದಾನ ಒದಗಿಸುವ ಮೂಲಕ ಕ್ಷೇತ್ರದ ರೈತರಿಗೆ ಅನುಕೂಲ ಒದಗಿಸುತ್ತಿದ್ದಾರೆ. ನಮ್ಮ ಕ್ಷೇತ್ರದ ಹಾರಂಗಿಯ ಸ್ಥಳೀಯ ರೈತರಿಗೆ ಅನುಕೂಲ ಉಂಟು ಮಾಡುವುದು ನನ್ನ ಆದ್ಯತೆ. ಡಿ.ಕೆ. ಶಿವಕುಮಾರ್ ಅವರ ಮೂಲಕವೇ ಕಾಮಗಾರಿ ಉದ್ಘಾಟಿಸಲಾಗುವುದು ಎಂದರು.

ಕುಶಾಲನಗರ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ. ಶಶಿಧರ್ ಮಾತನಾಡಿ, ನೀರಾವರಿ ನಿಗಮದ ಹಾರಂಗಿಯ ಇತಿಹಾಸದಲ್ಲಿ ಪ್ರಥಮ ಎಂಬಂತೆ ಏಕಕಾಲದಲ್ಲಿ 125 ಕೋಟಿಗೂ ಅಧಿಕ ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಶೀಘ್ರದಲ್ಲೇ ಹಾರಂಗಿ ಅಣೆಕಟ್ಟೆ ಮುಂಭಾಗ 36 ಕೋಟಿ ವೆಚ್ಚದಲ್ಲಿ ಹೊಸ ಸೇತುವೆ ನಿರ್ಮಾಣ ಕಾಮಗಾರಿಗೆ ಡಿ.ಕೆ.ಶಿವಕುಮಾರ್ ಅವರಿಂದ ಭೂಮಿಪೂಜೆ ನೆರವೇರಿಸುವ ಚಿಂತನೆಯನ್ನು ಶಾಸಕರು ಹೊಂದಿದ್ದಾರೆ ಎಂದು ತಿಳಿಸಿದರು. ಈ ಭಾಗದಲ್ಲಿ ಎಲ್ಲಾ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ, ಅಗತ್ಯ ಬೇಡಿಕೆಗಳಿಗೆ ಶಾಸಕರು ಸ್ಪಂದಿಸಿದ್ದಾರೆ ಎಂದು ತಿಳಿಸಿದರು.

> **ವಿಶೇಷ ಮುತುವರ್ಜಿ**
> ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರವು ವಿಶೇಷ ಮುತುವರ್ಜಿ ವಹಿಸಿದೆ. ನೀರಾವರಿ, ಮೂಲಸೌಲಭ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಡಿಸಿಎಂ ಡಿಕೆ ಶಿವಕುಮಾರ್ ಅವರ ವಿಶೇಷ ಪ್ರೀತಿ ಹಾಗೂ ಕಾಳಜಿ ವಹಿಸಿದ್ದಾರೆ. ಅವರಿಂದಲೇ ಹಾರಂಗಿ ಎಡದಂಡೆ ಅಭಿವೃದ್ಧಿ ಬಳಿಕ ಉದ್ಘಾಟಿಸಲಾಗುವುದು.
> ● ಡಾ. ಮಂಥರ್ ಗೌಡ, ಮಡಿಕೇರಿ ಶಾಸಕ

ಲೋಕಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿದರು.

ಈ ಸಂದರ್ಭ ಕೆಪಿಸಿಸಿ ಸದಸ್ಯರಾದ ಕೆ.ಪಿ.ಚಂದ್ರಕಲಾ, ನಟೇಶ್ ಗೌಡ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ, ಪ್ರಮುಖರಾದ ಕೆ.ಎಸ್.ಕೃಷ್ಣೇಗೌಡ, ಟಿ.ಬಿ.ಜಗದೀಶ್, ಟಿ.ಕೆ. ಪಾಂಡುರಂಗ, ಎಸ್.ಎಸ್. ಚಂದ್ರಶೇಖರ್, ರಾಜಶೇಖರ್, ಮಂಜುನಾಥ್, ಬಸವರಾಜು, ಲತಾ, ಅನಂತ್ ಸಂಜೀವಯ್ಯ, ಟಿ.ಪಿ.ಹಮೀದ್, ಗೋವಿಂದಪ್ಪ, ಗೋಪಾಲಕೃಷ್ಣ ಉಮಾ ಪ್ರಭಾಕರ್, ಮುಸ್ತಾಫ, ಪ್ರೇಮಲೀಲಾ, ಶೋಭಾ ಪುಟ್ಟಪ್ಪ ರವಿ, ತಹಶೀಲ್ದಾರ್ ಕಿರಣ್ ಜಿ ಗೌರಯ್ಯ, ನೀರಾವರಿ ನಿಗಮದ ಅಧೀಕ್ಷಕ ಅಭಿಯಂತರ ಸತೀಶ್, ಕಾರ್ಯಪಾಲಕ ಅಭಿಯಂತರ ಐ.ಕೆ. ಪುಟ್ಟಸ್ವಾಮಿ, ಅಭಿಯಂತರರಾದ ಸೌಮ್ಯ, ಕಿರಣ್, ನೀರು ಬಳಕೆದಾರರ ಸಹಕಾರ ಸಂಘಗಳ ಆಡಳಿತ ಮಂಡಳಿ ಪದಾಧಿಕಾರಿಗಳು, ಸಲಹಾ ಸಮಿತಿ ಸದಸ್ಯರುಗಳು, ಕಾಂಗ್ರೆಸ್ ಪಕ್ಷದ ವಿವಿಧ ಘಟಕಗಳ ಪ್ರಮುಖರು, ಮಾಜಿ ಜನಪ್ರತಿನಿಧಿಗಳು, ಅಧಿಕಾರಿಗಳು, ಕಾರ್ಯಕರ್ತರು, ಆಯಾ ಭಾಗದ ರೈತರು ಇದ್ದರು.

ಕಡಬದಲ್ಲಿ ಜನಜಾಗೃತಿ ವೇದಿಕೆ ಪದಾಧಿಕಾರಿಗಳ ಸಭೆಯಲ್ಲಿ ಬಾಬು ನಾಯ್ಕ

ರಾಜ್ಯದಾದ್ಯಂತ ಸಮಾಜಮುಖಿ ಕಾರ್ಯಕ್ರಮ

ಕಡಬ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕಡಬ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಕಡಬ ಇವರ ಆಶ್ರಯದಲ್ಲಿ ಕಡಬ ತಾಲೂಕಿನ ಜನಜಾಗೃತಿ ವೇದಿಕೆ ಪದಾಧಿಕಾರಿಗಳ ಸಭೆ ಕಡಬ ಯೋಜನಾ ಕಚೇರಿಯಲ್ಲಿ ನಡೆಯಿತು.

ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ಪದ್ಮನಾಭ ಶೆಟ್ಟಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಜನಜಾಗೃತಿಯ ಮೂಲಕ ನಮಗೆ ಸಮಾಜಸೇವೆಗೆ ಅವಕಾಶ ದೊರೆತಿದ್ದು ನಾವು ಜಾಗೃತರಾಗಿ ಸಮಾಜ ಪರಿವರ್ತನೆಗೆ ಕೈಜೋಡಿಸಬೇಕಾಗಿದೆ ಎಂದರು.

ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಬಾಬು ನಾಯ್ಕ ಮಾತನಾಡಿ, ಜನಜಾಗೃತಿ ವೇದಿಕೆ ರಾಜ್ಯದಾದ್ಯಂತ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ವಿಶೇಷವಾಗಿ ಸ್ವಾಸ್ಥ್ಯಸಂಕಲ್ಪಕಾರ್ಯಕ್ರಮದ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಕಾರಣವಾಗಿರುವುದು ಅಭಿನಂದನೀಯ ಎಂದರು.

ತಾಲೂಕು ಅಧ್ಯಕ್ಷ ಹಾಗೂ ನ್ಯಾಯವಾದಿ ಮಹೇಶ್ ಕೆ. ಸವಣೂರು ಅಧ್ಯಕ್ಷತೆ ವಹಿಸಿ ಮಾತನಾಡಿ, ಪದಾಧಿಕಾರಿಗಳು ಮತ್ತು ಯೋಜನೆಯ ಅಧಿಕಾರಿ ವರ್ಗದ



> **ಕಡಬ ತಾಲೂಕು ವೇದಿಕೆಗೆ ಮೆಚ್ಚುಗೆ**
> 2023–24ನೇ ಸಾಲಿನ ಜನಜಾಗೃತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಕಡಬ ತಾಲೂಕು ವೇದಿಕೆಯ ಸಾಧನೆಗೆ ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ಪದ್ಮನಾಭ ಶೆಟ್ಟಿ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಹಕಾರದಿಂದ ರಾಜ್ಯದಲ್ಲಿ ಪ್ರಥಮ ಸ್ಥಾನ ದೊರೆತಿದ್ದು, ಈ ಸಾಧನೆಯಿಂದ ಜವಾಬ್ದಾರಿಯೂ ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳೋಣ ಎಂದು ಕರೆ ನೀಡಿದರು.

ಉಪಾಧ್ಯಕ್ಷ ಸೀತಾರಾಮ ಪೊಸವಳಿಕೆ, ಕಡಬ ವಲಯಾಧ್ಯಕ್ಷ ಕರುಣಾಕರ ಗೋಗಟೆ, ಅಲಂಕಾರು ವಲಯಾಧ್ಯಕ್ಷ ಇಂದುಶೇಖರ ಶೆಟ್ಟಿ ಗೋಳಿತೊಟ್ಟು ವಲಯಾಧ್ಯಕ್ಷ ನೋಣಯ್ಯ ಪೂಜಾರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸನ್ಮಾನ

ಸಾಧಕರಿಗೆ ಸನ್ಮಾನ

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಪದ್ಮನಾಭ ಶೆಟ್ಟಿ ಹಾಗೂ ವಿವೇಕಾನಂದ ಸದ್ಭಾವನಾ ಪ್ರಶಸ್ತಿ ಪುರಸ್ಕೃತ ಗಿರಿಶಂಕರ ಸುಲಾಯ ಅವರನ್ನು ಸನ್ಮಾನಿಸಲಾಯಿತು. ಜೊತೆಗೆ ತಾಲೂಕು ಜನಜಾಗೃತಿ ವೇದಿಕೆಯಿಂದ ಹಮ್ಮಿಕೊಳ್ಳಲಿರುವ ಮಾದಕ ವಸ್ತುಗಳ ವಿರುದ್ಧ ಜಾಗೃತಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಲಾಯಿತು. ಪ್ರಾದೇಶಿಕ ಯೋಜನಾಧಿಕಾರಿ ಗಣೇಶ್ ಆಚಾರ್ಯ ಜನಜಾಗೃತಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಯೋಜನಾಧಿಕಾರಿ ಪ್ರಕಾಶ್ ಕುಮಾರ್ ಸ್ವಾಗತಿಸಿ, ಮೇಲ್ವಿಚಾರಕ ನಿತೇಶ್ ವಂದಿಸಿದರು. ರವಿಪ್ರಸಾದ್ ಆಲಾಜೆ ಕಾರ್ಯಕ್ರಮ ನಿರ್ವಹಿಸಿದರು.

ದೇರಳಕಟ್ಟೆ ಕೆ.ಎಸ್ ಹೆಗ್ಡೆ ಆಸ್ಪತ್ರೆ ಬಳಿ ಚರಂಡಿಯಲ್ಲಿ ತ್ಯಾಜ್ಯ ನೀರು ಸಂಗ್ರಹ

ಸಮಸ್ಯೆಗೆ ಶೀಘ್ರ ಪರಿಹಾರ ಕಲ್ಪಿಸಲು ತುರವೇ ಆಗ್ರಹ

ಉಳ್ಳಾಲ: ನಾಲ್ಕು ವೈದ್ಯಕೀಯ ಕಾಲೇಜುಗಳು ಹಾಗೂ ಆಸ್ಪತ್ರೆಗಳು ಕಾರ್ಯಾಚರಿಸುತ್ತಿರುವ ದೇರಳಕಟ್ಟೆಯಂತಹ ಪ್ರದೇಶದಲ್ಲಿ ಪರಿಸರ ಸ್ವಚ್ಛತೆಗೆ ಆದ್ಯತೆ ನೀಡದೆ ಸ್ಥಳೀಯಾಡಳಿತಗಳು ನಿರ್ಲಕ್ಷ್ಯ ವಹಿಸಿರುವುದು ಖಂಡನೀಯವಾಗಿದೆ. ಆಸ್ಪತ್ರೆಗಳ ಬಳಿಯ ಚರಂಡಿಯಲ್ಲೇ ವಾಣಿಜ್ಯ ಸಂಕೀರ್ಣಗಳ ಶೌಚ ನೀರು ಶೇಖರಣೆಗೊಂಡಿದ್ದು ಇಲ್ಲಿಗೆ ಕಲಿಯಲು ಬರುವ ವಿದ್ಯಾರ್ಥಿಗಳ ಮುಂದೆ ಮಂಗಳೂರಿನ ಮಾನ ಹರಾಜಿದೆ. ಆಸ್ಪತ್ರೆಗೆ ಬರುವ ರೋಗಿಗಳು,ಸ್ಥಳೀಯ ರಿಕ್ಷಾ ಚಾಲಕರು ದಿನ ನಿತ್ಯಲೂ ಚರಂಡಿಯ ದುರ್ನಾತವನ್ನು ಆಸ್ವಾದಿಸುವ ಅನಿವಾರ್ಯತೆ ಬಂದೊದಗಿದ್ದು, ತಕ್ಷಣವೇ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಿಕೊಡಬೇಕೆಂದು ತುಳುನಾಡ ರಕ್ಷಣಾ ವೇದಿಕೆಯ ಸ್ಥಾಪಕಾಧ್ಯಕ್ಷ ಯೋಗೀಶ್ ಶೆಟ್ಟಿ ಜೆಪ್ಪು ಆಗ್ರಹಿಸಿದರು.

ಉಳ್ಳಾಲ ತಾಲೂಕಿನ ಬೆಳ್ಮ ಗ್ರಾಮ ಪಂಚಾಯತ್ ವ್ಯಾಪ್ತಿಯ ವಾಣಿಜ್ಯ ಕಟ್ಟಡಗಳ ತ್ಯಾಜ್ಯ ನೀರು ಹರಿದು ಬಂದು ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ಆಸ್ಪತ್ರೆ ಸಮೀಪದ ರಿಕ್ಷಾ ಪಾರ್ಕ್ ಬಳಿಯ ಚರಂಡಿಯಲ್ಲಿ ಶೇಖರಣೆಗೊಂಡ ಪರಿಣಾಮ ಪರಿಸರವೇ ಗಬ್ಬುನಾರುತ್ತಿದ್ದು, ಸಾಂಕ್ರಾಮಿಕ ರೋಗಗಳೂ ಹರಡುತ್ತಿವೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವಂತೆ



> ಬೆಳ್ಮ ಗ್ರಾ.ಪಂ. ವ್ಯಾಪ್ತಿಯ ವಾಣಿಜ್ಯ ಕಟ್ಟಡಗಳ ತ್ಯಾಜ್ಯ ನೀರು ಹರಿದು ಬಂದು ದೇರಳಕಟ್ಟೆಯ ಕೆ.ಎಸ್. ಹೆಗ್ಡೆ ಆಸ್ಪತ್ರೆ ಸಮೀಪದ ರಿಕ್ಷಾ ಪಾರ್ಕ್ ಬಳಿ ಶೇಖರಣೆಗೊಂಡಿದೆ. ತ್ಯಾಜ್ಯ ನೀರು ಶೇಖರಣೆಗೊಂಡಿರುವ ಪ್ರದೇಶವು ಕೋಟೆಕಾರು ಪ.ಪಂ. ವ್ಯಾಪ್ತಿಗೆ ಒಳಪಟ್ಟಿದೆ. ಸಮಸ್ಯೆ ಕುರಿತು ಆಡಳಿತ ಕ್ರಮ ಕೈಗೊಳ್ಳದಿರುವುದು ವಿಷಾದನೀಯ ಸಂಗತಿಯಾಗಿದೆ.
> ● ಯೋಗೀಶ್ ಶೆಟ್ಟಿ ಜೆಪ್ಪು, ತುರವೇ ಸ್ಥಾಪಕಾಧ್ಯಕ್ಷರು

ಒತ್ತಾಯಿಸಿ ಶನಿವಾರದಂದು ಕೆ.ಎಸ್ ಹೆಗ್ಡೆ ಆಸ್ಪತ್ರೆ ಬಳಿಯಲ್ಲಿ ತುಳುನಾಡ ರಕ್ಷಣಾ ವೇದಿಕೆ ಆಟೋ ರಿಕ್ಷಾ ಚಾಲಕರ ಘಟಕದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಇಲ್ಲಿ ಶೇಖರಣೆಗೊಂಡ ತ್ಯಾಜ್ಯ ನೀರಿನಿಂದ ಪರಿಸರ ಮಾಲಿನ್ಯದ ಜೊತೆಗೆ ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ. ಸ್ಥಳೀಯ ರಿಕ್ಷಾ ಪಾರ್ಕ್‌ನ ಚಾಲಕರು, ವಿದ್ಯಾರ್ಥಿಗಳು, ಹಾಗೂ ಸಾರ್ವಜನಿಕರು ತ್ಯಾಜ್ಯ ನೀರಿನ ದುಷ್ಪರಿಣಾಮವನ್ನು ನೇರವಾಗಿ ಅನುಭವಿಸುತ್ತಿದ್ದಾರೆ. ಸಂಬಂಧಿಸಿದ ಪಂಚಾಯತ್ ಮತ್ತು ಜಿಲ್ಲಾಡಳಿತವು ಕ್ರಮಕ್ಕೆ ಮುಂದಾಗಬೇಕು. ಸಮಸ್ಯೆಗೆ ಶೀಘ್ರ ಪರಿಹಾರ ದೊರೆಯದಿದ್ದಲ್ಲಿ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.

ತುರವೇ ಕೇಂದ್ರೀಯ ಸಮಿತಿ ಮಹಿಳಾ ಘಟಕದ ಜತೆ ಕಾರ್ಯದರ್ಶಿ ಜ್ಯೋತಿಕಾ ಜೈನ್, ಮಂಗಳೂರು ನಗರ ಕಾರ್ಯಾಧ್ಯಕ್ಷ ಕ್ಲೀಟಸ್ ಲೋಬೋ ಅಳಕೆ, ಮಂಗಳೂರು ನಗರ ಮಹಿಳಾ ಘಟಕ ಉಪಾಧ್ಯಕ್ಷೆ ಶಾರದಾ ಶೆಟ್ಟಿ ಕಾರ್ಯದರ್ಶಿ ರಕ್ಷಿತ್ ಕುಡುಪು, ರಿಕ್ಷಾ ಚಾಲಕರ ಘಟಕದ ಪದಾಧಿಕಾರಿ ಸತೀಶ್, ದಿನೇಶ್, ಪುರುಷೋತ್ತಮ, ಕಿಶೋರ್ ಮೊದಲಾದವರು ಪಾಲ್ಗೊಂಡಿದ್ದರು. ತುರವೇ ಕೇಂದ್ರೀಯ ಸಮಿತಿ ಸಂಘಟನಾ ಕಾರ್ಯದರ್ಶಿ ಪ್ರಶಾಂತ್ ಭಟ್ ಕಡಬ ಸ್ವಾಗತಿಸಿದರು.

ತಲ್ಲೂರು: ಶ್ರೀ ಮಾಸ್ತಿಯಮ್ಮ ಹೈಗುಳಿ ದೈವಸ್ಥಾನದ ದಶಮ ವರ್ಧಂತ್ಯೋತ್ಸವ



ಕುಂದಾಪುರ: ಶ್ರೀ ಮಾಸ್ತಿಯಮ್ಮ ಹೈಗುಳಿ ಸಪರಿವಾರ ದೈವಸ್ಥಾನ ಮಾರನಮನೆ ತಲ್ಲೂರು ಇದರ ದಶಮ ವರ್ಧಂತ್ಯೋತ್ಸವ ಕಾರ್ಯಕ್ರಮ ಶುಕ್ರವಾರ ನಡೆಯಿತು. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ರಘುರಾಮ ದೇವಾಡಿಗ ಕಾರ್ಯಕ್ರಮ ಉದ್ಘಾಟಿಸಿದರು.

ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಶುಭ ಹಾರೈಸಿದರು. ಇದೇ ಸಂದರ್ಭ ಮಾಣಿ ರಮೇಶ ಪೂಜಾರಿ ಅವರಿಗೆ ರಾಜ್ಯ ವರ್ಷದ ಮಾರನಮನೆ ರಂಗೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸನ್ಮಾನ, ಗೌರವಾರ್ಪಣೆ

ಸಮಾಜ ಸೇವಕ ಕೋಡಿ ಅಶೋಕ ಪೂಜಾರಿ ಅವರನ್ನು ಸನ್ಮಾನಿಸಲಾಯಿತು. ಶೈಕ್ಷಣಿಕ ಸಾಧನೆಗೈದ ಅನನ್ಯ ಶೇರುಗಾರ್, ಭಕ್ತಿ ಶೆಟ್ಟಿ ಮತ್ತು ಮಾನ್ಯ ದೇವಾಡಿಗ, ದೂರದರ್ಶನ ರಾಜ್ಯ ಮಟ್ಟದ ರಸಪ್ರಶ್ನೆಯಲ್ಲಿ ಪ್ರಥಮ ಸ್ಥಾನ ಪಡೆದ ವಿಷ್ಣು ಉಪ್ಪಿನಕುದ್ರು ಅವರನ್ನು ಗೌರವಿಸಲಾಯಿತು.

ತಲ್ಲೂರು ಗ್ರಾಮ ಪಂಚಾಯತ್‌ನ ನಿಕಟಪೂರ್ವ ಅಧ್ಯಕ್ಷ ಗಿರೀಶ ನಾಯ್ಕ್, ದೈಹಿಕ ಶಿಕ್ಷಣ ಶಿಕ್ಷಕ ಕುಸುಮಾಕರ ಶೆಟ್ಟಿ, ಅಶೋಕ ಪೂಜಾರಿ ಕೋಡಿ, ಸಪ್ತಸ್ವರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಚಂದ್ರ ದೇವಾಡಿಗ ಹರ್ಕೂರು, ರಂಗೋತ್ಸವ ಸಮಿತಿ ಅಧ್ಯಕ್ಷ ಗುರುರಾಜ್ ದೇವಾಡಿಗ, ರಾಘವೇಂದ್ರ ಆರ್. ದೇವಾಡಿಗ ವಡ್ಡರ್ಸೆ ತಲ್ಲೂರು ಮೊದಲಾದವರು ಉಪಸ್ಥಿತರಿದ್ದರು.

ಚಂದ್ರ ದೇವಾಡಿಗ ಮಾರನಮನೆ ಸ್ವಾಗತಿಸಿದರು. ಸನ್ನಿಧಿ ದೇವಾಡಿಗ ಪ್ರಾರ್ಥಿಸಿದರು. ರವಿರಾಜ್ ದೇವಾಡಿಗ ಮಾರನಮನೆ ಕಾರ್ಯಕ್ರಮ ನಿರ್ವಹಿಸಿದರು.

ಸಂಶೋಧನಾ ಮನೋಭಾವ ಬೆಳೆಸಿಕೊಳ್ಳಿ: ಡಾ. ಆ್ಯಂಟನಿ ಪ್ರಕಾಶ್



ಪುತ್ತೂರು: ವಿಜ್ಞಾನ ವಿದ್ಯಾರ್ಥಿಗಳು ಕೇವಲ ಪದವೀಧರರಾಗದೆ, ಜ್ಞಾನಾರ್ಜನೆಯ ತೀವ್ರ ಆಸಕ್ತಿಯೊಂದಿಗೆ ಸಂಶೋಧನಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಏಕಾಗ್ರತೆ, ಶಿಸ್ತು ಹಾಗೂ ವಿಶ್ಲೇಷಣಾತ್ಮಕ ಚಿಂತನೆಯ ಮೂಲಕ ಸಮಾಜದ ಸಮಸ್ಯೆಗಳಿಗೆ ಪರಿಹಾರ ನೀಡುವ ಸಮಾಜಮುಖಿ ವಿಜ್ಞಾನಿಗಳಾಗಿ ರೂಪುಗೊಳ್ಳಬೇಕು ಎಂದು ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನ(ಸ್ವಾಯತ್ತ) ಪ್ರಾಂಶುಪಾಲ ಫಾ.ಡಾ. ಆ್ಯಂಟನಿ ಪ್ರಕಾಶ್ ಮೊಂತೇರೊ ಹೇಳಿದರು.

ಕಾಲೇಜಿನ ವಿಜ್ಞಾನ ವೇದಿಕೆಯ ಆಶ್ರಯದಲ್ಲಿ ಸರ್ ಸಿ.ವಿ. ರಾಮನ್ ಅವರ 'ರಾಮನ್ ಪರಿಣಾಮ' ಆವಿಷ್ಕಾರದ ಸ್ಮರಣಾರ್ಥ ಹಮ್ಮಿಕೊಳ್ಳಲಾಗಿದ್ದ 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ–2026' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಉಜಿರೆಯ ಎಸ್‌ಡಿಎಂ ತಾಂತ್ರಿಕ ಸಂಸ್ಥೆಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕ ಡಾ. ಕೃಷ್ಣಪ್ರಸಾದ್ ಪಿ.ಎ., 'ಸಂಶೋಧನಾ ಉಪಪತ್ತಿ ಹಾಗೂ ವಿಧಾನಶಾಸ್ತ್ರ' ಕುರಿತು ವಿಶೇಷ ಉಪನ್ಯಾಸ ನೀಡಿದರು.

ವಿಜ್ಞಾನ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ವಾರಪೂರ್ತಿ ಸ್ಪರ್ಧೆಗಳ ಸರಣಿ 'ಸೈಫ್ಯೂಷನ್' ವಿದ್ಯಾರ್ಥಿ ಗಳ ಸೃಜನಶೀಲತೆಗೆ ವೇದಿಕೆ ಯಾಯಿತು. ಸಮಾರೋಪದಲ್ಲಿ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ವೇದಿಕೆಯಲ್ಲಿ ವಿಜ್ಞಾನ ವಿಭಾಗದ ಡೀನ್ ಡಾ. ಮಾಲಿನಿ ಕೆ., ಸೈನ್ಸ್ ಫೋರಮ್ ಸಂಯೋಜಕರಾದ ಡಾ. ಎಡ್ವಿನ್ ಎಸ್. ಡಿ'ಸೋಜಾ ಮತ್ತು ಶ್ರೀರಕ್ಷಾ ಬಿ.ವಿ. ಇದ್ದರು. ಮಾನಸ ಮತ್ತು ಅರ್ಪಣ ಪ್ರಾರ್ಥಿಸಿದರು. ವಿದ್ಯಾರ್ಥಿ ಯಜ್ಞೇಶ್ ಸ್ವಾಗತಿಸಿ, ರಜತ್ ವಂದಿಸಿದರು. ಗಾಯತ್ರಿ ನಿರ್ವಹಿಸಿದರು.

ಮುಲ್ಕಾಡು ಹೈಸ್ಕೂಲಿಗೆ ರೋಟರಿ ಕೊಡುಗೆ: ಮೇಲ್ಛಾವಣಿ ಉದ್ಘಾಟನೆ



ಮಂಗಳೂರು: ರೋಟರಿ ಕ್ಲಬ್ ಆಫ್ ಮಂಗಳೂರು ಹಿಲ್‌ಸೈಡ್ ದತ್ತು ಪಡೆದಿರುವ ಸರ್ಕಾರಿ ಹೈಸ್ಕೂಲ್ ಮುಲ್ಕಾಡು ಶಾಲೆಯಲ್ಲಿ ಪ್ರತಿವರ್ಷವೂ ಶಾಲೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ವಿವಿಧ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು ರೋಟರಿ ಜಿಲ್ಲಾ ಅನುದಾನದ ಅಡಿಯಲ್ಲಿ ಶಾಲೆಯ ಮುಂಭಾಗದ ಮೊಗಸಾಲೆಯಲ್ಲಿ ನಿಲ್ಲುವ ವಿದ್ಯಾರ್ಥಿಗಳನ್ನು ಬಿಸಿಲಿನಿಂದ ರಕ್ಷಿಸುವ ಉದ್ದೇಶದಿಂದ ಸಂಸ್ಥೆ ವತಿಯಿಂದ ನಿರ್ಮಿಸಿದ ಲೋಹದ ಮೇಲ್ಛಾವಣಿ ಯೋಜನೆಯನ್ನು ರೋಟರಿ ಜಿಲ್ಲೆ 3181 ಜಿಲ್ಲಾ ಗವರ್ನರ್ ರಾಮಕೃಷ್ಣ ಪಿ.ಕೆ. ಉದ್ಘಾಟಿಸಿದರು.

ಶಾಲಾ ಮುಖ್ಯೋಪಾಧ್ಯಾಯ ಜಿ.ಉಸ್ಮಾನ್ ಮಾತನಾಡಿ, ಇದೊಂದು ಅತ್ಯಂತ ಅರ್ಥಪೂರ್ಣ ಹಾಗೂ ಬಹಳ ಉಪಯುಕ್ತ ಯೋಜನೆಯಾಗಿದ್ದು ನಮ್ಮ ಶಾಲೆಯ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಮಹತ್ತರವಾದ ಪ್ರಯೋಜನವನ್ನು ತಂದಿದೆ ಎಂದರು.

ರೋಟರಿ ಕ್ಲಬ್ ಆಫ್ ಮಂಗಳೂರು ಹಿಲ್‌ಸೈಡ್ ಅಧ್ಯಕ್ಷ ಪೀಟರ್ ಅಂತೋನಿ ಪಿಂಟೊ, ಕಾರ್ಯದರ್ಶಿ ವಾಸುದೇವ ಶೆಟ್ಟಿಗಾರ್, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ವೀಣಾ, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷೆ ಗೀತಾ ಲಕ್ಷ್ಮೀಶ್, ರೋಟರಿ ಸದಸ್ಯರು, ಗಣ್ಯರು ಉಪಸ್ಥಿತರಿದ್ದರು.

ಕೆಳಗೆ ನೋಡಿದರೆ ಪಾತಾಳ, ಎಡಬಲಗಳಲ್ಲಿ ಅಪಾಯಕಾರಿ ಜಾಗ | ಕೆಳಗಡೆ ಹರಿಯುತ್ತಿದೆ ದುರ್ವಾಸನೆ ಬೀರುವ ಕೊಳಚೆ ನೀರು

ಕುದ್ರೆಬೆಟ್ಟಿನಲ್ಲಿ ಬಸ್ ಬೇ ಪಕ್ಕ ನಿರ್ಮಾಣಗೊಂಡಿದೆ ಅಪಾಯಕಾರಿ ತಂಗುದಾಣ!

ಬಂಟ್ವಾಳ: ಮಂಗಳೂರು– ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಲ್ಲಡ್ಕ ಫ್ಲೈಓವರ್‌ನಿಂದ ಮುಂದೆ ದಾಸಕೋಡಿ ಮಾರ್ಗದಲ್ಲಿ ಹೋಗುವ ಎಡಬದಿಯಲ್ಲಿ ಕುದ್ರೆಬೆಟ್ಟು ಎಂಬಲ್ಲಿ ನಿರ್ಮಾಣವಾದ ಪ್ರಯಾಣಿಕರ ತಂಗುದಾಣ, ಯಾವ ರೀತಿ ಕಟ್ಟಬಾರದು ಎಂಬುದಕ್ಕೆ ಪ್ರಾತ್ಯಕ್ಷಿಕೆ ಮಾಡಿಸಿಕೊಟ್ಟಂತಿದೆ.

ಈ ತಂಗುದಾಣದಲ್ಲಿ ಕುಳಿತುಕೊಳ್ಳಲು ಸಾಹಸಪಡಬೇಕಾಗಿದ್ದು, ಕೆಳಗೆ ನೋಡಿದರೆ ಪಾತಾಳ, ಎಡಬಲಗಳಲ್ಲಿ ಅಪಾಯಕಾರಿ ಜಾಗ..ಇದರ ಮೇಲೆ ಕುಳಿತರೆ ಜೀವಕ್ಕೇ ಆಪತ್ತು. ಅಂಥದ್ದೊಂದು ವಿಚಿತ್ರ ತಂಗುದಾಣ ಇಲ್ಲಿ ನಿರ್ಮಾಣಗೊಂಡಿದೆ.

ಹಾಗೆ ನೋಡಿದರೆ, ಬಿ.ಸಿ.ರೋಡ್ ನಿಂದ ಅಡ್ಡಹೊಳೆ ರಸ್ತೆ ವಿಸ್ತಾರಗೊಂಡು ನಿರ್ಮಾಣ ಹೊಂದುತ್ತಿರುವ ವೇಳೆ ಬಸ್ ಬೇ ಪಕ್ಕದಲ್ಲಿ ನಿರ್ಮಾಣಗೊಂಡಿರುವ







ಕೆಲವು ಪ್ರಯಾಣಿಕರ ತಂಗುದಾಣವೂ ಇಂಥದ್ದೇ ಆಗಿದೆ. ಮಳೆ, ಗಾಳಿ ಜೋರಾಗಿ ಬೀಸುವ ದಕ್ಷಿಣ ಕನ್ನಡ ಜಿಲ್ಲೆಯ ಹವಾಮಾನಕ್ಕೆ ವ್ಯತಿರಿಕ್ತವಾಗಿ ಈ ನಿಲ್ದಾಣದ ಆಕಾರ ಮೂಡಿಬಂದಿದೆ. ಬಿಸಿಲು, ಗಾಳಿ, ಮಳೆ ಯಾವುದು ಇದ್ದರೂ ಈ ನಿಲ್ದಾಣಗಳಿಂದ ಏನೂ ಪ್ರಯೋಜನವೇ ಇಲ್ಲ. ಕುದ್ರೆಬೆಟ್ಟಿನಲ್ಲಿ ನಿರ್ಮಾಣಗೊಂಡ ಪ್ರಯಾಣಿಕರ ನಿಲ್ದಾಣವಂತೂ ವಿಪರೀತ ಅಪಾಯಕಾರಿಯಾಗಿದೆ. ಹೆಪ್ಪುಗಟ್ಟಿದ ಕೊಳಚೆ ನೀರು ಹರಿಯುವ ಚರಂಡಿಗೆ ಸ್ಲ್ಯಾಬ್ ಹಾಕಿ, ಅದರ ಮೇಲೆ ಪ್ರಯಾಣಿಕರು ಕುಳಿತು ಕೊಳ್ಳಲು ಕಬ್ಬಿಣದ ಸರಳುಗಳ ಆಸನ ಮಾಡಲಾಗಿದೆ. ಮೇಲಕ್ಕೆ ಸಣ್ಣದಾಗಿ ತಗಡಿನ ಶೀಟ್. ಆರು ಫೀಟ್ ಎತ್ತರದವರೂ ಏರಿ ಕುಳಿತುಕೊಳ್ಳಬೇಕು. ಹಾಗಿದೆ ಪರಿಸ್ಥಿತಿ. ಇಲ್ಲಿ ಆರೋಗ್ಯ ಸಮಸ್ಯೆ ಇದ್ದವರು ಕುಳಿತರೆ, ತಲೆತಿರುಗಿ ಬೀಳುವುದು ಗ್ಯಾರಂಟಿ..ಬಿದ್ದರಂತೂ ಪ್ರಾಣಕ್ಕೇ ಸಂಚಕಾರ.

ಸಣ್ಣ ಮಕ್ಕಳು ಹೇಗೆ ನಿಲ್ಲುವುದು?

ಬಸ್ ಬರುವುದಕ್ಕೂ ಮೊದಲು ಪ್ರಯಾಣಿಕರು ಸುರಕ್ಷಿತವಾಗಿ ನಿಲ್ಲಲೆಂದು ನಿಲ್ದಾಣವನ್ನು ಕಟ್ಟಲಾಗುತ್ತದೆ. ಆದರೆ ಆದೇ ಅಪಾಯಕಾರಿಯಾದರೆ ಹೇಗೆ? ಹತ್ತಿರ ಶಾಲೆ ಇದೆ, ವಸತಿಗೃಹಗಳಿವೆ, ಇಲ್ಲಿನ ಮಕ್ಕಳು ಬಸ್ ಹತ್ತಲೆಂದು ಬಂದರೆ ಏನು ಮಾಡುವುದು ಎಂಬ ಪರಿಜ್ಞಾನವೇ ಇಲ್ಲದಂತೆ ಈ ನಿಲ್ದಾಣ ನಿರ್ಮಿಸಲಾಗಿದೆ ಎಂದು ಸ್ಥಳೀಯರು ದೂರಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಸಂಬಂಧಪಟ್ಟ ಇಲಾಖೆಯವರು ಅಪಾಯವೇನಾದರೂ ಸಂಭವಿಸುವ ಮೊದಲು ಇದಕ್ಕೆ ಪರಿಹಾರವನ್ನು ಒದಗಿಸಬೇಕು ಎಂದು ಸ್ಥಳೀಯರು ಮನವಿ ಮಾಡಿದ್ದಾರೆ.

ದುರ್ವಾಸನೆಯಲ್ಲೇ ಕುಳಿತುಕೊಳ್ಳಬೇಕು

ಬಿಸಿಲ ಝಳ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಸ್ಥಳೀಯರು ಅನಿವಾರ್ಯವಾಗಿ ಕಷ್ಟಪಟ್ಟು ಈ ನಿಲ್ದಾಣದಲ್ಲೇನಾದರೂ ಬಂದು ಕುಳಿತರೆ, ದುರ್ವಾಸನೆ ಉಚಿತವಾಗಿ ಸಿಗುತ್ತದೆ. ಇಲ್ಲಿನ ಚರಂಡಿಯಲ್ಲಿ ಹರಿಯುವ ಕೊಳಚೆ ನೀರಿನ ದುರ್ವಾಸನೆಯಷ್ಟೇ ಅಲ್ಲ, ಇದರ ಅಡಿಯಲ್ಲೇ ಕಸವನ್ನು ಎಸೆಯಲಾಗುತ್ತಿದ್ದು, ಅದೂ ಮತ್ತಷ್ಟು ಸಮಸ್ಯೆ ಉಂಟುಮಾಡಿದೆ.

ಕಾಸರಗೋಡು ನಗರಸಭೆಯ ಬಜೆಟ್ | ರೂ. 143 ಕೋಟಿ ಆಯ, ರೂ. 126 ಕೋಟಿ ವ್ಯಯ

ರೂ. 16,36,30,022 ಮಿಗತೆ ಮುಂಗಡ ಪತ್ರ ಮಂಡನೆ

ಕಾಸರಗೋಡು: ಕಾಸರಗೋಡು ನಗರಸಭೆಯ 2026–27ನೇ ಸಾಲಿನ 143,02,09,322 ರೂ.ಗಳ ಆಯ, 126,65,79,300 ರೂ. ವ್ಯಯದ 16,36,30,022 ರೂ.ಗಳ ಮಿಗತೆ ಮುಂಗಡ ಪತ್ರವನ್ನು ನಗರಸಭೆಯ ಉಪಾಧ್ಯಕ್ಷರು ಹಾಗೂ ಹಣಕಾಸು ಸ್ಥಾಯೀ ಸಮಿತಿ ಅಧ್ಯಕ್ಷ ಕೆ.ಎಂ.ಹನೀಫಾ ನಗರಸಭಾ ಸಭಾಂಗಣದಲ್ಲಿ ನಡೆದ ಬಜೆಟ್ಅಧಿವೇಶನದಲ್ಲಿ ಮಂಡಿಸಿದರು.



ನಗರಸಭೆಯ ಎಲ್ಲಾ ವಾರ್ಡ್‌ಗಳ ಮೂಲಭೂತ ಸೌಕರ್ಯ ಹೆಚ್ಚಿಸಲು ಪ್ರತೀ ವಾರ್ಡ್‌ಗೆ 8 ಲಕ್ಷ ರೂ.ಗಳಂತೆ ಒಟ್ಟು 3.12 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ಕಾಸರಗೋಡು ನಗರದ ದೊಡ್ಡ ಸಮಸ್ಯೆಯಾದ ಟ್ರಾಫಿಕ್ ದಟ್ಟಣೆಯನ್ನು ನಿವಾರಿಸಲು ನಾಯಕ್ಸ್ ರಸ್ತೆ, ಎಂ.ಜಿ.ರಸ್ತೆಗಳ ನವೀಕರಣಕ್ಕಾಗಿ ನಿಧಿಯನ್ನು ಮೀಸಲಿರಿಸಲಾಗಿದೆ.

ಕಾಸರಗೋಡು ನಗರಸಭೆಯ ಅಧೀನದಲ್ಲಿರುವ ಕಾಸರಗೋಡು ಹೊಸ ಬಸ್ ಬಸ್ ನಿಲ್ದಾಣ ಮತ್ತು ಶಾಪಿಂಗ್ ಕಾಂಪ್ಲೆಕ್ಸ್‌ನ್ನು ಅತ್ಯಾಧುನಿಕ ರೀತಿಯಲ್ಲಿ ಪುನರ್ ನಿರ್ಮಾಣಕ್ಕಾಗಿ 10 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ಕಾಸರಗೋಡು ನಗರಸಭೆಯ ಹಳೆಯ ಬಸ್ ನಿಲ್ದಾಣ ಮತ್ತು ಶಾಪಿಂಗ್ ಕಾಂಪ್ಲೆಕ್ಸ್ ನವೀಕರಿಸಲು ಅಗತ್ಯದ ಮೊತ್ತವನ್ನು ಮೀಸಲಿರಿಸಲಾಗುವುದು. ನಗರಸಭೆಯ ಅಧೀನದಲ್ಲಿರುವ ವಿದ್ಯಾಲಯಗಳ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು, ಶಾಲೆಗಳಲ್ಲಿ ವಿದ್ಯಾರ್ಥಿಗಳಿಗಾಗಿ ಶೀ ಟಾಯ್ಲೆಟ್ ಸ್ಥಾಪಿಸಲು ಅಗತ್ಯದ ಕ್ರಮಕೈಗೊಳ್ಳಲಾಗುವುದು. ನಗರದ ಸೌಕರ್ಯ ಹೆಚ್ಚಿಸುವ ಸಲುವಾಗಿ 'ಬೆಳಕು ಕ್ರಾಂತಿ'ಗಾಗಿ ಅಗತ್ಯದ ಮೊತ್ತ ಮೀಸಲಿರಿಸಲಾಗುವುದು.

ಕಾಸರಗೋಡು ನಗರದ ಟ್ರಾಫಿಕ್ ಜಾಮ್‌ನ್ನು ಬಗೆಹರಿಸಲು, ಕಾಸರಗೋಡು ರೈಲ್ವೇ ನಿಲ್ದಾಣಕ್ಕೆ ಹೋಗುವ ಪ್ರಯಾಣಿಕರ ಸಮಸ್ಯೆಗಳನ್ನು ಪರಿಹರಿಸಲು ಶಾಸಕರ ಮತ್ತು ಲೋಕೋಪಯೋಗಿ ಇಲಾಖೆಯ ಸಹಕಾರದೊಂದಿಗೆ ಎಂ.ಜಿ.ರಸ್ತೆ – ಫ್ರೋರ್ಟ್ ರಸ್ತೆಯಿಂದ ಮೆಡೋನಾ ರಸ್ತೆ ತನಕ ರಸ್ತೆಯನ್ನು ಅಗಲ ಮಾಡಿ ರೈಲ್ವೇ ನಿಲ್ದಾಣವನ್ನು ಲಿಂಕ್ ರಸ್ತೆಯಾಗಿ ಮಾಡಲಾಗುವುದು. ಇದಕ್ಕಾಗಿ ಅಗತ್ಯದ ಮೊತ್ತವನ್ನು ಮೀಸಲಿರಿಸಲಾಗಿದೆ.

ನಗರದ ನಾಯಕ್ಸ್ ರಸ್ತೆಯನ್ನು ಅಗಲಗೊಳಿಸಲಾಗುವುದು. ಬಸ್ ಸ್ಟಾಂಡ್ ಕ್ರಾಸ್ ರಸ್ತೆಯನ್ನು ಪಾರ್ಕಿಂಗ್ ಸ್ಟ್ರೀಟ್ ರಸ್ತೆಯಾಗಿ ಮಾರ್ಪಡಿಸಲಾಗುವುದು. ಕಾಸರಗೋಡು ಮುನ್ಸಿಪಲ್ ಬೀಚ್ ಪಾರ್ಕ್, ಸೀ ವ್ಯೂ ಪಾರ್ಕ್, ತೆರುವತ್ ಪಯಕ್ಕರ ಪಾರ್ಕ್‌ಗಳನ್ನು ನವೀಕರಿಸಲಾಗುವುದು. ನಗರಕ್ಕೆ ತಲುಪುವ ವಾಹನಗಳಿಗೆ ಪಾರ್ಕಿಂಗ್ ಸೌಕರ್ಯ ಕಲ್ಪಿಸಲು ಮುನ್ಸಿಪಲ್ ಕಚೇರಿಯ ಸಮೀಪ ಪಾರ್ಕಿಂಗ್ ಸೌಕರ್ಯ ಕಲ್ಪಿಸಲು ನಗರಸಭಾ ಕಚೇರಿ ಸಮೀಪ್ ಪಾರ್ಕಿಂಗ್ ಆ್ಯಂಡ್ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸಲು ಅಗತ್ಯದ ಕ್ರಮ ಕೈಗೊಳ್ಳಲಾಗುವುದು. ನಗರಸಭೆಯ ಅಧೀನದಲ್ಲಿರುವ ಅಣಂಗೂರಿನಲ್ಲಿರುವ ಮಹಿಳಾ ಪ್ರೀ ಮೆಟ್ರಿಕ್ ಹಾಸ್ಟೆಲ್‌ನ್ನು ನವೀಕರಿಸಿ ನಿರ್ಮಿಸಲಾಗುವುದು. ಕಾಸರಗೋಡಿನ ಪರಂಪರೆಯನ್ನು ಉಳಿಸಲು ಲಿಟರೇಚರ್ ಫೆಸ್ಟಿವಲ್ ಆಯೋಜಿಸಲಾಗುವುದು. ಕಾಸರಗೋಡು ವಲಯವನ್ನು ಮಾಲಿನ್ಯ ಮುಕ್ತಗೊಳಿಸಲು ಅಗತ್ಯದ ಕ್ರಮ ಕೈಗೊಳ್ಳಲಾಗುವುದು. ಜೈವ ವೈವಿಧ್ಯ ಪರಿಪಾಲನಾ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲಾಗುವುದು ಎಂದು ಅವರು ತಿಳಿಸಿದರು.

ಅಧ್ಯಕ್ಷೆ ಶಾಹಿನಾ ಸಲೀಂ ಅಧ್ಯಕ್ಷತೆ ವಹಿಸಿದ್ದರು.

- ಕಾಸಗೋಡು ಹೊಸ ಬಸ್ ಬಸ್ ನಿಲ್ದಾಣ, ಶಾಪಿಂಗ್ ಕಾಂಪ್ಲೆಕ್ಸ್ ಪುನರ್ ನಿರ್ಮಾಣಕ್ಕೆ 10 ಕೋಟಿ ರೂ. ಮೀಸಲು
- ನಗರಸಭೆಯ ಅಧೀನದ ವಿದ್ಯಾಲಯಗಳ ಮೂಲಭೂತ ಸೌಕರ್ಯ ವೃದ್ಧಿಗೆ, ಶಾಲೆಗಳಲ್ಲಿ ವಿದ್ಯಾರ್ಥಿಗಳಿಗಾಗಿ ಶೀ ಟಾಯ್ಲೆಟ್ ಸ್ಥಾಪಿಸಲು ಅಗತ್ಯದ ಕ್ರಮ
- ನಗರದ ಸೌಕರ್ಯ ಹೆಚ್ಚಿಸುವ ಸಲುವಾಗಿ 'ಬೆಳಕು ಕ್ರಾಂತಿ'ಗೆ ಅನುದಾನ
- ಕಾಸರಗೋಡು ನಗರದ ಟ್ರಾಫಿಕ್ ಜಾಮ್‌ನ್ನು ಬಗೆಹರಿಸಲು ಕ್ರಮ

ಇದು ಮುನ್ನಡೆ ಬಜೆಟ್ ಬದಲು ಹಿನ್ನಡೆ ಬಜೆಟ್ ಆಗಿದೆ: ವಿಪಕ್ಷ ನಾಯಕ ರವೀಂದ್ರ ಪೂಜಾರಿ ಟೀಕೆ

ಕಾಸರಗೋಡು: ನಗರಸಭೆ ಮಂಡಿಸಿದ ಅನ್ನು ಬಿಜೆಪಿ ಟೀಕಿಸಿದ್ದು, 'ಇದು ಮುನ್ನಡೆ ಬಜೆಟ್ ಬದಲು ಹಿನ್ನಡೆ ಬಜೆಟ್ ಆಗಿದೆ' ಎಂದು ಲೇವಡಿ ಮಾಡಿದೆ. ನಗರಸಭೆಯ ಬಜೆಟ್ ಮಂಡನೆಯ ಬಳಿಕ ಅಪರಾಹ್ನ ನಡೆದ ಚರ್ಚೆಯಲ್ಲಿ ಪಾಲ್ಗೊಂಡ ನಗರಸಭೆಯ ವಿಪಕ್ಷ ನಾಯಕ ಬಿಜೆಪಿಯ ರವೀಂದ್ರ ಪೂಜಾರಿ, ನಗರವನ್ನು ಮಾಲಿನ್ಯ ಮುಕ್ತಗೊಳಿಸಲು ನಗರಸಭೆಯ ಅಧೀನದಲ್ಲಿ ಯಾವುದೇ ಮಾಲಿನ್ಯ ಸಂಸ್ಕರಣಾ ಘಟಕವಿಲ್ಲ ಆದ್ದರಿಂದ ನಗರದಲ್ಲಿ ಕೂಡಲೇ ಮಾಲಿನ್ಯ ಸಂಸ್ಕರಣಾ ಕೇಂದ್ರವನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದರು. ನಗರದ ವಿವಿಧ ಹೊಟೇಲ್‌ಗಳ ಮಲಿನ ಜಲವು ಸಮೀಪದ ಮನೆಗಳ ಬಾವಿಗಳಿಗೆ ಹರಿದು ಹೋಗುತ್ತಿದೆ. ಇದರಿಂದ ಇಲ್ಲಿನ ಮನೆಯವರಿಗೆ ಬಾವಿಯ ನೀರನ್ನು ಕುಡಿಯಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ಇದಕ್ಕೆ ಬೇಕಾದ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸಂಚಾರ ಅವ್ಯವಸ್ಥೆ ಸರಿಪಡಿಸಿ

ನಗರದ ಪಳ್ಳಂ ಟ್ರಾಫಿಕ್ ಜಂಕ್ಷನ್‌ನಿಂದ ತೊಡಗಿ ಸಬ್‌ಜೈಲ್ – ಶಾಂತಾದುರ್ಗಾಂಬಾ ರಸ್ತೆ – ಲಲಿತಾ ಕಲಾಸದನ – ಬೀರಂತಬೈಲು ಮೂಲಕ ರಾಷ್ಟ್ರೀಯ ಹೆದ್ದಾರಿಗೆ ರಿಂಗ್ ರೋಡ್ ಸ್ಥಾಪಿಸಬೇಕು. ಕಾಸರಗೋಡು ತಾಲೂಕು ಕಚೇರಿ ಬಳಿ ಮುಷ್ಕರ ಇತ್ಯಾದಿ ಇರುವುದರಿಂದ ಇಲ್ಲಿ ವಾಹನ ಸಂಚಾರಕ್ಕೆ ಅಡಚಣೆಯುಂಟಾಗುತ್ತದೆ. ಇದರಿಂದ ಕೆಪಿಆರ್ ರಾವ್ ರಸ್ತೆ –ಐ.ಸಿ.ಭಂಡಾರಿ ರಸ್ತೆ –ಎ.ಟಿ.ರಸ್ತೆ ಮೂಲಕ ರಾಷ್ಟ್ರೀಯ ಹೆದ್ದಾರಿಗೆ ರಿಂಗ್ ರೋಡ್ ಸ್ಥಾಪಿಸಬೇಕು. ಇದೇ ರೀತಿ ನಾಯಕ್ಸ್ ರಸ್ತೆ – ಆನೆಬಾಗಿಲು – ಸುಲ್ತಾನ್ ಜ್ಯುವೆಲ್ಲರಿಯ ಮೂಲಕ ರಾಷ್ಟ್ರೀಯ ಹೆದ್ದಾರಿಗೆ ರಿಂಗ್ ರೋಡ್ ಸ್ಥಾಪಿಸಬೇಕು. ವಿವಿಧ ಗ್ರಾ.ಪಂ. ವಾರ್ಡ್ ಅಭಿವೃದ್ಧಿಗೆ ತಲಾ 15 ಲಕ್ಷ ರೂ. ನೀಡುವಾಗ ಕಾಸರಗೋಡು ನಗರಸಭೆಯ ಮುಂಗಡ ಪತ್ರದಲ್ಲಿ ವಾರ್ಡ್ ಅಭಿವೃದ್ಧಿಗೆ ಕೇವಲ 8 ಲಕ್ಷ ರೂ. ಗಳನ್ನು ಮಾತ್ರ ಮೀಸಲಿರಿಸಲಾಗಿದೆ. ಇದನ್ನು 25 ಲಕ್ಷ ರೂ.ಗೆ ಏರಿಸಬೇಕೆಂದು ಅವರು ಒತ್ತಾಯಿಸಿದರು.


ಬೀದಿನಾಯಿ ಉಪಟಳ ನಿಯಂತ್ರಿಸಿ

ನಗರದಲ್ಲಿ ಬೀದಿನಾಯಿಗಳ ಉಪಟಳ ಹೆಚ್ಚಾಗಿದೆ. ಇದು ರಸ್ತೆಯಲ್ಲಿ ನಡೆದುಕೊಂಡು ಹೋಗುವವರಿಗೆ ತೀವ್ರ ಬೆದರಿಕೆಯನ್ನುಂಟು ಮಾಡುತ್ತಿದೆ. ಆದ್ದರಿಂದ ಇದಕ್ಕಾಗಿ ನಗರದಲ್ಲಿ ಅಗತ್ಯದ ಸ್ಥಳ ಪತ್ತೆಹಚ್ಚಿ ನಗರದಲ್ಲಿ ಬೀದಿನಾಯಿಗಳಿಗಾಗಿ ಶೆಲ್ಟರ್ ಸ್ಥಾಪಿಸಿ ತನ್ಮೂಲಕ ಬೀದಿನಾಯಿಗಳ ಉಪಟಳವನ್ನು ಕೊನೆಗೊಳಿಸಬೇಕೆಂದು ಅವರು ಒತ್ತಾಯಿಸಿದರು. ಬಿಜೆಪಿಯ ಇತರ ಸದಸ್ಯರು ಕೂಡಾ ಇವರ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸಿದರು.

ಸುತ್ತಮುತ್ತ

ಅಧಿಕಾರಿಗಳ ವಿರುದ್ಧ ಆಕ್ರೋಶ: ಚುನಾವಣೆ ಸ್ಪರ್ಧೆಗೆ ನಿರ್ಧಾರ

ಕುಂಬಳೆ: ಪದೇ ಪದೇ ವಿನಂತಿಸಿ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರೂ, ಮಂಜೇಶ್ವರ ಕ್ಷೇತ್ರದ ವಿವಿಧ ಭಾಗಗಳಿಂದ ಕೆಂಗಲ್ಲು ಮತ್ತು ಮರ ಕಳ್ಳಸಾಗಣೆ ತಡೆಯಲು ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಹೋರಾಟದ ಭಾಗವಾಗಿ ಕುಂಬಳೆಯ ಆರ್‌ಟಿಐ ಕಾರ್ಯಕರ್ತ ಕೇಶವ ನಾಯಕ್ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಅವರು ವರ್ಷಗಳಿಂದ ವಿವಿಧ ಸಾಮಾಜಿಕ ಮತ್ತು ನೈಸರ್ಗಿಕ ಶೋಷಣೆಗಳ ವಿರುದ್ಧ ಕೆಲಸ ಮಾಡುತ್ತಿದ್ದಾರೆ.



ಅನಂತಪುರ, ಬಾಯಾರು ಮತ್ತು ಪಾದೆಕಲ್ಲಿನ ವಿವಿಧ ಸ್ಥಳಗಳಿಂದ ಕೆಂಗಲ್ಲು ಮತ್ತು ಮರಗಳನ್ನು ಕರ್ನಾಟಕ ಮತ್ತು ತಮಿಳುನಾಡಿಗೆ ಕಳ್ಳಸಾಗಣೆ ಮಾಡಲಾಗುತ್ತಿದೆ ಎಂದು ಅವರು ಕುಂಬಳೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು. ಕರ್ನಾಟಕದಲ್ಲಿ ಕೆಂಗಲ್ಲು ಗಣಿಗಾರಿಕೆಯನ್ನು ಸರಕಾರ ನಿರ್ಬಂಧಿಸಿದೆ. ಆದಾಗ್ಯೂ ಕರ್ನಾಟಕ ಪಾಸ್ ಬಳಸಿ, ಕರ್ನಾಟಕದಲ್ಲಿ ಲಭ್ಯವಿರುವ ದೊಡ್ಡ ಕಲ್ಲುಗಳನ್ನು ಕತ್ತರಿಸಿ ಕೇರಳ ಮಣ್ಣಿನಿಂದ ಕಳ್ಳಸಾಗಣೆ ಮಾಡಿ ಭಾರಿ ಲಾಭದಲ್ಲಿ ಮಾರಾಟ ಮಾಡಲಾಗುತ್ತಿದೆ. ಕೇರಳದಲ್ಲಿ 25 ರೂ. ಮೌಲ್ಯದ ಕಲ್ಲಿಗೆ ಕರ್ನಾಟಕದಲ್ಲಿ 70 ರೂ. ವೆಚ್ಚವಾಗುತ್ತದೆ. ಕಾಸರಗೋಡಿನ ಕಾಡುಗಳಿಂದ ಮರಗಳನ್ನು ಕತ್ತರಿಸಿ, ಸಿಪ್ಪೆ ಸುಲಿದು ಸ್ಥಳೀಯ ಗಿರಣಿಗಳಲ್ಲಿ ಸಂಸ್ಕರಿಸಿ ನಂತರ ತಮಿಳುನಾಡಿನ ಗಿರಣಿಗಳಿಗೆ ಸಾಗಿಸಲಾಗುತ್ತಿದೆ ಎಂದು ಅವರು ಆರೋಪಿಸಿದ್ದಾರೆ. ಕಾಡುಗಳನ್ನು ವ್ಯಾಪಕವಾಗಿ ಕಡಿದು ವನ್ಯಜೀವಿಗಳಿಗೆ ಕಿರುಕುಳ ನೀಡಲಾಗುತ್ತಿದೆ ಎಂದು ಅವರು ಹೇಳಿದರು. ಇದೆಲ್ಲದಕ್ಕೂ ಅಂತ್ಯ ಹಾಡಲು ಮತ್ತು ಕಾಡುಗಳು ಮತ್ತು ವನ್ಯಜೀವಿಗಳನ್ನು ರಕ್ಷಿಸಲು ನಾನು ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇನೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾಸರಗೋಡಿನಲ್ಲಿ ಹಿಂದೂ ಏಕತಾ ಸಂಗಮ ಪ್ರಯುಕ್ತ ಮಾತೃ ಸಂಗಮ



ಕಾಸರಗೋಡು: ಮಾ.8ರಂದು ಅಪರಾಹ್ನ 3 ಗಂಟೆಗೆ ಕಾಸರಗೋಡು ನಗರಸಭಾ ಮಟ್ಟದ ಹಿಂದೂ ಏಕತಾ ಸಂಗಮವು ಕಾಸರಗೋಡು ತಾಳಿಪಡ್ಪು ಮೈದಾನದಲ್ಲಿ ಜರಗಲಿದೆ. ಇದರ ಪೂರ್ವಭಾವಿಯಾಗಿ ಕಾಸರಗೋಡು ಕೋ ಓಪರೇಟಿವ್ ಟೌನ್ ಬ್ಯಾಂಕ್ ಸೆಂಟಿನರಿ ಸಭಾಂಗಣದಲ್ಲಿ ಜರಗಿದ ಮಾತೃ ಸಂಗಮವನ್ನು ಪುಂಡರೀಕಾಕ್ಷ ಆಚಾರ್ಯರು ಉದ್ಘಾಟಿಸಿದರು. ಸವಿತಾ ಟೀಚರ್, ಶ್ರೀಲತಾ ಟೀಚರ್ ಇದ್ದರು.

ಮಾ.16: ಅಟ್ಟೆಗೋಳಿ ವಿಷ್ಣುನಗರದಲ್ಲಿ ಬೈಲುಕೋಲ

ಉಪ್ಪಳ: ಅಟ್ಟೆಗೋಳಿ ವಿಷ್ಣುನಗರ ಶ್ರೀ ವಿಷ್ಣುಮೂರ್ತಿ ಸೇವಾ ಸಮಿತಿಯ ಆಶ್ರಯದಲ್ಲಿ 51ನೇ ವರ್ಷದ ಶ್ರೀ ವಿಷ್ಣುಮೂರ್ತಿ ದೈವದ ಬೈಲುಕೋಲ ಮಹೋತ್ಸವವು ಮಾ.16ರಂದು ಶ್ರೀ ವಿಷ್ಣುಮೂರ್ತಿ ನಗರದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಇದರ ಅಂಗವಾಗಿ ಮಾ.15ರಂದು ರಾತ್ರಿ 8ಕ್ಕೆ ಗುಳಿಗ ದೈವದ ಕೋಲ, ಮಾ.16ರಂದು ಬೆಳಗ್ಗೆ 8ಕ್ಕೆ ಗಣಪತಿ ಹೋಮ, 9ರಿಂದ ಶ್ರೀ ಸತ್ಯನಾರಾಯಣ ಪೂಜೆ, ರಾತ್ರಿ 7ಕ್ಕೆ ಅಟ್ಟೆಗೋಳಿ ಶ್ರೀ ವಿಷ್ಣುಮೂರ್ತಿ ದೈವಸ್ಥಾನದಿಂದ ವಾದ್ಯಘೋಷದೊಂದಿಗೆ ಭಂಡಾರ ಉತ್ಸವಾಂಗಣಕ್ಕೆ ಹೊರಡುವುದು. ರಾತ್ರಿ 8ರಿಂದ ಅನ್ನಪ್ರಸಾದ, 8.30ರಿಂದ ಕೈಕೊಟ್ಟುಕಳಿ, 9ಕ್ಕೆ ಮೇಲೇರಿಗೆ ಅಗ್ನಿಸ್ಪರ್ಶ, 9.30ರಿಂದ ವಿವಿಧ ವಿನೋದಾವಳಿಗಳು, 12ಕ್ಕೆ ಶ್ರೀ ದೈವದ ಕುಳಿಚ್ಚಾಟ್ಟಂ, 1ಗಂಟೆಯಿಂದ ಪೊರಿಪುದಪ್ಪೆ ಜಲದುರ್ಗೆ ತುಳು ಪೌರಾಣಿಕ ನಾಟಕ ಪ್ರದರ್ಶನ, ಮರುದಿನ ಮುಂಜಾನೆ 4.30ಕ್ಕೆ ಶ್ರೀ ದೈವದ ಅಗ್ನಿಸೇವೆ, 5ಕ್ಕೆ ಪ್ರಸಾದ ವಿತರಣೆ, ಬೆಳಗ್ಗೆ 7ಕ್ಕೆ ಭಂಡಾರ ಇಳಿದು ಕಾರ್ಯಕ್ರಮ ಸಮಾಪ್ತಿಗೊಳ್ಳಲಿದೆ.

ಬದಿಯಡ್ಕದಲ್ಲಿ ಕಾಶ್ಮೀರದಿಂದ ಹೊರಟ ರಾಮನವಮಿ ರಥಕ್ಕೆ ಸ್ವಾಗತ



ಬದಿಯಡ್ಕ: ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ಸಂಚರಿಸುವ ರಾಮನವಮಿ ರಥಯಾತ್ರೆ ಮಂಗಳವಾರ ಬೆಳಗ್ಗೆ ಬದಿಯಡ್ಕಕ್ಕೆ ಆಗಮಿಸಿದ್ದು ಹಾರಾರ್ಪಣೆಗೈದು ಬರಮಾಡಿಕೊಳ್ಳಲಾಯಿತು.

ರಥಯಾತ್ರೆಯ ಧ್ಯೇಯೋದ್ದೇಶದ ಬಗ್ಗೆ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ದಿಕ್ಸೂಚಿ ಭಾಷಣ ಮಾಡಿದರು. ಬದಿಯಡ್ಕ ಗ್ರಾಮ ಪಂಚಾಯತ್ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಸದಸ್ಯ ಬಾಲಕೃಷ್ಣ ಶೆಟ್ಟಿ ಕೆ., ಪ್ರಮುಖರಾದ ಉದನೇಶ್ವರ ಬದಿಯಡ್ಕ, ನಾರಾಯಣ ಭಟ್ ಮೈರ್ಕಳ, ಆನಂದ ಪೆರಡಾಲ, ಗಂಗಾಧರ ಪಳ್ಳತ್ತಡ್ಕ ಮೊದಲಾದವರು ಇದ್ದರು. ಕಾರ್ಯಕ್ರಮದಲ್ಲಿ ಎಂ.ಸುಧಾಮ ಗೋಸಾಡ ಸ್ವಾಗತಿಸಿದರು. ಮಹೇಶ್ ವಳಕ್ಕುಂಜ ವಂದಿಸಿದರು.

ಮುನಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ಆರಂಭ

ಬದುಕಿನಲ್ಲಿ ಕ್ಷೇತ್ರ ದರ್ಶನ ರೂಢಿಸಿಕೊಳ್ಳಿ: ಎಡನೀರು ಶ್ರೀ

ಬದಿಯಡ್ಕ: ನಾಡಿನಾದ್ಯಂತ ಅನೇಕ ಧಾರ್ಮಿಕ ಕ್ಷೇತ್ರಗಳು ಇಂದು ಪುನರುದ್ಧಾರಗೊಂಡು ಶೋಭಿಸುತ್ತಿವೆ. ಈ ಪುಣ್ಯಕ್ಷೇತ್ರಗಳು ನಿರಂತರ ಬೆಳಕನ್ನು ಕಾಣಬೇಕು. ಇದಕ್ಕೆ ಭಗವದ್ಭಕ್ತರ ಸಹಕಾರ ಅತೀ ಅಗತ್ಯ. ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿಯೂ ಮುಂದೆಯೂ ನಿರಂತರವಾಗಿ ಕ್ಷೇತ್ರಗಳ ದರ್ಶನಕ್ಕೆ ಭಗವದ್ಭಕ್ತರು ತೆರಳುವುದನ್ನು ರೂಢಿಸಿಕೊಳ್ಳಬೇಕು ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಹೇಳಿದ್ದಾರೆ.



ಮುನಿಯೂರು ಮುನಿಪುರ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸೋಮವಾರ ದೀಪ ಬೆಳಗಿಸಿ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು. ಜೀರ್ಣೋದ್ಧಾರ ಸಮಿತಿ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಶಂಕರನಾರಾಯಣ ಮಯ್ಯ ಬದಿಯಡ್ಕ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ಕುಂಟಾರು ವಾಸುದೇವ ತಂತ್ರಿ, ದೈವಜ್ಞ ವಿಶ್ವನಾಥ ಭಟ್ ಕೊಳ್ಚಪ್ಪೆ, ಖ್ಯಾತ ವೈದ್ಯ ಡಾ.ರಮಾನಂದ ಬನಾರಿ, ರಾಧಾಕೃಷ್ಣ ನಾಯರ್ ಗುಜರಾತ್, ಗೋಪಾಲಕೃಷ್ಣ ಪೈ ಬದಿಯಡ್ಕ, ಆನುವಂಶಿಕ ಮೊಕ್ತೇಸರ ಗೋಪಾಲಕೃಷ್ಣ ನಡುವಂತಿಲ್ಲಾಯ, ಉದ್ಯಮಿ ನಿತ್ಯಾನಂದ ಶೆಣೈ ಬದಿಯಡ್ಕ ಗೌರವ ಉಪಸ್ಥಿತರಿದ್ದರು.

ಶ್ರೀ ಕ್ಷೇತ್ರದ ಸೇವಾ ಸಮಿತಿ ಅಧ್ಯಕ್ಷ ಕೀರಿಕ್ಕಾಡು ಅಜ್ಜಿಮೂಲೆ ಕೃಷ್ಣ ಭಟ್, ಅಜ್ಜಿಮೂಲೆ ವೆಂಕಟ್ರಮಣ ಭಟ್, ಶಂಕರ ಕೇಕುಣ್ಣಾಯ, ದಂತ ವೈದ್ಯೆ ಡಾ.ಕವಿತಾ ಶೆಟ್ಟಿ ಕಂಡೆತ್ತೋಡಿ ಉಪಸ್ಥಿತರಿದ್ದರು. ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಡಾ.ವೇಣುಗೋಪಾಲ ಕಳೆಯತ್ತೋಡಿ ಸ್ವಾಗತಿಸಿ, ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ಚಂದ್ರಹಾಸ ನಂಬ್ಯಾರ್ ವಂದಿಸಿದರು. ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಚಂದ್ರಶೇಖರ ವರುಂಬುಡಿ ಕಾರ್ಯಕ್ರಮ ನಿರೂಪಿಸಿದರು.

ನೀರ್ಚಾಲಿನಲ್ಲಿ ಬಹುಮುಖ ಪ್ರತಿಭೆ, ಚಿಂತಕ ಎಂ.ಎಸ್. ಶೇಖರ್ ಸಂಸ್ಮರಣೆ



ಬದಿಯಡ್ಕ: ಬಹುಮುಖ ಪ್ರತಿಭೆಯ ಎಂ.ಎಸ್. ಶೇಖರ್ ಅವರು ಅಂಬೇಡ್ಕರ್ ತತ್ವಾದರ್ಶಗಳನ್ನು ಪ್ರತಿಪಾದಿಸಿದ್ದ ಚಿಂತಕರಾಗಿದ್ದರು. ಸಮಾನ ಮನಸ್ಕರೊಡನೆ ಬದಿಯಡ್ಕ ಕೇಂದ್ರೀಕರಿಸಿ ಅಂಬೇಡ್ಕರ್ ವಿಚಾರ ವೇದಿಕೆಯನ್ನು ಹುಟ್ಟು ಹಾಕಿದ ಅವರು ಯುವಜನತೆಯ ಆಶಾಕಿರಣವಾಗಿದ್ದರು ಎಂದು ಬದಿಯಡ್ಕ ಗ್ರಾಮ ಪಂಚಾಯತ್ ಸದಸ್ಯ ಗಂಗಾಧರ ಗೋಳಿಯಡ್ಕ ಹೇಳಿದರು.

ಸಮರ್ಥ ಸಂಘಟಕ, ಪ್ರಗತಿಪರ ಚಿಂತಕ, ಸಾಮಾಜಿಕ ಕಾರ್ಯಕರ್ತ ಎಂ.ಎಸ್. ಶೇಖರ್ ಮುರಿಯಂಕೂಡ್ಲು ಅವರ 22ನೇ ಸಂಸ್ಮರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ವಿಚಾರ ವೇದಿಕೆಯ ಆಶ್ರಯದಲ್ಲಿ ಪ್ರತಿವರ್ಷವೂ ಸಂಸ್ಮರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು ಈ ಬಾರಿ ನೀರ್ಚಾಲಿನ ಮೇಲಿನ ಪೇಟೆಯ ದಿ.ಕೃಷ್ಣ ದರ್ಬೆತ್ತಡ್ಕ ವೇದಿಕೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸಮಾರಂಭದಲ್ಲಿ ಹಿರಿಯ ಕವಿ, ಪತ್ರಕರ್ತ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅಧ್ಯಕ್ಷತೆ ವಹಿಸಿದ್ದರು. ಎಂ.ಎಸ್. ಶೇಖರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನಡೆಸುವ ಮೂಲಕ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಅಂಬೇಡ್ಕರ್ ವಿಚಾರ ವೇದಿಕೆಯ ಸ್ಥಾಪಕ ಸದಸ್ಯ ನಾರಾಯಣ ಬಾರಡ್ಕ ಸಂಸ್ಮರಣಾ ಭಾಷಣ ಮಾಡಿದರು. ಜಿಲ್ಲಾ ಮೊಗೇರ ಸಂಘದ ಪೂರ್ವಾಧ್ಯಕ್ಷ ಹರಿಶ್ಚಂದ್ರ ಪುತ್ತಿಗೆ, ಕಲಾವಿದ ಶಂಕರ ಸ್ವಾಮಿಕೃಪಾ, ಎಂ.ಎಸ್. ಶೇಖರ್ ಅವರ ಸಹೋದರ ಬಾಲಕೃಷ್ಣ ಮುರಿಯಂಕೂಡ್ಲು ಮುಂತಾದವರು ಭಾಗವಹಿಸಿದ್ದರು. ವಿಚಾರ ವೇದಿಕೆಯ ಕಾರ್ಯದರ್ಶಿ ಸುಂದರ ಬಾರಡ್ಕ ಸ್ವಾಗತಿಸಿ, ಅಧ್ಯಕ್ಷ ರಾಮ ಪಟ್ಟಾಜೆ ವಂದಿಸಿದರು.

ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ಸಮಾಪ್ತಿ



ಕಾಸರಗೋಡು: ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಜೈವಿಕ ವಿಜ್ಞಾನ ಶಾಲೆ ಮತ್ತು ಆಣ್ವಿಕ ಸಿಗ್ನಲಿಂಗ್ ಸೊಸೈಟಿ ಜಂಟಿಯಾಗಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಆಣ್ವಿಕ ಸಿಗ್ನಲಿಂಗ್ ಸಮ್ಮೇಳನವು ಮುಕ್ತಾಯಗೊಂಡಿದೆ.

ಜೀವಕೋಶಗಳು ಮತ್ತು ಅಂಗಗಳ ನಡುವಿನ ಸಂವಹನ ಪ್ರಕ್ರಿಯೆಗೆ ಸಂಬಂಧಿಸಿದ ಅಧ್ಯಯನ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ವಿದೇಶಗಳು ಸೇರಿದಂತೆ ವಿವಿಧ ದೇಶಗಳ ವಿಜ್ಞಾನಿಗಳು ಭಾಗವಹಿಸಿದ್ದ ಸಮ್ಮೇಳನವು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂಶೋಧನಾ ಅವಕಾಶಗಳೊಂದಿಗೆ ಸಮಾಪ್ತಿಯಾಯಿತು. ಹೈದರಾಬಾದ್ ವಿವಿ ನಿವೃತ್ತ ಉಪಕುಲಪತಿ ಪ್ರೊ.ಪಿ. ಅಪ್ಪಾರಾವ್ ಸಮಾರೋಪ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿ, ವಿಜ್ಞಾನ ಕ್ಷೇತ್ರದಲ್ಲಿ ಶುದ್ಧತೆ ಮತ್ತು ನೀತಿಶಾಸ್ತ್ರ ಮುಖ್ಯ ಎಂದು ಗಮನ ಸೆಳೆದರು. ಕೇರಳ ಕೇಂದ್ರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಿದ್ದು ಪಿ.ಅಲ್ಗೂರ್ ಅಧ್ಯಕ್ಷತೆ ವಹಿಸಿದ್ದರು. ಗುಜರಾತ್ ಜೈವಿಕ ತಂತ್ರಜ್ಞಾನ ವಿವಿ ಮಹಾನಿರ್ದೇಶಕ ಡಾ. ಸುಬೀರ್ ಎಸ್. ಮಜುಂದಾರ್, ಡೀನ್ ಅಕಾಡೆಮಿಕ್ ಪ್ರೊ.ಜೋಸೆಫ್ ಕೊಯಿಪಲ್ಲಿ, ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ.ರಾಜೇಂದ್ರ ಪಿಲಾಂಕಟ್ಟೆ, ಪ್ರೊ.ಡೆನ್ನಿಸ್ ಥೋಮಸ್ ಮಾತನಾಡಿದರು. ಸಸ್ಯ ವಿಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಅರುಣ್ ಕುಮಾರ್ ಸ್ವಾಗತಿಸಿ, ಸಂಘಟನಾ ಕಾರ್ಯದರ್ಶಿ ಡಾ.ಇಂದ್ರಶಿಶ್ ಭಟ್ಟಾಚಾರ್ಯ ವಂದಿಸಿದರು. ಅತ್ಯುತ್ತಮ ಪ್ರಬಂಧ ಮತ್ತು ಪೋಸ್ಟರ್‌ಗಳಿಗೆ ಪ್ರಶಸ್ತಿಗಳನ್ನು ನೀಡಲಾಯಿತು. ಕೆನಡಾ, ಅಮೆರಿಕ, ಜರ್ಮನಿ ಮತ್ತು ಜಪಾನ್‌ನಂತಹ ವಿವಿಧ ದೇಶಗಳ ಮತ್ತು ದೇಶದ ತಜ್ಞರು ಭಾಗವಹಿಸಿದ್ದರು.

ಪ್ರತಾಪನಗರದಲ್ಲಿ ಬೃಹತ್ ಹಿಂದು ಸಮಾಜೋತ್ಸವ, ಶೋಭಾಯಾತ್ರೆ



ಉಪ್ಪಳ: ಮಂಗಲ್ಪಾಡಿ ಪಂಚಾಯತ್ ಮಟ್ಟದ ಬೃಹತ್ ಹಿಂದು ಸಮಾಜೋತ್ಸವವು ಪ್ರತಾಪನಗರದ ಶಿವಶಕ್ತಿ ಮೈದಾನದಲ್ಲಿ ನಡೆಯಿತು.

ಮಂಗಲ್ಪಾಡಿ ಮನೆತನದ ಹಿರಿಯರಾದ ಸುಫಲಚಂದ್ರ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಸಮಿತಿ ರಕ್ಷಾಧಿಕಾರಿ ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠಾಧೀಶ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಆಶೀರ್ವಚನ ನೀಡಿದರು. ಕರ್ನಾಟಕ ರಾಜ್ಯ ದೇವಾಲಯ ಸಂವರ್ಧನಾ ಸಮಿತಿ ಸಂಯೋಜಕ್ ಮನೋಹರ ಮಠದ್ ದಿಕ್ಸೂಚಿ ಭಾಷಣ ಮಾಡಿದರು. ಸಮಿತಿ ಅಧ್ಯಕ್ಷ ಸಿ.ಎಸ್. ಕೃಷ್ಣಪ್ಪ ಐಲ್ ಉಪಸ್ಥಿತರಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಂಡಲ ಕಾರ್ಯವಾಹ ಶ್ರೀಧರ ಶೆಟ್ಟಿ ಪರಂಕಿಲ ಪ್ರಾಸ್ತಾವಿಕ ಭಾಷಣ ಮಾಡಿದರು. ಚೈತನ್ಯ, ಅನನ್ಯ, ಯಶಸ್ವಿ ವಂದೇ ಮಾತರಂ ಹಾಡಿದರು. ಅಮಿತ್ ಪರಂಕಿಲ ಸ್ವಾಗತಿಸಿ, ಸಮಿತಿಯ ಉಪಾಧ್ಯಕ್ಷ ರಾಧಾಕೃಷ್ಣ ತುಂಗ ವಂದಿಸಿದರು. ಪದ್ಮಾ ಮೋಹನದಾಸ್ ಐಲ ನಿರೂಪಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ವೇದಿಕೆಯಲ್ಲಿ ಮಂಜುಳಾ ಗುರುರಾಜ್ ಮಯ್ಯ ಮತ್ತು ಬಳಗದವರಿಂದ ರಾಷ್ಟ್ರ ಭಕ್ತಿಗೀತೆ ನಡೆಯಿತು.

ಕುಣಿತ ಭಜನೆ, ಶೋಭಾಯಾತ್ರೆ,

ಸಮಾರಂಭದ ಪ್ರಯುಕ್ತ ಶಾಂತಿಗುರಿ ಶ್ರೀ ಮೂಕಾಂಬಿಕಾ ಕ್ಷೇತ್ರದಿಂದ ವಿವಿಧ ತಂಡಗಳ ಕುಣಿತ ಭಜನೆಯೊಂದಿಗೆ ವೈಭವದ ಶೋಭಾಯಾತ್ರೆ ಜರಗಿತು. ಪಾರ್ಕಿಂಗ್ ವ್ಯವಸ್ಥೆ ಆಗಮಿಸಿದ ಕಾರ್ಯಕರ್ತರಿಗೆ ಬೆಲ್ಲ ನೀರು ವಿತರಣೆ ಹಾಗೂ ಸುತ್ತಮುತ್ತ ಪ್ರದೇಶ ಶುಚೀಕರಿಸಿರುವುದು ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ನೀಡಿತು.

ಶಾಲಾ ಮಕ್ಕಳು ತಡೆಗೋಡೆ ಹಾರುವುದು ಅಪಾಯಕ್ಕೆ ಆಹ್ವಾನ

ಪಾದಚಾರಿ ಮೇಲ್ಸೇತುವೆ ನಿರ್ಮಾಣಕ್ಕೆ ಬೇಡಿಕೆ

ಕಾಸರಗೋಡು: ತಲಪಾಡಿ – ಕಾಸರಗೋಡು – ಚೆಂಗಳ ಪ್ರಥಮ ರೀಚ್ ರಾಷ್ಟ್ರೀಯ ಹೆದ್ದಾರಿ 66ರ ವಿವಿಧ ಕಡೆಗಳಲ್ಲಿ ಫೂಟ್ ಓವರ್ ಬ್ರಿಡ್ಜ್‌ಗಳಿಗೆ ಬೇಡಿಕೆ ಹೆಚ್ಚುತ್ತಿದ್ದು, ಅದರಂತೆ ಕುಂಬಳೆ ಸಮೀಪದ ಮಾವಿನಕಟ್ಟೆಯಲ್ಲೂ ಕಾಲ್ನಡೆ ಮೇಲ್ಸೇತುವೆ ಬೇಕೆಂಬ ಬೇಡಿಕೆ ಪ್ರಬಲಗೊಳ್ಳತೊಡಗಿದೆ.



ಇತ್ತೀಚೆಗೆ ತಲಪಾಡಿ – ಚೆಂಗಳ ರಾಷ್ಟ್ರೀಯ ಹೆದ್ದಾರಿ 10ರಷ್ಟು ಸ್ಥಳಗಳಲ್ಲಿ ಹೊಸದಾಗಿ ಪಾದಚಾರಿ ಮೇಲ್ಸೇತುವೆ (ಫೂಟ್ ಓವರ್ ಬ್ರಿಡ್ಜ್)ಗಳ ನಿರ್ಮಾಣಕ್ಕೆ ಅನುಮತಿ ಲಭಿಸಿದೆ. ಇದೇ ವೇಳೆ ಕುಂಬಳೆ ಮಾವಿನಕಟ್ಟೆಯಲ್ಲಿ ಶಿಕ್ಷಣ ಸಂಸ್ಥೆ ಮತ್ತು ಮಸೀದಿಗಳಿದ್ದು, ಈ ಭಾಗದಲ್ಲಿ ಅಂಡರ್‌ಪಾಸ್ ಅನಿವಾರ್ಯವಾಗಿತ್ತು. ಈ ಮಧ್ಯೆ ಇಲ್ಲಿ ಅಂಡರ್‌ಪಾಸ್‌ಗೆ ಸಮಾನವಾದ ರೀತಿಯಲ್ಲಿ ಕಲ್ವರ್ಟ್ ನಿರ್ಮಿಸುವಾಗ ಅದು ಪಾದಚಾರಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಇರಬೇಕೆಂಬ ಆಗ್ರಹ ವ್ಯಾಪಕವಾಗಿ ಕೇಳಿಬಂದಿತ್ತು. ಆದರೆ ಸ್ಥಳೀಯರ ಈ ಬೇಡಿಕೆಯನ್ನು ಕಡೆಗಣಿಸಲಾಗಿದೆ ಎಂಬ ಆರೋಪವೆದ್ದಿದೆ. ಈ ಪ್ರದೇಶದಲ್ಲಿ ರಸ್ತೆ ದಾಟಬೇಕಿದ್ದರೆ ಕಿಲೋ ಮೀಟರ್‌ನಷ್ಟು ದೂರದಲ್ಲಿರುವ ಕುಂಬಳೆ ರೈಲು ನಿಲ್ದಾಣದ ಅಂಡರ್‌ಪಾಸ್ ಆಶ್ರಯಿಸಬೇಕಾದ ಅನಿವಾರ್ಯತೆಯಿದೆ.

ಇದರಿಂದಾಗಿ ಮಾವಿನಕಟ್ಟೆ ಭಾಗದ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ರಾಷ್ಟ್ರೀಯ ಹೆದ್ದಾರಿಯ ತಡೆಗೋಡೆ ಹಾರುತ್ತಿದ್ದು, ಇದು ಅಪಘಾತಗಳಿಗೂ ಕಾರಣವಾಗಲಿದೆ. ಜೊತೆಗೆ ಸಾರಿಗೆ ಸಂಚಾರ ಸಮಸ್ಯೆಗೂ ದಾರಿಮಾಡಿಕೊಡುತ್ತಿದೆ. ಬಸ್‌ಗಳು ಸರ್ವೀಸ್ ರಸ್ತೆಗಳಲ್ಲಿ ಏಕಮುಖ ಸಂಚಾರ ನಡೆಸುತ್ತಿದ್ದು, ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ಈ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವಲ್ಲೆಲ್ಲಾ ಕಾಲ್ನಡೆ ಮೇಲ್ಸೇತುವೆ ಸ್ಥಾಪಿಸಲಾಗುವುದು ಎಂದು ಸಂಬಂಧಪಟ್ಟ ಅಧಿಕಾರಿಗಳು ಭರವಸೆ ನೀಡಿದ್ದರು. ಆದ್ದರಿಂದ ಬೇಡಿಕೆಯನ್ನು ಪರಿಗಣಿಸಿ ಮಾವಿನಕಟ್ಟೆ ಪ್ರದೇಶದಲ್ಲಿ ಕೂಡಲೇ ಫೂಟ್ ಓವರ್ ಬ್ರಿಡ್ಜ್ ನಿರ್ಮಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕಾಸರಗೋಡು ಕೆಎಸ್‌ಆರ್‌ಟಿಸಿ ಬಳಿಯ ಶ್ರೀ ನಾಗರಾಜ ಸನ್ನಿಧಿ

ಮೇ 23ರಿಂದ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ

ಕಾಸರಗೋಡು: ನಗರದ ಕೆಎಸ್‌ಆರ್‌ಟಿಸಿ ಬಳಿಯ ಶ್ರೀ ನಾಗರಾಜ ಸನ್ನಿಧಿಯಲ್ಲಿ 2026 ಮೇ 23ರಿಂದ 25ರ ವರೆಗೆ ನಡೆಯಲಿರುವ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವದ ಯಶಸ್ವಿಗೆ ಬೇಕಾಗಿ ಕಟ್ಟೆ ಪರಿಸರದ ಮಡತ್ತಿಲ್ ತರವಾಡು ಮನೆ ಪರಿಸರದಲ್ಲಿ ಭಕ್ತಾಧಿಗಳ ಸಭೆ ಜರಗಿತು.



ತಂತ್ರಿವರ್ಯರಾದ ಸುಕಾನಂದ ಭಟ್ ಅವರ ಆಶೀರ್ವಚನದೊಂದಿಗೆ ಆರಂಭಿಸಿದ ಸಭೆಯನ್ನು ವಕೀಲ ಪಿ.ಮುರಳೀಧರನ್ ಉದ್ಘಾಟಿಸಿದರು. ಸಮಿತಿ ಅಧ್ಯಕ್ಷ ದಿನೇಶ್ ಬಂಬ್ರಾಣ ಅಧ್ಯಕ್ಷತೆ ವಹಿಸಿದ್ದರು. ಪ್ರದೀಪ್‌ಕುಮಾರ್. ವೆಂಕಟ್ರಮಣ ಹೊಳ್ಳ, ಪಿ.ರಮೇಶ್, ಎ.ಕೇಶವ. ರವೀಂದ್ರ ಕರಂದಕ್ಕಾಡು, ಹರೀಶ್ ಕೊಲ್ಕೈಲ್. ಅರುಣ್ ಕುಮಾರ್ ಶೆಟ್ಟಿ, ಮಧುಕರ ಕೊರಕ್ಕೋಡು. ವಕೀಲ ಅಶೋಕ್‌ಕುಮಾರ್. ಶ್ರೀಲತಾ ಟೀಚರ್, ದಾಮೋದರ್, ವಕಿಲ ಸತ್ಯೇಂದ್ರ, ಪುರಂದರ ಶೆಟ್ಟಿ , ಮೋಹನ್‌ದಾಸ್ ಅಡ್ಕತ್ತಬೈಲು. ಗಣೇಶ್ ಕೇಳುಗುಡ್ಡೆ ಮೊದಲಾದವು ಉಪಸ್ಥಿತರಿದ್ದರು. ಸಮಿತಿ ಕಾರ್ಯದರ್ಶಿ ಮೋಹನ್‌ದಾಸ್ ಕೊರಕ್ಕೋಡ್ ಸ್ವಾಗತಿಸಿ, ಬಾಬು ಮೋನ್ ಚೆರ್ಕಳ ವಂದಿಸಿದರು.

ನೂತನ ಸಮಿತಿ ರಚನೆ

ಬ್ರಹ್ಮ ಕಲಶೋತ್ಸವದ ಸಮಿತಿ ಹಾಗೂ ವಿವಿಧ ಉಪ ಸಮಿತಿಗಳನ್ನು ರೂಪಿಕರಿಸಲಾಯಿತು. ರಕ್ಷಾಧಿಕಾರಿಯಾಗಿ ಸುಕಾನಂದ ಭಟ್ ಮಂಜೇಶ್ವರ. ಗೌರವ ಅಧ್ಯಕ್ಷರಾಗಿ ವಕೀಲ ಪಿ.ಮುರಳೀಧರನ್, ಸಿ.ವಿ.ಪೊದುವಾಳ್. ಎ.ಕೇಶವ. ದೇವಿಪ್ರಸಾದ್ ಭಟ್, ಅಧ್ಯಕ್ಷರಾಗಿ ವಕೀಲ ಶಶಿದರ ಅನೆಮಜಲು, ಕಾರ್ಯಾಧ್ಯಕ್ಷರಾಗಿ ಪಿ.ರಮೇಶ್ ಕಾಸರಗೋಡು. ಪ್ರದಾನ ಕಾರ್ಯದರ್ಶಿ ದಿನೇಶ್ ಬಂಬ್ರಾಣ, ಕೋಶಾಧಿಕಾರಿಯಾಗಿ ವಸಂತ ಕೇಳುಗುಡ್ಡೆ ಹಾಗೂ 101 ಮಂದಿಯನ್ನೊಳಗೊಂಡ ಸಮಿತಿ ಪದಾಧಿಕಾರಿಗಳು, ಸಮಿತಿ ಸದಸ್ಯರನ್ನು ಆರಿಸಲಾಯಿತು.

ಸುತ್ತಮುತ್ತ

ಜತ್ರಬೆಟ್ಟು: ದೈವದ ನೇಮ



ಶಿರ್ವ: ಉಡುಪಿ ಜಿಲ್ಲೆಯ ಇತಿಹಾಸ ಪ್ರಸಿದ್ಧ ಶಿರ್ವ ಜತ್ರಬೆಟ್ಟು ಆದಿ ಶ್ರೀ ಧರ್ಮಜಾರಂದಾಯ ದೈವದ ಸನ್ನಿಧಿಯಲ್ಲಿ ಮಂಗಳವಾರ ವರ್ಷಂಪ್ರತಿ ಜರುಗುವ ವಾರ್ಷಿಕ ನೇಮೋತ್ಸವ ಮತ್ತು ಮಹಾ ಅನ್ನಸಂತರ್ಪಣೆ ಪ್ರಯುಕ್ತ ಪೂರ್ವಾಹ್ನ ಶಿರ್ವ ಶ್ರೀವಿಷ್ಣುಮೂರ್ತಿ ದೇವಳದ ಪ್ರಧಾನ ಅರ್ಚಕರಾದ ವೇದಮೂರ್ತಿ ರಘುಪತಿ ಗುಂಡು ಭಟ್ ನೇತೃತ್ವದಲ್ಲಿ ನವಕ ಪ್ರಧಾನ ಹೋಮದ ಧಾರ್ಮಿಕ ಅನುಷ್ಠಾನಗಳು ಸಂಪನ್ನಗೊಂಡವು. ಮಧ್ಯಾಹ್ನ ದೈವದ ಭಂಡಾರ ಇಳಿಯುವುದು, ನಂತರ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಿತು. ರಾತ್ರಿ ವಾರ್ಷಿಕ ನೇಮೋತ್ಸವ ಜರುಗಿತು. ಕ್ಷೇತ್ರದ ಆಡಳಿತ ಸಮಿತಿಯ ಅಧ್ಯಕ್ಷ ತಮ್ಮಣ್ಣ ಪೂಜಾರಿ, ಪ್ರಮುಖರಾದ ವಿಟ್ಠಲ ಅಂಚನ್, ಸುರೇಂದ್ರ ಪೂಜಾರಿ ಕೊಪ್ಪಳ ಇದ್ದರು.

ಆದಿದ್ವಾರ ಆನ್‌ಲೈನ್ ತರಬೇತಿಗೆ ಚಾಲನೆ

ಕುಂದಾಪುರ: ದಿವ್ಯಾಂಗರ ಶಕ್ತೀಕರಣವು ಸರ್ಕಾರ ಮತ್ತು ಸಮಾಜದ ಸಮಾನ ಜವಾಬ್ದಾರಿಯಾಗಿದೆ. ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ ದಿವ್ಯಾಂಗರು ಆತ್ಮನಿರ್ಭರ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಅಭಿಪ್ರಾಯಪಟ್ಟರು.
ಆಸಿಸ್ಟಿಕ್ ಫೌಂಡೇಶನ್ ವತಿಯಿಂದ ಉಡುಪಿ ಜಿಲ್ಲೆಯ ದಿವ್ಯಾಂಗರಿಗಾಗಿ ಆಯೋಜಿಸಲಾದ ಎರಡು ದಿನಗಳ ಆದಿದ್ವಾರ ಆನ್‌ಲೈನ್ ತರಬೇತಿ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು. ಮುಂದಿನ ಹಂತವಾಗಿ ಮಾ. 14ರಂದು ಉಡುಪಿ ಜಿಲ್ಲೆಯಲ್ಲಿ ಆದಿದ್ವಾರ ಜಾಬ್ ಹಬ್ಬ(ಉದ್ಯೋಗ ಮೇಳ) ನಡೆಯಲಿದ್ದು, ದಿವ್ಯಾಂಗ ಅಭ್ಯರ್ಥಿಗಳು ಮತ್ತು ಉದ್ಯೋಗದಾತರನ್ನು ಒಂದೇ ವೇದಿಕೆಯಲ್ಲಿ ತರಲು ಉದ್ದೇಶಿಸಲಾಗಿದೆ ಎಂದು ಅವರು ಹೇಳಿದರು.
ಆಸಿಸ್ಟಿಕ್ ಫೌಂಡೇಶನ್‌ನ ಸಹ ಸಂಸ್ಥಾಪಕ ಹಾಗೂ ಸಿಇಒ ಪ್ರತೀಕ್ ಮಾಧವ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಸುಮಾರು 500ಕ್ಕೂ ಹೆಚ್ಚು ಮಂದಿ ನೋಂದಣಿ ಮಾಡಿಸಿಕೊಂಡಿದ್ದರು.

ಬಂಟಕಲ್ ಕಾಲೇಜು ಶಿಕ್ಷಕ-ರಕ್ಷಕರ ಸಭೆ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯ ಇದರ ದ್ವಿತೀಯ ಮತ್ತು ತೃತೀಯ ವರ್ಷದ ವಿದ್ಯಾರ್ಥಿಗಳ ಪೋಷಕರಿಗಾಗಿ ಶಿಕ್ಷಕ ರಕ್ಷಕ ಸಭೆಯನ್ನು ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿತ್ತು. ಸಂಸ್ಥೆಯ ಪ್ರಾಂಶುಪಾಲ ಡಾ. ನಾಗರಾಜ್ ಭಟ್ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳ ಮೇಲ್ವಿಚಾರಣೆಯಲ್ಲಿ ಪೋಷಕರ ಪಾತ್ರದ ಬಗ್ಗೆ ತಿಳಿಸಿದರು.ಪೋಷಕರು ವಿದ್ಯಾರ್ಥಿಗಳ ಶಿಕ್ಷಕ ಮಾರ್ಗದರ್ಶಕರೊಂದಿಗೆ ನಿಯಮಿತವಾದ ಭೇಟಿ, ಹಾಸ್ಟೆಲ್ ವಿದ್ಯಾರ್ಥಿಗಳ ಪೋಷಕರು ಹಾಸ್ಟೆಲ್ ಮೇಲ್ವಿಚಾರಕರೊಂದಿಗೆ ವಿದ್ಯಾರ್ಥಿಗಳ ಕಾರ್ಯಕ್ಷಮತೆ ಹಾಗೂ ಇನ್ನಿತರ ವಿಷಯದ ಬ ಸಂಸ್ಥೆಯ ಶೈಕ್ಷಣಿಕ ಪ್ರಗತಿ, ಉದ್ಯೋಗ ತರಬೇತಿ, ವಿದ್ಯಾರ್ಥಿ ವೇತನ ಸೌಲಭ್ಯ ಮತ್ತು ವಿದ್ಯಾರ್ಥಿ ಚಟುವಟಿಕೆ ಕೇಂದ್ರದ ಬಗ್ಗೆ ಮಾಹಿತಿ ನೀಡಿದರು. ಮುಖ್ಯ ಅತಿಥಿಗಳಾಗಿದ್ದ ನೇಚರ್ ಬೌಂಡ್, ಸಹ್ಯಾದ್ರಿ ಒಬಿಟಿ ಕೇಂದ್ರದ ತರಬೇತಿ ನಿರ್ದೇಶಕ ಪಿ.ಜಿ. ಕೊನ್ನೂರು ಮಾತನಾಡಿ, ಪೋಷಕರ ಪಾತ್ರದ ಬಗ್ಗೆ ಮಾಹಿತಿಯನ್ನು ನೀಡಿದರು. ಪೀಳಿಗೆ ಬದಲಾವಣೆಗಳು, ಪೋಷಣಾ ಶೈಲಿಗಳು, ಭಾವನಾತ್ಮಕ ಸ್ಥಿರತೆ ಮತ್ತು ವ್ಯಕ್ತಿತ್ವ ರೂಪಿಸುವಲ್ಲಿ ಪೋಷಕರ ಪಾತ್ರವನ್ನು ವಿವರಿಸಿದರು. ವೇದಿಕೆಯಲ್ಲಿ ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ರಾಧಾಕೃಷ್ಣ ಎಸ್. ಐತಾಳ್, ಸಂಸ್ಥೆಯ ಡೀನ್‌ಗಳು, ವಿವಿಧ ವಿಭಾಗದ ಮುಖ್ಯಸ್ಥರು, ವಿದ್ಯಾರ್ಥಿ ಕ್ಷೇಮಪಾಲನ ಅಧಿಕಾರಿಗಳು ಮತ್ತು ಪ್ರಾಧ್ಯಾಪಕರು, ಪೋಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕುರಿ, ಮೇಕೆ ಘಟಕ ಸ್ಥಾಪನೆಗೆ ಸಹಾಯಧನ : ಅರ್ಜಿ ಆಹ್ವಾನ

ಉಡುಪಿ: ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಚಿಕ್ಕಮಗಳೂರು ವತಿಯಿಂದ ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ (10+1) ಕುರಿ/ಮೇಕೆ ಘಟಕಗಳ ಸ್ಥಾಪನೆಗೆ ಸಹಾಯಧನ ಸೌಲಭ್ಯ ಪಡೆಯಲು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡಿರುವ 18 ರಿಂದ 60 ವರ್ಷ ವಯೋಮಿತಿಯ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಮಾರ್ಚ್ 12 ಕೊನೆಯ ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಉಡುಪಿ ತಾಲೂಕು ಮೊ.ನಂ: 9448134852, ಕಾಪು ತಾಲೂಕು ಮೊ.ನಂ: 8217389838, ಬ್ರಹ್ಮಾವರ ತಾಲೂಕು ಮೊ.ನಂ: 9448623690, ಕುಂದಾಪುರ ತಾಲೂಕು ಮೊ.ನಂ: 9448163237, ಬೈಂದೂರು ತಾಲೂಕು ಮೊ.ನಂ: 9741993045, ಕಾರ್ಕಳ ತಾಲೂಕು ಮೊ.ನಂ: 9845753062 ಹಾಗೂ ಹೆಬ್ರಿ ತಾಲೂಕು ಮೊ.ನಂ: 9986764615 ಅನ್ನು ಅಥವಾ ಜಿಲ್ಲಾ ಅನುಷ್ಠಾನಾಧಿಕಾರಿಗಳು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಚಿಕ್ಕಮಗಳೂರು ದೂರವಾಣಿ ಸಂಖ್ಯೆ:9448157129 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಸರ್ಕಾರಿ ಸೊತ್ತು ಎನ್ನುವ ಪರಿಜ್ಞಾನವಿಲ್ಲದೆ ದುರ್ಬಳಕೆ | ರಾತ್ರಿ ಸ್ಥಳೀಯರು ಭಯಪಡುವ ಪರಿಸ್ಥಿತಿ

ಮುದೂರು ಕೊರಗರ ಭವನ ಅಕ್ರಮ ಚಟುವಟಿಕೆಗಳ ತಾಣ

ಕುಂದಾಪುರ: ಉಡುಪಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಮಾದಕ ವಸ್ತು ಸೇವನೆ ನಿರ್ಮೂಲನೆಗೆ ಜನಜಾಗೃತಿ ಮೂಡಿಸುವ ಕಾರ್ಯ ಒಂದೆಡೆಯಲ್ಲಿ ಭರದಿಂದ ಸಾಗುತ್ತಿದ್ದರೆ, ಇತ್ತ ಬೈಂದೂರು ತಾಲ್ಲೂಕು ಜಡ್ಕಲ್ ಗ್ರಾಮ ಪಂಚಾಯತ್ ವ್ಯಾಪ್ತಿಯ ಮುದೂರು ಗ್ರಾಮದ ಉದಯ ನಗರದಲ್ಲಿರುವ ಕೊರಗರ ಸಭಾಭವನವು ಮಾದಕ ವ್ಯಸನಿಗಳ ಅಕ್ರಮ ಚಟುವಟಿಕೆಯ ತರಬೇತು ಕೇಂದ್ರ ಸ್ಥಳವಾಗಿ ಮಾರ್ಪಟ್ಟಿದೆ.
ಐಟಿಡಿಪಿ ಇಲಾಖೆಯ ಅನುದಾನದಿಂದ ನಿರ್ಮಾಣಗೊಂಡ ಈ ಸಭಾಭವನವು ಸ್ಥಳೀಯಾಡಳಿತದ ಸೂಕ್ತ ನಿರ್ವಹಣೆಯ ಜವಾಬ್ದಾರಿ ಇಲ್ಲದೆ ಇರುವುದೇ ಇದಕ್ಕೆಲ್ಲ ಮುಖ್ಯ ಕಾರಣ ಎನ್ನಲಾಗಿದೆ. ಕೊರಗರಿಗಾಗಿ ನಿರ್ಮಿಸಿದ ಭವನವಾದರೂ ಇದು ಸರ್ಕಾರಿ ಸೊತ್ತು ಎನ್ನುವ ಪರಿಜ್ಞಾನವಿಲ್ಲದೆ ಇಲ್ಲಿನ ಕೆಲವು ವ್ಯಕ್ತಿಗಳೇ ಭವನಕ್ಕೆ ಬೀಗ ಹಾಕಿ ಅವರ ಪಿತ್ರಾರ್ಜಿತ ಸೊತ್ತು ಎಂಬಂತೆ ಅಕ್ರಮ ಚಟುವಟಿಕೆಗಳಿಗೆ ಸಾಥ್ ನೀಡುತ್ತಿದ್ದಾರೆ ಎಂಬ ಆರೋಪವೂ ಸಾರ್ವಜನಿಕ ವಲಯದಿಂದ ಕೇಳಿ ಬಂದಿದೆ.



- ಐಟಿಡಿಪಿ ಇಲಾಖೆಯ ಅನುದಾನದಿಂದ ನಿರ್ಮಾಣಗೊಂಡ ಸಭಾಭವನ
- ಪಿತ್ರಾರ್ಜಿತ ಸೊತ್ತು ಭವನವನ್ನು ಬಳಸಿಕೊಂಡು ಅಕ್ರಮ ಚಟುವಟಿಕೆಗಳಿಗೆ ಸಾಥ್ ನೀಡುತ್ತಿದ್ದಾರೆ ಕೆಲ ವ್ಯಕ್ತಿಗಳು

ರಾತ್ರಿ ಹೊತ್ತಿನಲ್ಲಿ ಅಪರಿಚಿತರ ಆಗಮನ
ರಾತ್ರಿಯ ಹೊತ್ತಿನಲ್ಲಿ ಇಲ್ಲಿ ಅನೇಕ ಅಪರಿಚಿತ ವ್ಯಕ್ತಿಗಳು, ಯುವಕರ ಗುಂಪುಗಳು ಸೇರಿಕೊಂಡು ಮತ್ತು ಬರಿಸುವ ಅಮಲು ಪದಾರ್ಥಗಳನ್ನು ಸೇವಿಸಿ ಮತ್ತಿನಲ್ಲಿ ತಿರುಗಾಡುತ್ತಿದ್ದು ಜನಸಾಮಾನ್ಯರು ತಿರುಗಾಡಲು ಭಯಪಡುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕೊರಗ ಸಮುದಾಯದ ಮುಖಂಡರು ಆತಂಕ ವ್ಯಕ್ತಪಡಿಸಿದ್ದಾರೆ.

ಮುಖಂಡರ ಮನವಿ
ಈ ಬಗ್ಗೆ ಜಿಲ್ಲಾಡಳಿತ ನೇರ ಸ್ಪಂದಿಸಿ ಭವನದ ನಿರ್ವಹಣೆಯನ್ನು ಸ್ಥಳೀಯ ಗ್ರಾಮ ಪಂಚಾಯತ್‌ಗೆ ವಹಿಸಿ ಸ್ಥಳೀಯಾಡಳಿತವೇ ಈ ಭವನದ ಸಂಪೂರ್ಣ ಜವಾಬ್ದಾರಿ ನಿರ್ವಹಿಸುವಂತೆ ಸೂಚನೆ ನೀಡಬೇಕು, ಸಂಬಂಧಪಟ್ಟ ಸಮುದಾಯಗಳ ಸಾರ್ವಜನಿಕ ಕಾರ್ಯಕ್ರಮಗಳಿಗೆ ಮಾತ್ರವೇ ಈ ಭವನದಲ್ಲಿ ಅವಕಾಶವನ್ನು ನೀಡುವಂತಾಗಬೇಕು ಎಂದು ಸ್ಥಳೀಯ ಕೊರಗ ಸಮುದಾಯದ ಮುಖಂಡರು ಒತ್ತಾಯಿಸಿದ್ದಾರೆ.

ಸ್ಥಳೀಯಾಡಳಿತ ನಿರ್ವಹಣೆ ಹೊಣೆ ಹೊರಲಿ
ಅಳಿವಿನಂಚಿನಲ್ಲಿರುವ ಕೊರಗ ಸಮುದಾಯದ ಹಿತ ಕಾಯುವುದರೊಂದಿಗೆ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು. ಯುವ ಸಮುದಾಯಗಳಿಗೆ ಮಾದಕ ದ್ರವ್ಯ ಸೇವನೆಗೆ ಬಲಿಯಾಗದಂತೆ ಎಚ್ಚರ ವಹಿಸಬೇಕು ಎಂದು ಸ್ಥಳೀಯ ಮುಖಂಡರು ಆಗ್ರಹಿಸಿದ್ದಾರೆ. ಪ್ರಸ್ತುತ ಮಾದಕ ವ್ಯಸನಿಗಳ ಅಕ್ರಮ ಚಟುವಟಿಕೆ ತರಬೇತು ಕೇಂದ್ರ ಸ್ಥಳವಾಗಿ ಮಾರ್ಪಟ್ಟಿರುವ ಕೊರಗರ ಸಭಾ ಭವನವನ್ನು ಇದರಿಂದ ಮುಕ್ತಗೊಳಿಸಿ, ಸ್ಥಳೀಯಾಡಳಿತ ಇದರ ಸಂಪೂರ್ಣ ನಿರ್ವಹಣೆ ನೋಡಿಕೊಳ್ಳಬೇಕು. ಈ ಬಗ್ಗೆ ಶೀಘ್ರ ಕ್ರಮ ವಹಿಸುವಂತೆ ಜಿಲ್ಲಾ ದೌರ್ಜನ್ಯ ತಡೆ ಜಾಗೃತಿ ಉಸ್ತುವಾರಿ ಸಮಿತಿ ಸದಸ್ಯ ವಾಸುದೇವ ಮುದೂರು, ಸಮುದಾಯದ ಗೋಪಾಲ, ಸೂಲ್ಯ, ಲಿಂಗ ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.

ಕಾಪು ಹೊಸ ಮಾರಿಗುಡಿ 'ಮಾತೃ ವೈಭವ' ಸಂಪನ್ನ



ಶಿರ್ವ: ಕಾಪು ಹೊಸ ಮಾರಿಗುಡಿ ದೇಗುಲ ಸಂಪೂರ್ಣ ಜೀರ್ಣೋದ್ಧಾರದ ನಂತರ ಈ ಸಾನಿಧ್ಯ ಯಾತ್ರಾಸ್ಥಳವಾಗಿ ಪರಿವರ್ತನೆಗೊಂಡಿದೆ. ದೇವಸ್ಥಾನವನ್ನು ಊರಿಗೆಹೆಸರಾಯವಿದ್ದಂತೆಎಂದುಉಡುಪಿ ಶ್ರೀಪುತ್ತಿಗೆ ಮಠದ ಯತಿವರ್ಯರಾದ ಶ್ರೀಸುಗುಣೇಂದ್ರತೀರ್ಥ ಶ್ರೀಪಾದರು ನುಡಿದರು.
ಅವರು ಸೋಮವಾರ ಸಂಜೆ ಕಾಪು ಶ್ರೀ ಹೊಸ ಮಾರಿಗುಡಿ ದೇವಳದಲ್ಲಿ ಉಚ್ಚಂಗಿ ಸಹಿತ ಶ್ರೀಮಾರಿಯಮ್ಮ ದೇವಿಯ ಪುನರ್ ಪ್ರತಿಷ್ಠೆಯ ಪ್ರಥಮ ವರ್ಧಂತ್ಯೋತ್ಸವದ ಪ್ರಯುಕ್ತ ಜರುಗುತ್ತಿರುವ 'ಮಾತೃವೈಭವ' ಉತ್ಸವದ ಸಮಾರೋಪ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.
ಕಾರ್ಯಕ್ರಮವನ್ನು ಉದ್ಘಾಟಿಸಿದ ಉದ್ಯಮಿ, ಮಹಾದಾನಿ ಆನಂದ ಎಂ. ಶೆಟ್ಟಿ ಮಾತನಾಡಿ, ಈ ಕ್ಷೇತ್ರದಲ್ಲಿ ಅಮ್ಮನ ಸೇವೆ ಮಾಡುವ ಸೌಭಾಗ್ಯ ಸಿಕ್ಕಿರುವುದು ಸಂತಸ ತಂದಿದೆ. ಕಷ್ಟ ಕಾಲದಲ್ಲಿ ಅಮ್ಮನ ಸನ್ನಿಧಿಯಲ್ಲಿ ಬಂದು ಬೇಡಿದಾಗ ಅಮ್ಮ ಪ್ರಸಾದ ರೂಪದಲ್ಲಿ ಕೊಟ್ಟ ಸಂಪತ್ತನ್ನು ಅಮ್ಮನ ಸೇವೆಗಾಗಿ ನೀಡಿದ ಸಂತೃಪ್ತಿ ಸಿಕ್ಕಿದೆ ಎಂದರು.
ಕ್ಷೇತ್ರದ ಪ್ರಧಾನ ತಂತ್ರಿಗಳಾದ ವಿದ್ವಾನ್ ಕುಮಾರಗುರು ತಂತ್ರಿ ಕೊರಂಗ್ರಪಾಡಿ ಕ್ಷೇತ್ರದಲ್ಲಿ ಮೂರು ದಿನಗಳ ಪರ್ಯಂತ ಜರುಗಿದ ಮಾತೃವೈಭವದ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ನವದುರ್ಗಾ ಲೇಖನ ಯಜ್ಞ ಸಮಿತಿಯ ಅಧ್ಯಕ್ಷ ಏಕಳಬಾರ ದೇವಿಪ್ರಸಾದ್ ಶೆಟ್ಟಿ ಬೆಳಪು ಅಧ್ಯಕ್ಷತೆ ವಹಿಸಿದ್ದರು. ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಸಮಿತಿ ಅಧ್ಯಕ್ಷ ರಾಜರ್ಷಿ ಕೆ.ವಾಸುದೇವ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನಡಿಕೆರೆ ರತ್ನಾಕರ ಶೆಟ್ಟಿ ಗೌರವ ಅಧ್ಯಕ್ಷ ರವಿ ಸುಂದರ್ ಶೆಟ್ಟಿ ಮುಂಬೈ, ಮುಂಬಯಿ ಹೈಕೋರ್ಟ್ ನ್ಯಾಯವಾದಿ ಮಹೇಶ್ ಕೋಟ್ಯಾನ್, ಯುಎಇ ಸಮಿತಿ ಅಧ್ಯಕ್ಷ ವಕ್ವಾಡಿ ಪ್ರವೀಣ್ ಕುಮಾರ್ ಶೆಟ್ಟಿ ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಿ. ಪಕ್ಕಳ, ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಟ್ಟಾರು ರತ್ನಾಕರ ಹೆಗ್ಡೆ ಕಾಪು ಪುರಸಭೆ ಮುಖ್ಯ ಅಧಿಕಾರಿ ಎನ್. ಎಂ. ಮೇಸ್ತ, ರಾಷ್ಟ್ರೀಯ ಬಿಲ್ಲವರ ಮಹಾ ಮಂಡಲದ ಅಧ್ಯಕ್ಷ ಸೂರ್ಯಕಾಂತ್ ಜಯ ಸುವರ್ಣ, ಪ್ರಮುಖರಾದ ಮನೋಹರ ಎಸ್. ಶೆಟ್ಟಿ ದಿನೇಶ್ ಶೆಟ್ಟಿ ದಾವಣಗೆರೆ, ಸುಹಾಸ್ ಹೆಗ್ಡೆ ನಂದಳಿಕೆ, ಬಿ.ಎನ್.ಶಂಕರ ಪೂಜಾರಿ, ಪ್ರಧಾನ ಅತಿಥಿಗಳಾಗಿ ಪಾಲ್ಗೊಂಡಿದ್ದರು.
ಮಾತೃವೈಭವದ ಪ್ರಧಾನ ಕಾರ್ಯದರ್ಶಿ ಯೋಗೀಶ್ ಶೆಟ್ಟಿ ಬಾಲಾಜಿ, ಮೊಕ್ತೇಸರರಾದ ಮಾಧವ ಆರ್. ಪಾಲನ್, ಶೇಖರ ಸಾಲಿಯಾನ್, ಮನೋಹರರಾವ್, ರವೀಂದ್ರ ಮಲ್ಲಾರು, ಜಯಲಕ್ಷ್ಮೀ ಎಸ್. ಶೆಟ್ಟಿ ಚಂಠಾ ದೇವಾಡಿಗ ಉಪಸ್ಥಿತರಿದ್ದರು. ಉಪಾಧ್ಯಕ್ಷ ಕಾಪು ದಿವಾಕರ ಶೆಟ್ಟಿ ಸ್ವಾಗತಿಸಿದರು. ಸತೀಶ್ ಶೆಟ್ಟಿ ಗುಡ್ಡೆಟ್ಟು ನಿರೂಪಿಸಿದರು. ಮಾಧವ ಪಾಲನ್ ವಂದಿಸಿದರು.

ಕಂಡ್ಲೂರಿನಿಂದ ಸಿದ್ದಾಪುರದವರೆಗೆ ಎರಡು ದಿನಗಳ ಬೃಹತ್ ಪಾದಯಾತ್ರೆ

ನೀರಾವರಿ ಯೋಜನೆ ತ್ವರಿತ ಅನುಷ್ಠಾನಕ್ಕೆ ಆಗ್ರಹ

ಕುಂದಾಪುರ: ವಾರಾಹಿ ಜನರ ಜೀವನಾಡಿ. ವಾರಾಹಿ ನದಿಯ ನೀರನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಇದರ ಪ್ರಯೋಜನ ಈ ಭಾಗದ ರೈತರಿಗೆ ದೊರೆಯಬೇಕು ಎಂಬ ರೈತರ ಕಾಳಜಿಯಿಂದ,ವಾರಾಹಿಯೋಜನೆಮೂಲ ಉದ್ದೇಶದಂತೆ ಅನುಷ್ಠಾನಗೊಳ್ಳಬೇಕು ಹಾಗೂ ಈ ಭಾಗದ ಜನರಿಗೆ ನೀರಾವರಿ ಸೌಲಭ್ಯ ಕಲ್ಪಿಸುವಂತೆ ಸರಕಾರದ ಗಮನ ಸೆಳೆಯುವ ಉದ್ದೇಶದಿಂದ ಪಾದಯಾತ್ರೆ ನಡೆಸಲಾಗುತ್ತಿದೆ ಎಂದು ಉಡುಪಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕುಮಾರ್ ಕೊಡವೂರು ಹೇಳಿದರು.
ವಾರಾಹಿ ಬಲದಂಡೆ ಯೋಜನೆ ತ್ವರಿತ ಅನುಷ್ಠಾನ ಮತ್ತು ಸಿದ್ದಾಪುರ ಹಾಗೂ ಸೌಕೂರು ಏತ ನೀರಾವರಿ ಯೋಜನೆಯಲ್ಲಿ ಬಿಟ್ಟು ಹೋದ ಕೃಷಿ ಭೂಮಿಗೆ ಮತ್ತು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವಂತೆ ರೈತರ ಪರವಾಗಿ ಸರ್ಕಾರದ ಗಮನ ಸೆಳೆಯಲು ಮತ್ತು ಜನಜಾಗೃತಿ ಮೂಡಿಸಲು ವಂಡ್ಸೆ ಮತ್ತು ಬೈಂದೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕಂಡ್ಲೂರಿನಿಂದ ಸಿದ್ದಾಪುರದವರೆಗೆ ಹಮ್ಮಿಕೊಳ್ಳಲಾದ ಎರಡು ದಿನಗಳ ಬೃಹತ್ ಪಾದಯಾತ್ರೆಗೆ ಕಾವ್ರಾಡಿ ಗ್ರಾಮ ಪಂಚಾಯತ್ ಕಚೇರಿ ಬಳಿ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.



ಇಂದು ಬಹಿರಂಗ ಸಭೆ
ಕಾವ್ರಾಡಿಯಿಂದ ಹೊರಟ ಪಾದಯಾತ್ರೆಯು ಅಂಪಾರು ಮೂಲಕ ಶಂಕರನಾರಾಯಣಕ್ಕೆ ತೆರಳಿತು. ಮಾ. 4ರಂದು ಬೆಳಿಗ್ಗೆ ಶಂಕರನಾರಾಯಣದಿಂದ ಸಿದ್ದಾಪುರಕ್ಕೆ ತೆರಳಲಿದೆ. ಮಧ್ಯಾಹ್ನ 3 ಗಂಟೆಗೆ ಬಹಿರಂಗ ಸಭೆ ನಡೆಯಲಿದೆ.

ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಎ.ಗಫೂರ್ ಮಾತನಾಡಿ, ಬಲದಂಡೆ ಯೋಜನೆ ಅನುಷ್ಠಾನಗೊಂಡರೆ ಕುಂದಾಪುರ ಮತ್ತು ಬೈಂದೂರು ಕ್ಷೇತ್ರದ ರೈತರಿಗೆ ಪ್ರಯೋಜನವಾಗುತ್ತದೆ ಎಂದರು. ವಿವಿಧ ಗ್ರಾಮಗಳಿಗೆ ನೀರು ನೀಡುವ ಸಿದ್ದಾಪುರ ಏತ ನೀರಾವರಿ ಯೋಜನೆಯ ಮೂಲ ಉದ್ದೇಶ ಯಾವುದೇ ಕಾರಣಕ್ಕೂ ಬದಲಾಗಬಾರದು ಎಂದು ಮಾಜಿ ಶಾಸಕ ಕೆ.ಗೋಪಾಲ ಪೂಜಾರಿ ಹೇಳಿದರು.
ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಬಾಬು ಹೆಗ್ಡೆ ಸೌಕೂರು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕಿಶನ್ ಹೆಗ್ಡೆ ಚಿತ್ತೂರು,ರಾಜೀವಲೋಚನ ಆಚಾರ್ಯ,ಗಣಪತಿ ಶ್ರೀಯಾನ್, ಕಾಂಗ್ರೆಸ್ ಮುಖಂಡರಾದ ಪ್ರದೀಪ ಕುಮಾರ್ ಶೆಟ್ಟಿ ಗುಡಿಬೆಟ್ಟು, ವಿಕಾಸ್ ಹೆಗ್ಡೆ ಸಂಚಿತ ಸಂಜೀವ ಶೆಟ್ಟಿ ಅರವಿಂದ ಪೂಜಾರಿ, ಹಕ್ಲಾಡಿ ಸಂತೋಷ ಕುಮಾರ್ ಶೆಟ್ಟಿ ಮುಂಬಾರು ದಿನಕರ ಶೆಟ್ಟಿ ಉದಯ ಪೂಜಾರಿ, ನಾಗಪ್ಪ ಕೊಠಾರಿ, ಸಂತೋಷ ಕುಮಾರ್ ಶೆಟ್ಟಿ ಬಲಾಡಿ, ಪ್ರಸನ್ನ ಕುಮಾರ್ ಶೆಟ್ಟಿ ದೇವಾನಂದ ಶೆಟ್ಟಿ ಅಬ್ದುಲ್ ಮುನಾಫ್, ವಿಜಯ ಪುತ್ರನ್, ರಘುರಾಮ ಶೆಟ್ಟಿ ಮದನ್ ಕುಮಾರ್ ಉಪ್ಪುಂದ, ಜಗದೀಶ ಪೂಜಾರಿ, ವೆಂಕಟರಮಣ ಖಾರ್ವಿ, ಶೇಖರ ಪೂಜಾರಿ, ರೋಷನ್ ಶೆಟ್ಟಿ ಕಿರಣ್ ಹೆಗ್ಡೆ ಸೂರಜ್ ಪೂಜಾರಿ ಇದ್ದರು.

ಬೈರಂಪಳ್ಳಿ: ಕ್ರೀಡಾಂಗಣಕ್ಕೆ ಶಾಶ್ವತ ಜಾಗ ಕಾಯ್ದಿರಿಸಲು ತುರವೇ ಮನವಿ



ಹಿರಿಯಡ್ಕ: ಬೈರಂಪಳ್ಳಿ ಪಂಚಾಯತ್ ವ್ಯಾಪ್ತಿಯ ಸರ್ವೇ ನಂ. 82/3 ರಲ್ಲಿರುವ ಬೆಳ್ವಾರ್ಡಿ ಮಾಣ್ಯೆ ಹರಿಖಂಡಿಗೆ ರಸ್ತೆ ಬದಿಯ 0.79 ಎಕರೆ ಸರ್ಕಾರಿ ಜಾಗವನ್ನು ಶಾಲಾಮಕ್ಕಳ,ಗ್ರಾಮಸ್ಥರಕ್ರೀಡಾಂಗಣವಾಗಿ ಶಾಶ್ವತವಾಗಿ ಕಾಯ್ದಿರಿಸಲು ತುಳುನಾಡ ರಕ್ಷಣಾ ವೇದಿಕೆ ಕಾಪು ತಾಲೂಕು ಘಟಕದ ವತಿಯಿಂದ ಅಪರ ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.
ಸುಮಾರು 38 ವರ್ಷಗಳಿಂದ ಮಾತೃ ಫ್ರೆಂಡ್ಸ್ ಸಹಯೋಗದೊಂದಿಗೆ ಈ ಜಾಗವನ್ನು ಗ್ರಾಮಸ್ಥರು ಕ್ರೀಡಾಂಗಣವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಸ್ಥಳೀಯ ಮಕ್ಕಳಿಗೆ, ಯುವಕರಿಗೆ ಹಾಗೂ ಸಾರ್ವಜನಿಕ ಕ್ರೀಡಾ ಚಟುವಟಿಕೆಗಳಿಗೆ ಈ ಮೈದಾನ ಅತ್ಯಂತ ಅಗತ್ಯವಾಗಿದೆ. ಗ್ರಾಮದಲ್ಲಿ ಪ್ರತ್ಯೇಕ ಕ್ರೀಡಾಂಗಣದ ವ್ಯವಸ್ಥೆ ಇಲ್ಲದಿರುವುದರಿಂದ ಈ ಜಾಗವನ್ನು ಶಾಶ್ವತವಾಗಿ ಕ್ರೀಡಾಂಗಣವಾಗಿ ಉಳಿಸಲು ಒತ್ತಾಯಿಸಲಾಗಿದೆ. ಪ್ರಸ್ತುತ ಕೆಲ ಖಾಸಗಿ ವ್ಯಕ್ತಿಗಳು ಜಾಗವನ್ನು ಒತ್ತುವರಿಗೆ ಪ್ರಯತ್ನಿಸುತ್ತಿರುವ ಬಗ್ಗೆ ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.
ಈ ವೇಳೆ ವೇದಿಕೆ ಜಿಲ್ಲಾ ಜಿಲ್ಲಾಧ್ಯಕ್ಷ ಫ್ರಾಂಕಿ ಡಿಸೋಜ ಕೊಳಲಗಿರಿ, ಕಾಪು ತಾಲೂಕು ಘಟಕದ ಅಧ್ಯಕ್ಷ ನಿತಿನ್ ಕುಮಾರ್ ಶೆಟ್ಟಿ ಕಾಪು ಮಹಿಳಾ ಘಟಕದ ಅಧ್ಯಕ್ಷೆ ಅನುಸೂಯಾ ಶೆಟ್ಟಿ ಜಿಲ್ಲಾ ಘಟಕದ ಉಪಾಧ್ಯಕ್ಷ ಉಮೇಶ್ ಶೆಟ್ಟಿ ಬಾಣಬೆಟ್ಟು, ಶಂಕರ್ ಉಡುಪಿ, ಬೈರಂಪಳ್ಳಿ ಘಟಕದ ಅಧ್ಯಕ್ಷ ಕೃಷ್ಣಾನಂದ ನಾಯಕ್, ಉಪಾಧ್ಯಕ್ಷ ಶೋಧನ್ ಶೆಟ್ಟಿ ಉಪ ಕಾರ್ಯದರ್ಶಿ ಜೆ.ಜೆ. ಕೃಷ್ಣ ಮಂಜುಳಾ, ಉದಯ ನಾಯ್ಕ್ ಹಿರಿಯಡ್ಕ, ಸಚಿನ್ ಕುಮಾರ್ ಶೆಟ್ಟಿ ಬೆಳ್ವಾರ್ಡಿ, ಗುಣಕರ್ ಶಿರೂರು ಹಾಲಕ್ಕಿ, ಗ್ರಾಮಸ್ಥರು ಉಪಸ್ಥಿತರಿದ್ದರು.

ಪಡುಬಿದ್ರಿ ದೇಗುಲ ಜೀರ್ಣೋದ್ಧಾರಕ್ಕೆ ಧರ್ಮಸ್ಥಳದಿಂದ 25 ಲಕ್ಷ ರೂ. ದೇಣಿಗೆ



ಪಡುಬಿದ್ರಿ: ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಜೀರ್ಣೋದ್ಧಾರದ ಕೆಲಸ ಕಾರ್ಯಗಳಿಗಾಗಿ 25 ಲಕ್ಷ ರೂ. ಮೊತ್ತದ ಡಿಡಿಯನ್ನು ಶ್ರೀ ದೇಗುಲದ ಜೀರ್ಣೋದ್ಧಾರ ಸಮಿತಿಗೆ, ಶ್ರೀ ದೇವಸ್ಥಾನದ ಆನುವಂಶಿಕ ಮೊಕ್ತೇಸರ ಪಡುಬಿದ್ರಿ ಬೀಡು ರತ್ನಾಕರ ರಾಜ್ ಅರಸ್ ಕಿನ್ಯಕ್ಕ ಬಲ್ಲಾಳರು, ಪಡುಬಿದ್ರಿ ಪೇಟೆಮನೆ ಭವಾನಿಶಂಕರ ಹೆಗ್ಡೆ ಮತ್ತು ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ ಅವರ ಮೂಲಕ ಹಸ್ತಾಂತರಿಸಲಾಯಿತು.
ಶ್ರೀ ಕ್ಷೇತ್ರ ಧರ್ಮಸ್ಥಳ ಯೋಜನೆಯ ಉಡುಪಿ ಕರಾವಳಿ ಪ್ರಾದೇಶಿಕ ನಿರ್ದೇಶಕ ಆನಂದ ಸುವರ್ಣ ಮಾತನಾಡಿದರು. ಶ್ರೀ ಕ್ಷೇತ್ರಧರ್ಮಸ್ಥಳದಪ್ರಬಂಧಕಭರತ್‌ರಾಜ್, ಪುರಾಣ ವಾಚಕ ವೇದ ವಿದ್ವಾನ್ ಶ್ರೀನಿವಾಸ ಆಚಾರ್ಯ, ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ಪದ್ಮನಾಭ ಕೊರ್ನಾಯ, ಉಪಾಧ್ಯಕ್ಷ ಪಿ. ರವೀಂದ್ರನಾಥ್ ಜಿ. ಹೆಗ್ಡೆ ಕಾರ್ಯದರ್ಶಿಗಳಾದ ಶ್ರೀನಾಥ್ ಹೆಗ್ಡೆ ನವೀನ್‌ಚಂದ್ರ ಜೆ. ಶೆಟ್ಟಿ ಪದಾಧಿಕಾರಿಗಳಾದ ವೈ. ಎನ್. ರಾಮಚಂದ್ರ ರಾವ್, ವಿಷ್ಣುಮೂರ್ತಿ ಆಚಾರ್ಯ, ನಟರಾಜ ರಾವ್ ಪಿ. ಎಸ್., ರಮಾಕಾಂತ ರಾವ್, ಸದಾಶಿವ ಆಚಾರ್ಯ, ಪಡುಬಿದ್ರಿ, ಯಾದವೇಂದ್ರ ಉಪಾಧ್ಯಾಯ, ಅನಿಲ್ ಶೆಟ್ಟಿ ಪೇಟೆಮನೆ, ನವೀನ್ ಎನ್. ಶೆಟ್ಟಿ ಮುರಳೀನಾಥ ಶೆಟ್ಟಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಜಿಲ್ಲಾ ಅಧಿಕಾರಿ ನಾಗರಾಜ ಶೆಟ್ಟಿ ಸುಧಾಕರ ಕರ್ಕೇರ, ಕೇಶವ ಅಮೀನ್, ಒಕ್ಕೂಟದ ಅಧ್ಯಕ್ಷ ಭುಜಂಗ ಆಚಾರ್ಯ, ಕಾಪು ತಾ. ಯೋಜನಾಧಿಕಾರಿ ಮಮತಾ ಶೆಟ್ಟಿ ಮತ್ತಿತರರು ಇದ್ದರು.



ಹಿರಿಯಡಕ ದುರ್ಗಾಂಬಾ ಅಮ್ಮನವರ ಕತ್ತರಕಟ್ಟೆ ದುಗ್ಗಣಬೆಟ್ಟು ಬೆಳಂಪಳ್ಳಿ ಮರಾಠಿ ಸಮಾಜ ಸೇವಾ ಸಂಘದ ಗುರಿಕಾರರು ಮತ್ತು ಹತ್ತು ಸಮಸ್ತರ ಸಾಂಪ್ರದಾಯಿಕ ಹೋಳಿ ಕುಣಿತದ ತಂಡ ಹೋಳಿ ಹಬ್ಬದಲ್ಲಿ ಭಾಗವಹಿಸಿತು.



ಕಾರ್ಕಳ ಹಿರಿಯಂಗಡಿ ಹಿರೇ ಬಸದಿ ಭಗವಾನ್ ಶ್ರೀ1008 ನೇಮಿನಾಥ ಸ್ವಾಮಿಯ ರಥೋತ್ಸವ ಪ್ರಯುಕ್ತ ದಾನಶಾಲೆ ಶ್ರೀ ಮಠದ ಪರಮಪೂಜ್ಯ ರಾಜಗುರು ಧ್ಯಾನಯೋಗಿ ಸ್ವಸ್ತಿ ಶ್ರೀ ಲಲಿತ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರ ನೇತೃತ್ವದಲ್ಲಿ ಶ್ರೀ ದೇವರ ರಥಾರೋಹಣ ಕಾರ್ಯಕ್ರಮ ನೆರವೇರಿತು. ಈ ಸಂದರ್ಭದಲ್ಲಿ ಆಡಳಿತ ಮೊಕ್ತೇಸರ ಕುಕ್ಕುಂದೂರು ಗುಡ್ಡೆಗುತ್ತು ಕೆ.ರಾಜೇಂದ್ರ ಮುದ್ಯರು ಮತ್ತಿತರರು ಇದ್ದರು.

ರೋಹಿತ್ ಹೆಗ್ಡೆ ಸಾರಥ್ಯದಲ್ಲಿ ಅದ್ದೂರಿಯಾಗಿ ನೆರವೇರಿದ ಪ್ರಥಮ ವರ್ಷದ ಕಂಬಳ ಕೂಟದ ಫಲಿತಾಂಶ

ಎರ್ಮಾಳು ತೆಂಕ-ಬಡಾ ಜೋಡುಕರೆ ಕಂಬಳದಲ್ಲಿ 195 ಜೊತೆ ಕೋಣಗಳ ಸ್ಪರ್ಧೆ

ಪಡುಬಿದ್ರಿ: ಪ್ರಥಮ ವರ್ಷದ ಎರ್ಮಾಳು ತೆಂಕ – ಬಡಾ ಜೋಡುಕರೆ ಕಂಬಳ ಕಂಬಳ ಯಜಮಾನ ಎರ್ಮಾಳು ರೋಹಿತ್ ಹೆಗ್ಡೆ ಅವರ ಸಾರಥ್ಯದಲ್ಲಿ ಆಯೋಜಿತವಾಗಿದ್ದ ಕೂಟದಲ್ಲಿ ಒಟ್ಟು 195 ಜತೆ ಕೋಣಗಳು ಭಾಗವಹಿಸಿದ್ದವು. ಕನೆಹಲಗೆ 11 ಜತೆ, ಅಡ್ಡಹಲಗೆ, 08 ಜತೆ, ಹಗ್ಗಹಿರಿಯ 22 ಜತೆ, ನೇಗಿಲು ಹಿರಿಯ 29 ಜತೆ, ಹಗ್ಗ ಕಿರಿಯ 35 ಜತೆ, ನೇಗಿಲು ಕಿರಿಯ 90 ಜತೆ ಕೋಣಗಳು ಭಾಗವಹಿಸಿದ್ದವು. ಕಂಬಳಕೂಟ ಅದ್ದೂರಿಯಾಗಿ ನೆರವೇರಿತು.



ಕಂಬಳದಫಲಿತಾಂಶಗಳ ವಿವರ
ಕನೆಹಲಗೆ(ಸಮಾಧಾನಕರ ಬಹುಮಾನ) ಬೋಳಾರ ತ್ರಿಶಾಲ್ ಕೆ. ಪೂಜಾರಿ 'ಎ', ಬೋಳಾರ ತ್ರಿಶಾಲ್ ಕೆ. ಪೂಜಾರಿ 'ಬಿ', ಬೈಂದೂರು ಸಸಿಹಿತ್ಲು ವೆಂಕಟ ಪೂಜಾರಿ, ಕಟ್ಪಾಡಿ ಕಲ್ಲಾಪು ಗೌರೀಶ್ ಕೋಟ್ಯಾನ್, ಬಾರ್ಕೂರು ಶಾಂತಾರಾಮ ಶೆಟ್ಟಿ, ವಾಮಂಜೂರು ತಿರುವೈಲುಗುತ್ತು ಅಭಿಷೇಕ್ ನವೀನ್ಚಂದ್ರ ಆಳ್ವ, ಬೊಳ್ಳಂಬಳ್ಳಿ ಶ್ರೀ ರಾಮ್ ಚೈತ್ರ ಪರಮೇಶ್ವರ ಭಟ್, ಕುತ್ಯಾರ್ ಕೇಂಜ ಅಬ್ಬೆಟ್ಟು ಗುತ್ತು ಸಾಯಿನಾಥ್ ಶೆಟ್ಟಿ ಕಟ್ಪಾಡಿ ಮೂಡಬೆಟ್ಟು ಅಣ್ಣಪ್ಪ ಸ್ವಾಮಿ ನಿಲಯ ಸೌರವ್ ಶೆಟ್ಟಿ ಕುಂಡೋಳಿ ಶ್ರೀ ದುರ್ಗಾ ನಿಲಯ ಸುಧೀರ್ ಪದ್ಮನಾಭ ಶೆಟ್ಟಿ ಮೋರ್ಲ ಪ್ರಾಪ್ತಿ ಗಿರೀಶ್ ಆಳ್ವ ಅವರಿಗೆ ನೀಡಲಾಗಿದೆ. ಅಡ್ಡ ಹಲಗೆ ವಿಭಾಗ ಪ್ರಥಮ: ಇರುವೈಲು ದೊಡ್ಡಗುತ್ತು ಜಗದೀಶ್ ಎಂ ಶೆಟ್ಟಿ 12.60 (ಹಲಗೆ ಮುಟ್ಟಿದವರು: ತೆಕ್ಕಟ್ಟೆ ಸುಧೀರ್ ದೇವಾಡಿಗ), ದ್ವಿತೀಯ: ಮೋರ್ಲ ಪ್ರಾಪ್ತಿ ಗಿರೀಶ್ ಆಳ್ವ 13.12(ಹಲಗೆ ಮುಟ್ಟಿದವರು: ಭಟ್ಕಳ ಪಾಂಡು) ಹಗ್ಗ ಹಿರಿಯ ವಿಭಾಗ ಪ್ರಥಮ: ನಂದಳಿಕೆ ಶ್ರೀಕಾಂತ್ ಭಟ್ 'ಬಿ' 11.75(ಓಡಿಸಿದವರು: ಬಂಬ್ರಾಣಬೈಲು ವಂದಿತ್ ಶೆಟ್ಟಿ), ದ್ವಿತೀಯ: ನಕ್ರೆ ಮಹೋಧರ ನಿವಾಸ ಇಶಾನಿ ತುಕ್ರ ಭಂಡಾರಿ 11.86(ಓಡಿಸಿದವರು: ಕಕ್ಕೆಪದವು ಪೆಂರ್ಗಾಲು ಕೃತಿಕ್ ಗೌಡ), ಹಗ್ಗ ಕಿರಿಯ ವಿಭಾಗ ಪ್ರಥಮ: ಬೆಳುವಾಯಿ ಪೆರೋಡಿ ಪುತ್ತಿಗೆ ಗುತ್ತು ಕೌಶಿಕ್ ದಿನಕರ ಬಿ ಶೆಟ್ಟಿ 'ಬಿ' 12.14(ಓಡಿಸಿದವರು: ಮಂಗಲ್ಪಾಡಿ ರಕ್ಷಿತ್ ಶೆಟ್ಟಿ), ದ್ವಿತೀಯ: ಉಡುಪಿ ಕಕ್ಕುಂಜೆ ರಾಧ ನಿಲಯ ಸಂತೋಷ್ ಶಿವರಾಜ್ ಪೂಜಾರಿ 12.20(ಓಡಿಸಿದವರು: ಬೈಂದೂರು ವಿಶ್ವನಾಥ ದೇವಾಡಿಗ) ನೇಗಿಲು ಹಿರಿಯ ವಿಭಾಗ ಪ್ರಥಮ: 80 ಬಡಗುಬೆಟ್ಟು ಕಲ್ಲಾಪು ಶ್ರೀಕ ಸಂದೀಪ್ ಶೆಟ್ಟಿ 'ಬಿ' 11.64(ಓಡಿಸಿದವರು: ಕಕ್ಕೆಪದವು ಪೆಂರ್ಗಾಲು ಕೃತಿಕ್ ಗೌಡ), ದ್ವಿತೀಯ: ಉಳೆಪಾಡಿ ಪುಲ್ಲೋಡಿಬೀಡು ಉದಯ್ ಶೆಟ್ಟಿ 'ಬಿ' 11.73(ಓಡಿಸಿದವರು: ಪಟ್ಟೆ ಗುರುಚರಣ್) ನೇಗಿಲು ಕಿರಿಯ ವಿಭಾಗ ಪ್ರಥಮ: ಎರ್ಮಾಳ್ ಪುಚ್ಚೊಟ್ಟು ಬೀಡು ಬಾಲಚಂದ್ರ ಲೋಕಯ್ಯ ಶೆಟ್ಟಿ 'ಎ' 11.33 (ದಿನದ ಅತ್ಯುತ್ತಮ ಟೈಮಿಂಗ್) ಕೋಣ ಓಡಿಸಿದವರು: ಕುಂದ ಬಾರಂದಡಿ ಮಾಸ್ತಿಕಟ್ಟೆ ಸ್ವರೂಪ್, ದ್ವಿತೀಯ: ಪದವು ಕಾನಡ್ಕ ಫ್ಲೇವಿ ಡಿಸೋಜ 'ಎ' 11.60 (ಓಡಿಸಿದವರು: ಬೈಂದೂರು ಮಂಜುನಾಥ ಗೌಡ).